ಗುರುವಾರ, ಸೆಪ್ಟೆಂಬರ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 249 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಉದ್ಯೋಗ ಕ್ಷೇತ್ರದಲ್ಲಿ ಚಾಲ್ತಿಗೆ ಬರುತ್ತಿರುವ 'ಮೂನ್‌ಲೈಟಿಂಗ್', ಅದರ ಸಾಧಕ–ಬಾಧಕ ಕುರಿತ ಮಾಹಿತಿ ಇಲ್ಲಿದೆ.

ಉಮೇಶ ಕತ್ತಿ ಅಂತಿಮ ದರ್ಶನಕ್ಕೆ ಜನಸಾಗರ... 4

ಆಳ-ಅಗಲ
ರಾಜಪಥ: ಚಹರೆ, ಹೆಸರು ಬದಲು

'ಜನಸ್ಪಂದನ'ವಾದ ಜನೋತ್ಸವ 4

ಸೆನ್ಸೆಕ್ಸ್	ನಿಫ್ಟಿ	₹/$
59,028	17,624	79.95

6.39 ಲಕ್ಷ ಹೆಕ್ಟೇರ್ ಬೆಳೆ ನಾಶ • ಕೇಂದ್ರ ತಂಡದಿಂದ ಅಧ್ಯಯನ • ವಿಶೇಷ ಅನುದಾನಕ್ಕೆ ಸಿ.ಎಂ ಮನವಿ

110 ಸಾವು, ₹3 ಸಾವಿರ ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜೂನ್‌ನಿಂದ ಈಚೆಗೆ 110 ಮಂದಿ ಮೃತಪಟ್ಟಿದ್ದು, ಸುಮಾರು 6.39 ಲಕ್ಷ ಹೆಕ್ಟೇರ್ ಕೃಷಿ ಮತ್ತು ತೋಟಗಾರಿಕೆ ಬೆಳೆ ನಾಶವಾಗಿದೆ. ಒಟ್ಟು ಅಂದಾಜು ₹ 3,000 ಕೋಟಿಗೂ ಅಧಿಕ ನಷ್ಟವಾಗಿದೆ.

ಭಾರೀ ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ತತ್ತರಿಸಿರುವ ವಿವಿಧ ಜಿಲ್ಲೆಗಳಲ್ಲಿನ ಪರಿಸ್ಥಿತಿಯ ಅಧ್ಯಯನಕ್ಕಾಗಿ ಬಂದಿರುವ ಕೇಂದ್ರದ ಅಧಿಕಾರಿಗಳ ತಂಡದ ಎದುರು, ಅಂಕಿ ಅಂಶ ಮುಂದಿಟ್ಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಾಡಿನ ಬವಣೆಯನ್ನು ವಿವರಿಸಿದರು.

'ಕರ್ನಾಟಕ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ವಿಶೇಷ ಪ್ರಕರಣವೆಂದು ಪರಿಗಣಿಸಿ ವಿಶೇಷ ಅನುದಾನ ನೀಡಲೇಬೇಕು' ಎಂದು ಒತ್ತಾಯಿಸಿದರು.

ಮಂಗಳವಾರ ಸಂಜೆಯೇ ನಗರಕ್ಕೆ ಬಂದಿಳಿದ ಕೇಂದ್ರ ತಂಡವನ್ನು ಬೆಂಗಳೂರಿನ ಜಡಿ ಮಳೆ ಮತ್ತು ಹಲವು ಬಡಾವಣೆಗಳಲ್ಲಿನ 'ಪ್ರವಾಹ' ಸ್ವಾಗತಿಸಿತು. ನಗರದ ಜಲಾವೃತ ಪ್ರದೇಶಗಳಿಗೆ ಭೇಟಿ ನೀಡಿದ ತಂಡ ಒಂದು ವಾರಕ್ಕೂ ಹೆಚ್ಚು ಅವಧಿಯ ಮಳೆಯಿಂದ 'ಸಿಲಿಕಾನ್ ಸಿಟಿ' 'ತೇಲುವ ನಗರ'ವಾಗಿ ಪರಿಣಮಿಸಿರುವುದನ್ನು ಕಣ್ಣಾರೆ ಕಂಡಿತು.

ಮೂರು ದಿನ ರಾಜ್ಯದ ವಿವಿಧೆಡೆ ಭೇಟಿ ನೀಡಲಿರುವ ತಂಡ, ಪ್ರವಾಹದಿಂದಾಗಿರುವ ಹಾನಿಯನ್ನು ಪರಿಶೀಲಿಸಲಿದೆ.

ಕೇಂದ್ರ ತಂಡದ ಜತೆಗೆ ಬುಧವಾರ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ದಕ್ಷಿಣ ಮತ್ತು ಉತ್ತರ ಒಳನಾಡು, ಕರಾವಳಿ ಹಾಗೂ ಬೆಂಗಳೂರಿನಲ್ಲೂ ಪ್ರವಾಹ ಉಂಟಾಗಿ ಜನ, ಜಾನುವಾರು ಮತ್ತು ಮೂಲಸೌಕರ್ಯಗಳಿಗೆ ಆಗಿರುವ ಭಾರಿ ಪ್ರಮಾಣದ ಹಾನಿಯನ್ನು ತಂಡದ ಗಮನಕ್ಕೆ ತರಲಾಯಿತು. ತಂಡ ಪ್ರವಾಸ ಮುಗಿಸಿ ಬಂದ ನಂತರ ಮತ್ತೊಂದು ಸಭೆ ನಡೆಸಿ ಪರಿಷ್ಕೃತ ಮನವಿಪತ್ರ ನೀಡಲಾಗುವುದು' ಎಂದರು.

ಮಳೆಯಿಂದಾಗಿ ಬೆಂಗಳೂರು ನಗರದ ಜನರಿಗೆ ಆಗಿರುವ ಸಮಸ್ಯೆಗಳು, ಕೆರೆಗಳು ಕೋಡಿ ಹರಿದಿರುವುದು, ಜನವಸತಿ ಪ್ರದೇಶಗಳಲ್ಲಿ ನೀರು ನುಗ್ಗಿರುವುದನ್ನು ನೋಡುವಂತೆ ಸಭೆಯಲ್ಲಿ ತಂಡಕ್ಕೆ ಸಲಹೆ ನೀಡಲಾಯಿತು. ಅಲ್ಲದೆ, ಕರಾವಳಿ ಪ್ರದೇಶದಲ್ಲಿ ಮೀನುಗಾರರ ದೋಣಿಗಳಿಗೆ ಆಗಿರುವ ಹಾನಿ, ಪಶ್ಚಿಮಘಟ್ಟದಲ್ಲಿ ಭೂಕುಸಿತ, ವಿವಿಧ ನಗರಗಳಲ್ಲಿ ಅಂಗಡಿ ಮತ್ತು ವಾಣಿಜ್ಯ ಸಂಕೀರ್ಣಗಳಿಗೆ ನೀರು ನುಗ್ಗಿ ಆಗಿರುವ ಹಾನಿಯ ಪ್ರಮಾಣವನ್ನು ತಂಡಕ್ಕೆ ವಿವರಿಸಲಾಯಿತು ಎಂದರು.

'ಜುಲೈನಿಂದ ಈವರೆಗೆ ಮಳೆ ಮತ್ತು ಪ್ರವಾಹದಿಂದ ಉಂಟಾದ ಹಾನಿಯನ್ನು ನಿಭಾಯಿಸಲು ಒಟ್ಟು ಎಂಟು ಸಭೆಗಳನ್ನು ನಡೆಸಿದ್ದೇನೆ. ಅಲ್ಲದೇ, ಸಂತ್ರಸ್ತರಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ. ಸಂಬಂಧಿಕರ ಮನೆಗಳಿಗೆ ತೆರಳಿದ ಸಂತ್ರಸ್ತರಿಗೆ ಡ್ರೈ ರೇಷನ್ ಕಿಟ್ ವಿತರಣೆ ಮಾಡಿರುವುದಾಗಿಯೂ ಅವರ ಗಮನಕ್ಕೆ ತಂದಿದ್ದೇನೆ' ಎಂದು ಹೇಳಿದರು.

'ಕಡಲ ಕೊರೆತ ತಡೆಗಟ್ಟಲು ಹಲವು ಸೂಕ್ಷ್ಮ ಪ್ರದೇಶಗಳಲ್ಲಿ ₹350 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಆದರೆ, ಹೊಸ ಹೊಸ ಜಾಗಗಳಲ್ಲಿ ಕಡಲ ಕೊರೆತ ಉಂಟಾಗಿದೆ. ಆದ್ದರಿಂದ ರಾಜ್ಯದ ಸಂಪೂರ್ಣ ಕರಾವಳಿ ಪ್ರದೇಶ ರಕ್ಷಣೆಗೆ ಕೇಂದ್ರದ ನೆರವಿನ ಅಗತ್ಯವಿದೆ ಎಂಬುದನ್ನು ಮನವರಿಕೆ ಮಾಡಿದ್ದೇನೆ' ಎಂದರು.

ಕಳೆದ ನವೆಂಬರ್‌ನಿಂದ ಬಿಟ್ಟು ಬಿಟ್ಟು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಮಳೆಯ ಮಾದರಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಕೈಗೊಳ್ಳಲೂ ಮನವಿ ಮಾಡಿರುವುದಾಗಿ ಬೊಮ್ಮಾಯಿ ತಿಳಿಸಿದರು.

ಮಳೆ ಮತ್ತು ಪ್ರವಾಹದಿಂದ ಆಗಿರುವ ಹಾನಿಯ ಅಧ್ಯಯನಕ್ಕೆ ಬಂದಿರುವ ಕೇಂದ್ರದ ಅಧಿಕಾರಿಗಳ ತಂಡದ ಜತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆ ನಡೆಸಿದರು.

> ಅಂಗಡಿ, ವಾಣಿಜ್ಯ ಮಳಿಗೆಗಳಿಗೂ ಪರಿಹಾರ ನೀಡುವ ಅಂಶವನ್ನು ಅಳವಡಿಸಿಕೊಳ್ಳಬೇಕು. ಮೀನುಗಾರರಿಗೆ ಪರಿಹಾರ ನೀಡುವುದರ ಜತೆಗೆ ಭೂಕುಸಿತಕ್ಕೆ ವಿಶೇಷ ಪರಿಹಾರ ನೀಡಬೇಕು ಎಂದು ತಂಡಕ್ಕೆ ಮನವರಿಕೆ ಮಾಡಲಾಗಿದೆ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಪೂರ್ವ ಬೆಂಗಳೂರು: ಶಾಶ್ವತ ಪರಿಹಾರ

ಬೆಂಗಳೂರು: 'ಮಹದೇವಪುರ ವಲಯದ(ಪೂರ್ವ ಬೆಂಗಳೂರು) ಸಮಸ್ಯೆಗೆ ಮುಂದಿನ ಮಳೆಗಾಲದ ವೇಳೆಗೆ ಶಾಶ್ವತ ಪರಿಹಾರ ರೂಪಿಸಲಾಗುವುದು' ಎಂದು ಐಟಿ ಕಂಪನಿಗಳ ಪ್ರಮುಖರಿಗೆ ಐಟಿ-ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದ್ದಾರೆ.

ನಾಸ್ಕಾಂ ಪ್ರತಿನಿಧಿಗಳು ಸೇರಿದಂತೆ ಉದ್ಯಮಿಗಳ ಜೊತೆ ವಿಧಾನಸೌಧದಲ್ಲಿ ಬುಧವಾರ ಸಭೆ ನಡೆಸಿದ ಅವರು, 'ಉದ್ಯಮಿಗಳ ಸಮಸ್ಯೆ ಆಲಿಸಲು ಇನ್ನು ಮುಂದೆ ಪ್ರತಿ ತಿಂಗಳು ವರ್ಚುವಲ್ ಸಭೆ ನಡೆಸಲಾಗುವುದು' ಎಂದರು.

ಇದಕ್ಕೆ ಸ್ಪಂದಿಸಿದ ಐಟಿ ಕಂಪನಿಗಳ ಪ್ರಮುಖರು, 'ನಮಗ್ಯಾರಿಗೂ ಬೆಂಗಳೂರನ್ನು ಬಿಟ್ಟು ಹೋಗುವ ಮನಸ್ಸಿಲ್ಲ. ಮಳೆಯಿಂದ ಉಂಟಾಗಿರುವ ಸಮಸ್ಯೆ ಮತ್ತು ನಷ್ಟವನ್ನು ಸರ್ಕಾರದ ಗಮನಕ್ಕೆ ತರುವುದಷ್ಟೇ ನಮ್ಮ ಉದ್ದೇಶ' ಎಂದರು.

ಮಳೆಯಿಂದ ಆದ ಹಾನಿ

ಮೃತಪಟ್ಟವರು	110
ಜಾನುವಾರು ಸಾವು	717
ಕೃಷಿ, ಪ್ಲಾಂಟೇಷನ್, ತೋಟಗಾರಿಕೆ	6,39,276 ಹೆಕ್ಟೇರ್
ರಸ್ತೆ	24,135
ಸೇತುವೆ	1,780
ಶಾಲಾ ಕಟ್ಟಡ	7,240
ಪಿಎಚ್‌ಸಿಗಳು	278
ಅಂಗನವಾಡಿ, ಸಮುದಾಯಭವನ	4,394
ವಿದ್ಯುತ್ ಕಂಬಗಳು	27,188
ಟ್ರಾನ್ಸ್‌ಫಾರ್ಮರ್‌ಗಳು	3,016

(ಸೆಪ್ಟೆಂಬರ್ 5 ರವರೆಗಿನ ಮಾಹಿತಿ)

ರಾಜ್ಯದಲ್ಲಿ ಈ ವರ್ಷ ವಾಡಿಕೆಗಿಂತ ಶೇ 40 ರಷ್ಟು ಅಧಿಕ ಮಳೆ.

50 ವರ್ಷಗಳಲ್ಲೇ ಅತಿ ಹೆಚ್ಚು ಮಳೆ

ಆಗಸ್ಟ್ ಕೊನೆಗೆ ರಾಜ್ಯದ ಶೇ 70 ರಷ್ಟು ಕೆರೆಗಳು ತುಂಬಿವೆ.

18 ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಶೇ 100 ರಷ್ಟು ಹೆಚ್ಚಳ.

ಇನ್ನಷ್ಟು ಸುದ್ದಿಗಳು 4,4B,5A

ನೀಟ್: ಕರ್ನಾಟಕದ ಹೃಷಿಕೇಶ್‌ಗೆ 3ನೇ ರ‍್ಯಾಂಕ್

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ನೀಟ್ ಪರೀಕ್ಷೆ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಕರ್ನಾಟಕದ ಹೃಷಿಕೇಶ್ ನಾಗಭೂಷಣ ಗಂಗುಲೆ 3ನೇ ರ‍್ಯಾಂಕ್ ಪಡೆದಿದ್ದಾರೆ.

2

ಕನ್ಯಾಕುಮಾರಿಯಲ್ಲಿ ಬುಧವಾರ ಆರಂಭವಾದ 'ಭಾರತ ಒಗ್ಗೂಡಿಸಿ ಯಾತ್ರೆ'ಯಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ರಾಷ್ಟ್ರ ಧ್ವಜವನ್ನು ಹಸ್ತಾಂತರಿಸಿದರು —ಪಿಟಿಐ ಚಿತ್ರ

ಭಾರತ ಒಗ್ಗೂಡಿಸಿ ಯಾತ್ರೆ ಶುರು

ಕನ್ಯಾಕುಮಾರಿ (ಪಿಟಿಐ): ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಜನರನ್ನು ಸಂಪರ್ಕಿಸುವ 'ಭಾರತ ಒಗ್ಗೂಡಿಸಿ ಯಾತ್ರೆ'ಗೆ ಕಾಂಗ್ರೆಸ್ ಇಲ್ಲಿ ಬುಧವಾರ ಚಾಲನೆ ನೀಡಿದೆ. ಪಕ್ಷದ ನಾಯಕರು ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ರಾಹುಲ್ ಗಾಂಧಿ ಅವರಿಗೆ ತ್ರಿವರ್ಣ ಧ್ವಜವನ್ನು ನೀಡುವ ಮೂಲಕ ಯಾತ್ರೆಗೆ ಚಾಲನೆ ನೀಡಲಾಯಿತು.

ಕನ್ಯಾಕುಮಾರಿಯಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ, ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಸಹ ಭಾಗವಹಿಸಿದ್ದು ವಿಶೇಷವಾಗಿತ್ತು. ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಪಕ್ಷದ ಮುಖಂಡ ದಿಗ್ವಿಜಯ್ ಸಿಂಗ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

9ನೇ ಪುಟ ನೋಡಿ

'ಧ್ವಜ ಎಲ್ಲ ಧರ್ಮ, ಭಾಷೆಯ ಜನರ ಪ್ರತೀಕ'

ತ್ರಿವರ್ಣ ಧ್ವಜವು ದಾಳಿಗೆ ಒಳಗಾಗುತ್ತಿದೆ. ಕೆಲವು ಜನರು ಅದನ್ನು ಮೂರು ಬಣ್ಣಗಳ ಮತ್ತು ಒಂದು ಚಕ್ರವಿರುವ ಧ್ವಜ ಎಂದಷ್ಟೇ ಭಾವಿಸಿದ್ದಾರೆ. ಆದರೆ ಅದು ಅದಕ್ಕಿಂತಲೂ ಹೆಚ್ಚು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

'ದೇಶದ ಪ್ರತಿಯೊಬ್ಬ ಜನ, ಪ್ರತಿ ಧರ್ಮ ಮತ್ತು ಭಾಷೆಯ ಜನರನ್ನು ತ್ರಿವರ್ಣ ಧ್ವಜ ಪ್ರತಿನಿಧಿಸುತ್ತದೆ. ದೇಶದ ಪ್ರತಿಯೊಬ್ಬರಿಗೂ ರಕ್ಷಣೆಯನ್ನು ಈ ಧ್ವಜ ಖಾತರಿಪಡಿಸುತ್ತದೆ. ಇಂತಹ ಧ್ವಜ ಇಂದು ದಾಳಿಗೆ ಒಳಗಾಗುತ್ತಿದೆ. ಹಾಗಾಗಿ ಈ ಧ್ವಜಕ್ಕೆ ವಂದಿಸಿದರೆ ಸಾಲದು. ಧ್ವಜದಲ್ಲಿ ಅಡಕವಾಗಿರುವ ಚಿಂತನೆಗಳು ಮತ್ತು ಮೌಲ್ಯಗಳನ್ನು ರಕ್ಷಿಸುವ ಅಗತ್ಯವಿದೆ' ಎಂದು ರಾಹುಲ್ ಕರೆ ನೀಡಿದ್ದಾರೆ.

'ಈ ಧ್ವಜ ನಮಗೆ ಸುಲಭವಾಗಿ ಸಿಕ್ಕಿಲ್ಲ. ಹಲವು ಜನರ ಪ್ರಾಣತ್ಯಾಗ ಮತ್ತು ಹೋರಾಟದಿಂದ ಇದನ್ನು ಗಳಿಸಲಾಗಿದೆ. ಈ ಧ್ವಜ ಮಾತ್ರವಲ್ಲ, ದೇಶದ ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಗಳ ಮೇಲೂ ಬಿಜೆಪಿ ದಾಳಿ ನಡೆಸುತ್ತಿದೆ' ಎಂದು ರಾಹುಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದರು. ಬಿಜೆಪಿ ಸಹ ಬ್ರಿಟಿಷರ ನೀತಿಯನ್ನೇ ಅನುಸರಿಸುತ್ತಿದೆ. ಅಂದು ಈಸ್ಟ್ ಇಂಡಿಯಾ ಕಂಪನಿ ಭಾರತವನ್ನು ನಿಯಂತ್ರಿಸುತ್ತಿತ್ತು. ಇಂದು ಮೂರು–ನಾಲ್ಕು ಕಂಪನಿಗಳು ಇಡೀ ದೇಶವನ್ನು ನಿಯಂತ್ರಿಸುತ್ತಿವೆ ಎಂದು ರಾಹುಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಸಚಿವ ಸೋಮಶೇಖರ್, ವಿಜಯೇಂದ್ರ ಸೇರಿ ಹಲವರಿಗೆ ಸಂಕಷ್ಟ

ಬಿಎಸ್‌ವೈ ವಿಚಾರಣೆಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆ ಅನುಷ್ಠಾನದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರು ಲಂಚ ಪಡೆದಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವಿಚಾರಣೆಗೆ ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಈ ಸಂಬಂಧ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಾಹಂ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿಗಳು ಬುಧವಾರ ಮುಕ್ತ ಕಲಾಪದಲ್ಲಿ ಪ್ರಕಟಿಸಿದರು. ಇದರಿಂದಾಗಿ ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರೂ ಸೇರಿದಂತೆ ಕೆಲ ಅಧಿಕಾರಿಗಳ ವಿರುದ್ಧದ ಭ್ರಷ್ಟಾಚಾರ ತಡೆ ಕಾಯ್ದೆ-1988ರ ಕಲಂ 7,8,9,10 ಮತ್ತು 13, ಭಾರತೀಯ ದಂಡ ಸಂಹಿತೆ-1860ರ ಕಲಂ 383, 384, 415, 418, 420 ಹಾಗೂ ಹಣ ಅಕ್ರಮ ವರ್ಗಾವಣೆ ಕಾಯ್ದೆ-2002ರ ಕಲಂ 3 ಮತ್ತು 4ರ ಅನ್ವಯ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರಿಯಲಿದೆ.

ಪ್ರಕರಣವೇನು?: 'ಬಿಡಿಎ ಗುತ್ತಿಗೆ ಪಡೆಯಲು ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ ಮತ್ತು ಕೆಲ ಶೆಲ್ ಕಂಪನಿಗಳಿಂದ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರು ಕೋಟ್ಯಂತರ ರೂಪಾಯಿಗಳ ಲಂಚ ಪಡೆದಿದ್ದಾರೆ' ಎಂದು ಆರೋಪಿಸಿ ಟಿ.ಜೆ ಅಬ್ರಹಾಂ ಖಾಸಗಿ ದೂರು ದಾಖಲಿಸಿದ್ದರು. 'ವಿಶೇಷ ತನಿಖಾ ತಂಡದಿಂದ(ಎಸ್‌ಐಟಿ) ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ಕೋರಿದ್ದರು.

ಯಡಿಯೂರಪ್ಪ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ರಾಜ್ಯಪಾಲರು ನಿರಾಕರಿಸಿದ್ದ ಕಾರಣ ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಶೇಷ ನ್ಯಾಯಾಲಯ 2021ರ ಜುಲೈ 8 ರಂದು ದೂರನ್ನು ವಜಾಗೊಳಿಸಿತ್ತು.

ಪ್ರಕರಣದ ಆರೋಪಿಗಳು

ಯಡಿಯೂರಪ್ಪ ಪುತ್ರ ಬಿ.ವೈ ವಿಜಯೇಂದ್ರ, ಮೊಮ್ಮಗ ಶಶಿಧರ ಮರಡಿ, ಅಳಿಯ ಸಂಜಯ್ ಶ್ರೀ, ಹಿಂದೆ ಬಿಡಿಎ ಅಧ್ಯಕ್ಷರಾಗಿದ್ದ ಈಗಿನ ಸಹಕಾರ ಸಚಿವ ಎಸ್.ಟಿ ಸೋಮಶೇಖರ್, ಚಂದ್ರಕಾಂತ್ ರಾಮಲಿಂಗಂ, ಐಎಎಸ್ ಅಧಿಕಾರಿ ಡಾ.ಜಿ.ಸಿ.ಪ್ರಕಾಶ್, ಕೆ.ರವಿ ಮತ್ತು ವಿರೂಪಾಕ್ಷಪ್ಪ.

ಕನ್ನಡ ಚೆಕ್ ಅಮಾನ್ಯ: ಎಸ್‌ಬಿಐಗೆ ₹85 ಸಾವಿರ ದಂಡ

ಧಾರವಾಡ: ಚೆಕ್‌ನಲ್ಲಿದ್ದ ಕನ್ನಡ ಅಂಕಿಯನ್ನು ತಪ್ಪಾಗಿ ಅರ್ಥೈಸಿಕೊಂಡ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಬ್ಯಾಂಕಿಗೆ ₹85,177 ದಂಡ ಪಾವತಿಸುವಂತೆ ಬುಧವಾರ ಆದೇಶಿಸಿದೆ.

ಇಲ್ಲಿನ ಕಲ್ಯಾಣ ನಗರ ನಿವಾಸಿ ವಾದಿರಾಜಾಚಾರ್ಯ ಇನಾಂದಾರ ಅವರು ವಿದ್ಯುತ್ ಶುಲ್ಕ ಪಾವತಿಸಲು ಹೆಸ್ಕಾಂಗೆ ₹ 6 ಸಾವಿರ ಮೊತ್ತದ ಚೆಕ್ ನೀಡಿ ದ್ದರು. ಚೆಕ್ ಅನ್ನು 2020ರ ಸೆ. 3ರಂದು ನೀಡಲಾಗಿತ್ತು. ಹೆಸ್ಕಾಂನ ಖಾತೆ ಕೆನರಾ ಬ್ಯಾಂಕ್ ನಲ್ಲಿದ್ದುದರಿಂದ ಅಲ್ಲಿಂದ ಚೆಕ್ ನಗದೀಕರಣಕ್ಕೆ ಎಸ್‌ಬಿಐಗೆ ಕಳಿಸಲಾಗಿತ್ತು. ದಿನಾಂಕ ನಮೂದಿಸುವಾಗ ಸೆಪ್ಟೆಂಬರ್ ತಿಂಗಳನ್ನು ಕನ್ನಡದ ಅಂಕಿ 9 ಎಂಬುದಾಗಿ ಬರೆದಿದ್ದದ್ದನ್ನು ತಪ್ಪಾಗಿ 6 ಎಂದು ಬ್ಯಾಂಕ್ ಅಧಿಕಾರಿ ಅರ್ಥೈಸಿಕೊಂಡಿದ್ದರು.

9ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮಳೆ: ರಾಜ್ಯದಲ್ಲಿ ಡೆಂಗಿ ಉಲ್ಬಣ

ವಾರದಲ್ಲಿ 264 ಪ್ರಕರಣಗಳು ದೃಢ • ಬಿಬಿಎಂಪಿ ವ್ಯಾಪ್ತಿಯಲ್ಲಿ 1,058 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನದಲ್ಲಿ ವೈಪರೀತ್ಯ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪೀಡಿತರ ಸಂಖ್ಯೆ ಉಲ್ಬಣಗೊಂಡಿದ್ದು, ವಾರದಲ್ಲಿ 264 ಪ್ರಕರಣಗಳು ದೃಢಪಟ್ಟಿವೆ.

ಈ ವರ್ಷ 1.10 ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 47 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 5,656ಕ್ಕೆ ಏರಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ನಾಲ್ವರು ಮರಣ ಹೊಂದಿ ದ್ದಾರೆ. ಕಳೆದ ವರ್ಷ 7,189 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿದ್ದರು.

ಈ ವರ್ಷ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 39,696 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 1,058 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 536, ಉಡುಪಿಯಲ್ಲಿ 444, ದಕ್ಷಿಣ ಕನ್ನಡ ಹಾಗೂ ಚಿತ್ರದುರ್ಗದಲ್ಲಿ ತಲಾ 243, ಶಿವಮೊಗ್ಗದಲ್ಲಿ 220 ಹಾಗೂ ಚಿಕ್ಕಬಳ್ಳಾ ಪುರದಲ್ಲಿ 204 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 200ಕ್ಕಿಂತ ಕಡಿಮೆ ಇವೆ.

28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 40 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 21 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 1,354 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

'ಹವಾಮಾನ ಬದಲಾವಣೆ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಹೆಚ್ಚಿನವರು ವಿವಿಧ ಜ್ವರಗಳಿಗೆ ಒಳಪಡುತ್ತಿದ್ದಾರೆ. ಸೊಳ್ಳೆ ಕಡಿತದಿಂದ ಕಾಣಿಸಿಕೊಳ್ಳುವ ಡೆಂಗಿ, ಚಿಕೂನ್‌ಗುನ್ಯಾ ಪ್ರಕರಣಗಳು ಹೆಚ್ಚಳವಾಗುತ್ತಿವೆ.

ಮನೆಯ ಸುತ್ತ ಮುತ್ತಲಿನ ಹೊರಾಂಗಣ ಪ್ರದೇಶಗಳು, ಕಟ್ಟಡ ಕಾಮಗಾರಿ ನಡೆಯುವ ಸ್ಥಳಗಳು, ಖಾಲಿ ನಿವೇಶನ ಸೇರಿ ವಿವಿಧೆಡೆ ಘನತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಸ್ವಚ್ಛತೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬೆಂಗಳೂರು ವಿ.ವಿ: ದೇಗುಲಕ್ಕೆ ವಿದ್ಯಾರ್ಥಿಗಳ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನ ಭಾರತಿ ಆವರಣದಲ್ಲಿ ಗಣೇಶ ದೇವಸ್ಥಾನದ ನಿರ್ಮಾಣ ವಿರೋಧಿಸಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ತಕ್ಷಣವೇ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು. 'ವಿಶ್ವವಿದ್ಯಾಲಯದ ಆವರಣದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಯಾರು ಅನುಮತಿ ನೀಡಿದ್ದಾರೆ ಎನ್ನುವುದು ನಮಗೂ ತಿಳಿದಿಲ್ಲ. ವಿದ್ಯಾರ್ಥಿಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ ದೇವಸ್ಥಾನದ ಬದಲು ಗ್ರಂಥಾಲಯ ನಿರ್ಮಿಸಲಿ. ಇದರಿಂದ, ವಿದ್ಯಾರ್ಥಿಗಳಿಗೂ ಅನುಕೂಲ' ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ವಿಶ್ವವಿದ್ಯಾಲಯದ ಅಧಿಕಾರಿಗಳು, 'ಇದು ಹೊಸ ದೇವಸ್ಥಾನವಲ್ಲ. ದೇವಸ್ಥಾನವನ್ನು ಸ್ಥಳಾಂತರಿಸಲಾಗುತ್ತಿದೆ. ವಿದ್ಯಾರ್ಥಿಗಳು ಇದನ್ನು ಅರ್ಥ ಮಾಡಿಕೊಳ್ಳುತ್ತಾರೆ' ಎಂದು ಹೇಳಿದ್ದಾರೆ.

'ಕೆ.ಆರ್. ವೇಣುಗೋಪಾಲ್ ಅವರು ಕುಲಪತಿಯಾಗಿದ್ದ ಸಂದರ್ಭದಲ್ಲಿ ದೇವಸ್ಥಾನ ನಿರ್ಮಿಸುವ ನಿರ್ಧಾರ ಕೈಗೊಳ್ಳಲಾಗಿತ್ತು. ಆವರಣದಲ್ಲಿ ಈಗಾಗಲೇ ಸಭಾಂಗಣದ ಪಕ್ಕ ಇರುವ ದೇವಸ್ಥಾನವು ರಸ್ತೆ ವಿಸ್ತರಣೆ ಯೋಜನೆ ಸಂದರ್ಭದಲ್ಲಿ ಒಡೆದು ಹಾಕಲಾಗುತ್ತದೆ. ಹೀಗಾಗಿ, ದೇವಸ್ಥಾನದ ಮರುನಿರ್ಮಾಣ ಅಥವಾ ಸ್ಥಳಾಂತರಕ್ಕೆ ಹಿಂದಿನ ಕುಲಪತಿ ಅವರು ಒಪ್ಪಿಗೆ ಸೂಚಿಸಿದ್ದರು. ಜತೆಗ ಸ್ಥಳವನ್ನು ಸಹ ಅಂತಿಮಗೊಳಿಸಲಾಗಿತ್ತು' ಎಂದು ತಿಳಿಸಿದ್ದಾರೆ.

ಕರ್ನಾಟಕದ ವಿದ್ಯಾರ್ಥಿಗೆ 3ನೇ ರ್‍ಯಾಂಕ್

ನೀಟ್ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ ಫಲಿತಾಂಶ ಬುಧವಾರ ರಾತ್ರಿ ಪ್ರಕಟವಾಗಿದ್ದು, ಒಟ್ಟು 9,93,069 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

ಪ್ರವೇಶ ಪರೀಕ್ಷೆಯಲ್ಲಿ ರಾಜಸ್ಥಾನದ ತನಿಷ್ಕಾ ಮೊದಲ ರ್‍ಯಾಂಕ್ ಗಳಿಸಿದ್ದಾರೆ. ದೆಹಲಿಯ ವತ್ಸ ಆಶಿಶ್ ಬಾತ್ರಾ ಮತ್ತು ಕರ್ನಾಟಕದ ಹೃಷಿಕೇಶ್ ನಾಗಭೂಷಣ ಗಂಗುಲೆ ಕ್ರಮವಾಗಿ ಎರಡು ಮತ್ತು ಮೂರನೇ ರ್‍ಯಾಂಕ್ ಪಡೆದಿದ್ದಾರೆ.

ಉತ್ತರ ಪ್ರದೇಶದ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ (1.17 ಲಕ್ಷ) ಅರ್ಹತೆ ಪಡೆದಿದ್ದಾರೆ. ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (1.13 ಲಕ್ಷ) ಹಾಗೂ ರಾಜಸ್ಥಾನದ (82,548) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ. ದೇಶದಾದ್ಯಂತ 497 ನಗರಗಳ 3,570 ಕೇಂದ್ರಗಳಲ್ಲಿ ಹಾಗೂ ವಿದೇಶದ 14 ನಗರಗಳಲ್ಲಿ ಜುಲೈ 17ರಂದು ಪ್ರವೇಶ ಪರೀಕ್ಷೆ ನಡೆದಿತ್ತು. ಶೇ 95ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಪರೀಕ್ಷೆಯನ್ನು ಒಟ್ಟು 13 ಭಾಷೆಗಳಲ್ಲಿ, ಅಂದರೆ ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಮತ್ತು ಉರ್ದು ಈ ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು.

ಮೊದಲ ಬಾರಿಗೆ ಅಬುಧಾಬಿ, ಬ್ಯಾಂಕಾಕ್, ಕೊಲಂಬೊ, ದೋಹಾ, ಕಠ್ಮಂಡು, ಕೌಲಾಲಂಪುರ, ಲಾಗೋಸ್, ಮನಾಮಾ, ಮಸ್ಕತ್, ರಿಯಾದ್, ಶಾರ್ಜಾ, ಸಿಂಗಾಪುರ್, ದುಬೈ ಮತ್ತು ಕುವೈತ್ ನಗರಗಳಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿತ್ತು.

ಒಟ್ಟು 17.64 ಲಕ್ಷ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದರು.

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಈಮೇಲ್: comp.secy@astrazeneca.com, ವೆಬ್: www.astrazeneca.com/india

ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರವು ಕಳೆದಿವೆ ಎಂದು ಷೇರುದಾರರು ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/- ರಂತೆ ಹೊಸ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಷೇರುದಾರರು ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ಷೇರುಗಳ ಸಂಖ್ಯೆ	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ವಿಶಿಷ್ಟ ಸಂಖ್ಯೆಗಳು	ಷೇರುದಾರರ ಹೆಸರು
0000017	500	1080	13925641 ಇಂದ 13926140 ವರೆಗೆ	ಭರತುಲ ಈಶ್ವರ ರಾವ್ (ಮೃತ)

ಒಂದು ವೇಳೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಈ ಪ್ರಕಟಣೆಯ ದಿನದಿಂದ ಹದಿನೈದು ದಿನಗಳ ಒಳಗಾಗಿ ಸ್ವೀಕರಿಸದಿದ್ದಲ್ಲಿ, ಕಂಪನಿಯು ಅಗತ್ಯವಿರುವ ಶಾಸನಬದ್ಧ ಪ್ರಕ್ರಿಯೆಯ ಪ್ರಕಾರ ಹಕ್ಕುದಾರರ ಮನವಿಯೊಂದಿಗೆ ಮುಂದುವರಿಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸಹಿ/-
ಮಾನಸ ಆರ್
ಕಂಪನಿ ಸೆಕ್ರೆಟರಿ

ಸ್ಥಳ: ಬೆಂಗಳೂರು
ದಿನಾಂಕ: 07.09.2022

ಕೃಷಿ ಇಲಾಖೆ

ಜಂಟಿ ಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ಭವನ, ರಾಮನಗರ

ಸಂಖ್ಯೆ : ಜಕೃನಿ/ರಾನ/ಲೆಕ್ಕ–1/ಹೊ.ಗು.ಸಿ.ನೇ/2022–23 ದಿನಾಂಕ : 02–09–2022

ಟೆಂಡರ್ ಪ್ರಕಟಣೆ

2022–23 ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಕೃಷಿ ಇಲಾಖೆಯ ಕಛೇರಿಗಳಲ್ಲಿ ಈ ಕೆಳಕಂಡಂತೆ ಹೊರಗುತ್ತಿಗೆ ಆಧಾರದ ಮೇರೆಗೆ ನೋಂದಾಯಿತ ಸಂಸ್ಥೆಗಳ ಮೂಲಕ ಸೇವೆ ಪಡೆಯಲು ದ್ವಿ ಲಕೋಟೆ ಮಾದರಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಟೆಂಡರ್‌ದಾರರು ಟೆಂಡರ್‌ಗೆ ಸಂಬಂಧಿಸಿದ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ https://www.eproc.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಕ್ರ.ಸಂ. 1 – ವಿವರ : ಜಂಟಿ ಕೃಷಿ ನಿರ್ದೇಶಕರು, ರಾಮನಗರ ಕಛೇರಿ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವುದು. 1) ಹುದ್ದೆಯ ವಿವರಗಳು : ಬೆರಳಚ್ಚುಗಾರರು. ಒಟ್ಟು ಹುದ್ದೆಗಳು : 07. 2) ವಾಹನ ಚಾಲಕರು. ಒಟ್ಟು ಹುದ್ದೆಗಳು : 06. 3) ಡಿ–ದರ್ಜೆ ನೌಕರರು. ಒಟ್ಟು ಹುದ್ದೆಗಳು : 11. ಕ್ರ.ಸಂ. 2 – 1) ಹುದ್ದೆಯ ವಿವರಗಳು : ಸಸ್ಯ ಆರೋಗ್ಯ ಚಿಕಿತ್ಸಾಲಯ ಯೋಜನೆಯಡಿ ತಾಂತ್ರಿಕ ಸಿಬ್ಬಂದಿ. ಒಟ್ಟು ಹುದ್ದೆಗಳು : 01. 2) ವಾಹನ ಚಾಲಕರು. ಒಟ್ಟು ಹುದ್ದೆಗಳು : 01. ಒಟ್ಟು 26 ಹುದ್ದೆಗಳು.

ಟೆಂಡರ್ ಮೊತ್ತ : ರೂ. 63,00,400/–.

ಟೆಂಡರ್ ಸಲ್ಲಿಸುವ ಅವಧಿ : 1) ಬಿಡ್ ಅಪ್‌ಲೋಡ್ ಮಾಡುವ ದಿನಾಂಕ : 02–09–2022 ರಿಂದ 01–10–2022 ರ ಅಪರಾಹ್ನ 5.30 ಗಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06–10–2022. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ ; 10–10–2022.

ಸಹಿ/– ಜಂಟಿ ಕೃಷಿ ನಿರ್ದೇಶಕರು,
ರಾಮನಗರ ಜಿಲ್ಲೆ ರಾಮನಗರ.

ಡಿಐಪಿಆರ್/ರಾಮನಗರ/209/ಮಣಿಪಾಲ್/2022–23

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

ಬೆಂಗಳೂರು ಗ್ರಾಮಾಂತರ, ಬೆಂಗಳೂರು.

ಸಂಖ್ಯೆ : ಕಾಪಅ/ಪಂರಾಇಂವಿಬೆಂಗ್ರಾ/ಇ.ಪ್ರೊ./ಹೊ.ಸಂ./07/2022–23/773
ದಿನಾಂಕ : 06–09–2022

ಇ-ಟೆಂಡರ್ ಪ್ರಕಟಣೆ

2022–23 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ತಾಲ್ಲೂಕು ವಿಭಾಗಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ – 06 ಮತ್ತು ವಾಹನ ಚಾಲಕ – 01 ಸೇವೆ ಪಡೆಯಲು ಟೆಂಡರ್ ಕರೆದಿದ್ದು, ಟೆಂಡರ್ ಸಲ್ಲಿಸಲು ದಿನಾಂಕ : 13–09–2022 ರಂದು ಕೊನೆಯ ದಿನವಾಗಿದ್ದು, ಹೆಚ್ಚಿನ ವಿವರಗಳಿಗೆ https://eproc.karnataka.gov.in ನ್ನು ನೋಡುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/2101/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಕಲ್ಯಾಣ) ರವರ ಕಛೇರಿ, ನರಸಿಂಹ ರಾಜ ಚೌಕ, ಬೆಂಗಳೂರು–560 002.

ಸಂಖ್ಯೆ: ಕ.ಅ/ಕೇಂ.ಕ/ಪಿ.ಆರ್/1042/2022–23 ದಿನಾಂಕ: 22–08–2022

ಸಾರ್ವಜನಿಕ ಪ್ರಕಟಣೆ

ವಿಷಯ: ಮ್ಯಾನ್ಯುಯಲ್ ಸ್ಕ್ಯಾವೇಂಜರ್‌ಗಳ ವಾಸಸ್ಥಳದ ಪತ್ತೆಗಾಗಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮ್ಯಾನ್ಯುಯಲ್ ಸ್ಕ್ಯಾವೇಂಜರ್‌ಗಳ ನೇಮಕಾತಿ ಹಾಗೂ ಪುನರ್ವಸತಿ ಅಧಿನಿಯಮ 2013ರ ಕಾಯ್ದೆ ಹಾಗೂ ನಿಯಮಗಳನ್ವಯ 2012-13ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಪಾಲಿಕೆಯ ವತಿಯಿಂದ ನಡೆಸಲಾದ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ 201 ಮ್ಯಾನುಯಲ್ ಸ್ಕ್ಯಾವೇಂಜರ್‌ಗಳಿಗೆ National Safai Karamchari Finance Development Corporation (NSKFDC) ರವರಿಂದ ಅನುಮೋದನೆ ಪಡೆದು ಇವರುಗಳ ಪುನರ್ವಸತಿಗೆ ಸಂಬಂಧಿಸಿದಂತೆ ಗುರುತಿನ ಚೀಟಿಗಳನ್ನು ವಿತರಿಸಲಾಗುತ್ತಿದ್ದು ಈಗಾಗಲೇ 201 ಮ್ಯಾನ್ಯುಯಲ್ ಸ್ಕ್ಯಾವೇಂಜರ್‌ಗಳ ಪೈಕಿ 167 ಫಲಾನುಭವಿಗಳಿಗೆ ವಿತರಿಸಲಾಗಿದ್ದು, ಬಾಕಿ ಉಳಿದಿರುವ 34 ಫಲಾನುಭವಿಗಳಲ್ಲಿ ಕೆಲವರು ಬೇರೆಡೆಗೆ ಸ್ಥಳಾಂತರಗೊಂಡಿರುವ ಬಗ್ಗೆ ಹಾಗೂ ಇನ್ನೂ ಕೆಲವರು ಮೃತಪಟ್ಟಿರುವ ಬಗ್ಗೆ ಮಾಹಿತಿಗಳು ಲಭ್ಯವಾಗಿರುತ್ತದೆ.

ಕ್ರ. ಸಂ.	ವಾರ್ಡ್ ಸಂಖ್ಯೆ	ಎಂ.ಎಸ್.ಡಿ ಸಂಖ್ಯೆ	ಮ್ಯಾನ್ಯುಯಲ್ ಸ್ಕ್ಯಾವೇಂಜರ್‌ಗಳ 2013 ಕಾಯ್ದೆ ಅನ್ವಯದಡಿಯಲ್ಲಿ ಹೆಸರು ಮತ್ತು ವಿಳಾಸಗಳು	ಮೊಬೈಲ್ ಸಂಖ್ಯೆ	ಆಧಾರ್ ಸಂಖ್ಯೆ	ಷರಾ
ಪೂರ್ವ ವಲಯ						
1	117	2954513612	ಕೆ. ವೆಂಕಟರಮಣ, ಲೇ॥ ಕೆ. ಪೆದ್ದಣ್ಣ, ನಂ.17, ಮೈತ್ರಿ ಸರ್ವಿಸ್ ಸ್ಟೇಷನ್, 1ನೇ ಕ್ರಾಸ್, ಚಿಕ್ಕ ಟ್ಯಾಗೂರ್ ರೋಡ್, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು–100	ಇರುವುದಿಲ್ಲ	ಇರುವುದಿಲ್ಲ	ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
2	30	2954513621	ಲಕ್ಮಯ್ಯ ಬಿನ್ ಕಲ್ಲಪ್ಪ, ನಂ.12/1, ವಿನೋಭ ನಗರ, ಎಕೆ ಕಾಲೋನಿ, ಕೆ. ಜಿ. ಹಳ್ಳಿ, ಬೆಂಗಳೂರು–45	ಇರುವುದಿಲ್ಲ	518900599178	ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
3	30	2954513623	ನಾರಾಯಣಪ್ಪ ಬಿನ್ ಸಾದಪ್ಪ, ನಂ.167, 12ನೇ ಕ್ರಾಸ್, ಲಕ್ಷ್ಮೀಪತಿ ಲೇಔಟ್, ವಿನೋಭ ನಗರ, ಕೆಜಿ ಹಳ್ಳಿ, ಬೆಂಗಳೂರು–45	ಇರುವುದಿಲ್ಲ	ಇರುವುದಿಲ್ಲ	ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
4	79	2954513542	ನರಸಿಂಹಯ್ಯ ಬಿನ್ ನರಸಯ್ಯ, ನಂ.43, ನ್ಯೂ ಕಾರ್ಪೊರೇಷನ್ ಕಾಲೋನಿ, ಪಿ.ಎಸ್.ಕೆ. ನಾಯ್ಡು ರೋಡ್, ದೊಡ್ಡಿಗುಂಟ.	ಇರುವುದಿಲ್ಲ	ಇರುವುದಿಲ್ಲ	ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
5	79	2954513537	ನರಸಯ್ಯ ಬಿನ್ ಅಸಯ್ಯ, ನಂ.117, ಪೊಲ್ಲೂರಯ್ಯ ಸ್ಲಂ, 9ನೇ ಕ್ರಾಸ್, ದೊಡ್ಡಿಗುಂಟ ಕಾಕ್ಸ್ ಟೌನ್.	ಇರುವುದಿಲ್ಲ	ಇರುವುದಿಲ್ಲ	ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
6	79	2954513597	ಆಧಿನಾರಾಯಣ ಬಿನ್ ಪ್ರೇಮಯ್ಯ, ನಂ.620, ನ್ಯೂ ಕಾರ್ಪೊರೇಷನ್ ಕಾಲೋನಿ, ಸಿ.ಎಸ್.ಕೆ. ನಾಯ್ಡು ರೋಡ್, ದೊಡ್ಡಿಗುಂಟ, ಕಾಕ್ಸ್ ಟೌನ್, ಬೆಂಗಳೂರು–05.	9620771514	206978696430	
7	79	2954513583	ತಿರುಪತಿ ಬಿನ್ ನರಸಯ್ಯ, ನಂ.692, ಕೆಹೆಚ್‌ಬಿ ಕ್ವಾರ್ಟರ್ಸ್, ದೊಡ್ಡಿಗುಂಟ, ಕಾಕ್ಸ್ ಟೌನ್, ಬೆಂಗಳೂರು–05.	9731329253	981936501452	
8	79	2954513602	ಚರಣ್ ಎಸ್ಎನ್ ಶಂಕರ್, ನಂ.02, ಎನ್‌ಸಿ ಕಾಲೋನಿ, ಪಿ.ಎಸ್.ಕೆ. ನಾಯ್ಡು ರೋಡ್, ದೊಡ್ಡಿಗುಂಟ, ಕಾಕ್ಸ್ ಟೌನ್, ಬೆಂಗಳೂರು–05.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
9	79	2954513655	ರಮೇಶ್ ಡಿ. ಬಿನ್ ದೇವರಾಜ್, ನಂ.01, ಎನ್. ಸಿ. ಕಾಲೋನಿ, ಪಿ.ಎಸ್.ಕೆ. ನಾಯ್ಡು ದೊಡ್ಡಿಗುಂಟ, ಕಾಕ್ಸ್ ಟೌನ್, ಬೆಂಗಳೂರು–05.	7624969993	665219408214	
10	79	2954512631	ಪುರಷೋತಮ್ ಬಿನ್ ವೆಂಕಟೇಶ್, ನಂ.26, ಕಾರ್ಪೊರೇಷನ್ ಕಾಲೋನಿ, ಪಿ.ಎಸ್.ಕೆ. ನಾಯ್ಡು ರೋಡ್, ದೊಡ್ಡಿಗುಂಟ, ಕಾಕ್ಸ್ ಟೌನ್, ಬೆಂಗಳೂರು–05.	9986409477	446519296371	ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
11	79	2954513592	ವಿನೋದ್ ಬಿನ್ ಜೋಸೆಸ್, ನಂ.37, ನ್ಯೂ ಕಾರ್ಪೊರೇಷನ್ ಕಾಲೋನಿ, ಪಿ.ಎಸ್.ಕೆ. ನಾಯ್ಡು ರೋಡ್, ದೊಡ್ಡಿಗುಂಟ, ಕಾಕ್ಸ್ ಟೌನ್, ಬೆಂಗಳೂರು–05.	8095676026	283290536818	
ರಾಜರಾಜೇಶ್ವರಿ ನಗರ ವಲಯ						
1	16		ಒಬಳೇಶ್, ನಂ.6107, 4ನೇ ಬ್ಲಾಕ್, ಸಿದ್ದಾರ್ಥ ನಗರ, ಜಾಲಹಳ್ಳಿ ವೆಸ್ಟ್, ಬೆಂಗಳೂರು–560005.	9972748715	231780862739	
2	38	2954513541	ನರಸಿಂಹಯ್ಯ, ನಂ.371, ಆಶ್ರಯ ನಗರ, ಪೀಣ್ಯ ಗ್ರಾಮ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
3	72	2954513504	ಲಕ್ಷ್ಮೀನಾರಾಯಣ, 2ನೇ ಕ್ರಾಸ್, ಹೇರೋಹಳ್ಳಿ, ವಿಶ್ವನೀಡಂ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
4	72	2954513662	ವೆಂಕಟರಮಣಪ್ಪ, 3ನೇ ಕ್ರಾಸ್, ಹೇರೋಹಳ್ಳಿ, ವಿಶ್ವನೀಡಂ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
5	72	2954513593	ಯಲ್ಲಪ್ಪ, 3ನೇ ಕ್ರಾಸ್, ಹೇರೋಹಳ್ಳಿ, ವಿಶ್ವನೀಡಂ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
6	72	2954513628	ನಂಜಪ್ಪ, 3ನೇ ಕ್ರಾಸ್, ಹೇರೋಹಳ್ಳಿ, ವಿಶ್ವನೀಡಂ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿ ಇರುವುದಿಲ್ಲ.
7	72	2954513482	ಹನುಮಂತಪ್ಪ, 3ನೇ ಕ್ರಾಸ್, ಹೇರೋಹಳ್ಳಿ, ವಿಶ್ವನೀಡಂ, ಬೆಂಗಳೂರು.	9632333832	756550894689	
ಯಲಹಂಕ ವಲಯ						
1	6	2954513464	ದೇವರಾಜು, ಹೆಗಡೆನಗರ, ಥಣಿಸಂದ್ರ, ಬೆಂಗಳೂರು–77			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
2	6	2954513523	ಮುರುಗ, ನಂ179, ಶಿವರಾಮ್ ಕಾರಂತನಗರ ಬೆಂಗಳೂರು–77			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
3	9	2954513636	ರಾಮಕೃಷ್ಣಪ್ಪ			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
4	9	2954513594	ನಾರಾಯಣಪ್ಪ ಹೆಚ್. ತಿಂಡ್ಲು ಗ್ರಾಮ, ಬೆಂಗಳೂರು–97.	9972623990		ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
ದಾಸರಹಳ್ಳಿ ವಲಯ						
1	41		ಎನ್. ನರಸಿಂಹಮೂರ್ತಿ ನಂ.172, 1ನೇ ಮುಖ್ಯರಸ್ತೆ, ಶಿವಪುರ ಕಾಲೋನಿ, ಬೆಂಗಳೂರು–560 058.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
2	39		ದೇವಪ್ಪ, 3ನೇ ಕ್ರಾಸ್, ಸರ್ಕಾರಿ ಸ್ಕೂಲ್ ಹಿಂಭಾಗ, ನಾಗಸಂದ್ರ ಬೆಂಗಳೂರು–560 073.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
3	15		ವೆಂಕಟರಾಮಯ್ಯ, ನಂ.42, 6ನೇ ಕ್ರಾಸ್, ಉರ್ದು ಶಾಲೆಯ ಹತ್ತಿರ, ಕಾಳಸ್ತ್ರೀನಗರ, ದಾಸರಹಳ್ಳಿ, ಬೆಂಗಳೂರು–57			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
4	39		ಎಸ್. ಮಂಜು, ನಂ.08, ಮಹದೇವಾಚಾರ್ ಬಿಲ್ಡಿಂಗ್, ನಾಗಸಂದ್ರ ಮುಖ್ಯರಸ್ತೆ, ಬೆಂಗಳೂರು–560 073.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
5	15		ರಾಮಮೂರ್ತಿ, ನಂ.118, 5ನೇ ಕ್ರಾಸ್, ಉರ್ದುಶಾಲೆಯ ಹತ್ತಿರ, ಕಾಳಸ್ತ್ರೀನಗರ, ದಾಸರಹಳ್ಳಿ, ಬೆಂಗಳೂರು–57.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
6	15		ಗಂಗನರಸಯ್ಯ, ನಂ.109, 6ನೇ ಕ್ರಾಸ್, ಕಾಳಸ್ತ್ರೀನಗರ, ದಾಸರಹಳ್ಳಿ, ಬೆಂಗಳೂರು–57.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
ಬೊಮ್ಮನಹಳ್ಳಿ ವಲಯ						
1	194		ಮುನಿಯಪ್ಪ ತಂದೆ/ಕಾರು ಮುನಿಯಪ್ಪ, ನಂ.140/ಬಿ, 2ನೇ ಕ್ರಾಸ್, ಗೊಟ್ಟಿಗೆರೆ, ಬಿ.ಜಿ. ರಸ್ತೆ ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
2	194		ರಾಮಣ್ಣ ತಂದೆ/ಮುನಿಸ್ವಾಮಿ, ನಂ.148, 2ನೇ ಕ್ರಾಸ್ ಯಲ್ಲಮ್ಮ ದೇವಸ್ಥಾನದ ಹತ್ತಿರ, ಗೊಟ್ಟಿಗೆರೆ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
3	194		ಮುನಿಯಪ್ಪ ತಂದೆ/ನರಸಿಂಹಪ್ಪ ನಂ.340, 3ನೇ ಕ್ರಾಸ್, ಯಲ್ಲಮ್ಮ ದೇವಸ್ಥಾನದ ಹತ್ತಿರ, ಗೊಟ್ಟಿಗೆರೆ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
4	194		ಮಣಿ ತಂದೆ/ಚಿನ್ನಸ್ವಾಮಿ, ನಂ.1480, ಯಲ್ಲಮ್ಮ ದೇವಸ್ಥಾನದ ಹತ್ತಿರ, ಗೊಟ್ಟಿಗೆರೆ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
5	194		ಸಂತೋಷ್ ಕುಮಾರ್ ತಂದೆ/ ಪಿಲ್ಲಗಾನಹಳ್ಳಿ, ಅಂಕಾಳ ಪರಮೇಶ್ವರಿ ದೇವಸ್ಥಾನದ ಹತ್ತಿರ, ಗೊಟ್ಟಿಗೆರೆ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.
6	194		ಶಿವ ತಂದೆ/ರಾಜಪ್ಪ, ನಂ.175, 2ನೇ ಕ್ರಾಸ್, ಬೇಗೂರು ಗೇಟ್, ಗೊಟ್ಟಿಗೆರೆ, ಬೆಂಗಳೂರು.			ವಿಳಾಸದಲ್ಲಿ ಇರುವುದಿಲ್ಲ ಹಾಗೂ ಮಾಹಿತಿಇರುವುದಿಲ್ಲ.

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಈ ಕೆಳಗಿನಂತೆ ವಲಯವಾರು ಮ್ಯಾನ್ಯುಯಲ್ ಸ್ಕ್ಯಾವೇಂಜರ್‌ಗಳ ಮಾಹಿತಿಗಳನ್ನು ನೀಡಲಾಗಿದ್ದು ಸದರಿಯವರುಗಳ ಬಗ್ಗೆ. ಅವರ ಕುಟುಂಬ ಸದಸ್ಯರುಗಳ ಬಗ್ಗೆ ಅಥವಾ ಅವರ ವಾಸಸ್ಥಳಗಳ ಬಗ್ಗೆ ಮಾಹಿತಿಗಳು ಲಭ್ಯವಿದ್ದಲ್ಲಿ/ಲಭ್ಯವಾದಲ್ಲಿ ದಿನಾಂಕ : 07–09–2022ರ ಈ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 15 ದಿನಗಳ ಒಳಗಾಗಿ ಮಾಹಿತಿಗಳನ್ನು ಸಹಾಯಕ ಆಯುಕ್ತರು (ಕಲ್ಯಾಣ–ಕೇಂದ್ರ) ಕಛೇರಿ, ದೂರವಾಣಿ ಸಂಖ್ಯೆ: 94806 85854 ಎನ್.ಆರ್. ಚೌಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಮಾಹಿತಿಯನ್ನು ನೀಡಲು ಕೋರಿದೆ.

ಕ್ರ. ಸಂ.	ವಲಯಗಳು	ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ರವರ ಹೆಸರು	ವಲಯದ ವಿಳಾಸ	ದೂರವಾಣಿ ಸಂಖ್ಯೆ
1	ಪೂರ್ವ	ಶ್ರೀಮತಿ ಶೈಲಜಾ	22ನೇ ಮಹಡಿ, ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರೋಡ್, ಮೇಯೊಹಾಲ್, ಬೆಂಗಳೂರು–560 001.	94806 85854
2	ರಾಜರಾಜೇಶ್ವರಿ ನಗರ	ಶ್ರೀ ಲಿಂಗಯ್ಯ ಸಿ.	ಐಡಿಯಲ್ ಹೋಮ್ಸ್, ಬಿಬಿಎಂಪಿ ಕಛೇರಿ, ರಾಜರಾಜೇಶ್ವರಿ ನಗರ, ಬೆಂಗಳೂರು–560 098.	94806 83623
3	ಯಲಹಂಕ	ಶ್ರೀ ಶಿವಕುಮಾರ	ಆಫೀಸ್ ಆಫ್ ವೆಲ್ ಫೇರ್ ಆಫೀಸ್, ಬಿಬಿಎಂಪಿ ಯಲಹಂಕ ಜೋನ್, ಬ್ಯಾಟರಾಯನ ಪುರ, ಅಮೃತಹಳ್ಳಿ ಮೇನ್ ರೋಡ್, ಬೆಂಗಳೂರು–560 092.	97391 34184
4	ದಾಸರಹಳ್ಳಿ	ಶ್ರೀ ನಾಗಭೂಷಣ	ಆಫೀಸ್ ಆಫ್ ವೆಲ್ ಫೇರ್ ಆಫೀಸ್, ಬಿಬಿಎಂಪಿ ದಾಸರಹಳ್ಳಿ ಜೋನ್, ಎಂ.ವಿ. ಲೇಔಟ್, ಹೆಸರುಘಟ್ಟ ಮೇನ್ ರೋಡ್, ಬಾಗಲಗುಂಟೆ, ಬೆಂಗಳೂರು–73.	99029 29741
5	ಬೊಮ್ಮನಹಳ್ಳಿ	ಶ್ರೀ ನಾಗಭೂಷಣ	ಆಫೀಸ್ ಆಫ್ ವೆಲ್ ಫೇರ್ ಆಫೀಸ್, ಬಿಬಿಎಂಪಿ ಬೊಮ್ಮನಹಳ್ಳಿ, ಬೇಗೂರ್ ಮೇನ್ ರೋಡ್, ಬೊಮ್ಮನಹಳ್ಳಿ, ಬೆಂಗಳೂರು–560 068.	99029 29741

ಸಹಿ/– ವಿಶೇಷ ಆಯುಕ್ತರು (ಕಲ್ಯಾಣ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರಜಾವಾಣಿ

ಫೋನ್–ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಆಗಾಗ್ಗೆ ಕರೆಂಟ್ ಕೈ ಕೊಡುತ್ತಿದೆಯೇ?
- ವಿದ್ಯುತ್ ಬಳಕೆಯ ಶುಲ್ಕದಲ್ಲಿ ಏರುಪೇರು ಆಗುತ್ತಿದೆಯೇ?
- ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯುತ್ ಅವಘಡ ತಪ್ಪಿಸಲು ಕ್ರಮ ಏನು?
- ಪಂಪ್‌ಸೆಟ್‌ಗಳಿಗೆ ತ್ರಿಫೇಸ್ ವಿದ್ಯುತ್ ಪೂರೈಕೆಯಾಗುತ್ತಿಲ್ಲವೇ?

ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ

ಮಹಾಂತೇಶ ಬೀಳಗಿ
ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

09–09–2022, ಶುಕ್ರವಾರ

ಸಮಯ: ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 11.30ರವರೆಗೆ

ದೂರವಾಣಿ: 080 45557261

LIVE /prajavani.net @prajavani /prajavani

ಇದೇ 25ಕ್ಕೆ ಬೆಂಗಳೂರಿನಲ್ಲಿ ಕಿಸಾನ್ ಮಹಾ ಪಂಚಾಯತ್

ಬೆಂಗಳೂರು: 'ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ(ರಾಜಕೀಯೇತರ) ವತಿಯಿಂದ ಸೆಪ್ಟೆಂಬರ್ 25ರಂದು ಬೆಂಗಳೂರಿನಲ್ಲಿ 'ಕಿಸಾನ್ ಮಹಾ ಪಂಚಾಯತ್' ಮತ್ತು 26ರಂದು ಬೃಹತ್ ರ್‍ಯಾಲಿ ಹಮ್ಮಿಕೊಳ್ಳಲಾಗುವುದು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

'ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕಾನೂನು ಜಾರಿ ಮಾಡುವುದಾಗಿ, ರೈತ ಹೋರಾಟದಲ್ಲಿ ಮೃತಪಟ್ಟ ರೈತ ಕುಟುಂಬಗಳಿಗೆ ಪರಿಹಾರ ನೀಡುವುದಾಗಿ ಹೋದ ನವೆಂಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ನೀಡಿದ್ದ ಭರವಸೆ ಹುಸಿಗೊಳಿಸಿದ್ದಾರೆ' ಎಂದು ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಆರೋಪಿಸಿದರು.

'ಕನಿಷ್ಠ ಬೆಂಬಲ ಬೆಲೆ ಖಾತರಿ ನೀಡಲು ಸಮಿತಿ ರಚಿಸಿರುವುದಾಗಿ ಕೇಂದ್ರ ಸರ್ಕಾರ ನಾಟಕವಾಡುತ್ತಿದೆ. ಆದ್ದರಿಂದ ದೇಶದಾದ್ಯಂತ ರೈತ ಚಳವಳಿಯನ್ನು ಪ್ರಬಲಗೊಳಿಸಲು ಈ ಕಿಸಾನ್ ಮಹಾ ಪಂಚಾಯತ್‌ನಲ್ಲಿ ರಾಷ್ಟ್ರೀಯ ರೈತ ನಾಯಕರ ಜೊತೆ ಚರ್ಚಿಸಿ ಯಾವ ರೀತಿ ಹೋರಾಟ ಕೈಗೊಳ್ಳಬೇಕೆಂಬ ಕುರಿತು ನಿರ್ಧಾರ ಕೈಗೊಳ್ಳಲಾಗುವುದು' ಮಾಹಿತಿ ನೀಡಿದರು.

'ಡಾ. ಎಂ.ಎಸ್. ಸ್ವಾಮಿನಾಥನ್ ವರದಿಯಂತೆ ಬೆಂಬಲ ಬೆಲೆ ನಿಗದಿಗೊಳಿಸಿ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಬೇಕು. 2022ರ ವಿದ್ಯುತ್ ಕಾಯ್ದೆ ಖಾಸಗೀಕರಣ ತಿದ್ದುಪಡಿ, ಕಬ್ಬಿನ ಎಫ್‌ಆರ್‌ಪಿ ದರ ಪುನರ್ ಪರಿಶೀಲಿಸಿ ವೈಜ್ಞಾನಿಕ ದರ ನಿಗದಿಪಡಿಸಬೇಕು' ಎಂದು ಒತ್ತಾಯಿಸಿದರು.

'ಕೃಷಿ ಉತ್ಪನ್ನಗಳು ಹಾಗೂ ಉಪಕರಣಗಳ ಮೇಲಿನ ಜಿಎಸ್‌ಟಿ ರದ್ದುಪಡಿಸಬೇಕು. ಫಸಲ್ ಬಿಮಾ ಯೋಜನೆಯ ಮಾನದಂಡಗಳನ್ನು ಬದಲಾಯಿಸಬೇಕು. ವಿಶ್ವ ವ್ಯಾಪಾರ ಒಪ್ಪಂದ–ಡಬ್ಲ್ಯುಟಿಒನಿಂದ ಭಾರತ ಸರ್ಕಾರ ಹೊರಬರಬೇಕು ಎಂಬ ವಿಷಯಗಳ ಬಗ್ಗೆ ಮಹಾ ಪಂಚಾಯತ್‌ನಲ್ಲಿ ಚರ್ಚಿಸಲಾಗುವುದು' ಎಂದರು.

ರೈತರ ಮಕ್ಕಳಿಗೆ ದೇಶದ ಆಡಳಿತ: ನ್ಯಾ. ಗೋಪಾಲಗೌಡ

ಬೆಂಗಳೂರು: ಸಂಕಷ್ಟದಲ್ಲಿರುವ ರೈತ ಸಮುದಾಯಕ್ಕೆ ಒಕ್ಕಲಿಗರ ಸಂಘ ನೆರವಾಗಬೇಕು. ರೈತರ ಮಕ್ಕಳು ದೇಶದ ಆಡಳಿತ ಚುಕ್ಕಾಣಿ ಹಿಡಿಯಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಆಶಯ ವ್ಯಕ್ತಪಡಿಸಿದರು.

ರಾಜ್ಯ ಒಕ್ಕಲಿಗರ ಸಂಘ ಎಂಪ್ಲಾಯೀಸ್ ಅಸೋಸಿಯೇಷನ್ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೃಷಿ ಕಾಯಕದ ಎಲ್ಲರೂ ಒಕ್ಕಲಿಗರು. ಅವರ ಬದುಕು ಹಸನಾಗಬೇಕು. ರೈತನ ಮಗನಾದ ನಾನು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ ತೃಪ್ತಿ ಇದೆ' ಎಂದು ಆಶಯ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿದ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರೂ ಆದ ಶಾಸಕ ಸಿ.ಎನ್.ಬಾಲಕೃಷ್ಣ, 'ಸಜ್ಜೆ ಪಾಳ್ಯದ ಜಮೀನು ಸಂಘದ ಕೈತಪ್ಪಲಿದೆ ಎಂಬ ಆತಂಕವಿತ್ತು. ನ್ಯಾಯಮೂರ್ತಿ ಗೋಪಾಲಗೌಡ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ. ಸಮಿತಿಯ ಸಲಹೆಯಂತೆ ಸಂಘ ಕಾರ್ಯನಿರ್ವಹಿಸಲಿದೆ. ವ್ಯತ್ಯಾಸವಾದರೆ ಬಿಡಿಎ ಹೊಣೆ ಮಾಡಲಾಗುವುದು ಎಂದು ಬಿಡಿಎ ಆಯುಕ್ತರು ಹಾಗೂ ಅಧ್ಯಕ್ಷರಿಗೆ ಪತ್ರ ಬರೆಯಲಾಗಿದೆ. ಶ್ರೀಗಂಧದ ಕಾವಲು ಸೇರಿ ಸಂಘದ ಎಲ್ಲಾ ಆಸ್ತಿ ಸಂರಕ್ಷಣೆ ಮಾಡಲಾಗುವುದು' ಎಂದರು.

ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಡಿ.ಹನುಮಂತಯ್ಯ, ಕೆ.ವಿ.ರೇಣುಕಾಪ್ರಸಾದ್, ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ, ಖಜಾಂಚಿ ಆರ್.ಪ್ರಕಾಶ್, ಗೌರವಾಧ್ಯಕ್ಷ ಟಿ.ಎಚ್.ಆಂಜಿನಪ್ಪ, ಕಾರ್ಯಾಧ್ಯಕ್ಷ ಸಿ.ದೇವರಾಜು (ಹಾಪ್‌ಕಾಮ್ಸ್), ಎಚ್.ಎನ್.ರವೀಂದ್ರ, ಸಹಾಯಕ ಕಾರ್ಯದರ್ಶಿ ರಾಘವೇಂದ್ರ, ಕಾನೂನು ಸಲಹೆಗಾರ ಎನ್. ಬಾಲಕೃಷ್ಣ (ನೆಲ್ಲಿಗೆರೆ ಬಾಲು), ನಿರ್ದೇಶಕರಾದ ಎಂ.ಪುಟ್ಟಸ್ವಾಮಿ, ಲೋಕೇಶ್.ಬಿ.ನಾಗರಾಜಯ್ಯ, ಎಲುವಳ್ಳಿ ಎನ್.ರಮೇಶ್, ನೌಕರರ ಸಂಘದ ಅಧ್ಯಕ್ಷ ಡಾ.ಬಿ.ಸಿ.ಬಸವರಾಜು, ಪ್ರಧಾನ ಕಾರ್ಯದರ್ಶಿ ಸಿ.ಎನ್.ಗಿರೀಶ್, ಡಾ.ವೆಂಕಟೇಶ್ ಉಪಸ್ಥಿತರಿದ್ದರು.

ಕಾರಂತ ಬಡಾವಣೆ ನಿರ್ಮಾಣ: ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ

2,282 ಎಕರೆ ಬಿಡಿಎ ಸ್ವಾಧೀನ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬೆಂಗಳೂರಿನಲ್ಲಿ ಡಾ. ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಭೂಸ್ವಾಧೀನ ಅಧಿಕಾರಿಗಳು ಈವರೆಗೆ 2,562 ಎಕರೆ 10 ಗುಂಟೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. 2,282 ಎಕರೆ ಜಾಗವನ್ನು ಬಿಡಿಎ ಸ್ವಾಧೀನಕ್ಕೆ ಪಡೆದಿದೆ.

ಬಡಾವಣೆ ನಿರ್ಮಾಣ ಕಾರ್ಯದಲ್ಲಿ ಆಗಿರುವ ಪ್ರಗತಿ ಕುರಿತು ಬಿಡಿಎ ಆಯುಕ್ತ ಜಿ.ಕುಮಾರ್ ನಾಯ್ಕ್ ಅವರು ಸುಪ್ರೀಂ ಕೋರ್ಟ್‌ಗೆ ಸೆಪ್ಟೆಂಬರ್ 5ರಂದು ಪ್ರಮಾಣಪತ್ರ ಸಲ್ಲಿಸಿದ್ದಾರೆ. 'ಸ್ವಾಧೀನಕ್ಕೆ ಪಡೆದ ಜಮೀನುಗಳನ್ನು ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ವಿಶೇಷ ಭೂಸ್ವಾಧೀನ ಅಧಿಕಾರಿಗಳ ಜತೆಗೆ ಆಗಸ್ಟ್ 26 ಹಾಗೂ ಸೆಪ್ಟೆಂಬರ್ 2ರಂದು ಸಭೆಗಳನ್ನು ನಡೆಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯನ್ನು ಇನ್ನಷ್ಟು ಚುರುಕುಗೊಳಿಸಲು ಸೂಚಿಸಲಾಗಿದೆ' ಎಂದು ಅವರು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಬಡಾವಣೆಯೊಳಗೆ ಸಂಪರ್ಕಕ್ಕೆ 45 ಎಕರೆ: ಬಡಾವಣೆಯೊಳಗೆ ರಸ್ತೆ ನಿರ್ಮಾಣಕ್ಕೆ 45 ಎಕರೆ 17 ಗುಂಟೆ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಈ ಸಂಬಂಧ ಆಗಸ್ಟ್ 6ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ನಾಲ್ಕು ವಾರಗಳಲ್ಲಿ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಆಗಸ್ಟ್ 25ರಂದು ಆದೇಶ ಹೊರಡಿಸಿದೆ.

ತಾಂತ್ರಿಕ ಬಿಡ್ ತೆರೆದ ಪ್ರಾಧಿಕಾರ

ಶಿವರಾಮ ಕಾರಂತ ಬಡಾವಣೆಯನ್ನು 17 ವಿವಿಧ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ಪರಿಷ್ಕೃತ ಅಂದಾಜು ವೆಚ್ಚದಲ್ಲಿ ರಚಿಸುವ ಯೋಜನೆಗೆ ಕರ್ನಾಟಕ ಸರ್ಕಾರ ಜುಲೈ 8ರಂದು ಅನುಮೋದನೆ ನೀಡಿತ್ತು. ಒಟ್ಟು 3,546 ಎಕರೆ 12 ಗುಂಟೆಯಲ್ಲಿ ಬಡಾವಣೆ ರಚಿಸಲು ₹5,337 ಕೋಟಿ ಮೊತ್ತದ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಲಾಗಿತ್ತು.

ಪ್ರಾಧಿಕಾರವು ಕರ್ನಾಟಕ ಸರ್ಕಾರದ ಇಲಾಖೆ ಅಲ್ಲ. ಹಾಗಾಗಿ, ಬೆಂಗಳೂರಿನಲ್ಲಿ ಡಾ.ಶಿವರಾಮ ಕಾರಂತ ಬಡಾವಣೆಗೆ ಟೆಂಡರ್ ಅಧಿಸೂಚನೆ ಹೊರಡಿಸಲು ರಾಜ್ಯ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆಯುವ ಅಗತ್ಯ ಇಲ್ಲ ಎಂದು ಸುಪ್ರೀಂ ಕೋರ್ಟ್ ಆಗಸ್ಟ್ 12ರಂದು ಸ್ಪಷ್ಟಪಡಿಸಿತ್ತು.

ಬಡಾವಣೆ ನಿರ್ಮಾಣಕ್ಕಾಗಿ 9 ಪ್ಯಾಕೇಜ್‌ಗಳ ಟೆಂಡರ್ ಬಿಡ್‌ಗಳು ಸಲ್ಲಿಕೆಯಾಗಿವೆ. ಸೆಪ್ಟೆಂಬರ್ 3ರಂದು ತಾಂತ್ರಿಕ ಬಿಡ್ ತೆರೆಯಲಾಗಿದ್ದು, ಮೌಲ್ಯಮಾಪನ ನಡೆಸಲಾಗುತ್ತಿದೆ. ಎರಡು ವಾರಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಬಳಿಕ ಆರ್ಥಿಕ ಬಿಡ್ ಪ್ರಕ್ರಿಯೆ ನಡೆಸಲಾಗುವುದು ಎಂದು ಕುಮಾರ್ ನಾಯ್ಕ್ ತಿಳಿಸಿದ್ದಾರೆ.

ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಸಂಪೂರ್ಣ ಭೂಮಿಗೆ ಆರು ವಾರಗಳ ಒಳಗೆ ಅರ್ಹತಾ ಪ್ರಮಾಣಪತ್ರಗಳನ್ನು ಪ್ರಾಧಿಕಾರ ನೀಡಬೇಕು ಎಂದೂ ಸುಪ್ರೀಂ ಕೋರ್ಟ್ ಆಗಸ್ಟ್ 12ರಂದು ನಿರ್ದೇಶನ ನೀಡಿತ್ತು.

86 ಭೂಮಾಲೀಕರಿಗೆ ಅರ್ಹತಾ ಪತ್ರ: ಅರ್ಹತಾ ಪ್ರಮಾಣಪತ್ರಕ್ಕಾಗಿ ಇಲ್ಲಿಯವರೆಗೆ 418 ಅರ್ಜಿ ಸಲ್ಲಿಕೆ ಆಗಿವೆ. ಈ ಪೈಕಿ, 86 ಮಂದಿಗೆ ಪ್ರಮಾಣಪತ್ರಗಳನ್ನು ನೀಡಲಾಗಿದೆ. ಭೂಮಾಲೀಕತ್ವದ ದಾಖಲೆಗಳನ್ನು ಸಲ್ಲಿಸುವಂತೆ 332 ಭೂಮಾಲೀಕರಿಗೆ ನೋಟಿಸ್‌ಗಳನ್ನು ನೀಡಲಾಗಿದೆ. ಭೂಮಾಲೀಕತ್ವದ ಬಗ್ಗೆ ಕೆಲವು ಪ್ರಕರಣಗಳಲ್ಲಿ ಆಕ್ಷೇಪಣೆಗಳು ಸಲ್ಲಿಕೆಯಾಗಿವೆ. ಇಂತಹ ಪ್ರಕರಣಗಳಲ್ಲಿ ಭೂಸ್ವಾಧೀನ ಅಧಿಕಾರಿಗಳು ಭೂಮಾಲೀಕರಿಂದ ದಾಖಲೆಗಳನ್ನು ತರಿಸಿಕೊಂಡು ಪರಿಶೀಲನೆ ನಡೆಸಿ ಪ್ರಮಾಣಪತ್ರ ನೀಡಲಿದ್ದಾರೆ ಎಂದು ತಿಳಿಸಲಾಗಿದೆ.

ಭೂಮಾಲೀಕರಿಂದ 2,500 ಅರ್ಜಿ: ಕಂದಾಯ ನಿವೇಶನದ ಮಾಲೀಕರಿಂದ ಈವರೆಗೆ 2,500 ಅರ್ಜಿಗಳು ಸಲ್ಲಿಕೆಯಾಗಿವೆ. 303 ಅರ್ಜಿಗಳು ಆನ್‌ಲೈನ್ ಮೂಲಕ ಹಾಗೂ 2,197 ಅರ್ಜಿಗಳು ಸಹಾಯವಾಣಿಗೆ ಸಲ್ಲಿಕೆಯಾಗಿವೆ. ಭೂಮಾಲೀಕತ್ವದ ನೈಜತೆ ಪರಿಶೀಲನೆ ನಡೆಸುವಂತೆ ಭೂಸ್ವಾಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಈ ಪೈಕಿ, ಸ್ಥಳ ಪರಿಶೀಲನೆ ನಡೆಸಿ ಈವರೆಗೆ 662 ಅರ್ಜಿಗಳನ್ನು ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಸಮಿತಿಗೆ ಹಸ್ತಾಂತರಿಸಲಾಗಿದೆ.

ಈ ಸಮಿತಿಯು 15 ಕಂದಾಯ ಬಡಾವಣೆಗಳನ್ನು ಪರಿಶೀಲನೆ ನಡೆಸಿ ಏಳು ಕರಡು ವರದಿಗಳ ಮೂಲಕ ಅಭಿಪ್ರಾಯಗಳನ್ನು ಪ್ರಾಧಿಕಾರದ ನಗರ ಯೋಜನಾ ವಿಭಾಗಕ್ಕೆ ಸಲ್ಲಿಸಿದೆ. ಈ ಬಡಾವಣೆಗಳನ್ನು ಸಂಯೋಜನೆಗೊಳಿಸುವ ವಿಧಾನಗಳ ಬಗ್ಗೆ ನಗರ ಯೋಜನಾ ವಿಭಾಗ ಪರಿಶೀಲನೆ ನಡೆಸುತ್ತಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಅಧಿಸೂಚನೆ ಹೊರಡಿಸದ 245 ಎಕರೆ 16 ಗುಂಟೆ ಜಾಗ ಸ್ವಾಧೀನದ ಪ್ರಾಥಮಿಕ ಅಧಿಸೂಚನೆಗೆ ಕರ್ನಾಟಕ ಸರ್ಕಾರ ಒಪ್ಪಿಗೆ ನೀಡಿದೆ. ಭೂಸ್ವಾಧೀನಕ್ಕೆ ಭೂಮಾಲೀಕರಿಗೆ ನೋಟಿಸ್ ನೀಡಲಾಗಿದೆ. ಆಕ್ಷೇಪಣೆಗಳನ್ನು ಪರಿಶೀಲಿಸಿದ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಲು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ವಿನಾಯಿತಿ ಕೇಳಿರುವ ಬಿಡಿಎ: ಬಡಾವಣೆ ನಿರ್ಮಾಣಕ್ಕಾಗಿ 66 ಎಕರೆ 17 ಗುಂಟೆ ಸರ್ಕಾರಿ ಜಾಗ ಸ್ವಾಧೀನಕ್ಕೆ ಸರ್ಕಾರ ಆದೇಶ ಹೊರಡಿಸಿದೆ. ಈ ಜಾಗದ ಶೇ 50ರಷ್ಟು ಮೊತ್ತವನ್ನು ಪ್ರಾಧಿಕಾರ ಭರಿಸುವಂತೆ ಸರ್ಕಾರ ಸೂಚಿಸಿದೆ. ಈ ಮೊತ್ತವನ್ನು ಮನ್ನಾ ಮಾಡುವಂತೆ ಪ್ರಾಧಿಕಾರವು 2022ರ ಫೆಬ್ರುವರಿಯಲ್ಲಿ ಸರ್ಕಾರಕ್ಕೆ ಪತ್ರ ಬರೆದಿದೆ. ಸರ್ಕಾರದ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿದ್ದೇವೆ ಎಂದು ಹೇಳಿದ್ದಾರೆ.

ಸೆ. 26ರಂದು ಪ್ರೌಢಶಾಲಾ ಹಿಂದಿ ಶಿಕ್ಷಕರ ರಾಜ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರೌಢ ಶಾಲಾ ಹಿಂದಿ ಶಿಕ್ಷಕರ ರಾಜ್ಯ ಸಮ್ಮೇಳನ ಸೆಪ್ಟೆಂಬರ್ 26ರಂದು ದಾವಣಗೆರೆಯ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

'ಶಿಕ್ಷಣ ಇಲಾಖೆಯ ಜಿಲ್ಲಾ ಕಚೇರಿಗಳಲ್ಲಿ ಹಿಂದಿ ಭಾಷಾ ವಿಷಯ ಪರಿವೀಕ್ಷಕರ ಹುದ್ದೆಯನ್ನು ಮಂಜೂರುಗೊಳಿಸಬೇಕು. ಹಿಂದಿ ಶಿಕ್ಷಕರಿಗೆ ಇ.ಸಿ.ಒ ಮತ್ತು ಬಿ.ಆರ್.ಪಿ ಹುದ್ದೆಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು. ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಿಕೊಂಡಿದ್ದು, 9–12ನೇ ತರಗತಿವರೆಗೂ ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಳ್ಳಬೇಕು' ಎಂದು ಸಂಘದ ಅಧ್ಯಕ್ಷ ಡಿ.ಎಂ. ರಾಠೋಡ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಶಾಖೆಗಳಿಗಾಗಿ ವಾಣಿಜ್ಯ ಸ್ಥಳವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ವಿಗ್ನೋನಗರ, ಬೆಂಗಳೂರು	2500 ಚ.ಅಡಿಗಳು
ದೊಡ್ಡಕನ್ನಹಳ್ಳಿ, ಬೆಂಗಳೂರು	2500 ಚ.ಅಡಿಗಳು

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 22–09–2022 ರಂದು ಸಂಜೆ 3.00 ಗಂಟೆಯವರೆಗೆ. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 08–09–2022
ಸಹಿ/–
ಸಹಾಯಕ ಮಹಾ ಪ್ರಬಂಧಕರು

ಇಂದು ಮದ್ಯ ಮಾರಾಟ ನಿಷೇಧ

ಬೆಂಗಳೂರು: ಶಿವಾಜಿನಗರ ಸೇಂಟ್ ಮೇರಿ ಚರ್ಚ್‌ನಲ್ಲಿ ಆರೋಗ್ಯ ಮಾತೆಯ ವಾರ್ಷಿಕ ರಥೋತ್ಸವ ಗುರುವಾರ ನಡೆಯಲಿದ್ದು, ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಪೂರ್ವ ವಿಭಾಗದ ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಭಾರತೀನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಗುರುವಾರ ಬೆಳಿಗ್ಗೆ 6ರಿಂದ ರಾತ್ರಿ 11ರ ತನಕ ಎಲ್ಲ ಬಾರ್ ರೆಸ್ಟೋರೆಂಟ್, ವೈನ್‌ಶಾಪ್, ಪಬ್, ಎಂಎಸ್‌ಐಎಲ್ ಮಳಿಗೆಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಬೆಳಿಗ್ಗೆ 4.30ರಿಂದಲೇ ಪೂಜೆಗಳು ಆರಂಭಗೊಳ್ಳಲಿವೆ. ಸೇಂಟ್ ಮೇರಿ ಮಾತೆಯ ಬೃಹತ್ ತೇರಿನ ಮೆರವಣಿಗೆಯು ಎಂ.ಕೆ. ಸ್ಟ್ರೀಟ್, ಶಿವಾಜಿನಗರ, ಬ್ರಾಡ್‌ವೇ ರಸ್ತೆ, ರಸೆಲ್ ಮಾರುಕಟ್ಟೆ, ನರೋನ್ಹಾ ರಸ್ತೆಯಲ್ಲಿ ಸಾಗಲಿದೆ. ಕಿಡಿಗೇಡಿಗಳು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಸಾಧ್ಯತೆಯಿರುವ ಕಾರಣಕ್ಕೆ ಮದ್ಯ ಮಾರಾಟ ನಿಷೇಧಿಸಲಾಗಿದೆ ಎಂದು ಪೊಲೀಸ್ ಆಯುಕ್ತ ಸಿ.ಎಚ್.ಪ್ರತಾಪ ರೆಡ್ಡಿ ತಿಳಿಸಿದ್ದಾರೆ.

₹394.93 ಕೋಟಿ ಪಾವತಿಸಿದ ರಾಜ್ಯ ಸರ್ಕಾರ

9.41 ಲಕ್ಷ ವಿದ್ಯಾರ್ಥಿಗಳಿಗೆ ರೈತ ವಿದ್ಯಾರ್ಥಿ ನಿಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಕರ ಮಕ್ಕಳ ಭವಿಷ್ಯ ಹಸನಾಗಿಸುವ ನಿಟ್ಟಿನಲ್ಲಿ ರೂಪಿಸಲಾದ ಮುಖ್ಯಮಂತ್ರಿ ರೈತ ವಿದ್ಯಾರ್ಥಿ ನಿಧಿ ಯೋಜನೆಯನ್ನು ಇದುವರೆಗೆ ರಾಜ್ಯದ 9.41 ಲಕ್ಷ ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ.

ಈ ವಿದ್ಯಾರ್ಥಿಗಳಿಗೆ ₹394.93 ಕೋಟಿ ಮೊತ್ತವನ್ನು ಸರ್ಕಾರ ಪಾವತಿಸಿದೆ. ಇದರಿಂದ, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರ ಸ್ವೀಕರಿಸಿದ ಕೂಡಲೇ ನಡೆಸಿದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಪ್ರಮುಖ ನಿರ್ಧಾರ ರೈತರ ಮಕ್ಕಳ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ನೀಡುವ ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಯೋಜನೆಯಾಗಿತ್ತು.

ಈ ಯೋಜನೆ ಅಡಿ 8, 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳು ಮತ್ತು ಎಸ್ಸೆಸ್ಸೆಲ್ಸಿ ನಂತರ ಪಿಯುಸಿ, ಡಿಪ್ಲೊಮಾ, ಐಟಿಐ, ಪದವಿ, ವೃತ್ತಿಪರ ಶಿಕ್ಷಣ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯ 46,135 ವಿದ್ಯಾರ್ಥಿಗಳಿಗೆ ₹17.35 ಕೋಟಿ ಮೊತ್ತ ಪಾವತಿಸಲಾಗಿದೆ. ಇದು ರಾಜ್ಯದಲ್ಲೇ ಹೆಚ್ಚಿನ ಮೊತ್ತವಾಗಿದೆ. ನಂತರದ ಸ್ಥಾನದಲ್ಲಿ, ಬಳ್ಳಾರಿ ಜಿಲ್ಲೆಯ 40,900 ವಿದ್ಯಾರ್ಥಿಗಳಿಗೆ ₹16.34 ಕೋಟಿ ಹಾಗೂ ಬೆಳಗಾವಿ ಜಿಲ್ಲೆಯ 96,536 ವಿದ್ಯಾರ್ಥಿಗಳಿಗೆ ₹36.11 ಕೋಟಿ ಮೊತ್ತ ಪಾವತಿಸಲಾಗಿದೆ.

ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ: ರೈತರ ಆದಾಯ ವೃದ್ಧಿಸುವುದು ರಾಜ್ಯ ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, 'ಸೆಕೆಂಡರಿ ಕೃಷಿ'ಯು ಈ ನಿಟ್ಟಿನಲ್ಲಿ ಅತ್ಯಂತ ಪ್ರಮುಖವಾಗಿದೆ.

ಕೃಷಿಯ ಪ್ರಾಥಮಿಕ ಉತ್ಪನ್ನಗಳನ್ನು ಸ್ಥಳೀಯ ಮಾನವ ಸಂಪನ್ಮೂಲ ಮತ್ತು ಕೌಶಲಗಳನ್ನು ಬಳಸಿ ಮೌಲ್ಯವರ್ಧನೆ ಮಾಡುವುದು ಹಾಗೂ ಅದರಿಂದ ರೈತರಿಗೆ ಹೆಚ್ಚಿನ ಆದಾಯ ಒದಗಿಸುವ ಚಟುವಟಿಕೆಗಳನ್ನು 'ಸೆಕೆಂಡರಿ ಕೃಷಿ' ಎಂದು ವ್ಯಾಖ್ಯಾನಿಸಲಾಗಿದೆ.

ವಿದ್ಯಾ ನಿಧಿ ವಿಸ್ತರಣೆ

ರೈತರ ಮಕ್ಕಳಿಗೆ ನೀಡುತ್ತಿರುವ 'ವಿದ್ಯಾ ನಿಧಿ' ವಿದ್ಯಾರ್ಥಿ ವೇತನ ಯೋಜನೆಯನ್ನು ನೇಕಾರರು, ಮೀನುಗಾರರು ಮತ್ತು ಟ್ಯಾಕ್ಸಿ ಚಾಲಕರ ಮಕ್ಕಳಿಗೂ ವಿಸ್ತರಿಸಲಾಗಿದೆ. 'ವಿದ್ಯಾ ನಿಧಿಯಡಿ ₹2 ಸಾವಿರದಿಂದ ₹11ಸಾವಿರದವರೆಗೆ ವಿದ್ಯಾರ್ಥಿವೇತನ ಸಿಗಲಿದೆ. ನೇಕಾರರ ಸಮುದಾಯದ 12 ಸಾವಿರ ಮಕ್ಕಳಿಗೆ, ಟ್ಯಾಕ್ಸಿ ಚಾಲನೆ ಮಾಡುವ 50 ಸಾವಿರ ಚಾಲಕರ ಮಕ್ಕಳಿಗೆ ಹಾಗೂ ಮೀನುಗಾರರ ಮಕ್ಕಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗಿದೆ.

ಎಎಸ್‌ಐ ಸೇವೆ ಮೈಸೂರು ರಸ್ತೆ ಬಿಜಿಎಸ್ ಫ್ಲೈ ಓವರ್ ಮುಂಭಾಗದಲ್ಲಿ ಮಳೆಯಿಂದ ಬಿದ್ದಿದ್ದ ಗುಂಡಿಗಳನ್ನು ಚಿಕ್ಕಪೇಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಎಎಸ್‌ಐ ಚಂದ್ರಶೇಖರಯ್ಯ ಅವರು ತಾವೇ ತಾತ್ಕಾಲಿಕವಾಗಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು

ವಿದ್ಯಾರ್ಥಿನಿಯರಿಗೆ 'ಹ್ಯಾಕಥಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 1.2 ಲಕ್ಷ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ವಿಷಯಗಳಲ್ಲಿ ಆಸಕ್ತಿ ಮೂಡಿಸಲು ಕ್ವೆಸ್ಟ್ ಅಲಯನ್ಸ್ ಮತ್ತು ಐಬಿಎಂ ವಿಶೇಷ ಯೋಜನೆ ರೂಪಿಸಿವೆ.

'ವಿದ್ಯಾರ್ಥಿನಿಯರಲ್ಲಿ ವೈಜ್ಞಾನಿಕ ಚಿಂತನೆ ಮೂಡಿಸಲು 'ಹ್ಯಾಕಥಾನ್' ಹೆಸರಿನಲ್ಲಿ ಈ ಯೋಜನೆಯನ್ನು ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ' ಎಂದು ಕ್ವೆಸ್ಟ್ ಅಲಯನ್ಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಕಾಶ್ ಸೇಥಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮೊದಲ ವರ್ಷ ಚಿಕ್ಕಬಳ್ಳಾಪುರ, ಬೆಂಗಳೂರು, ಹಾಸನ, ಚಿತ್ರದುರ್ಗ, ರಾಯಚೂರು, ಗದಗ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 68,272 ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಿಕೊಂಡು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ' ಎಂದು ತಿಳಿಸಿದರು.

'ಸ್ಯಾನಿಟರಿ ಪ್ಯಾಡ್ ವಿತರಣಾ ಯಂತ್ರ, ಕೋವಿಡ್ ಪತ್ತೆ ಮಾಡುವ ಸ್ಮಾರ್ಟ್ ಮಾಸ್ಕ್, ಕಾಡ್ಗಿಚ್ಚು ಪತ್ತೆಮಾಡುವ ಯಂತ್ರ ಮುಂತಾದ ಆವಿಷ್ಕಾರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿದ್ಯಾರ್ಥಿನಿಯರೇ ಪ್ರಾಯೋಗಿಕ ಯೋಜನೆ ಕೈಗೆತ್ತಿಕೊಳ್ಳಲಿದ್ದಾರೆ. ವಿದ್ಯಾರ್ಥಿನಿಯರನ್ನು ಭವಿಷ್ಯದ ಅಗತ್ಯಗಳಿಗೆ ತಕ್ಕಂತೆ ರೂಪಿಸುವುದು ಮತ್ತು ಉದ್ಯಮಶೀಲರಾಗುವಂತೆ ಪ್ರೇರಿಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶ' ಎಂದರು.

'ಹ್ಯಾಕಥಾನ್' ಅಡಿಯಲ್ಲಿ ತರಬೇತಿ ಪಡೆದ ಕೋಲಾರದ ಸರ್ಕಾರಿ ಶಾಲೆಯ ವಿದ್ಯಾರ್ಥಿನಿಯರಾದ ಭವಾನಿ ಮತ್ತು ಚಂದನಾ ಜತೆ ಕ್ವೆಸ್ಟ್ ಅಲಯನ್ಸ್ ಸಂಸ್ಥೆಯ ಸಿಇಒ ಆಕಾಶ್ ಸೇಥಿ, ನಿರ್ದೇಶಕಿ ನೇಹಾ ಪರ್ತಿ, ಐಬಿಎಂ ಸಂಸ್ಥೆಯ ಮನೋಜ್ ಬಾಲಚಂದ್ರನ್ ಇದ್ದರು

'ವಿದ್ಯಾರ್ಥಿನಿಯರ ಪ್ರಾಜೆಕ್ಟ್‌ಗಳಿಗೆ ಮಾರ್ಗದರ್ಶನ ನೀಡಲು 800 ಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡಲಾಗುವುದು' ಎಂದು ತಿಳಿಸಿದರು.

'ಪ್ರಾಯೋಗಿಕ ಹಂತದಲ್ಲಿ ಕರ್ನಾಟಕದ ಒಂದು ಸಾವಿರ ವಿದ್ಯಾರ್ಥಿಗಳು ವಿವಿಧ ಮಾದರಿಗಳನ್ನು ರೂಪಿಸಿದ್ದರು. ಇವುಗಳಲ್ಲಿ 40 ಮಾದರಿಗಳು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 'ಇನ್‌ಸ್ಪೈರ್ ಮನಕ್' ಪ್ರಶಸ್ತಿಗೆ ಆಯ್ಕೆಯಾಗಿವೆ' ಎಂದು ಕ್ವೆಸ್ಟ್ ಅಲಯನ್ಸ್ ಸಂಸ್ಥೆಯ ಸ್ಕೂಲ್ಸ್ ಪ್ರೋಗ್ರಾಂ ನಿರ್ದೇಶಕಿ ನೇಹಾ ಪರ್ತಿ ವಿವರಿಸಿದರು.

'2019ರಿಂದ ಅಧಿಕೃತವಾಗಿ ಹ್ಯಾಕಥಾನ್ ಯೋಜನೆ ಆರಂಭಿಸಲಾಗಿದ್ದು, ಸದ್ಯ ಒಂಬತ್ತು ರಾಜ್ಯಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದರಿಂದ, 2.23 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ' ಎಂದು ಐಬಿಎಂ ಕಂಪನಿಯ ಸಾಮಾಜಿಕ ಹೊಣೆಗಾರಿಕೆಯ ಮುಖ್ಯಸ್ಥ ಮನೋಜ್ ಬಾಲಚಂದ್ರನ್ ತಿಳಿಸಿದರು.

ಮಲಪ್ರಭಾ ನದಿ ನೀರಿನಲ್ಲಿ ಕೊಚ್ಚಿ ಹೋದ ರೈತ • ಬಳ್ಳಾರಿ ಜಿಲ್ಲೆಯಲ್ಲಿ ಗೋಡೆ ಕುಸಿದು ಮಹಿಳೆ ಸಾವು

ಮುಳುಗಿದ ಸೇತುವೆ: ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಚಿತ್ರದುರ್ಗ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬುಧವಾರವೂ ಗುಡುಗು–ಸಿಡಿಲು ಸಹಿತ ಧಾರಾಕಾರ ಮಳೆಯಾಗಿರುವುದರಿಂದ ನದಿ, ಹಳ್ಳ-ಕೊಳ್ಳಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಸೇತುವೆ ಹಾಗೂ ರಸ್ತೆಗಳು ಮುಳುಗಡೆಯಾಗಿದ್ದು, ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಮನೆಗಳಿಗೂ ಹಾನಿಯಾಗಿದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಗಂಜಿಹಾಳದ ರೈತ ದೇವಾನಂದ ಕಮ್ಮಾರ (20) ಎಂಬುವರು ಮಲಪ್ರಭಾ ನದಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನ ಎಮ್ಮಿಗನೂರಿನಲ್ಲಿ ಮನೆ ಗೋಡೆ ಕುಸಿದು ಬಿದ್ದು ಆಶಾ ಕಾರ್ಯಕರ್ತೆ ಬಿ.ಉಮಾದೇವಿ ಬಳಗಾನೂರು ಜಡೆಪ್ಪ (44) ಮೃತಪಟ್ಟಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಮಳೆಯಾಗಿರುವುದರಿಂದ ಮಲಪ್ರಭಾ ನದಿ ನೀರಿನ ಹರಿವು ಹೆಚ್ಚಾಗಿದ್ದು, ನದಿ ದಡದ ಹೊಲದಲ್ಲಿದ್ದ ಪಂಪ್ ಸೆಟ್ ಬಿಚ್ಚಿಕೊಂಡು ಬರಲು ಹೋಗಿದ್ದ ದೇವಾನಂದ ಅವರು ನೀರಿನ ಸೆಳೆವಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಅವರಿಗಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ.

ಹುನಗುಂದ ತಾಲ್ಲೂಕಿನ ಕೆಂಗಲ್, ಕಜಗಲ್, ಹೂವನೂರು,ವರಗೊಡದಿನ್ನಿ, ಗಂಜಿಹಾಳ ಗ್ರಾಮಗಳಿಗೆ ಮಲಪ್ರಭಾ ನದಿ ನೀರು ನುಗ್ಗಿದ್ದು, ಅಲ್ಲಿಯ ನಿವಾಸಿಗಳು ಸಾಮಾನು–ಸರಂಜಾಮುಗಳೊಂದಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಿದ್ದಾರೆ. ಆರು ಗ್ರಾಮಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದ್ದು, 161 ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ.

ಹುನಗುಂದದ ಸಾರ್ವಜನಿಕ ಆಸ್ಪತ್ರೆಗೆ ಮಳೆ ನೀರು ನುಗ್ಗಿ ರೋಗಿಗಳು ಪರದಾಡುವಂತಾಗಿದೆ. ಆಸ್ಪತ್ರೆಯ ಬಹುತೇಕ ಕೊಠಡಿಗಳಲ್ಲಿ ನೀರು ನಿಂತಿದೆ. ಪುರಸಭೆ ಎದುರಿನ ಸರ್ಕಾರಿ ಕೇಂದ್ರ ಶಾಲೆಯ ಆವರಣದ ಸುತ್ತಲೂ ಮೊಣಕಾಲೆತ್ತರ ನೀರು ಸಂಗ್ರಹವಾಗಿದೆ. ಮುಂಜಾಗ್ರತಾ ಕ್ರಮವಾಗಿ ಶಾಲೆಗೆ ರಜೆ ಘೋಷಿಸಲಾಗಿದೆ.

ಮಲಪ್ರಭಾ ನದಿ ಪ್ರವಾಹದಿಂದಾಗಿ-ಬಾದಾಮಿ ತಾಲ್ಲೂಕಿನ ಹೊಳೆಆಲೂರ--ಬಾದಾಮಿ, ಗದಗ-ಬಾಗಲಕೋಟೆ, ಶಿವಯೋಗಮಂದಿರ-ಮಂಗಳೂರು ರಸ್ತೆಗಳಲ್ಲಿನ ಸೇತುವೆ ಮುಳುಗಿ ಸಂಚಾರ ಸ್ಥಗಿತಗೊಂಡಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವರುಣನ ಅಬ್ಬರ ಮುಂದುವರಿದಿದ್ದು, ವಾಣಿವಿಲಾಸ ಸಾಗರ ಜಲಾಶಯದ ಒಳಹರಿವು ಹೆಚ್ಚಾಗಿದೆ.

ಹೊಸದುರ್ಗ ತಾಲ್ಲೂಕಿನ 20ಕ್ಕೂ ಹೆಚ್ಚು ಹಳ್ಳಿಗಳನ್ನು ಸಂಪರ್ಕಿಸುವ ರಸ್ತೆ ಜಲಾವೃತಗೊಂಡಿದೆ. ಮೆಣಸಿನಡು ಬಳಿ ತೆಪ್ಪದ ವ್ಯವಸ್ಥೆ ಮಾಡಲಾಗಿದ್ದು, ಜನರು 1 ಕಿ.ಮೀವರೆಗೂ ತೆಪ್ಪದಲ್ಲಿ ಸಾಗಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಚಳ್ಳಕೆರೆ ತಾಲ್ಲೂಕಿನ ಗೊರ್ಲತ್ತು, ವಿಶ್ವೇಶಪುರ ಸೇರಿ ವಿವಿಧ ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

ಮೊಳಕಾಲ್ಮುರು ತಾಲ್ಲೂಕಿಗೆ ಹೊಂದಿಕೊಂಡಿರುವ ಸೀಮಾಂಧ್ರದ ರಾಯದುರ್ಗ ತಾಲ್ಲೂಕಿನ ಬೋರನತಿಪ್ಪೆ ಜಲಾಶಯ (ಬಿಟಿಪಿ ಡ್ಯಾಂ) ಭರ್ತಿಯಾಗಿದ್ದು, ಎಲ್ಲಾ ಗೇಟ್‌ಗಳ ಮೂಲಕ ನೀರು ಹೊರಬಿಡಲಾಗಿದೆ.

ಮಂಗಳೂರು ವರದಿ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಸಾಧಾರಣ ಮಳೆ ಸುರಿದಿದೆ.

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಅರಬಲ ಗ್ರಾಮದಲ್ಲಿ 13, ತಿಮ್ಮಾಪುರದಲ್ಲಿ 9, ಜಾವೂರು ಹೊಸಹಳ್ಳಿಯಲ್ಲಿ ಮೂರು ಮನೆಗಳು ಹಾನಿಗೀಡಾಗಿವೆ. ಕಳಸ ಸನಿಹದ ಕೆ.ಎಂ.ರಸ್ತೆ ಬಳಿಯ ಬೇಡಕ್ಕಿ ಹಳ್ಳ ತುಂಬಿ ಹರಿಯುತ್ತಿದ್ದು, ಗದ್ದೆಗಳಿಗೆ ನೀರು ನುಗ್ಗಿದೆ. ಚಿಕ್ಕಮಗಳೂರು ತಾಲ್ಲೂಕಿನ ಆಲ್ದೂರು ಬಳಿಯ ಹವ್ವಳ್ಳಿ–ಹುಲಿಹಳ್ಳ ಸಂಪರ್ಕ ರಸ್ತೆ ಕುಸಿದಿದೆ.

ವಿಜಯಪುರ ವರದಿ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮಂಗಳವಾರ ರಾತ್ರಿಯಿಂದ ಬುಧವಾರ ಬೆಳಗಿನವರೆಗೂ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗಿದೆ.

ಡೋಣಿ ನದಿ ಪ್ರವಾಹ ಪರಿಸ್ಥಿತಿ ಯಥಾಸ್ಥಿತಿಯಲ್ಲಿದೆ. ತಾಳಿಕೋಟೆ–ವಿಜಯಪುರ, ತಾಳಿಕೋಟೆ ಹಡಗಿನಾಳ ಸೇತುವೆಗಳು ಮುಳುಗಡೆಯಾಗಿದ್ದು, ಸಂಚಾರ ಸ್ಥಗಿತವಾಗಿದೆ. ಬೆಳೆಗಳೂ ಜಲಾವೃತವಾಗಿವೆ.

ಭತ್ತ ಜಲಾವೃತ: ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನಲ್ಲಿ ಮಂಗಳವಾರ ರಾತ್ರಿ ಬಿದ್ದ ಮಳೆಗೆ ಮುತ್ತಿಗೆ ಗ್ರಾಮದ ದೊಡ್ಡಕೆರೆ ತುಂಬಿ ಹರಿದು ಕೆಳಹಂತದ ಜಮೀನುಗಳಿಗೆ ನೀರು ನುಗ್ಗಿದ್ದು, ಭತ್ತದ ಬೆಳೆಗೆ ಹಾನಿಯಾಗಿದೆ. ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ನಾಲ್ಕು ಮನೆಗಳಿಗೆ ಹಾನಿಯಾಗಿದೆ.

7 ಸಾವಿರ ಹೆಕ್ಟೇರ್ ಬೆಳೆ ನಾಶ: ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಮಂಗಳವಾರ ರಾತ್ರಿ ಸುರಿದ ಮಳೆಗೆ ಮೇಡ್ಲೇರಿ ಕೆರೆ ತುಂಬಿ ಕೋಡಿ ಬಿದ್ದು ಬುಧವಾರ ಸಂಜೆವರೆಗೂ ಹರಿಯಿತು. ಇದರಿಂದ ಕೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿನ 7 ಸಾವಿರ ಹೆಕ್ಟೇರ್ ಬೆಳೆ ನಾಶವಾಗಿದೆ. ಮೆಕ್ಕೆಜೋಳ, ಭತ್ತ, ಹತ್ತಿ, ಈರುಳ್ಳಿ ಬೆಳೆಗಳು ಜಲಾವೃತಗೊಂಡಿವೆ.

ಹುನಗುಂದ ಪಟ್ಟಣದ ಸರ್ಕಾರಿ ಕೇಂದ್ರ ಶಾಲೆಯ ಆವರಣ ಮಕ್ಕಳು ಪ್ರವೇಶಿಸಲು ಸಾಧ್ಯವಾಗದಂತೆ ಜಲಾವೃತಗೊಂಡಿರುವುದು

ಮಳೆ: ಎಲ್ಲಿ, ಎಷ್ಟು?

ಸ್ಥಳ	ಪ್ರಮಾಣ (ಸೆಂ.ಮೀ)
ಚಿಕ್ಕಮಗಳೂರು	
ಅಜ್ಜಂಪುರ	11.6
ಹೊಸಕೆರೆ	8.4
ಮೇಗರಮಕ್ಕಿ	7.8
ಎನ್.ಆರ್.ಪುರ	7.3
ವಿಜಯನಗರ–ಬಳ್ಳಾರಿ	
ಹಿರೇಹಡಗಲಿ ಹೋಬಳಿ	11.72
ತೆಲಗಿ ಹೋಬಳಿ	11.6
ವಿಜಯಪುರ	
ಧವಳಗಿ	7.9
ಸಿಂದಗಿ	6.6

ಹೊಸದುರ್ಗದ ಪೂಜಾರಹಟ್ಟಿಯಲ್ಲಿ ಮನೆಯೊಂದು ಮುಳುಗಡೆಯಾಗಿರುವುದು

ಹಳ್ಳದಲ್ಲಿ ಕೊಚ್ಚಿ ಹೋಗಿದ್ದ ಪೊಲೀಸ್ ಮೃತದೇಹ ಪತ್ತೆ

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತೊಂಡೆಹಳ್ಳದಲ್ಲಿ ಸೋಮವಾರ ರಾತ್ರಿ ಕೊಚ್ಚಿ ಹೋಗಿದ್ದ ಗದಗ ಜಿಲ್ಲೆ ಮುಂಡರಗಿ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಮಹೇಶ ವಕ್ಕರದ (28) ಅವರ ಮೃತದೇಹ ಬುಧವಾರ ಮಧ್ಯಾಹ್ನ ಪತ್ತೆಯಾಗಿದೆ.

ಮಹೇಶ ವಕ್ಕರದ

ಘಟನಾ ಸ್ಥಳದಿಂದ 8 ಕಿ.ಮೀ. ದೂರದಲ್ಲಿ ಮೃತದೇಹ ಸಿಕ್ಕಿದೆ. ಗಜೇಂದ್ರಗಡದಲ್ಲಿ ಭದ್ರತೆ ಕೆಲಸ ಮುಗಿಸಿ ಬೈಕ್‌ನಲ್ಲಿ ಬರುವಾಗ ದುರ್ಘಟನೆ ಸಂಭವಿಸಿತ್ತು. ಮಹೇಶ ಜೊತೆ ಬೈಕ್‌ನಲ್ಲಿದ್ದ ನಿಂಗಪ್ಪ ಹಲವಾಗಲಿ ಮೃತದೇಹ ಮಂಗಳವಾರ ದೊರೆತಿತ್ತು.

ಮನೆಗಳಿಗೂ ಹಾನಿ

ವಿಜಯನಗರ/ಬಳ್ಳಾರಿ: ಅವಳಿ ಜಿಲ್ಲೆಗಳಲ್ಲಿ ಮಂಗಳವಾರ ರಾತ್ರಿಯಿಡಿ ಭಾರಿ ಮಳೆಯಾಗಿದೆ. ವಿಜಯನಗರ ಜಿಲ್ಲೆಯಲ್ಲಿ 132, ಬಳ್ಳಾರಿ ಜಿಲ್ಲೆಯಲ್ಲಿ 34 ಮನೆಗಳಿಗೆ ಹಾನಿಯಾಗಿದೆ. ವಿಜಯನಗರ ಜಿಲ್ಲೆ ಹೂವಿನಹಡಗಲಿಯಲ್ಲಿ ಮೈಲಾರ–ತೋರಣಗಲ್ಲು ರಾಜ್ಯ ಹೆದ್ದಾರಿ ಸಂಪರ್ಕ ಕಡಿತಗೊಂಡಿದೆ.

ಹೊಸಪೇಟೆ ತಾಲ್ಲೂಕಿನ ಹಂಪಿ ಕೃಷ್ಣ ದೇವಸ್ಥಾನ ಬಜಾರಿನ ಕಟ್ಟೆ ಕುಸಿದಿದೆ.

80 ಹಳ್ಳಿಗಳಲ್ಲಿ ತೀವ್ರ ನಿಗಾ ಪ್ರದೇಶ: ಧಾರವಾಡ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದರೂ ಆತಂಕ ದೂರವಾಗಿಲ್ಲ. ಬೆಣ್ಣಿಹಳ್ಳ ಹಾಗೂ ತುಪ್ಪರಿ ಹಳ್ಳಗಳಿಂದ ಉಂಟಾದ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿದವರಿಗಾಗಿ ಒಟ್ಟು ಐದು ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯ 80 ಹಳ್ಳಿಗಳನ್ನು ತೀವ್ರ ನಿಗಾ ಪ್ರದೇಶವೆಂದು ಘೋಷಿಸಲಾಗಿದೆ. ನವಲಗುಂದದಲ್ಲಿ ಅಗ್ನಿಶಾಮಕ ದಳದ ಹೆಚ್ಚುವರಿ ಘಟಕ ತೆರೆಯಲಾಗಿದೆ. ಎಸ್‌ಡಿಆರ್‌ಎಫ್‌ನ ಮತ್ತೊಂದು ತುಕಡಿಯನ್ನು ಜಿಲ್ಲೆಗೆ ಕರೆಯಿಸಲಾಗಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

ಮಿನಿ ವಿಧಾನಸೌಧದ ನೆಲಮಹಡಿ ಜಲಾವೃತ

ಶ್ರೀರಂಗಪಟ್ಟಣ: ಮಳೆಯಿಂದಾಗಿ ಪಟ್ಟಣದ ಮಿನಿ ವಿಧಾನಸೌಧದ ನೆಲಮಹಡಿ ಜಲಾವೃತವಾಗಿದ್ದು, ಒಂದು ಅಡಿಗೂ ಹೆಚ್ಚು ನೀರು ನಿಂತಿದೆ. ಇಲ್ಲಿರುವ ಕಸಬಾ ಮತ್ತು ಕೆ.ಶೆಟ್ಟಹಳ್ಳಿ ಹೋಬಳಿ ಕಂದಾಯ ನಿರೀಕ್ಷಕರ ಕಚೇರಿಗಳಿಗೂ ನೀರು ನುಗ್ಗಿದೆ. ಮತಪೆಟ್ಟಿಗೆಗಳಲ್ಲಿ ನೀರು ತುಂಬಿಕೊಂಡಿದೆ. ಕಂದಾಯ ನಿರೀಕ್ಷಕರ ಕಚೇರಿಗೆ ಬರುವ ಮಹಿಳೆಯರು, ವೃದ್ಧರು ಮತ್ತು ಅಂಗವಿಕಲರಿಗೆ ಸಮಸ್ಯೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.62	32,050	33,530
ಹಾರಂಗಿ	2,859	2,856.57	1,600	1,600
ಕಬಿನಿ	2,284	2,283.64	15,454	15,550
ಹೇಮಾವತಿ	2,922	2,921.95	10,893	11,390
ಲಿಂಗನಮಕ್ಕಿ	1,819	1814.75	7,741	5,256
ಸೂಪಾ (ಮೀ)	564	550.94	1,918	330
ಮಾಣಿ	595	589	361	-
ತುಂಗಭದ್ರಾ	1,633	1,632.60	1,00,154	90,938
ಮಲಪ್ರಭಾ	2079.50	2,079.50	3,894	3,894
ಘಟಪ್ರಭಾ	2,175	2,175	1,880	1,880
ಭದ್ರಾ	186	185.1	11,202	11,804
ಆಲಮಟ್ಟಿ (ಮೀ)	519.60	519.60	34,451	42,500
ನಾರಾಯಣಪುರ (ಮೀ)	492.25	491.97	1,15,000	1,45,200

* ನೆಲಮಟ್ಟದಿಂದ

ಸುದ್ದಿ 2 ನಿಮಿಷ

ನಾಲ್ಕು ಜಿಲ್ಲೆಗೆ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ನಾಲ್ಕು ದಿನಗಳು ಮಳೆ ಮುಂದುವರಿಯಲಿದೆ. ಗುರುವಾರ ಹಾಗೂ ಶುಕ್ರವಾರ ಕೆಲವೆಡೆ ಗುಡುಗು ಸಹಿತ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ ಗುರುವಾರ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಹಾಸನ ಹಾಗೂ ಕೊಡಗು ಜಿಲ್ಲೆಯ ಕೆಲವೆಡೆ ಅತ್ಯಂತ ಭಾರಿ ಮಳೆಯಾಗಲಿದೆ. ಕರಾವಳಿಯ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಮೈಸೂರು ಜಿಲ್ಲೆಯ ಒಂದೆರಡು ಕಡೆ ಅತಿಯಾಗಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯ ಉತ್ತರ ಕನ್ನಡ, ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ, ಕೊಪ್ಪಳ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬಳ್ಳಾರಿ, ಚಿತ್ರದುರ್ಗ, ಮಂಡ್ಯ, ಶಿವಮೊಗ್ಗ, ತುಮಕೂರಿನ ಒಂದೆರಡು ಕಡೆ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 40–45 ಕಿ.ಮೀ. ಇರಲಿದ್ದು, 55 ಕಿ.ಮೀ.ವರೆಗೂ ತಲುಪುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಈ ಅವಧಿಯಲ್ಲಿ ಸಮುದ್ರಕ್ಕೆ ತೆರಳಬಾರದು ಎಂದು ಇಲಾಖೆ ಸೂಚಿಸಿದೆ.

ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿಯಲಿದ್ದು, ಕೆಲವು ಬಾರಿ ಗುಡುಗು ಸಹಿತ ಸಾಧಾರಣ ಮಳೆ ಆಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕಲಬುರಗಿ, ರಾಯಚೂರಿನಲ್ಲಿ ಮಳೆ

ಕಲಬುರಗಿ: ಕಲಬುರಗಿ ಜಿಲ್ಲೆಯ ಚಿತ್ತಾಪುರ, ಜೇವರ್ಗಿ ಮತ್ತು ಅಫಜಲಪುರ ತಾಲ್ಲೂಕುಗಳಲ್ಲಿ ಬುಧವಾರ ಮಳೆಯಾಯಿತು. ಭೀಮಾ ನದಿಯ ಉಪನದಿಗಳು, ಅಮರ್ಜಾ ನದಿ ಮತ್ತು ಕೆರೆಗಳು ತುಂಬಿ ಹರಿಯುತ್ತಿವೆ.

ಅಫಜಲಪುರ ಸಮೀಪದ ಚಿಂಚೋಳಿ ಗ್ರಾಮದಲ್ಲಿ ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಗ್ರಾಮಗಳ ನಡುವೆ ಸಂಚಾರ ಸ್ಥಗಿತವಾಗಿದೆ. ಸಿದ್ಧನೂರು ರೇವೂರ (ಬಿ) ಗ್ರಾಮದಲ್ಲೂ ಸೇತುವೆ ಮುಳುಗಡೆಯಾಗಿದೆ. ಮಹಾರಾಷ್ಟ್ರದ ಅಕ್ಕಲಕೋಟ್ ಸಮೀಪದ ಗ್ರಾಮಗಳಿಗೆ ನೀರು ನುಗ್ಗಿರುವುದರಿಂದ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ರಾಯಚೂರು ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಮಳೆಯಾಗಿದೆ. ಮಸ್ಕಿ ಜಲಾಶಯ ಭರ್ತಿಯಾಗಿದ್ದು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಮೂರು ತಂಡಗಳಲ್ಲಿ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಅಧಿಕಾರಿಗಳ ತಂಡ ಬೆಂಗಳೂರಿನ ಮಹದೇವಪುರಕ್ಕೆ ಭೇಟಿ ನೀಡಿತು. ಆ ಬಳಿಕ ಒಂದು ತಂಡವು ಹೆಲಿಕಾಪ್ಟರ್ ಮೂಲಕ ರಾಮನಗರ, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಕಾರವಾರಕ್ಕೂ, ಎರಡನೇ ತಂಡ ಚಿತ್ರದುರ್ಗ, ಚಿಕ್ಕಮಗಳೂರು, ಮೂರನೇ ತಂಡ ಬೀದರ್ ಮತ್ತು ಕಲಬುರಗಿಗೂ ತೆರಳಿದವು.

ತಂಡದಲ್ಲಿ ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಆಶೀಶ್ ಕುಮಾರ್, ಕೇಂದ್ರ ಹಣಕಾಸು ಇಲಾಖೆ ಉಪಕಾರ್ಯದರ್ಶಿ ಮಹೇಶ್ ಕುಮಾರ್, ಇಂಧನ ಇಲಾಖೆ ಸಹಾಯಕ ನಿರ್ದೇಶಕ ಭಾವ್ಯ ಪಾಂಡೆ, ಜಲಶಕ್ತಿ ಸಚಿವಾಲಯದ ಅಶೋಕ್ ಕುಮಾರ್, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಎಕ್ಸಿಕ್ಯೂಟಿವ್ ಎಂಜಿನಿಯರ್ ವಿ.ವಿ.ಶಾಸ್ತ್ರಿ, ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ನಿರ್ದೇಶಕ ಡಾ. ಕೆ. ಮನೋಹರನ್, ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಧೀನ ಕಾರ್ಯದರ್ಶಿ ಎಸ್.ಬಿ. ತಿವಾರಿ ಇದ್ದಾರೆ.

ಮುರುಘಾಶ್ರೀ ವೈದ್ಯಕೀಯ ತಪಾಸಣೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಅನಾರೋಗ್ಯದ ಹಿನ್ನೆಲೆಯಲ್ಲಿ ಕಾರಾಗೃಹದಿಂದ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿ ವೈದ್ಯಕೀಯ ಪರೀಕ್ಷೆ ನಡೆಸಲು ಜಿಲ್ಲಾ ನ್ಯಾಯಾಲಯ ಬುಧವಾರ ಅನುಮತಿ ನೀಡಿತು.

ಹೃದಯ ಸಂಬಂಧಿ ಸಮಸ್ಯೆ ತೀವ್ರಗೊಂಡಿರುವುದರಿಂದ ಕರೋನರಿ ಆಂಜಿಯೋಗ್ರಾಮ್ ನಡೆಸಿ ಪರಿಶೀಲಿಸುವ ಅಗತ್ಯವಿದೆ ಎಂಬುದಾಗಿ ತಜ್ಞ ವೈದ್ಯರು ನೀಡಿದ್ದ ವರದಿಯ ಆಧಾರದ ಮೇರೆಗೆ ಕಾರಾಗೃಹದ ಅಧೀಕ್ಷಕಿ ಮಹಾದೇವಿ ಎಂ. ಮರಕಟ್ಟಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶೆ ಬಿ.ಕೆ. ಕೋಮಲಾ ಅವರು ವೈದ್ಯಕೀಯ ಪರೀಕ್ಷೆಗೆ ಅನುಮತಿ ನೀಡಿದರು.

> ಎರಡನೇ ಆರೋಪಿ, ಹಾಸ್ಟೆಲ್‌ನ ಮಹಿಳಾ ವಾರ್ಡನ್ ವಿಚಾರಣೆ ನಡೆಸಲಾಗುತ್ತಿದೆ. ಇತರರ ಜಾಮೀನು ಅರ್ಜಿಗೆ ಸಂಬಂಧಿಸಿ ದಂತೆ ಹೇಳಿಕೆ ದಾಖಲಿಸಲು ಸಂತ್ರಸ್ತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.
>
> **ಕೆ.ಪರಶುರಾಮ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

'ಕಾರಾಗೃಹದ ಸಮೀಪವಿರುವ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ. ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಗಮನಕ್ಕೆ ತನ್ನಿ' ಎಂದು ನ್ಯಾಯಾಧೀಶರು ಸೂಚಿಸಿದ್ದಾರೆ.

ಆರೋಪಿಯನ್ನು ಕಾರಾಗೃಹದಿಂದ ಜಿಲ್ಲಾ ಆಸ್ಪತ್ರೆಗೆ ದಾಖಲಿಸುವ ಸಾಧ್ಯತೆ ಇದೆ. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಚಿತ್ರದುರ್ಗ ಹಾಗೂ ಅಕ್ಕಪಕ್ಕದ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಕರೋನರಿ ಆಂಜಿಯೋಗ್ರಾಮ್ ಸೌಲಭ್ಯ ಇಲ್ಲ ಎಂದು ಮೂಲಗಳು ಮಾಹಿತಿ ನೀಡಿವೆ.

ಬಂಧನದ ಮಾರನೇ ದಿನ ಸೆ.2ರಂದು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ ಮುರುಘಾಶ್ರೀಗಳನ್ನು ತೀವ್ರ ನಿಗಾ ಘಟಕದಲ್ಲಿ ಪರೀಕ್ಷಿಸಿದ್ದ ವೈದ್ಯರು, ಹೃದಯ ಸಂಬಂಧಿ ಸಮಸ್ಯೆ ಇರುವುದಾಗಿ ವರದಿ ನೀಡಿದ್ದರು.

ನ್ಯಾಯಾಂಗ ಬಂಧನದಲ್ಲಿರುವ ಮುರುಘಾಶ್ರೀ ಅವರನ್ನು ಹೃದಯ ತಪಾಸಣೆಗೆ ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆದೊಯ್ಯಲು ಅನುಮತಿ ನೀಡುವಂತೆ ಕಾರಾಗೃಹದ ಅಧೀಕ್ಷಕರು ನ್ಯಾಯಾಲಯವನ್ನು ಕೋರಿದ್ದರು. ಆದರೆ, ಕೋರಿಕೆಯನ್ನು ಪರಿಗಣಿಸದ ನ್ಯಾಯಾಲಯ ಆರೋಪಿಯನ್ನು ಪೊಲೀಸ್ ವಶಕ್ಕೆ ನೀಡಿತ್ತು.

ಜಾಮೀನಿಗೆ ತಕರಾರು ಸಲ್ಲಿಸಲು ಅವಕಾಶ

ಲೈಂಗಿಕ ಕಿರುಕುಳ ಪ್ರಕರಣದ ಆರೋಪಿಗಳು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಿದ ನ್ಯಾಯಾಲಯ, ಸಂತ್ರಸ್ತ ವಿದ್ಯಾರ್ಥಿನಿಯರ ಹೇಳಿಕೆಗಳನ್ನು ದಾಖಲಿಸಿಕೊಂಡಿತು. ಈ ಸಂಬಂಧದ ವರದಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಸೂಚಿಸಿತು.

ಪ್ರಕರಣದ ಪ್ರಮುಖ ಆರೋಪಿಯಾದ ಶಿವಮೂರ್ತಿ ಮುರುಘಾ ಶರಣರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಮೂರನೇ ಆರೋಪಿ 17 ವರ್ಷದ ಬಾಲಕ, ನಾಲ್ಕನೇ ಆರೋಪಿ ಪರಮಶಿವಯ್ಯ ಹಾಗೂ ಐದನೇ ಆರೋಪಿ ಗಂಗಾಧರಯ್ಯ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಸಂಬಂಧ ಗುರುವಾರದೊಳಗೆ ತಕರಾರು ಸಲ್ಲಿಸಲು ಸಂತ್ರಸ್ತರ ಪರ ವಕೀಲರಿಗೆ ಅವಕಾಶ ನೀಡಲಾಯಿತು.

ಜನಸ್ಪಂದನವಾದ ಜನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡಬಳ್ಳಾಪುರದಲ್ಲಿ ಬಿಜೆಪಿ ಗುರುವಾರ ನಡೆಸಲು ಉದ್ದೇಶಿಸಿದ್ದ 'ಜನೋತ್ಸವ'ವನ್ನು ಮುಂದೂಡಿದೆ. ಈ ಮೂಲಕ 'ಜನೋತ್ಸವ'ವನ್ನು ಮೂರನೇ ಬಾರಿಗೆ ಮುಂದೂಡಿದಂತಾಗಿದೆ. ಸೆ.10 ರಂದು ಜನೋತ್ಸವವನ್ನು 'ಜನಸ್ಪಂದನ' ಹೆಸರಿನಲ್ಲಿ ನಡೆಸಲು ಬಿಜೆಪಿ ತೀರ್ಮಾನಿಸಿದೆ.

ಗುರುವಾರ ನಡೆಯಬೇಕಿದ್ದ ಸಮಾವೇಶವನ್ನು ಸಚಿವ ಉಮೇಶ ಕತ್ತಿ ಅವರ ನಿಧನದ ಕಾರಣ ಮುಂದೂಡಲಾಗಿದೆ.

ಮೊದಲ ಬಾರಿಗೆ ಜುಲೈ 28 ರಂದು ಜನೋತ್ಸವಕ್ಕೆ ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ, ಆ ಸಂದರ್ಭದಲ್ಲಿ ಸುಳ್ಯ ತಾಲ್ಲೂಕು ಬೆಳ್ಳಾರೆಯಲ್ಲಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರ ಹತ್ಯೆ ನಡೆದಿದ್ದರಿಂದಾಗಿ ಕಾರ್ಯಕ್ರಮ ಮುಂದೂಡಲಾಗಿತ್ತು.

ಪುನರಾವರ್ತಿತ 3,337 ವಿದ್ಯಾರ್ಥಿಗಳಿಗೆ ಅವಕಾಶ?

• ರಾಜೇಶ್ ರೈ ಚಟ್ಲ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿದ ತೀರ್ಪು ಅನ್ವಯವಾದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಈಗಾಗಲೇ ಪ್ರಕಟಿಸಿದ ಸಿಇಟಿ ರ‍್ಯಾಂಕ್ ಪಟ್ಟಿ ಬದಲಾಗಲಿದ್ದು, 2020-21ನೇ ಸಾಲಿನ 3,337 ವಿದ್ಯಾರ್ಥಿಗಳು (ಪುನರಾವರ್ತಿತರು) 10 ಸಾವಿರ ಒಳಗಿನ ರ‍್ಯಾಂಕ್ ಪಡೆಯಲಿದ್ದಾರೆ.

2020-21ನೇ ಸಾಲಿನ ಒಟ್ಟು 24,074 ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಬರೆದಿದ್ದಾರೆ. ಪುನರಾವರ್ತಿತ ವಿದ್ಯಾರ್ಥಿಗಳ ಸಿಇಟಿ ಅಂಕ ಮಾತ್ರ ಪರಿಗಣಿಸಿ ಕೆಇಎ ರ‍್ಯಾಂಕ್ ಪಟ್ಟಿ ಪ್ರಕಟಿಸಿತ್ತು. ಆ ಪಟ್ಟಿ ಪ್ರಕಾರ ಒಬ್ಬ ವಿದ್ಯಾರ್ಥಿ ಮಾತ್ರ 1,000 ರ‍್ಯಾಂಕಿನ ಒಳಗೆ ಸ್ಥಾನ ಪಡೆದಿದ್ದು, 62 ವಿದ್ಯಾರ್ಥಿಗಳು 10 ಸಾವಿರ ಒಳಗಿನ ರ‍್ಯಾಂಕ್ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಅಲ್ಲದೆ, 20,553 ವಿದ್ಯಾರ್ಥಿಗಳು 1 ಲಕ್ಷಕ್ಕಿಂತ ಮೇಲಿನ ರ‍್ಯಾಂಕ್ ಗಳಿಸಿದ್ದಾರೆ. 2020-21 ನೇ ಸಾಲಿನ ಪಿಯುಸಿ-ಸಿಇಟಿಯಲ್ಲಿನ ತಲಾ ಶೇ 50 ಅಂಕ ಪರಿಗಣಿಸಿ ಹೊಸ ರ‍್ಯಾಂಕ್ ಪಟ್ಟಿ ಪ್ರಕಟಿಸುವಂತೆ ಹೈಕೋರ್ಟ್ ಸೂಚಿಸಿದೆ. ತೀರ್ಪು ಪಾಲನೆಯಾದರೆ ರ‍್ಯಾಂಕ್ ಪಟ್ಟಿ ಅದಲು– ಬದಲಾಗಲಿದೆ.

ಕೋವಿಡ್ ಕಾರಣ 2020–21ನೇ ಸಾಲಿನಲ್ಲಿ ದ್ವಿತೀಯ ಪರೀಕ್ಷೆ ನಡೆದಿರಲಿಲ್ಲ. ಹೀಗಾಗಿ, ಆ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪ್ರಥಮ ಪಿಯುಸಿ ಫಲಿತಾಂಶ ಮತ್ತು ದ್ವಿತೀಯ ಪಿಯುಸಿ ಕೃಪಾಂಕ ಪರಿಗಣಿಸಿ ಅಂಕಗಳನ್ನು ನೀಡಿ, ಫಲಿತಾಂಶ ಪ್ರಕಟಿಸಲಾಗಿತ್ತು. ಈ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೆ ನೀಡಿದ ಅಂಕ ಪರಿಗಣಿಸಿದರೆ ಈ ಸಾಲಿನ ಮಕ್ಕಳಿಗೆ ರ‍್ಯಾಂಕ್ ಗಳಿಕೆಯಲ್ಲಿ ಅನ್ಯಾಯವಾಗಲಿದೆ ಎಂಬ ಕಾರಣಕ್ಕೆ ರ‍್ಯಾಂಕ್ ಪಟ್ಟಿಗೆ ಈ ವಿದ್ಯಾರ್ಥಿಗಳ ಸಿಇಟಿ ಅಂಕವನ್ನು ಮಾತ್ರ ಕೆಇಎ ಪರಿಗಣಿಸಿತ್ತು. ಕೆಇಎಯ ಈ ಕ್ರಮವನ್ನು ಪ್ರಶ್ನಿಸಿ 2020-21ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್ ವಿದ್ಯಾರ್ಥಿಗಳ ಪರ ತೀರ್ಪು ನೀಡಿದೆ.

ಹೈಕೋರ್ಟ್ ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಮುಂದಾಗಿರುವ ಕೆಇಎ, ದ್ವಿತೀಯ ಪಿಯುಸಿ ಪರೀಕ್ಷೆ ಎದುರಿಸದ ವಿದ್ಯಾರ್ಥಿಗಳ ಅಂಕಗಳನ್ನೂ ಸಿಇಟಿಗೆ ಪರಿಗಣಿಸಿದರೆ ಯಾವ ರೀತಿಯಲ್ಲಿ 'ರ‍್ಯಾಂಕ್' ವ್ಯತ್ಯಾಸ ಆಗಬಹುದೆಂದು ಪಟ್ಟಿ ಮಾಡಿದೆ.

ಹೀಗೆ ಪಟ್ಟಿ ಮಾಡುವಾಗ ಮೂರು ಆಯಾಮಗಳನ್ನು ಕೆಇಎ ಪಟ್ಟಿ ಮಾಡಿದೆ. ಪುನರಾವರ್ತಿತ 24,074 ವಿದ್ಯಾರ್ಥಿಗಳು ಸಿಇಟಿಯಲ್ಲಿ ಗಳಿಸಿದ ಅಂಕ ಪರಿಗಣಿಸಿದರೆ ಯಾವ ರ‍್ಯಾಂಕ್ ಪಡೆಯಬಹುದು? ಎಂಬುದು ಮೊದಲನೆಯದಾದರೆ, ಹೈಕೋರ್ಟ್ ಸೂಚಿಸಿದಂತೆ 'ವಿದ್ಯಾರ್ಥಿಗಳು ಸಿಇಟಿಯಲ್ಲಿ ಪಡೆದಿರುವ ಶೇ 75 ಮತ್ತು ಪಿಯುಸಿಯ ಶೇ 25ರಷ್ಟು ಅಂಕ ಪರಿಗಣಿಸಿ ರ‍್ಯಾಂಕಿಂಗ್ ಪಟ್ಟಿ ಪ್ರಕಟಿಸಲು ಸಾಧ್ಯವೇ' ಎಂಬ ಸೂತ್ರ ಅನುಸರಿಸಿದರೆ ಪಟ್ಟಿ ಏನಾಗಬಹುದು ಎಂಬುದು ಎರಡನೆಯ ಆಯಾಮವಾಗಿದೆ. ಹೈಕೋರ್ಟ್ ತೀರ್ಪಿನಂತೆ ಪಿಯುಸಿ–ಸಿಇಟಿಯಲ್ಲಿನ ತಲಾ ಶೇ 50 ಅಂಕ ಪರಿಗಣಿಸಿದರೆ ರ‍್ಯಾಂಕ್ ಯಾವ ರೀತಿಯ ಬದಲಾಗಬಹುದು ಎಂಬ ಮೂರನೇ ಆಯಾಮವಾಗಿದ್ದು, ಈ ಲೆಕ್ಕಾಚಾರದ ಮೇಲೆ ಹೊಸಪಟ್ಟಿಯನ್ನು ಕೆಇಎ ಸಿದ್ಧಪಡಿಸಿದೆ.

2020–21ನೇ ಸಾಲಿನ ಪುನರಾವರ್ತಿತ ವಿದ್ಯಾರ್ಥಿಗಳು

ರ‍್ಯಾಂಕ್ ವ್ಯಾಪ್ತಿ	ಸಿಇಟಿ ಮಾತ್ರ	ಪಿಯುಸಿ– ಸಿಇಟಿ 25:75	ಪಿಯುಸಿ– ಸಿಇಟಿ 50:50
1,000 ಒಳಗೆ	1	5	64
1,000-3000	8	41	657
3,000-5000	17	77	862
5,000-8000	22	182	1,110
8,000-10,000	14	198	644
10,000-15,000	70	427	1,460
15,000-20,000	94	421	1,261
20,000-30,000	207	872	2,284
30,000-40,000	319	865	2,089
40,000-50,000	356	824	1,791
50,000-60,000	308	939	1,733
60,000-70,000	496	1,107	1,627
70,000-80,000	420	1,171	1,526
80,000-90,000	675	1,334	1,428
90,000–1 ಲಕ್ಷ	514	1,593	1,265
1ಲಕ್ಷಕ್ಕಿಂತ ಮೇಲೆ	20,553	14,018	4,273
ಒಟ್ಟು	24,074	24,074	24,074

ಸಿಇಟಿ: ದಾಖಲೆ ಪರಿಶೀಲನೆ ಸೆ.9ಕ್ಕೆ ಮುಕ್ತಾಯ

ಬೆಂಗಳೂರು: ಸಿಇಟಿ ವಿದ್ಯಾರ್ಥಿಗಳ ವ್ಯಾಸಂಗ ಪ್ರಮಾಣಪತ್ರಗಳ ಪರಿಶೀಲನಾ ಕಾರ್ಯವನ್ನು ಸೆ.9ರವರೆಗೆ ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳು ತಮ್ಮ ವ್ಯಾಸಂಗ, ಗ್ರಾಮೀಣ, ಕನ್ನಡ ಮಾಧ್ಯಮ ಕಲಿಕಾ ಪ್ರಮಾಣಪತ್ರಗಳ ಪರಿಶೀಲನೆಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಸೆ.8 ಹಾಗೂ 9ರಂದು ಬೆಳಿಗ್ಗೆ 10.30ರಿಂದ ಸಂಜೆ 4ರವರೆಗೆ ಭೇಟಿ ನೀಡಬಹುದು ಎಂದು ಕೆಇಎ ತಿಳಿಸಿದೆ.

> ಸಿಇಟಿ ವಿಚಾರದಲ್ಲಿ ಹೈಕೋರ್ಟ್ ತೀರ್ಪಿನಿಂದ 1.50 ಲಕ್ಷ ವಿದ್ಯಾರ್ಥಿಗಳಿಗೆ ಅನ್ಯಾಯ ವಾಗಲಿದೆ. ಮತ್ತೊಮ್ಮೆ ಹೈಕೋರ್ಟ್‌ಗೆ ಮನವರಿಕೆ ಮಾಡಲು ತೀರ್ಮಾನಿಸಿದ್ದೇವೆ
>
> **ಡಾ.ಸಿ.ಎನ್. ಅಶ್ವತ್ಥನಾರಾಯಣ,** ಉನ್ನತ ಶಿಕ್ಷಣ ಸಚಿವ

ಬೆಲ್ಲದ ಬಾಗೇವಾಡಿ ಸಮೀಪದ ವಿಶ್ವರಾಜ ಶುಗರ್ಸ್ ಆವರಣದಲ್ಲಿ ಅಂತ್ಯಸಂಸ್ಕಾರ

ಕತ್ತಿ ಅಂತಿಮ ದರ್ಶನಕ್ಕೆ ಜನಸಾಗರ...

ಪ್ರಜಾವಾಣಿ ವಾರ್ತೆ

ಬೆಲ್ಲದ ಬಾಗೇವಾಡಿ (ಬೆಳಗಾವಿ ಜಿಲ್ಲೆ): ಸಚಿವ ಉಮೇಶ ಕತ್ತಿ ಅವರ ಅಂತ್ಯಕ್ರಿಯೆ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಬುಧವಾರ ರಾತ್ರಿ 10ಕ್ಕೆ ನೆರವೇರಿತು.

ಇದಕ್ಕೂ ಮುನ್ನ ಅವರ ಪಾರ್ಥಿವ ಶರೀರವನ್ನು ಹುಟ್ಟೂರಾದ ಬೆಲ್ಲದ ಬಾಗೇವಾಡಿ ಸಮೀಪದ ವಿಶ್ವರಾಜ ಶುಗರ್ಸ್ ಆವರಣದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಯಿತು. ಸಾವಿರಾರು ಅಭಿಮಾನಿಗಳು ನೆಚ್ಚಿನ ನಾಯಕನ ಅಂತಿಮ ದರ್ಶನ ಪಡೆದರು.

ಮಂಗಳವಾರ ರಾತ್ರಿ ಬೆಂಗಳೂರಿನಲ್ಲಿ ನಿಧನರಾದ ಅವರ ಪಾರ್ಥಿವ ಶರೀರವನ್ನು ಹುಟ್ಟೂರಿಗೆ ತರುವಷ್ಟರಲ್ಲಿ ಬುಧವಾರ ಸಂಜೆ 5 ಗಂಟೆಯಾಯಿತು.

ಉಮೇಶ ಕತ್ತಿ ಅವರೇ ಕಟ್ಟಿ ಬೆಳೆಸಿದ ವಿಶ್ವರಾಜ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಜನ ಕಿಕ್ಕಿರಿದು ಸೇರಿದ್ದರು. ಪಾರ್ಥಿವ ಶರೀರ ಕಾರ್ಖಾನೆ ಆವರಣಕ್ಕೆ ತಂದಾಗ ಜನಸ್ತೋಮ ಭಾವುಕವಾಯಿತು. ದುಃಖಸಾಗರದ ನಡುವೆ ಜೈಕಾರಗಳು ಮೊಳಗಿದವು.

ಉಮೇಶ ಕತ್ತಿ ಅವರ ಪಾರ್ಥಿವ ಶರೀರದ ಮುಂದೆ ಕಣ್ಣೀರು ಹಾಕಿದ ಪತ್ನಿ ಶೀಲಾ ಹಾಗೂ ಮೊಮ್ಮಕ್ಕಳು

ಸೂರ್ಯಾಸ್ತಕ್ಕೂ ಮುನ್ನ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು. ಪೊಲೀಸರ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದರು. ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉಮೇಶ ಕತ್ತಿ ಅವರ ಪತ್ನಿ ಶೀಲಾ ಅವರಿಗೆ ಹಸ್ತಾಂತರಿಸಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಗೃಹ ಸಚಿವ ಆರಗ ಜ್ಞಾನೇಂದ್ರ, ಕಂದಾಯ ಸಚಿವ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದೆ ಮಂಗಳಾ ಅಂಗಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಸೇರಿ ಶಾಸಕರು, ಜನಪ್ರತಿನಿಧಿಗಳು ಅಂತಿಮ ದರ್ಶನ ಪಡೆದರು.

ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಶ್ರೀ, ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ನಿಡಸೋಸಿ ಮಠದ ಪಂಚಮ ಶಿವಲಿಂಗೇಶ್ವರ ಶ್ರೀಗಳು ಸೇರಿ 50ಕ್ಕೂ ಹೆಚ್ಚು ಮಠಾಧೀಶರೂ ಇದ್ದರು.

ವೀರಶೈವ ಲಿಂಗಾಯತ ಸಂಪ್ರದಾಯದಂತೆ ಪೂಜ್ಯರು, ಅರ್ಚಕರು ಪೂಜಾವಿಧಿ ನೆರವೇರಿಸಿದರು.

ಉಮೇಶ ಕತ್ತಿ ಅವರ ಪುತ್ರ ನಿಖಿಲ್, ಸಹೋದರ ರಮೇಶ ಕತ್ತಿ, ರಮೇಶ ಅವರ ಪುತ್ರರಾದ ಪವನ್ ಹಾಗೂ ಪೃಥ್ವಿ ಮನೆತನದ ಕೊನೆಯ ಪೂಜೆ ಸಲ್ಲಿಸಿದರು. ನಂತರ ಸಾರ್ವಜನಿಕರ ದರ್ಶನಕ್ಕೆ ಅನುವು ಮಾಡಿ ಕೊಡಲಾಯಿತು.

ಮೆರವಣಿಗೆ: ಉಮೇಶ ಕತ್ತಿ ಅವರ ಪಾರ್ಥಿವ ಶರೀರವನ್ನು ವಿಶೇಷ ವಿಮಾನದ ಮೂಲಕ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ತಂದಾಗ ಮಧ್ಯಾಹ್ನ 2 ಗಂಟೆ ಮೀರಿತ್ತು. ಅಲ್ಲಿಂದ ರಸ್ತೆ ಮಾರ್ಗವಾಗಿ ತೆರೆದ ವಾಹನದಲ್ಲಿ ಬೆಲ್ಲದ ಬಾಗೇವಾಡಿಗೆ ಮೆರವಣಿಗೆ ಮೂಲಕ ತರಲಾಯಿತು. ಮಾರ್ಗ ಮಧ್ಯದ ಊರುಗಳಲ್ಲೂ ಕಿಕ್ಕಿರಿದು ಸೇರಿದ್ದ ಜನ ಅಗಲಿದ ತಮ್ಮ ನಾಯಕನ ಮುಖ ನೋಡಲು ಮುಗಿಬಿದ್ದರು. ಇದರಿಂದ ಉಳಿದೆಲ್ಲ ಕಾರ್ಯಗಳೂ ವಿಳಂಬವಾದವು. ಉಮೇಶ ಕತ್ತಿ ಅವರ ತಾತ ಹಾಗೂ ತಂದೆಯ ಸಮಾಧಿ ಬಳಿಯೇ ಅವರ ಸಮಾಧಿಯನ್ನೂ ಕಟ್ಟಲಾಗುತ್ತಿದೆ.

ಮೂರು ದಿನ ಶೋಕಾಚರಣೆ

ಬೆಳಗಾವಿ: 'ಅರಣ್ಯ ಸಚಿವ ಸಚಿವ ಉಮೇಶ ಕತ್ತಿ ಅವರ ನಿಧನರಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬುಧವಾರದಿಂದ ಮೂರು ದಿನ ಶೋಕಾಚರಣೆ ಆಚರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ತಿಳಿಸಿದರು. ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, 'ಪ್ರವಾಹ ನಿರ್ವಹಣೆ ಕಾರ್ಯಾಚರಣೆ ಮುಂದುವರಿಸಲಾಗುತ್ತಿದೆ. ಶೋಕಾಚರಣೆ ಕಾರಣ ಉಳಿದ ಚಟುವಟಿಕೆಗಳು ನಡೆಯುವುದಿಲ್ಲ' ಎಂದರು.

‘ಅಲ್‌ಕೈದಾ’ ಸೇರಲು ಮುಂದಾಗಿದ್ದ ಶಂಕಿತ ಉಗ್ರರ ಬಂಧನ

ಎನ್‌ಐಎನಿಂದ ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಂಕಿತ ಉಗ್ರರಾದ ಅಖ್ತರ್ ಹುಸೇನ್ ಲಷ್ಕರ್ ಹಾಗೂ ಜುಬಾನ್ ಪ್ರಕರಣವನ್ನು ಅಧಿಕೃತವಾಗಿ ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವರ್ಗಾವಣೆ ಮಾಡಲಾಗಿದ್ದು, ಪ್ರಕರಣದ ತನಿಖೆ ಚುರುಕುಗೊಂಡಿದೆ.

‘ಅಲ್‌ಕೈದಾ’ ಉಗ್ರ ಸಂಘಟನೆ ಸೇರಲು ಮುಂದಾಗಿದ್ದ ಇಬ್ಬರು ಶಂಕಿತರನ್ನು ಕೆಲವು ದಿನಗಳ ಹಿಂದೆ ಸಿಸಿಬಿ ಪೊಲೀಸರು ಬಂಧಿಸಿದ್ದರು.

ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ (ಯುಎಪಿಎ) ಅಡಿ ದೆಹಲಿ ಎನ್‌ಐಎ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಬಂಧನದ ಬಳಿಕ ಇಬ್ಬರನ್ನು ವಶಕ್ಕೆ ಪಡೆದುಕೊಂಡಿದ್ದ ಸಿಸಿಬಿ ಪೊಲೀಸರೂ ವಿಚಾರಣೆ ನಡೆಸಿದ್ದರು.

‘ಶಂಕಿತರೊಂದಿಗೆ ಯಾರೆಲ್ಲಾ ಸಂಪರ್ಕದಲ್ಲಿದ್ದರು ಹಾಗೂ ಅವರ ಉದ್ದೇಶ ಪತ್ತೆಗೆ ಎನ್‌ಐಎ ತನಿಖೆ ಮುಂದುವರಿಯಲಿದೆ’ ಎಂದು ಮೂಲಗಳು ತಿಳಿಸಿವೆ.

‘ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಅಖ್ತರ್ ಹುಸೇನ್ ಲಷ್ಕರ್, ತಿಲಕನಗರದ ಬಿಟಿಬಿ ಲೇಔಟ್‌ನ ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯವಾಗಿದ್ದ ಈತ, ಉಗ್ರ ಚಟುವಟಿಕೆ ಸಂಬಂಧಿಸಿದ ಪೋಸ್ಟ್‌ಗಳನ್ನು ಹಾಕುತ್ತಿದ್ದ. ಯುವಕರನ್ನು ಅಫ್ಗಾನಿಸ್ತಾನಕ್ಕೆ ಕಳುಹಿಸಿ ಭಯೋತ್ಪಾದನೆ ತರಬೇತಿ ನೀಡಲು ಸಂಚು ರೂಪಿಸಿದ್ದ’ ಎಂಬುದು ಸಿಸಿಬಿ ತನಿಖೆ ವೇಳೆ ಪತ್ತೆಯಾಗಿತ್ತು.

‘ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಅಖ್ತರ್ ಹುಸೇನ್ ಲಷ್ಕರ್ ಸಹ ತಮಿಳುನಾಡಿನ ಜುಬಾನಾ ಮೂಲಕ ಕಾಶ್ಮೀರದ ಮೂಲಕ ಅಫ್ಗಾನಿಸ್ತಾನಕ್ಕೆ ತೆರಳಲು ಸಿದ್ಧತೆ ಮಾಡಿಕೊಂಡಿದ್ದ’ ಎಂದು ಮೂಲಗಳು ತಿಳಿಸಿವೆ.

‘ಜಮ್ಮು- ಕಾಶ್ಮೀರದಲ್ಲಿ 370ನೇ ವಿಧಿ ರದ್ದುಗೊಳಿಸಿದ್ದರಿಂದ ಆಕ್ರೋಶಗೊಂಡು ಸಾಮಾಜಿಕ ಜಾಲತಾಣಗಳಲ್ಲಿ ದೇಶ ವಿರೋಧಿ ಪೋಸ್ಟ್ ಹಾಕುತ್ತಿದ್ದ. ಅದನ್ನು ಗಮನಿಸಿದ್ದ ಉಗ್ರ ಸಂಘಟನೆಯವರು ಅಖ್ತರ್‌ನನ್ನು ಸಂಪರ್ಕಿಸಿದ್ದರು’ ಎಂದು ತನಿಖೆಯ ವೇಳೆ ಗೊತ್ತಾಗಿತ್ತು.

ಸಂಕ್ಷಿಪ್ತ ಸುದ್ದಿ

ನಿಯಂತ್ರಣ ತಪ್ಪಿದ ಬೈಕ್: ಹಿಂಬದಿ ಸವಾರ ಸಾವು

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್‌ನ ಹೊರವರ್ತುಲ ರಸ್ತೆಯಲ್ಲಿ ಬುಧವಾರ ಮುಂಜಾನೆ ಬೈಕ್ ಒಂದು ರಸ್ತೆಯ ಉಬ್ಬು ದಾಟುವಾಗ ಆಯತಪ್ಪಿ ಬಿದ್ದ ಪರಿಣಾಮ ಹಿಂಬದಿ ಸವಾರ ಶ್ರೀಪತಿರಾವ್ (57) ಎಂಬುವರು ಮೃತಪಟ್ಟಿದ್ದಾರೆ. ಬೈಕ್ ಸವಾರ ಕಾರ್ತಿಕ್ (25) ಗಂಭೀರವಾಗಿ ಗಾಯಗೊಂಡಿದ್ದಾರೆ.

ಗಾಯಗೊಂಡಿದ್ದ ಶ್ರೀಪತಿರಾವ್ ಅವರನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸುವ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸವಾರನ ಅತಿ ವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಘಟನೆಗೆ ಕಾರಣ. ತಡರಾತ್ರಿ ಮಾರುಕಟ್ಟೆ ಪ್ರದೇಶದಲ್ಲಿ ಊಟಕ್ಕೆ ಬೈಕ್‌ನಲ್ಲಿ ತೆರಳುವಾಗ ಈ ಅವಘಡ ಸಂಭವಿಸಿದೆ’ ಎಂದು ನಾಗೇಶ್ ಎಂಬುವವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಿದುಳು ನಿಷ್ಕ್ರಿಯ: ಎಂಟು ಮಂದಿಗೆ ಅಂಗಾಂಗ ದಾನ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡ 29 ವರ್ಷದ ಮಹಿಳೆಯೊಬ್ಬರು ಅಂಗಾಂಗ ದಾನದ ಮೂಲಕ ಎಂಟು ಮಂದಿಗೆ ನೆರವಾಗಿದ್ದಾರೆ.

ಕೋಲಾರದ ನಿವಾಸಿ ಶ್ವೇತಾ ಅವರು ಆ.27ಕ್ಕೆ ಪಾರ್ಶ್ವವಾಯು (ಸ್ಟ್ರೋಕ್) ಪೀಡಿತರಾಗಿ, ಸ್ಥಳೀಯ ಆಸ್ಪತ್ರೆಗೆ ದಾಖಲಾಗಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಪತಿ ಹರೀಶ್ ಅವರು ಇಲ್ಲಿನ ಬಿಜಿಎಸ್ ಗ್ಲೆನೆಗಲ್ಸ್ ಗ್ಲೋಬಲ್ ಆಸ್ಪತ್ರೆಗೆ ಸ್ಥಳಾಂತರಿಸಿದ್ದರು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸದಿದ್ದರಿಂದ ವೈದ್ಯರು ಆ.31 ರಂದು ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿ, ಅಂಗಾಂಗ ದಾನದ ಬಗ್ಗೆ ಕುಟುಂಬದವರಿಗೆ ತಿಳಿಸಿದರು.

ಶ್ವೇತಾ ಅವರ ಯಕೃತ್ತು, ಮೂತ್ರ ಪಿಂಡಗಳು, ಹೃದಯ ಕವಾಟ, ಚರ್ಮ ಮತ್ತು ಕಾರ್ನಿಯಾಗಳನ್ನು ದಾನವಾಗಿ ಪಡೆದ ವೈದ್ಯರು, ಕವಾಟವನ್ನು ಜಯದೇವ ಹೃದ್ರೋಗ ಸಂಸ್ಥೆಗೆ, ಚರ್ಮವನ್ನು ವಿಕ್ಟೋರಿಯಾ ಚರ್ಮ ನಿಧಿಗೆ, ಕಾರ್ನಿಯಾಗಳನ್ನು ಪ್ರಭಾ ನೇತ್ರ ಚಿಕಿತ್ಸಾಲಯಕ್ಕೆ ನೀಡಿದರು.

ಒಂದು ಮೂತ್ರಪಿಂಡವನ್ನು ಎನ್‌ಯು ಆಸ್ಪತ್ರೆಯಲ್ಲಿ, ಯಕೃತ್ತು ಮತ್ತು ಮತ್ತೊಂದು ಮೂತ್ರಪಿಂಡವನ್ನು ಬಿಜಿಎಸ್ ಗ್ಲೆನೆಗಲ್ಸ್ ಆಸ್ಪತ್ರೆಯಲ್ಲಿ ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ರೋಗಿಗಳಿಗೆ ಕಸಿ ಮಾಡಲಾಗಿದೆ.

ಪ್ರತಿಭಟನೆ ಕನಿಷ್ಠ ವೇತನ ಮತ್ತು ಕೆಲಸ ಕಾಯಂಗೆ ಒತ್ತಾಯಿಸಿ ‘ಅಖಿಲ ಕರ್ನಾಟಕ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ಸಂಘ’ದ ನೇತೃತ್ವದಲ್ಲಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದು ಬುಧವಾರ ಲೋಕಸಭೆ ಮಾಜಿ ಸದಸ್ಯ ಎಲ್.ಆರ್ ಶಿವರಾಮೇಗೌಡ ಭೇಟಿ ನೀಡಿ ಬೆಂಬಲ ಸೂಚಿಸಿದರು.

ರಿಚ್ಮಂಡ್ ಟೌನ್ ನಂಜಪ್ಪ ವೃತ್ತದ ಶಾಪಿಂಗ್ ಮಾರ್ಟ್

ಬೆಂಕಿ ಅವಘಡ: ಅಪಾರ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಿಚ್ಮಂಡ್ ಟೌನ್‌ನ ನಂಜಪ್ಪ ವೃತ್ತದ ಫ್ಯಾಮಿಲಿ ಶಾಪಿಂಗ್ ಮಾರ್ಟ್‌ನಲ್ಲಿ ಮಂಗಳವಾರ ತಡರಾತ್ರಿ ಬೆಂಕಿ ಆಕಸ್ಮಿಕದಿಂದ ಅಪಾರ ನಷ್ಟ ಸಂಭವಿಸಿದೆ. ಈ ಮಾರ್ಟ್ ಶಾಂತಾರಾಮ್ ಕಾಂಪ್ಲೆಕ್ಸ್‌ನಲ್ಲಿ ಇತ್ತು.

ಮಳಿಗೆಯಲ್ಲಿದ್ದ ವಸ್ತುಗಳೆಲ್ಲವೂ ಕ್ಷಣಾರ್ಧದಲ್ಲಿ ಬೆಂಕಿಯ ಕೆನ್ನಾಲಿಗೆಗೆ ಸುಟ್ಟು ಕರಕಲಾಗಿವೆ. ಮಧ್ಯರಾತ್ರಿ 1.30ರ ವೇಳೆಗೆ ಈ ಅವಘಡ ಸಂಭವಿಸಿದ್ದು, ಶಾರ್ಟ್ ಸರ್ಕಿಟ್ ಕಾರಣ ಎಂದು ಶಂಕಿಸಲಾಗಿದೆ.

ಅನ್ವರ್ ಎಂಬುವರಿಗೆ ಸೇರಿದ ಶಾಪಿಂಗ್ ಮಾರ್ಟ್ ಇದಾಗಿದ್ದು, ಮಾರುಕಟ್ಟೆಯ ಒಳಗೆ ವುಡ್‌ವರ್ಕ್ ಹಾಗೂ ಬುಕ್ಸ್ ಸಂಗ್ರಹ ಹೆಚ್ಚಿದ್ದರಿಂದ ಬೆಂಕಿಯು ವೇಗವಾಗಿ ಇಡೀ ಕಟ್ಟಡವನ್ನು ವ್ಯಾಪಿಸಿತ್ತು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದ್ದಾರೆ.

ಕಟ್ಟಡದ ಒಂದು ಬದಿಯಲ್ಲಿ ಬೆಂಕಿ ಕಾಣಿಸಿಕೊಂಡಿತು. ತಕ್ಷಣವೇ ಸ್ಥಳೀಯರು ಅಗ್ನಿಶಾಮಕ ದಳದ ಸಿಬ್ಬಂದಿಗೆ ಕರೆ ಮಾಡಿ ತಿಳಿಸಿದ್ದರು. ಸ್ಥಳಕ್ಕೆ ಬಂದಿದ್ದ ಒಂದು ವಾಹನದಿಂದ ಬೆಂಕಿ ನಂದಿಸಲು ಸಾಧ್ಯವಾಗಲಿಲ್ಲ. ಬೆಂಕಿಯ ಜ್ವಾಲೆ ವ್ಯಾಪಿಸುತ್ತಲೇ ಸಾಗಿತು. ಹೆಚ್ಚುವರಿ ವಾಹನಗಳು ಸ್ಥಳಕ್ಕೆ ಬರುವಷ್ಟರಲ್ಲಿ ವಸ್ತುಗಳು ಭಸ್ಮವಾಗಿದ್ದವು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

9 ವಾಹನಗಳ ಕಾರ್ಯಾಚರಣೆ: ಬೆಂಕಿ ನಂದಿಸಲು ಅಗ್ನಿಶಾಮಕ ದಳದ ಒಟ್ಟು 9 ವಾಹನಗಳು ಕಾರ್ಯಾಚರಣೆ ನಡೆಸಿ ಮುಂಜಾನೆ ವೇಳೆ ಬೆಂಕಿ ನಂದಿಸಲು ಯಶಸ್ವಿಯಾದವು. ಅಕ್ಕಪಕ್ಕದ ನಿವಾಸಿಗಳು ಕಾರ್ಯಾಚರಣೆಗೆ ನೆರವಾದರು. ಮಾರ್ಟ್‌ನ ಸಿಬ್ಬಂದಿ ಬಾಗಿಲು ಹಾಕಿ ಮನೆಗಳಿಗೆ ತೆರಳಿದ ಬಳಿಕ ಈ ಅವಘಡ ಸಂಭವಿಸಿದೆ.

‘ಶಾಪಿಂಗ್ ಮಾರ್ಟ್‌ನಲ್ಲಿ ₹ 1 ಕೋಟಿ ವೆಚ್ಚದಲ್ಲಿ ಪೀಠೋಪಕರಣ ಅಳವಡಿಸಲಾಗಿತ್ತು. ವಹಿವಾಟಿನ ₹ 3 ಲಕ್ಷದ ನಗದು ಇರಿಸಲಾಗಿತ್ತು. ಜತೆಗೆ, ಅಂದಾಜು ₹ 3 ಕೋಟಿಯ ಮೌಲ್ಯದ ವಸ್ತುಗಳಿದ್ದವು. ಎಲ್ಲವೂ ಸುಟ್ಟುಹೋಗಿವೆ’ ಎಂದು ಮಾಲೀಕ ಅನ್ವರ್ ನೋವು ತೋಡಿಕೊಂಡರು.

ತ್ಯಾಜ್ಯ ತೆರವು ಬೆಂಗಳೂರಿನ ಹಲಸೂರು ಕೆರೆಯಲ್ಲಿ ಮಳೆಯಿಂದ ಶೇಖರಣೆಗೊಂಡಿದ್ದ ತ್ಯಾಜ್ಯವನ್ನು ಬುಧವಾರ ಸಿಬ್ಬಂದಿ ಸ್ವಚ್ಛಗೊಳಿಸಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

₹ 76 ಲಕ್ಷ ನಗದು ವಶ: ಹವಾಲ ದಂಧೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣಾ ವ್ಯಾಪ್ತಿಯ ಶಾಂತಿನಗರದ ನಂಜಪ್ಪ ರಸ್ತೆಯಲ್ಲಿ ದಾಖಲೆ ಇಲ್ಲದೆ ₹ 76 ಲಕ್ಷ ಹಣ ಸಾಗಿಸುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಗುಜರಾತ್‌ನ ಮಹೇಶಾನ ಜಿಲ್ಲೆಯ ಕಮಲಿ ಗ್ರಾಮದ ರಾಬಿನ್‌ಕುಮಾರ್ (26), ರಾಜಸ್ಥಾನದ ಬಿಕಾನೇರ್ ಜಿಲ್ಲೆಯ ನೌಕಾ ಗ್ರಾಮದ ಸುಂದರಲಾಲ್ (39) ಹಾಗೂ ಬೆಂಗಳೂರಿನ ಸುಧಾಮ ನಗರದ ನೀರಜ್ ಮಿಶ್ರಾ (37) ಬಂಧಿತ ಆರೋಪಿಗಳು. ಹವಾಲ ದಂಧೆಯ ಶಂಕೆ ವ್ಯಕ್ತವಾಗಿದ್ದು, ವಿಲ್ಸನ್ ಗಾರ್ಡನ್ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

‘ಶಾಂತಿನಗರದಲ್ಲಿ ರಾಬಿನ್ ನೆಲೆಸಿದ್ದ. ಸುಧಾಮ ನಗರದಲ್ಲಿ ನೆಲೆಸಿದ್ದ ಸುಂದರ್ ಊರ್ವಶಿ ಚಿತ್ರಮಂದಿರ ಬಳಿಯ ಉಷಾ ಪವರ್ ಬ್ಯಾಟರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಸಿಕೆಸಿ ಗಾರ್ಡನ್‌ನಲ್ಲಿ ನೀರಜ್ ನೆಲೆಸಿದ್ದ. ಮೂವರೂ ಸೇರಿಕೊಂಡು ಹಣ ಸಾಗಿಸುತ್ತಿದ್ದರು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ನಿರ್ಮಲಾ ಆಂಗ್ಲ ಮಾಧ್ಯಮ ಶಾಲೆಯ ಬಳಿ ಮೂವರು ಹಣದೊಂದಿಗೆ ಕಾಯುತ್ತಿದ್ದರು. ಯಾರಿಗೂ ಅನುಮಾನ ಬಾರದಂತೆ ಹಣವನ್ನು ಬ್ಯಾಗ್ ಒಂದರಲ್ಲಿ ಇಟ್ಟುಕೊಂಡಿದ್ದರು. ಹಣ, ಮೂರು ಮೊಬೈಲ್ ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ

ಬೆಂಗಳೂರು: ಕೆ.ಆರ್. ಪುರದ ‘ಇಂಡಿಯನ್ ಐಎಎಸ್ ಮತ್ತು ಕೆಎಎಸ್ ಕೋಚಿಂಗ್ ಅಕಾಡೆಮಿ’ ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ, ಪಿಡಿಒ, ಗ್ರೂಪ್ ಸಿ, ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಬ್ಯಾಂಕಿಂಗ್ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡುತ್ತಿದೆ.

ಸೆ.10ರಿಂದ ತರಗತಿಗಳು ಆರಂಭವಾಗುತ್ತವೆ. 4 ತಿಂಗಳಿನಿಂದ 1 ವರ್ಷದವರೆಗೆ ತರಬೇತಿ ನೀಡಲಾಗುತ್ತದೆ. ಆಸಕ್ತರು ಸೆ.6ರಿಂದಲೇ ಪ್ರವೇಶ ಪಡೆಯಹುದಾಗಿದೆ. ಅಕಾಡೆಮಿಯಲ್ಲಿ ಗ್ರಂಥಾಲಯ ಸೌಲಭ್ಯ, ಪ್ರತಿ ವಾರ ಕಿರು-ಪರೀಕ್ಷೆಗಳ ಸರಣಿ ಇರುತ್ತದೆ ಎಂದು ಅಕಾಡೆಮಿ ನಿರ್ದೇಶಕ ಭಾಸ್ಕರ್ ರೆಡ್ಡಿ ಮಾಹಿತಿ ನೀಡಿದ್ದಾರೆ.

ನೋಂದಣಿ ಮತ್ತು ಮಾಹಿತಿಗೆ: 9632516386, 9902829811

ಅಶೋಕೆಯಲ್ಲಿ ಮಾಹಿತಿ ನೀಡಿದ ರಾಘವೇಶ್ವರ ಭಾರತಿ ಸ್ವಾಮೀಜಿ

ಶೀಘ್ರವೇ ‘ಪರಂಪರಾ ವಿ.ವಿ’ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಕಾರವಾರ: ‘ಗೋಕರ್ಣದ ಅಶೋಕೆಯಲ್ಲಿರುವ ವಿಷ್ಣುಗುಪ್ತ ವಿಶ್ವವಿದ್ಯಾಪೀಠದಲ್ಲಿ, ಸದ್ಯದಲ್ಲೇ ದೇಶದ ಪ್ರಥಮ ಪರಂಪರಾ ವಿಶ್ವವಿದ್ಯಾಲಯ ಸ್ಥಾಪನೆಗೆ ಯೋಜಿಸಲಾಗಿದೆ. ವಿದ್ಯಾಪೀಠದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಪರಂಪರಾ ಗುರುಕುಲ ಆರಂಭಿಸಲಾಗುವುದು’ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ಹೇಳಿದರು.



ಅಶೋಕೆಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಭಾರತದ ಭವಿಷ್ಯದ ಶೈಕ್ಷಣಿಕ ಕೇಂದ್ರವಾಗಿ ವಿಷ್ಣುಗುಪ್ತ ವಿಶ್ವವಿದ್ಯಾಪೀಠವನ್ನು ಮಠವು ಅಭಿವೃದ್ಧಿ ಪಡಿಸುತ್ತಿದೆ. ಪರಂಪರಾ ಗುರುಕುಲವು ಸಣ್ಣ ಪ್ರಮಾಣದಲ್ಲಿ ಈಗಾಗಲೇ ಕಾರ್ಯಾರಂಭ ಮಾಡಿದೆ. ಮುಂದಿನ ವರ್ಷದಿಂದ ಇದು ಬೃಹತ್ ಸ್ವರೂಪ ಪಡೆಯಲಿದೆ. ಆ ಬಳಿಕ ಇದೇ ಆಧಾರದಲ್ಲಿ ಪರಂಪರಾ ವಿಶ್ವವಿದ್ಯಾಲಯ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಉಳಿದ ಪ್ರಕ್ರಿಯೆಗಳು ಸರ್ಕಾರದ ಹಂತದಲ್ಲಿವೆ’ ಎಂದು ಮಾಹಿತಿ ನೀಡಿದರು.

‘ವಿದ್ಯಾಪೀಠದಲ್ಲಿ ಕಾರ್ಯಾರಂಭ ಮಾಡಿರುವ ಗುರುಕುಲಗಳು ಎರಡು ವರ್ಷಗಳಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಪರಂಪರಾ ಗುರುಕುಲದಲ್ಲಿ ವಿದ್ಯಾರ್ಥಿಗಳು ಆರು ವರ್ಷಗಳಲ್ಲಿ, 18 ಭಾರತೀಯ ವಿದ್ಯೆಗಳ ಪೂರ್ವಶಿಕ್ಷಣ ಪಡೆಯಲಿದ್ದಾರೆ. ಪರಂಪರಾ ವಿಶ್ವವಿದ್ಯಾಲಯದಲ್ಲಿ ಇವುಗಳ ಉನ್ನತ ಅಧ್ಯಯನಕ್ಕೆ ಅವಕಾಶ ಇರುತ್ತದೆ. ಪಠ್ಯಕ್ರಮ ಸೇರಿದಂತೆ ಸಮಗ್ರ ರೂಪರೇಷೆಗಳನ್ನು ಅಭಿವೃದ್ಧಿಪಡಿಸಿ ಕೇಂದ್ರ ಸರ್ಕಾರಕ್ಕೆ ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ’ ಎಂದು ತಿಳಿಸಿದರು.

‘ವಿಶ್ವವಿದ್ಯಾಪೀಠವು 15 ವರ್ಷಗಳ ಯೋಜನೆಯಾಗಿದೆ. ಇದು ಪೂರ್ಣವಾಗಿ ಕಾರ್ಯಗತವಾದಾಗ ಭಾರತೀಯ ಪದ್ಧತಿಯ ಸಮಗ್ರ ಶಿಕ್ಷಣವನ್ನು 25 ಸಾವಿರ ವಿದ್ಯಾರ್ಥಿಗಳು ಕಲಿಯಲು ಅವಕಾಶ ಸಿಗಲಿದೆ. ಈಗಾಗಲೇ ₹ 150 ಕೋಟಿ ವೆಚ್ಚದಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ’ ಎಂದು ಹೇಳಿದರು.

ಮಾಧ್ಯಮ ವಿಭಾಗದ ಸಂಯೋಜಕ ಉದಯಶಂಕರ ಭಟ್ ಮಿತ್ತೂರು, ಮಹಾಮಂಡಲ ಸಂಘಟನಾ ಕಾರ್ಯದರ್ಶಿ ಅರವಿಂದ ದರ್ಬೆ ಇದ್ದರು.

ಸೀಮೋಲ್ಲಂಘನ 10ರಂದು

ರಾಘವೇಶ್ವರ ಭಾರತೀ ಸ್ವಾಮೀಜಿ ಅವರ ಗುರುಕುಲ ಚಾತುರ್ಮಾಸ್ಯವು ಸೆ.10ರಂದು ಸಂಪನ್ನಗೊಳ್ಳಲಿದೆ. ಗಂಗಾವಳಿ ನದಿಯನ್ನು ದಾಟಿ ಮಲ್ಲಿಕಾರ್ಜುನ ದೇವರ ದರ್ಶನ ಪಡೆದು ಸೀಮೋಲ್ಲಂಘನೆ ಕೈಗೊಳ್ಳಲಿದ್ದಾರೆ. ಅದರೊಂದಿಗೆ ಚಾತುರ್ಮಾಸ್ಯ ವ್ರತ ಮುಕ್ತಾಯವಾಗಲಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಚಾತುರ್ಮಾಸ್ಯ ಪ್ರಶಸ್ತಿ: ಪ್ರತಿ ಚಾತುರ್ಮಾಸ್ಯ ಸಂಪನ್ನಗೊಳ್ಳುವ ದಿನ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಶಿಷ್ಯ ಭಕ್ತರಿಗೆ ‘ಚಾತುರ್ಮಾಸ್ಯ ಪ್ರಶಸ್ತಿ’ ಪ್ರದಾನ ಮಾಡಲಾಗುತ್ತಿದೆ. ಈ ಬಾರಿಯ ಪ್ರಶಸ್ತಿಯನ್ನು ನಿವೃತ್ತ ಪೊಲೀಸ್ ಅಧಿಕಾರಿ, ಕುಮಟಾ ತಾಲ್ಲೂಕಿನ ಹೆಗಡೆ ನಿವಾಸಿ ಕೃಷ್ಣ ಗಣೇಶ ಭಟ್ ಭಾಜನರಾಗಿದ್ದಾರೆ.

ಮುಳುಗಡೆಗಿಲ್ಲ ಕೊನೆಗಾಲ

ಅಬ್ಬಯ್ಯರೆಡ್ಡಿ ಲೇಔಟ್: 20 ವರ್ಷಗಳಿಂದ ನೆಲೆಸಿರುವ ವಲಸೆ ಕಾರ್ಮಿಕರ ಅಳಲು

• ವಿಜಯಕುಮಾರ್ ಎಸ್.ಕೆ.

ನರಸಮ್ಮ

ಬೆಂಗಳೂರು: 'ಮಳೆ ಬಂದಾಗಲೆಲ್ಲಾ ತುಂಬುವ ಗುಡಿಸಿಲು, ಇಡೀ ರಾತ್ರಿ ನಿದ್ರೆಯಿಲ್ಲ, ವಾರದಿಂದ ಕೆಲಸವಿಲ್ಲ, ಊಟಕ್ಕೂ ಗತಿ ಇಲ್ಲ...'
ಇದು ಕಗ್ಗದಾಸನಪುರದ ಅಬ್ಬಯ್ಯ-ರೆಡ್ಡಿ ಲೇಔಟ್‌ನಲ್ಲಿ ನೆಲೆಸಿರುವ ವಲಸೆ ಕಾರ್ಮಿಕರ ಅಳಲು.

ದೊಡ್ಡನೆಕ್ಕುಂದಿ ಕೆರೆಗೆ ಹೊಂದಿಕೊಂಡಂತೆ ಇರುವ ಈ ಬಡಾವಣೆಯ ತುದಿಯಲ್ಲಿ ವಲಸೆ ಕಾರ್ಮಿಕರ ಜೋಪಡಿಗಳಿವೆ. 20 ವರ್ಷಗಳಿಂದ ಕಾರ್ಮಿಕರ ಗುಂಪು ಇಲ್ಲಿ ನೆಲೆಸಿದ್ದು, ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿದೆ. ಈ ಕಾರ್ಮಿಕರ ಗುಡಿಸಲುಗಳು ಮಳೆ ಬಂದಾಗಲೇ ನೀರಿನಲ್ಲಿ ಮುಳುಗೇಳುತ್ತಿವೆ. ಈ ವರ್ಷದ ಮಳೆಯಂತೂ ಈ ಕಾರ್ಮಿಕರನ್ನು ರೋಸಿಹೋಗುವಂತೆ ಮಾಡಿದೆ.

ಸುತ್ತಲೂ ತಲೆ ಎತ್ತಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಅಂಚಿನಲ್ಲಿ ಈ ಗುಡಿಸಿಲುಗಳಿದ್ದು, ಸಂಜೆಯಾದರೆ ಅಬ್ಬರಿಸುವ ಮಳೆಯ ನೀರು ಈ ಗುಡಿಸಿಲುಗಳನ್ನು ದಾಟಿ ಕೆರೆ ಸೇರಿಕೊಳ್ಳುತ್ತಿದೆ. ನೀರು ಬಂದ ಕೂಡಲೇ ಮಕ್ಕಳೊಂದಿಗೆ ಓಡಿ ಪಕ್ಕದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಕ್ಕೆ ಕಾರ್ಮಿಕರು ಸೇರಿಕೊಳ್ಳುತ್ತಾರೆ. ಮಕ್ಕಳೊಂದಿಗೆ ಇಡೀ ರಾತ್ರಿ ಕುಳಿತೇ ಕಾಲ ಕಳೆಯುತ್ತಿದ್ದಾರೆ.

'ನೀರಿನಲ್ಲಿ ತೊಯ್ದಿರುವ ದಿನಸಿ, ಬಟ್ಟೆ ಮತ್ತಿತರ ವಸ್ತುಗಳನ್ನು ಬೆಳಿಗ್ಗೆ ಒಣಗಿಸುತ್ತೇವೆ. ರಾತ್ರಿಯಾದರೆ ಮತ್ತೆ ಅದೇ ಸ್ಥಿತಿಗೆ ಮರಳುತ್ತಿದೆ. ಜೋರು ಮಳೆ ಬಂದರೆ 20 ವರ್ಷದಿಂದಲೂ ಇದೇ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದೇವೆ. ಸುರಕ್ಷಿತ ಪ್ರದೇಶಕ್ಕೆ ತೆರಳಬೇಕೆಂದರೆ ಎಲ್ಲಿಯೂ ಜಾಗವಿಲ್ಲ. ಬಿಟ್ಟು ಹೋದರೆ ಈ ಜಾಗವೂ ಮತ್ತೆ ಸಿಗುವ ಖಾತ್ರಿ ಇಲ್ಲ' ಎಂದು ಕಾರ್ಮಿಕರು ಬೇಸರ ವ್ಯಕ್ತಪಡಿಸಿದರು.

'ತಂದಿಟ್ಟಿದ್ದ ಅಕ್ಕಿ ನೀರುಪಾಲಾಗಿದೆ, ಹೊತ್ತಿನ ಊಟಕ್ಕೂ ಪರದಾಡುತ್ತಿದ್ದೇವೆ. ಸಮಸ್ಯೆಯನ್ನು ಯಾರ ಬಳಿ ಹೇಳಿಕೊಳ್ಳುವುದೋ ಗೊತ್ತಿಲ್ಲ. ಕೇಳಿಸಿಕೊಳ್ಳುವ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ಇಲ್ಲ. ಚುನಾವಣೆ ಸಂದರ್ಭದಲ್ಲಿ ಭರವಸೆ ನೀಡಿ ಹೋಗುವ ಜನಪ್ರತಿನಿಧಿಗಳು ಮತ್ತೆ ಈ ಕಡೆಗೆ ತಿರುಗಿ ನೋಡುವುದಿಲ್ಲ. ಬಡವರಾಗಿ ಹುಟ್ಟಿದ ತಪ್ಪಿಗೆ ಈ ಕಷ್ಟ ಅನುಭವಿಸುತ್ತಿದ್ದೇವೆ' ಎಂದು ಕಾರ್ಮಿಕ ಮಹಿಳೆ ನರಸಮ್ಮ ಅಳಲು ತೋಡಿಕೊಂಡರು.

ಮಳೆ ಬಂದಾಗಲೆಲ್ಲಾ ಮುಳುಗುವ ದೊಡ್ಡನೆಕ್ಕುಂದಿ ಕೆರೆಯ ಅಂಚಿನಲ್ಲಿರುವ ವಲಸೆ ಕಾರ್ಮಿಕರ ಗುಡಿಸಿಲುಗಳು
–ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

ಗುಳೆ ಬಂದವರ **ಗೋಳು**

ಪರಿಹಾರ ಶಿಬಿರ ತೆರೆಯಲು ಒತ್ತಾಯ

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಬಿಬಿಎಂಪಿ ಕೂಡಲೇ ಪರಿಹಾರ ಶಿಬಿರಗಳನ್ನು ತೆರೆಯಬೇಕು ಎಂದು ಸಿಪಿಐ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಎಂ.ಸತ್ಯಾನಂದ ಆಗ್ರಹಿಸಿದ್ದಾರೆ.

ಗುಡಿಸಲುಗಳಲ್ಲಿ ವಾಸಿಸುತ್ತಿರುವ ಕೂಲಿ ಕಾರ್ಮಿಕರಿಗೆ ವಸತಿ ಮತ್ತು ಆಹಾರ ವ್ಯವಸ್ಥೆ ಮಾಡಬೇಕು. ನೈರ್ಮಲ್ಯ ಸೌಲಭ್ಯಗಳನ್ನು ನೀಡಬೇಕು, ಕೂಡಲೇ ಆರೋಗ್ಯ ಶಿಬಿರಗಳನ್ನು ನಡೆಸಬೇಕು. ಬೀದಿ ಬದಿಯ ಮತ್ತು ಸಣ್ಣ ವ್ಯಾಪಾರಿಗಳಿಗೆ ಬಿಬಿಎಂಪಿಯಿಂದ ಜೀವನಾಧಾರ ಭತ್ಯೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಎಲ್ಲ ನಿಯಮಗಳನ್ನೂ ಉಪೇಕ್ಷಿಸಿ ಅನಿಯಂತ್ರಿತವಾಗಿ ಬೆಳೆಯುತ್ತಿರುವ ರಿಯಲ್ ಎಸ್ಟೇಟ್ ಕುರಿತು ಬಿಬಿಎಂಪಿ ಮತ್ತು ರಾಜ್ಯ ಸರ್ಕಾರ ತಾಂತ್ರಿಕ ಶ್ವೇತಪತ್ರವನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಮಳೆ ನೀರಿನಲ್ಲಿ ತೊಯ್ದಿದ್ದ ದಿನಸಿ ಪದಾರ್ಥಗಳನ್ನು ಒಣಗಿಸುತ್ತಿರುವ ಕಾರ್ಮಿಕ

ವಲಸೆ ಕಾರ್ಮಿಕರನ್ನು ಕಾಡುತ್ತಿರುವ ಚಳಿಜ್ವರ

ತೂಬರಹಳ್ಳಿ ಮತ್ತು ಮುನ್ನೇಕೊಳಲು ಬಳಿ ಇರುವ ವಲಸೆ ಕಾರ್ಮಿಕರ ಜೋಪಡಿಗಳಿಗೆ ನುಗ್ಗಿದ್ದ ನೀರಿನ ಪ್ರಮಾಣ ಇನ್ನೂ ಕಡಿಮೆಯಾಗಿಲ್ಲ. ಕೆಲವು ಜೋಪಡಿಗಳಲ್ಲಿ ನೀರು ಇಳಿದಿದ್ದು, ಬಹುತೇಕ ಜೋಪಡಿಗಳು ಇನ್ನೂ ನೀರಿನಲ್ಲೇ ಇವೆ.

ಪಿ.ಮುನಿರಾಜು

'ಮೂರ್ನಾಲ್ಕು ದಿನಗಳಿಂದ ನೀರಿನಲ್ಲೇ ಜೀವನ ನಡೆಸುತ್ತಿರುವ ಕಾರ್ಮಿಕರಿಗೆ ಈಗ ರೋಗಭೀತಿ ಕಾಡುತ್ತಿದೆ. ಮಕ್ಕಳು ಮತ್ತು ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಚಳಿಜ್ವರ ಕಾಣಿಸಿಕೊಳ್ಳುತ್ತಿದೆ' ಎಂದು ಈ ಕಾರ್ಮಿಕರ ಪರ ಹೋರಾಟ ನಡೆಸುತ್ತಿರುವ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಪಿ.ಮುನಿರಾಜು ಹೇಳಿದರು.

'ಬಿಬಿಎಂಪಿಯಿಂದ ಮೂರು ಹೊತ್ತಿನ ಊಟದ ವ್ಯವಸ್ಥೆ ಆಗಿದೆ. ಆದರೆ, ಸಾಂಕ್ರಾಮಿಕ ರೋಗದ ಭೀತಿಯಲ್ಲಿರುವ ಕಾರ್ಮಿಕರ ಆರೋಗ್ಯ ತಪಾಸಣೆಗೆ ವ್ಯವಸ್ಥೆ ಮಾಡಬೇಕಿದೆ. ಇಲ್ಲದಿದ್ದರೆ ಹೆಚ್ಚಿನ ತೊಂದರೆಯಾಗುವ ಸಾಧ್ಯತೆ ಇದೆ' ಎಂದರು.

ಕಡಿಮೆಯಾದ ಮಳೆ, ತಗ್ಗಿದ ನೀರು

ಸರ್ಜಾಪುರ ರಸ್ತೆಯ ಸನ್ನಿ ಬ್ರೂಕ್ಸ್ ಬಡಾವಣೆಯಲ್ಲಿ ಅಗ್ನಿಶಾಮಕ ಸಿಬ್ಬಂದಿ ನೀರು ಹೊರಹಾಕಲೆತ್ನಿಸುತ್ತಿರುವ ದೃಶ್ಯ ಬುಧವಾರ ಕಂಡುಬಂತು

ಸರ್ಜಾಪುರ ರಸ್ತೆಯ ಬಡಾವಣೆಯಲ್ಲಿ ರಸ್ತೆಯಲ್ಲಿ ಹರಿಯುತ್ತಿದ್ದ ಮಳೆ ನೀರಿನ ಪ್ರಮಾಣ ತಗ್ಗಿದೆ



ಬೆಳ್ಳಂದೂರು–ಸರ್ಜಾಪುರ ಹೊರ ವರ್ತುಲ ರಸ್ತೆಯ 'ಇಕೋ ಸ್ಪೇಸ್' ಮುಂಭಾಗ ರಸ್ತೆಯಲ್ಲಿ ಹರಿಯುತ್ತಿದ್ದ ಮಳೆ ನೀರಿನ ಪ್ರಮಾಣ ಬುಧವಾರ ತಗ್ಗಿತ್ತು

ಬೆಂಗಳೂರಿನಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಜಲಾವೃತವಾಗಿ ಟ್ರ್ಯಾಕ್ಟರ್‌ನಲ್ಲಿ ಸಂಚರಿಸಬೇಕಾದ ಸ್ಥಿತಿಯಲ್ಲಿದ್ದ ಯಮಲೂರು ರಸ್ತೆ ಬುಧವಾರ ಸಂಚಾರಕ್ಕೆ ಅನುವಾಗಿತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ರಾತ್ರಿಯಿಂದ ಮಳೆಯ ಅಬ್ಬರ ಕಡಿಮೆಯಾಗಿದ್ದು, ಪೂರ್ವಭಾಗದಲ್ಲಿ ಜಲಾವೃತಗೊಂಡಿದ್ದ ರಸ್ತೆಗಳಲ್ಲಿ ಸಂಚಾರ ಸಾಧ್ಯವಾಗುತ್ತಿದೆ. ಬಡಾವಣೆಗಳಲ್ಲಿ ನುಗ್ಗಿರುವ ನೀರನ್ನು ಹೊರಹಾಕಲು ಬಿಬಿಎಂಪಿ, ಅಗ್ನಿಶಾಮಕದಳ ಹಾಗೂ ವಿಪತ್ತು ನಿರ್ವಹಣೆ ದಳದ ಸಿಬ್ಬಂದಿ ಪ್ರಯಾಸಪಡುತ್ತಿದ್ದಾರೆ.

ಹಾಲನಾಯಕನಹಳ್ಳಿ, ಯಮಲೂರು, ದೊಡ್ಡನೆಕ್ಕುಂದಿ, ಸವಳು, ನಲ್ಲೂರಹಳ್ಳಿ ಕೆರೆಗಳು ಸೇರಿ ಮಹದೇವಪುರ ವಲಯದ ಕೆರೆಗಳ ಕೋಡಿ ಪ್ರಮಾಣ ಕಡಿಮೆಯಾಗಿದೆ. ಹೀಗಾಗಿ ಮಾರತ್ ಹಳ್ಳಿ, ಬೆಳ್ಳಂದೂರು, ಯಮಲೂರು, ಸರ್ಜಾಪುರ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಆವರಿಸಿ-ಕೊಂಡಿದ್ದ ನೀರು ಕಡಿಮೆಯಾಗುತ್ತಿದೆ. ಕೆಲವು ಕಡೆ ರಾಜಕಾಲುವೆಯನ್ನು ತೆರವು ಮಾಡಿದ್ದರಿಂದ ಬೆಳ್ಳಂದೂರು–ಸರ್ಜಾಪುರ ಮುಖ್ಯರಸ್ತೆ, ಹೊರ ವರ್ತುಲ ರಸ್ತೆಯಲ್ಲಿ ತುಂಬಿಕೊಂಡಿದ್ದ ನೀರು ಖಾಲಿಯಾಗಿದೆ.

ಹೊರವರ್ತುಲ ರಸ್ತೆಯಲ್ಲಿ ಪೂರ್ಣ ನೀರು ಖಾಲಿಯಾಗಿಲ್ಲದಿದ್ದರೂ ಒಂದು ಭಾಗದಲ್ಲಿ ನೀರಿಲ್ಲ. ಮತ್ತೊಂದು ಭಾಗದಲ್ಲಿ ಒಂದರ್ಧ ಅಡಿ ನೀರಿದೆ. ಬುಧವಾರ ರಾತ್ರಿ ಹೆಚ್ಚು ಮಳೆಯಾಗ-ದಿದ್ದರೆ ಗುರುವಾರದ ವೇಳೆಗೆ ರಸ್ತೆಯಲ್ಲಿ ನೀರು ಇರುವುದಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ವರ್ತೂರು ಮುಖ್ಯರಸ್ತೆಯಿಂದ ಯಮಲೂರು ರಸ್ತೆಯಲ್ಲಿ ನೀರೆಲ್ಲ ಖಾಲಿಯಾಗಿದೆ. ದೋಣಿ, ಟ್ರ್ಯಾಕ್ಟರ್‌ಗ-ಳನ್ನು ಬಿಟ್ಟು ಜನರು ದ್ವಿಚಕ್ರ, ಕಾರು, ಆಟೊ ಇತರೆ ವಾಹನಗಳಲ್ಲಿ ಸಂಚರಿ-ಸುತ್ತಿದ್ದಾರೆ. 77 ಡಿಗ್ರಿ ಟೌನ್‌ಸೆಂಟರ್ ಬಳಿ ಒತ್ತುವರಿಯಾಗಿದ್ದ ರಾಜಕಾ-ಲುವೆಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದ್ದರಿಂದ ನೀರು ಆ ಮೂಲಕ ಹರಿದುಹೋಗಿದೆ. ಅಲ್ಲದೆ, ಯಮಲೂರು ಕೆರೆಯಿಂದ ಹೊರಹರಿವು ಕೂಡ ಕಡಿಮೆಯಾಗಿರುವುದರಿಂದ ಈ ರಸ್ತೆ ಪೂರ್ಣವಾಗಿ ನೀರಿನಿಂದ ಮುಕ್ತವಾಗಿದೆ.

ಬೇಸ್‌ಮೆಂಟ್ ನೀರು ಹೊರಕ್ಕೆ: ಮಹದೇವಪುರ ವಲಯದಲ್ಲಿ 106 ಅಪಾರ್ಟ್‌ಮೆಂಟ್‌ಗಳ ಬೇಸ್‌ಮೆಂಟ್‌ಗಳಿಗೆ ನೀರು ನುಗ್ಗಿತ್ತು. ನೀರನ್ನು ಪಂಪ್ ಮಾಡಲಾಗಿದೆ. ಸುಮಾರು 25 ಅಪಾರ್ಟ್‌ಮೆಂಟ್‌ಗಳಲ್ಲಿ ಇನ್ನೂ ನೀರಿದೆ. ಅದನ್ನು ಗುರುವಾರ ಸಂಜೆಯೊಳಗೆ ತೆರವು ಮಾಡಲಾಗುತ್ತದೆ. ರೈನ್‌ಬೊ ಡ್ರೈವ್, ಕಂಟ್ರಿ ಸೈಟ್, ಸನ್ನಿ ಬ್ರೂಕ್ಸ್ ಸೇರಿ ಕೆಲವು ಬಡಾವಣೆಗಳಲ್ಲಿ ನೀರು ಸಾಕಷ್ಟಿದ್ದು, ಕಾಲುವೆಗಳನ್ನು ತೆರವು ಮಾಡಿಕೊಂಡು ಅಲ್ಲಿನ ನೀರು ತೆರವು ಮಾಡಲಾಗುತ್ತದೆ. ಮಳೆ ಬಾರದಿದ್ದರೆ ಒಂದೆರಡು ದಿನಗಳಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ಬರಲಿದೆ ಎಂದು ಬಿಬಿಎಂಪಿ ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

ಪ್ರವಾಹ: ಸಾಂಕ್ರಾಮಿಕ ರೋಗದ ಎಚ್ಚರಿಕೆ

ಬೆಂಗಳೂರು: ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಕೆಲವೆಡೆ ಪ್ರವಾಹ ಸ್ಥಿತಿ ನಿರ್ಮಾಣ ವಾಗಿದೆ. ಆ ಪ್ರದೇಶಗ-ಳಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಯಲು ಕ್ರಮ ವಹಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಮಳೆಯಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಿದೆ. ಪರಿಸ್ಥಿತಿಗೆ ತುರ್ತಾಗಿ ಸ್ಪಂದಿಸಲು, ರೋಗಗಳ ಚಿಕಿತ್ಸೆ ಹಾಗೂ ನಿರ್ವಹಣೆಗೆ ಎಲ್ಲ ಹಂತದ ಆಸ್ಪತ್ರೆಗಳಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಸಾಂಕ್ರಾಮಿಕ ನಿರ್ವಹಣೆಗೆ ಸಮಗ್ರ ಕ್ರಿಯಾ ಯೋಜನೆ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರಬೇಕು. ಮಾನವ ಸಂಪನ್ಮೂಲ, ಪರೀಕ್ಷೆಯ ಕಿಟ್, ಔಷಧಗಳು, ರಾಸಾಯನಿಕಗಳು ಹಾಗೂ ಉಪಕರಣಗಳು ಅಗತ್ಯ ಪ್ರಮಾಣದಲ್ಲಿ ಇಟ್ಟುಕೊಳ್ಳಬೇಕು ಎಂದು ಇಲಾಖೆ ಹೇಳಿದೆ.

ಆರೋಗ್ಯ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ತ್ವರಿತ ಪ್ರತಿಕ್ರಿಯಾ ತಂಡಗಳು ಸನ್ನದ್ಧವಾಗಿರಬೇಕು. ಪ್ರವಾಹ ಪೀಡಿತವಾಗಿರುವಂತಹ ವಾರ್ಡ್‌ಗಳಲ್ಲಿ ಸೂಕ್ಷ್ಮ ಯೋಜನೆಗಳನ್ನು ಸಿದ್ಧಪಡಿಸಿಕೊಂಡು, ತುರ್ತು ಪರಿಸ್ಥಿತಿಗೆ ಶೀಘ್ರ ಸ್ಪಂದಿಸಬೇಕು. ಕೀಟಶಾಸ್ತ್ರೀಯ ಸೂಚ್ಯಂಕಗಳನ್ನು ಮುಂಚಿತವಾಗಿಯೇ ವಿಶ್ಲೇಷಿಸಿ, ಉಲ್ಬಣಿಸಬಹುದಾದ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದೆ.

ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೂ ಸರ್ವೇಕ್ಷಣೆ ಹಾಗೂ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಅಗತ್ಯ ಎಂದು ಇಲಾಖೆ ಹೇಳಿದೆ.

ಪಿಯುಸಿ ಮಧ್ಯ ವಾರ್ಷಿಕ ಪರೀಕ್ಷೆ ಮುಂದಕ್ಕೆ

ಬೆಂಗಳೂರು: ಪ್ರಥಮ ಹಾಗೂ ದ್ವಿತೀಯ ಪಿಯು ಮಧ್ಯವಾರ್ಷಿಕ ಪರೀಕ್ಷೆಗಳನ್ನು ಅಕ್ಟೋಬರ್ ಮೂರನೇ ವಾರದಿಂದ ನಡೆಸಲು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಅನುಮತಿ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಹೇಳಿದೆ.

ಪರೀಕ್ಷೆಗಳು ಈ ತಿಂಗಳ 19ರಿಂದ ಆರಂಭವಾಗ ಬೇಕಿತ್ತು. ಪಠ್ಯಗಳು ಪೂರ್ಣಗೊಳ್ಳದ ಕಾರಣ ಪರೀಕ್ಷೆ ಮುಂದೂಡುವಂತೆ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಕೆ.ಟಿ.ಶ್ರೀಕಂಠೇಗೌಡ, ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ವಿಧಾನ ಪರಿಷತ್ ಸದಸ್ಯರಾದ ಎಸ್.ಎಲ್.ಭೋಜೇಗೌಡ, ಶರವಣ ಅವರು ಬುಧವಾರ ಇಲಾಖೆಯ ನಿರ್ದೇಶಕ ರಾಮಚಂದ್ರನ್ ಅವರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು. ಮನವಿಗೆ ಸ್ಪಂದಿಸಿದ ಇಲಾಖೆ ಈ ಅನುಮತಿ ನೀಡಿದೆ.

ಇಂಧನ ಸಚಿವ ವಿ. ಸುನಿಲ್‌ಕುಮಾರ್‌ಗೆ ಸಿದ್ದರಾಮಯ್ಯ ಸವಾಲು

‘ಎಲ್ಲ ಒಪ್ಪಂದಗಳ ತನಿಖೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರಕ್ಕೆ ಇಂಧನ ಇಲಾಖೆಯ ವ್ಯವಹಾರಗಳ ಕುರಿತು ತನಿಖೆ ಮಾಡುವ ಉದ್ದೇಶ ಇದ್ದರೆ, 2008ರ ಬಳಿಕದ ಖರೀದಿ ಒಪ್ಪಂದಗಳಿಂದ ಹಿಡಿದು ಈವರೆಗಿನ ಎಲ್ಲ ವಹಿವಾಟುಗಳನ್ನು ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯ ನೇತೃತ್ವದಲ್ಲಿ ತನಿಖೆ ನಡೆಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಇಂಧನ ಸಚಿವ ವಿ. ಸುನಿಲ್ ಕುಮಾರ್ ಮಾಡಿದ್ದ ಆರೋಪಕ್ಕೆ ಪ್ರತಿಕ್ರಿಯಿಸಿರುವ ಅವರು, ‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಇಂಧನ ಇಲಾಖೆಯ ಕಾರ್ಯಚಟುವಟಿಕೆ ಬಗ್ಗೆ ಸುಳ್ಳು ಹೇಳುವುದನ್ನು ನಿಲ್ಲಿಸಿ, ಇಲಾಖೆಗೆ ಸಂಬಂಧಿಸಿದಂತೆ 15 ವರ್ಷಗಳಿಂದ ಏನೇನಾಗಿದೆ ಎಂಬುದರ ಕುರಿತು ತಕ್ಷಣ ಶ್ವೇತಪತ್ರ ಹೊರಡಿಸಬೇಕು. ರೈತರ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸುವ ಕೇಂದ್ರದ ವಿದ್ಯುತ್ ಮಸೂದೆಯನ್ನು ತಿರಸ್ಕರಿಸಲು ಮುಂದಿನ ಅಧಿವೇಶನದಲ್ಲಿ ನಿರ್ಣಯ ಮಂಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಇಂಧನ ಇಲಾಖೆಗೆ ಸಂಬಂಧಿಸಿದಂತೆ, ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿನ ಅಂಕಿಅಂಶಗಳ ಸಹಿತ ವಿವರಣೆ ನೀಡಿರುವ ಸಿದ್ದರಾಮಯ್ಯ, ‘ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ವಿದ್ಯುತ್ ಇಲಾಖೆ ಮೇಲೆ ದೊಡ್ಡ ಮೊತ್ತದ ಸಾಲ ಇತ್ತು. ಮುಖ್ಯಮಂತ್ರಿ ಹುದ್ದೆಯ ಜೊತೆಗೆ ಆರ್ಥಿಕ ಇಲಾಖೆಯನ್ನೂ ನಾನು ನೋಡಿಕೊಳ್ಳುತ್ತಿದ್ದೆ. ಈ ಸಾಲವನ್ನು ಹೀಗೇ ಬಿಟ್ಟರೆ, ವಿದ್ಯುತ್ ಇಲಾಖೆ ಮುಳುಗಿ ಹೋಗುತ್ತದೆ ಎಂಬ ಕಾರಣಕ್ಕೆ ಎಸ್ಕಾಂಗಳ ಬಾಕಿ ತೀರಿಸಲು ಸಾಲ ಮಾಡಿದ್ದೆವು’ ಎಂದಿದ್ದಾರೆ.

‘ಯಾವ, ಯಾವ ರಾಜ್ಯಗಳು 2010ರಿಂದ 2022ರವರೆಗೆ ಎಷ್ಟು ರೂಪಾಯಿಗೆ ಸೋಲಾರ್ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಂಡಿವೆ? ಗುಜರಾತ್‌ನ ಬಿಜೆಪಿ ಸರ್ಕಾರ ಮತ್ತು ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಅವಧಿಗಳಲ್ಲಿ ವಿದ್ಯುತ್ ಖರೀದಿ ಒಪ್ಪಂದಗಳ ಕುರಿತು ತೌಲನಿಕವಾದ ದಾಖಲೆಗಳನ್ನು ಒಳಗೊಂಡಂತೆ ಶ್ವೇತಪತ್ರ ಹೊರಡಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಹೆಚ್ಚುವರಿ ವಿದ್ಯುತ್ ಮಾರಾಟ ಮಾಡಿದರೆ ರಾಜ್ಯದ ಜನರ ಮೇಲಿನ ಹೊರೆಯನ್ನು ಯಾವ ರೀತಿ ಇಳಿಸಬಹುದೆಂದು ಸಲಹೆ ನೀಡಿರುವ ಅವರು, ‘ರಾಜ್ಯ ಖರೀದಿಸುತ್ತಿರುವ ವಿದ್ಯುತ್ ಬಿಲ್‌ನ್ನು ದೂರದ ಪ್ರದೇಶದಲ್ಲಿ ಉತ್ಪಾದಿಸುತ್ತಿರುವ ಗ್ರಿಡ್‌ಗಳ ಮೀಟರ್‌ಗಳನ್ನು ಆಧರಿಸಿಯೇ ಪಾವತಿಸಲಾಗುತ್ತಿದೆ. ಇದನ್ನು ನಿಲ್ಲಿಸಿ, ರಾಜ್ಯದ ಒಳಗಿನ ಗ್ರಿಡ್‌ಗಳಿಗೆ ಬಂದ ಮೇಲೆ ಲೆಕ್ಕ ಹಾಕಿ ಬಿಲ್ ಪಾವತಿಸಿದರೆ ಸುಮಾರು ₹ 1,800 ಕೋಟಿವರೆಗೆ ಉಳಿಸಬಹುದೆಂದು ಎರಡು ವರ್ಷಗಳ ಹಿಂದೆಯೇ ಸಲಹೆ ನೀಡಿದ್ದೆ’ ಎಂದಿದ್ದಾರೆ.

ಸೋಮಶೇಖರಗೆ ಸಚಿವ ದರ್ಜೆ ಸ್ಥಾನಮಾನ

ಬೆಂಗಳೂರು: ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ಅವರಿಗೆ ರಾಜ್ಯ ಸಚಿವ ದರ್ಜೆ ಸ್ಥಾನಮಾನವನ್ನು ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ಕೆಲ ದಿನಗಳ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ರಾಜ್ಯ ಸಚಿವ ದರ್ಜೆ ಸ್ಥಾನಮಾನವನ್ನು ನೀಡಿ ಸರ್ಕಾರ ಆದೇಶ ಹೊರಡಿಸಿತ್ತು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಸಂಕ್ಷಿಪ್ತ ಸುದ್ದಿ

ವೃತ್ತಿಪರ ಕೋರ್ಸ್ ಕೌನ್ಸೆಲಿಂಗ್: ಸಭೆ 13ಕ್ಕೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ ಭಾಗವಾಗಿ ಕೆಇಎ ಮತ್ತು ಕಾಮೆಡ್-ಕೆ ಕೌನ್ಸೆಲಿಂಗ್ ಆರಂಭಿಸುವ ಕುರಿತು ನಿರ್ಧರಿಸಲು ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಸಂಘದ (ಕುಪೇಕಾ) ಜತೆ ಇದೇ 13ರಂದು ಮತ್ತೊಂದು ಸುತ್ತಿನ ಸಭೆ ನಡೆಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಕುಪೇಕಾ ಪ್ರತಿನಿಧಿಗಳ ಜತೆ ಬುಧವಾರ ಸಭೆ ನಡೆಸಿದ ಬಳಿಕ ಈ ವಿಷಯ ತಿಳಿಸಿದ ಅವರು, ‘ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ ಕೌನ್ಸೆಲಿಂಗ್ ವೇಳಾಪಟ್ಟಿ ರೂಪಿಸಲಾಗುವುದು’ ಎಂದರು.

ಅಣ್ಣನಿಂದ ತಂಗಿ ಮೇಲೆ ಅತ್ಯಾಚಾರ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ಅಣ್ಣನೇ ತಂಗಿಯ ಮೇಲೆ ಅತ್ಯಾಚಾರ ಮಾಡಿದ್ದು, ಆರೋಪಿ ವಿರುದ್ಧ ಮುಡಬಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ.

‘ನನ್ನ ಪತಿಗೆ ನಾನು ಸೇರಿ ಇಬ್ಬರು ಪತ್ನಿಯರು. ನಾನು ಎರಡನೇಯವಳು. ಪತಿ ನಿಧನ ಬಳಿಕ ನನ್ನ ಮಕ್ಕಳೊಂದಿಗೆ ನಾನು ಬೇರೆಡೆ ವಾಸವಿದ್ದೇನೆ. ಮೊದಲನೇ ಪತ್ನಿಯ ಮಗ ಆಗಾಗ್ಗೆ ಮನೆಗೆ ಬಂದು ನನ್ನ ಮಗಳ ಮೇಲೆ ಅತ್ಯಾಚಾರ ಮಾಡಿ, ಯಾರಿಗೂ ಹೇಳದಂತೆ ಬೆದರಿಸಿದ್ದಾನೆ. ಇದಕ್ಕೆ ಇನ್ನಿಬ್ಬರಿಂದ ಸಹಕಾರವೂ ಇದೆ’ ಎಂದು ಬಾಲಕಿಯ ತಾಯಿ ದೂರು ನೀಡಿದ್ದಾರೆ.

ಎಫ್‌ಡಿಎ ಪ್ರಶ್ನೆಪತ್ರಿಕೆ ಸೋರಿಕೆ: ಕೆಪಿಎಸ್‌ಸಿ 3 ಸಿಬ್ಬಂದಿ ವಜಾ

ಬೆಂಗಳೂರು: ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ನೇಮಕಾತಿಯ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾದ ಆರೋಪ ಸಾಬೀತಾದ ಕಾರಣ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮೂವರು ಸಿಬ್ಬಂದಿಯನ್ನು ಕರ್ತವ್ಯದಿಂದ ವಜಾ ಮಾಡಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ಆದೇಶ ಹೊರಡಿಸಿದ್ದಾರೆ.

ಕೆಪಿಎಸ್‌ಸಿ ಕಚೇರಿಯ ಸಹಾಯಕ ಬಸವರಾಜ ಎಲ್. ಕುಂಬಾರ್, ಶೀಘ್ರ ಲಿಪಿಗಾರರಾದ ಸನಾ, ಕಿರಿಯ ಸಹಾಯಕ ರಾಮಪ್ಪ ಎ.ಹೆರಕಲ್ ವಜಾಗೊಂಡವರು.

‘ಈ ಮೂವರ ಮೇಲಿನ ಆರೋಪ ಸಾಬೀತಾಗಿದೆ ಎಂದು ವಿಚಾರಣಾಧಿಕಾರಿ ವರದಿ ನೀಡಿರುವುದರಿಂದ, ಮುಂದಿನ ದಿನಗಳಲ್ಲಿ ಯಾವುದೇ ಹುದ್ದೆಗೆ ಅನರ್ಹಗೊಳಿಸಿ ಕರ್ತವ್ಯದಿಂದ ವಜಾ ಮಾಡಲಾಗಿದೆ’ ಎಂದು ವಿಕಾಸ್ ಕಿಶೋರ್ ಸುರಳ್ಕರ್ ತಿಳಿಸಿದ್ದಾರೆ.

ಟ್ರ್ಯಾಕ್ಟರ್‌ನಲ್ಲಿದ್ದ ಮಂಟಪಕ್ಕೆ ವಿದ್ಯುತ್ ಸ್ಪರ್ಶ: ಮೂವರ ಸಾವು

ಕೊಟ್ಟಿಗೆಹಾರ (ಚಿಕ್ಕಮಗಳೂರು): ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಿ. ಹೊಸಹಳ್ಳಿಯಲ್ಲಿ ಮಂಗಳವಾರ ರಾತ್ರಿ ಹಳ್ಳದಲ್ಲಿ ಗಣಪತಿ ಮೂರ್ತಿ ವಿಸರ್ಜಿಸಿ ಹಿಂದಿರುಗುವಾಗ ಟ್ರ್ಯಾಕ್ಟರ್‌ನಲ್ಲಿನ ಮಂಟಪಕ್ಕೆ ವಿದ್ಯುತ್ ತಂತಿಗೆ ತಾಗಿ ಮೂವರು ಮೃತಪಟ್ಟು, ಮೂವರು ಅಸ್ವಸ್ಥರಾಗಿದ್ದಾರೆ.

ಹೊಸಹಳ್ಳಿಯ ರಾಜು (47), ರಚನಾ (35), ಪಾರ್ವತಿ (26) ಮೃತಪಟ್ಟವರು. ಟ್ರ್ಯಾಕ್ಟರ್ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಬಣಕಲ್ ಠಾಣೆ ಪೊಲೀಸರು ತಿಳಿಸಿದ್ದಾರೆ. ತೀವ್ರ ಅಸ್ವಸ್ಥರಾಗಿರುವ ಸಂಗೀತಾ, ಪಲ್ಲವಿ ಎಂಬುವವರನ್ನು ಹಾಸನ ಆಸ್ಪತ್ರೆಗೆ ದಾಖಲಿಸಲಾಗಿದೆ. ಗೌರಮ್ಮ ಅವರಿಗೆ ಮೂಡಿಗೆರೆಯ ಎಂಜಿಎಂ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255
ಸಂಖ್ಯೆ: BMC-13013/3/2022 ದಿನಾಂಕ: 07.09.2022

ಇ–ಟೆಂಡರ್ ಅಧಿಸೂಚನೆ

ಭೂದಾಖಲೆಗಳ ಅಧುನೀಕರಣ ಯೋಜನೆ ಸಂಬಂಧ ರಾಜ್ಯದ 31 ಜಿಲ್ಲಾಧಿಕಾರಿಗಳ ಕಛೇರಿ/53 ಉಪ ವಿಭಾಗಾಧಿಕಾರಿಗಳ ಕಛೇರಿ/232 ತಾಲ್ಲೂಕು ಕಛೇರಿಗಳಿಗೆ ಒಟ್ಟು 317 ಸ್ಕ್ಯಾನರ್‌ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: **23.09.2022** ರ **ಸಂಜೆ 5.30 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **https://eproc.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಆಯುಕ್ತರು,
ವಾಸಾಸಂಇ/ವಾಪ್ರ/ಅಡ್ವಿಟ್/2121/2022–23 ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ **ವಿಚಾರಣೆ ಸಂಖ್ಯೆ:** ಬೆವಿಕಂ/ಪ್ರ.ವ್ಯ (ಆ&ಮಾ.ಸಂ)/ಬಿಸಿ–50/2535/1/2022–23, ದಿನಾಂಕ: 07.09.2022ರ ಮೂಲಕ **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿನ ಎಲ್ಲಾ ಅಧಿಕಾರಿ / ನೌಕರರುಗಳಿಗೆ ಒಂದು ವರ್ಷದ ಅವಧಿಗೆ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಗಾಗಿ** ಬಿಡ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಾಸ್ತಾವೇಜು ಸ್ವೀಕೃತಿಗೆ ಕೊನೆಯ ದಿನಾಂಕ: 15.09.2022 16:00 ಗಂಟೆವರೆಗೆ.
ಬಿಡ್ ತೆರೆಯುವಿಕೆ: 17.09.2022 ರಂದು 16:30 ಗಂಟೆಗೆ. ಸಂಬಂಧಿಸಿದ ಹೆಚ್ಚಿನ ಮಾಹಿತಿ/ವಿಚಾರಣೆ ಬಗ್ಗೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪ್ರಕಟಿಸಲಾಗಿದೆ.
- ಇ–ಪಾವತಿ ಸಂಬಂಧಿತ ವಿಚಾರಣೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ಸಂಪರ್ಕಿಸುವುದು.
- ಟೆಂಡರ್ ಸಂಬಂಧಿತ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080 22258788 ಸಂಪರ್ಕಿಸುವುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ), ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
“ಬೆಸ್ಕಾಂ ಮಿತ್ರ” Mobile APP ಡೌನ್‌ಲೋಡ್ ಮಾಡಿಕೊಳ್ಳಿ

(ಕಂದಾಯ ಇಲಾಖೆ)
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಬೆಂಗಳೂರು–560001
ದೂರವಾಣಿ ಸಂ:080–29565353, 2956 6556, 29604556, 29604556
E-mail: splocaima21@ka.gov.in
ಸಂಖ್ಯೆ:SPLOCA/ADM/POL/17/2022 Computer No.842827 ದಿನಾಂಕ : 05/09/2022

ಪ್ರಕಟಣೆ

ವಿಷಯ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ದರಪಟ್ಟಿಯನ್ನು (Inviting Quotation) ಆಹ್ವಾನಿಸುತ್ತಿರುವ ಬಗ್ಗೆ.
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಯವರ ಸೂಚನೆಯ ಮೇರೆಗೆ, ಈ ಕಛೇರಿಯಲ್ಲಿ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳಿಗೆ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಆಸಕ್ತ ಏಜೆನ್ಸಿಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು, ಸದರಿ ದರಪಟ್ಟಿಗಳನ್ನು ದಿನಾಂಕ: **10.09.2022ರ** ಒಳಗಾಗಿ ಈ ಕಛೇರಿಗೆ ಸಲ್ಲಿಸುವುದು.

ಕ್ರ. ಸಂ.	ಹುದ್ದೆಯ ವಿವರ	ಅರ್ಹತೆ	ಸಂಖ್ಯೆ	ಪಾವತಿಸಲಾಗುವ ಒಟ್ಟು ಮೊತ್ತ
1	Chartered Accountant	C. A. with DISA/CISA with 5 year's Experience in NBFC/Co-Operative Societies & Accounting Audit.	1	99,000/-
2	Private Secretary	M. Com with 10 year's Experience in Government Department Offices, Boards, Corporations with Computer Skills (Particularly Tally & Excel)	1	50,000/-

ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
DIPR/CP/RO2114/AAPL/2022-23 ಐ.ಎಂ.ಎ ಹಾಗೂ ಇತರೆ ಕೆಪಿಐಡಿ ಪ್ರಕರಣ, ಬೆಂಗಳೂರು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ,
ಮಂಡ್ಯ. ಫೋನ್ : 08232–2240273,
E-mail : dho.mandya@gmail.com
ಸಂಖ್ಯೆ: ಸರಬ/53/2021–22 ದಿನಾಂಕ:02–09–2022

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕಾಲ್–3)

2022–23 ನೇ ಸಾಲಿಗೆ 06 ಮಂದಿ ಎಬಿಆರ್‌ಕೆ ಕ್ಲೇಮ್ ಎಕ್ಸಿಕ್ಯುಟಿವ್‌ಗಳನ್ನು 07 ತಿಂಗಳಿಗೆ ಕರ್ನಾಟಕ ಪಾರದರ್ಶಕ ಕಾಯ್ದೆಯನ್ವಯ ಹೊರ ಸಂಪನ್ಮೂಲ ಏಜೆನ್ಸಿಯಿಂದ ಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಮತ್ತು ಇವರ ಸಂಭಾವನೆಯನ್ನು ಆರೋಗ್ಯ ರಕ್ಷಾ ಸಮಿತಿಯ ಸಂಪನ್ಮೂಲಗಳಿಂದ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ, (ಕೆ.ಟಿ.ಪಿ.ಪಿ) 1999 ಮತ್ತು 2000ರ ನಿಯಮಗಳು ಪ್ರಕಾರ e-Procurement ಟೆಂಡರ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಟೆಂಡರ್ (ಕಾಲ್–3) ಆಹ್ವಾನಿಸಲಾಗಿದೆ. (1) ಟೆಂಡರ್ ಪ್ರಕಟಣೆ ದಿನಾಂಕ : **02.09.2022.** (2) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ **:03.09.2022 ರಿಂದ ದಿ:12.09.2022 05.00 ಗಂಟೆಯವರೆಗೆ.** (3) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ : **14.09.2022 11.00 ಗಂಟೆ ನಂತರ.** (4) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ : ತಾಂತ್ರಿಕ ಲಕೋಟೆಯನ್ನು ತೆರೆದ ನಂತರ ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು. (5) ಟೆಂಡರ್ ನ ಅಂದಾಜು ಮೊತ್ತ : **ರೂ.11,00,000/– (ಹನ್ನೊಂದು ಲಕ್ಷ ರೂಪಾಯಿಗಳು ಮಾತ್ರ)** (6) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : **ರೂ.27,500.00 (ರೂ. ಇಪ್ಪತ್ತೇಳು ಸಾವಿರದ ಐದು ನೂರು ರೂಪಾಯಿಗಳು ಮಾತ್ರ).** (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಮಂಡ್ಯ ದೂ: 08232 – 224027. ಹೆಚ್ಚಿನ ಮಾಹಿತಿಯನ್ನು Website: www.eproc.karnataka.gov.in ಸದರಿ ವಿವರವಾದ ಮಾಹಿತಿಯನ್ನು ಈ ವೆಬ್‌ಸೈಟ್ ನಲ್ಲಿ ವೀಕ್ಷಿಸಬಹುದಾಗಿದೆ. ಮುಂದಿನ ಯಾವುದೇ ಬದಲಾವಣೆಗಳನ್ನು ಹಾಗೂ ತಿದ್ದುಪಡಿಗಳು ಅವಶ್ಯಕತೆ ಇದ್ದಲ್ಲಿ ಇ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಪ್ರಕಟಿಸಲಾಗುವುದಿಲ್ಲ.

ಸಹಿ/–ಸದಸ್ಯ ಕಾರ್ಯದರ್ಶಿಗಳು ಟೆಂಡರ್ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಮಂಡ್ಯ
ವಾಸಾಸಂಇ/ಸನಿ–ಮಂಡ್ಯ/ಎಂಸಿಎ/321/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕ.ನೀ.ನಿ.ನಿ.
ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ– 585301
Email: eeblis@rediffmail.com
ಕ್ರ.ಸಂ: ಕಾಪಾಅ/ಕನೀನಿನಿ/ಭೀಏನೀಯೋ/ವಿ–ಅಪೂರ/TENDERS/2022-23/400 ದಿನಾಂಕ: 07.09.2022

ಶೇಕಡಾವಾರು ಅಲ್ಪಾವಧಿ ಟೆಂಡರ ಅಧಿಸೂಚನೆ.

(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ).
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಭೀಮಾ ಏತ ನೀರಾವರಿ ಯೋಜನೆ, ವಿಭಾಗ ಅಫಜಲಪೂರ ಇವರಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.
ಟೆಂಡರ್ ನೋಟಿಫಿಕೇಶನ್ ಪ್ರಕಾರ ದಿನಾಂಕ: **03.09.2022 ರಿಂದ ದಿನಾಂಕ : 14.09.2022 ರ ವರೆಗೆ** ಕಾಲಮಿತಿಯಂತೆ ಟೆಂಡರ್‌ಗೆ ಅಹ್ವಾನಿಸಲಾಗಿತ್ತು. ಮೂಲ ನೋಟಿಫಿಕೇಶನ್ ನಲ್ಲಿನ ಕ್ರಮ ಸಂಖ್ಯೆ. 7 ರಲ್ಲಿನ ಕಾಮಗಾರಿಯ ಇ.ಎಮ್.ಡಿ ಮೊತ್ತವು **ರೂ. 178530.00** ಎಂದು ನಮೂದಿಸಲಾಗಿರುತ್ತದೆ ಅದನ್ನು ಕೆ.ಡಬ್ಲ್ಯೂ–4 ನ ನಿಯಮದಂತೆ ತಿದ್ದುಪಡಿ ಮಾಡಿ **ರೂ. 267795.00** ಮಾರ್ಪಾಡಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ–585301
ವಾ.ಸಾ.ಸಂ.ಇ/ಕಲಬುರಗಿ/589/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ,
ಗ್ರಾ. ಕು. ನೀ. ಮತ್ತು ನೈ. ವಿಭಾಗ, ಮಡಿಕೇರಿ
ಸಂ. ಕಾ. ಇಂ./ ಗ್ರಾಕುನೀ & ನೈ.ವಿ./ಎಇ/ಟೆಂಡರ್ ಸಂಖ್ಯೆ:/ಜೆ.ಜೆ.ಎಂ./07/ 2022–23
ದಿನಾಂಕ: 05–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ (E-Proc) ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯ ಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟಂತೆ, ಜೆ.ಜೆ.ಎಂ. ಯೋಜನೆಯಡಿಯಲ್ಲಿ ಸೋಮವಾರಪೇಟೆ ತಾಲ್ಲೂಕಿನ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ವೇದಿಕೆ ಪದ್ಧತಿಯಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1.	ಮಡಿಕೇರಿ ತಾಲ್ಲೂಕಿನ ತಾಳತ್ತಮನೆ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು	80.09
2.	ಮಡಿಕೇರಿ ತಾಲ್ಲೂಕಿನ ದೇವರಕೊಲ್ಲಿ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು.	49.39
3.	ಮಡಿಕೇರಿ ತಾಲ್ಲೂಕಿನ ಜೋಡುಪಾಲ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು	56.82
4.	ಸೋಮವಾರಪೇಟೆ ತಾಲ್ಲೂಕಿನ ನೆಲ್ಲಿಹುದಿಕೇರಿ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು (ಇಂಡೆಂಟ್ ಸಂಖ್ಯೆ: 40286/2ನೇ ಕರೆ)	493.83

1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15.09.2022 ಸಂಜೆ 5.00 ಗಂಟೆವರೆಗೆ
2) ಟೆಂಡರ್ ತೆರೆಯುವ ದಿನಾಂಕ: 16.09.2022 ಸಂಜೆ 5.05 ಗಂಟೆ ನಂತರ
ಸೂಚನೆ: ಇತರೇ ಷರತ್ತು, ಹಾಗೂ ಕಾಮಗಾರಿಗಳ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ. ಕು. ನೀ & ನೈ ವಿಭಾಗ, ಮಡಿಕೇರಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ISO 9001:2015 NVT-QC CERTIFICATE NO. 2790095
ನಂ. 5/6, 5ನೇ ಮಹಡಿ, ಜಲಭವನ, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029, ದೂ: 080–26539004/41106504
ಇ–ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡಿಬಿಓಟಿ ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ.

ಸಂಖ್ಯೆ: KWB/TEC/CE(B)/Nyamathi-WSS/TND/928/2022-23 Dt: 07-09-2022
ಕಾಮಗಾರಿಯ ಹೆಸರು ಮತ್ತು ವಿವರ: DBOT ಮೂಲಕ ನ್ಯಾಮತಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿ ಕುರಿತು
ಕೆಲಸದ ಇಂಡೆಂಟ್ ಸಂಖ್ಯೆ: KUWSDB/2022-23/WS/WORK_INDENT 3214
ಟೆಂಡರ್‌ಗಿಟ್ಟ ಅಂದಾಜು ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ.ಲಕ್ಷಗಳಲ್ಲಿ) : 3110.95
ಭದ್ರತಾ ಠೇವಣಿ ಹಣ (ರೂ.ಲಕ್ಷಗಳಲ್ಲಿ) : 31.11
ಟೆಂಡರ್ ಪ್ರಕ್ರಿಯ ಶುಲ್ಕ (ರೂ.) : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ (ತಿಂಗಳು) : 24 ತಿಂಗಳು.

ಸಂಖ್ಯೆ: KWB/TEC/CE(B)/Nyamathi-UGD/TND/929/2022-23 Dt: 07-09-2022
ಕಾಮಗಾರಿಯ ಹೆಸರು ಮತ್ತು ವಿವರ: DBOT ಮೂಲಕ ನ್ಯಾಮತಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿ ಕುರಿತು.
ಕೆಲಸದ ಇಂಡೆಂಟ್ ಸಂಖ್ಯೆ: KUWSDB/2022-23/WS/WORK_INDENT 3215
ಟೆಂಡರ್‌ಗಿಟ್ಟ ಅಂದಾಜು ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ.ಲಕ್ಷಗಳಲ್ಲಿ) : 2137.44
ಭದ್ರತಾ ಠೇವಣಿ ಹಣ (ರೂ.ಲಕ್ಷಗಳಲ್ಲಿ) : 21.38
ಟೆಂಡರ್ ಪ್ರಕ್ರಿಯ ಶುಲ್ಕ (ರೂ.) : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ (ತಿಂಗಳು) : 24 ತಿಂಗಳು.

ಟೆಂಡರ್ ಕಾರ್ಯ ಸೂಚಿ:–
1) ದಾಖಲೆಗಳ ಲಭ್ಯತೆ: 08–09–2022 ರಂದು 11.00 ಗಂಟೆಯ ನಂತರ. 2) ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: 22–09–2022 ರಂದು 11.00 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆಯ ದಿನಾಂಕ: 22–09–2022 ರಂದು 11.30 ಗಂಟೆಗೆ. 4) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು/ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಸಮಯ: 07–10–2022 ರಂದು 17.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 11–10–2022 ರಂದು 11.00 ಗಂಟೆಯ ನಂತರ. 6) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 17–10–2022 ರಂದು 11.00 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ಬೆಂಗಳೂರು ರವರ ಕಚೇರಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080– 91 80 46010000 / 68948777, ಇ–ಮೇಲ್ ಸಹಾಯ: support@eprochelpdesk.com ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ),
ವಾ.ಸಾ.ಸಂ.ಇ/ವಾಪ್ರ/2109/ಆಕಾರ್/22–23 ಕನನಿಸ ಮತ್ತು ಒಚ ಮಂಡಳಿ, ಬೆಂಗಳೂರು

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ,
ಚಾಮರಾಜಪೇಟೆ ಸರ್ಕಲ್, ದಾವಣಗೆರೆ–577001
ದೂ/ ಫ್ಯಾಕ್ಸ್ : 08192–258784 ಇ–ಮೇಲ್:wchdvg.84@gmail.com
ಸಂ:ಮಮಆ/ಸಾ.ವಿ./17/2022–23 ದಿನಾಂಕ: 06.09.2022

ಸಂಕ್ಷಿಪ್ತ ಪ್ರಕಟಣೆ

ಈ ಆಸ್ಪತ್ರೆಯ ಅಧಿಸೂಚನೆ ಸಂಖ್ಯೆ:ಮಮಆ/ಸಾವಿ/17/2022–23, ದಿನಾಂಕ: 11–07–2022ರನ್ವಯ 6 ಶುಶ್ರೂಷಕರ ಹುದ್ದೆಗಳನ್ನು 1 ವರ್ಷದ ಗುತ್ತಿಗೆ ಅವಧಿಗೆ ನೇಮಕಾತಿ ಸಮಿತಿ ತೀರ್ಮಾನದಂತೆ ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ ತಾತ್ಕಾಲಿಕ ಆಯ್ಕೆ ಪಟ್ಟಿ ಸಿದ್ದಪಡಿಸಿ ಈ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಆಯ್ಕೆ ಪಟ್ಟಿ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ 12–09–2022 ಸಂಜೆ:4:30ರ ಒಳಗಾಗಿ ಲಿಖಿತವಾಗಿ ಮಾನ್ಯ ವೈದ್ಯಕೀಯ ಅಧೀಕ್ಷಕರು, ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ ಇವರಿಗೆ ಸಲ್ಲಿಸಲು ತಿಳಿಯಪಡಿಸಿದೆ.

ವಾಸಾಇ/ದಾವಣಗೆರೆ/439/ಎಂಸಿಎ/2022–23 ಸಹಿ/– ವೈದ್ಯಕೀಯ ಅಧೀಕ್ಷಕರು,
ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ.

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. www.midnglb@rediffmail.com. ದೂರವಾಣಿ : 08472 –220196
ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–2/ಕೆ.ಡಬ್ಲ್ಯೂ–3/2022–23/2445 ದಿನಾಂಕ: 07–09–2022

–: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–3) :–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2022–23ನೇ ಸಾಲಿನ ಅಣೆಕಟ್ಟು & ಪಿಕಪ್ ಯೋಜನೆ ಕಾಮಗಾರಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ರೂ. 52,50,340.84,** 3) ಗುತ್ತಿಗೆದಾರರ ಅರ್ಹತೆ ವಿವರ: 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಇ–ಪ್ರೊಕ್ಯೂರಮೆಂಟನಂತೆ, ಇ.ಎಂ.ಡಿ. ರೂ. 1,05,100.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : **15–09–2022 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **16–09–2022 ಸಾಯಂಕಾಲ 17.30 ಗಂಟೆಯ ವರೆಗೆ,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17–09–2022 ಸಾಯಂಕಾಲ 17.30 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **19–09–2022 ಬೆಳಿಗ್ಗೆ 11.00 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/590/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಆಯುಕ್ತರವರ ಕಾರ್ಯಾಲಯ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ, ಬಸವಕಲ್ಯಾಣ
ದೂರವಾಣಿ– 094837 54065, E-mail : comn.bkdb@gmail.com
ಸಂಖ್ಯೆ: ಬಕಅಮಂ/ಆ/ಸಿಆರ್–06/ಟೆಂಡರ್–01/2022–23 ದಿನಾಂಕ: 06.09.2022

ಟೆಂಡರ್ ಪ್ರಕಟಣೆ. (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಆಯುಕ್ತರು, ಬಸವಕಲ್ಯಾಣ ಅಭಿವೃದ್ಧಿ ಮಂಡಳಿ, ಬಸವಕಲ್ಯಾಣ ರವರು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಕರೆಯಲಾಗಿದೆ. ಗುತ್ತಿಗೆದಾರರು ಟೆಂಡರ್ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳುವುದು ಮತ್ತು ಸಲ್ಲಿಸುವುದು.
INDENT No:RD/2022-23/OW/WORK_INDENT 200, RD/2022-23/OW/WORK_INDENT 201.
ಟೆಂಡರಗಳನ್ನು ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.
1. ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 19.09.2022 ರಂದು 11.00 ಘಂಟೆವರೆಗೆ
2. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 22.09.2022 ಸಂಜೆ 04.30 ಘಂಟೆವರೆಗೆ. 3. ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 23.09.2022 ಸಂಜೆ 05.00 ಘಂಟೆಗೆ. 4. ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 27.09.2022 ಬೆಳಿಗ್ಗೆ 10.30 ಘಂಟೆಗೆ

ಸಹಿ/– ಆಯುಕ್ತರು
ವಾ.ಸಾ.ಸಂ.ಇ/ಬೀದರ/222/ಎಂಸಿ&ಎ/2022–23 ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಬಸವಕಲ್ಯಾಣ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಕೆಳಗೆ ಸೂಚಿಸಿರುವ ಅಲ್ಪಾವಧಿಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 05.09.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ 1ನೇ ದರ್ಜೆ ಮತ್ತು 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಭಾಗವಹಿಸಬಹುದು. ಕ್ರಮ ಸಂಖ್ಯೆ (1)ರಿಂದ (3) ರ ಕಾಮಗಾರಿಗೆ ದಿ: 14.09.2022ರ ಸಂಜೆ 4:00ರ ವರೆಗೆ ಹಾಗೂ ಕ್ರಮ ಸಂಖ್ಯೆ (4) ರ ಕಾಮಗಾರಿಗೆ ದಿ:20.09.2022 ರ ಸಂಜೆ 4:00ರ ವರೆಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.33.89 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.840.99 ಲಕ್ಷಗಳಾಗಿರುತ್ತದೆ ಕನಿಷ್ಠ ಇ.ಎಂ.ಡಿ ರೂ.0.339 ಲಕ್ಷ ಹಾಗು ಗರಿಷ್ಠ ಇ.ಎಂ.ಡಿ ಮೊತ್ತ ರೂ 12.61 ಲಕ್ಷಗಳಾಗಿರುತ್ತದೆ. ಕ್ರಮ ಸಂಖ್ಯೆ (4) ರ ಕಾಮಗಾರಿಗೆ ಪೂರ್ವಭಾವಿ ಸಭೆಯನ್ನು ದಿ:12.09.2022 ರಂದು ಬೆಳಿಗ್ಗೆ 11.30 ರ ಗಂಟೆಗೆ ಈ ಕೆಳಗೆ ಸಹಿ ಮಾಡಿರುವಕಚೇರಿಯಲ್ಲಿ ನಡೆಸಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿರುವವರಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿಯಾವುದೇತಿದ್ದುಪಡಿಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಕೊನೆಯ ದಿನಾಂಕ
1.	50/2017–18	1	ಕರೆ–4	3ನೇ ದರ್ಜೆ & ಮೇಲ್ಪಟ್ಟು	14.09.2022
2.	50/2017–18	1	ಕರೆ–5	3ನೇ ದರ್ಜೆ & ಮೇಲ್ಪಟ್ಟು	14.09.2022
3.	07/2022–23	1, 9, 10	ಕರೆ–2	3ನೇ ದರ್ಜೆ & ಮೇಲ್ಪಟ್ಟು	14.09.2022
4.	06/2022–23	7	ಕರೆ–2	1ನೇ ದರ್ಜೆ	20.09.2022

ಕಾರ್ಯಪಾಲಕ ಇಂಜನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಐರಿಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/2629/2022–23 ದಿನಾಂಕ : 03–09–2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ–ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc.karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ.ಸಂ.	ಕಾಮಗಾರಿಯ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	3054–(ಯೋಜನೇತರ)–ರಾಜ್ಯ ಹೆದ್ದಾರಿಗಳ ನಿರ್ವಹಣೆ :	
1)	KPWD/2022-23/RD/WORK_INDENT156296	85.40
2)	KPWD/2022-23/RD/WORK_INDENT156433	61.21
3)	KPWD/2022-23/RD/WORK_INDENT156337	104.60
4)	KPWD/2022-23/RD/WORK_INDENT156435	66.50
5)	KPWD/2022-23/RD/WORK_INDENT156434	71.50
	3054–(ಯೋಜನೇತರ)– ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ :	
6)	KPWD/2022-23/RD/WORK_INDENT156378	62.00
7)	KPWD/2022-23/RD/WORK_INDENT156429	61.00
8)	KPWD/2022-23/RD/WORK_INDENT156419	62.00
9)	KPWD/2022-23/RD/WORK_INDENT156336	78.00
10)	KPWD/2022-23/RD/WORK_INDENT156432	70.15

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	12–09–2022 ರಂದು 12.00 ಗಂಟೆಯ ವರೆಗೆ
ಆ)	ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	16–09–2022 ರಂದು 16.00 ಗಂಟೆಯ ವರೆಗೆ
ಇ)	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	17–09–2022ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಮಹದೇವಪುರ: ರಾಜಕಾಲುವೆಯಿಂದ ಕಾಲುವೆಗಳಿಗೆ ಹರಿಯದ ಮಳೆನೀರು

ಕೆರೆಯಿಂದ ಕೆರೆ... ಸಂಪರ್ಕಕ್ಕೆ ತಡೆ

ಮಹದೇವಪುರಕ್ಕೆ ಮುಖ್ಯಮಂತ್ರಿ ಭೇಟಿ ಕೊಟ್ಟರೂ ಉಕ್ಕಿದ ನೀರನ್ನು ಪೂರ್ತಿ ಬತ್ತಿಸಲು ಆಗಿಲ್ಲ. ಕೆರೆ ನೀರಿನ ಪಾತ್ರಗಳು, ರಾಜಕಾಲುವೆಗಳಿಂದ ನೀರು ಹರಿದು ಸಾಗಬೇಕಾದ ಹಾದಿಗಳು ಒತ್ತುವರಿಯಾಗಿವೆ, ಮುಚ್ಚಿಹೋಗಿವೆ ಎನ್ನುವುದು 'ನಗರ ನಾಗರಿಕತೆ' ಇದೇ ಹೌದಾ ಎನ್ನುವಂಥ ದೊಡ್ಡ ಪ್ರಶ್ನೆ ಒಡ್ಡುತ್ತಿದೆ. ಒತ್ತುವರಿ ಯಾವ ಪರಿಯಾಗಿದೆ ಎನ್ನುವುದರ ಮೇಲೆ ಬೆಳಕು ಚೆಲ್ಲುವ ಸರಣಿ ಇದು...

ಮಹದೇವಪುರ ವಲಯ

1,146	965	179
ಒಟ್ಟು ರಾಜಕಾಲುವೆ ಒತ್ತುವರಿ	ತೆರವು	ಬಾಕಿ

ಯಾವ ಗ್ರಾಮಗಳಲ್ಲಿ ಒತ್ತುವರಿ?

ಅಮಾನಿ ಬೆಳ್ಳಂದೂರು ಖಾನೆ, ವೈಟ್‌ಫೀಲ್ಡ್, ಬೆಳ್ಳತ್ತೂರು, ಚನ್ನಸಂದ್ರ, ರಾಮಗೊಂಡನಹಳ್ಳಿ, ಕೆಂಪಾಪುರ, ಚಲ್ಲಘಟ್ಟ, ಕಾಡುಗೋಡಿ, ಪಟ್ಟಂದೂರು ಅಗ್ರಹಾರ, ಪಣತ್ತೂರು, ಚಿನ್ನಪ್ಪನಹಳ್ಳಿ, ಜುನ್ನಸಂದ್ರ, ಕೈಕೊಂಡ್ರಹಳ್ಳಿ, ಮುನ್ನೆಕೊಳಾಲು, ಭೋಗನಹಳ್ಳಿ, ಆರ್‌. ನಾರಾಯಣಪುರ, ಗುಂಜೂರು, ವರ್ತೂರು, ಚಿಕ್ಕಬೆಳ್ಳಂದೂರು, ಕಸವನಹಳ್ಳಿ.

• ಆರ್‌. ಮಂಜುನಾಥ್

ಬೆಂಗಳೂರು: ನಗರ ಐದು ದಶಕಗಳ ನಂತರ ಭಾರಿ ಪ್ರಮಾಣದ ಮಳೆ ಕಂಡಿದೆ. ಅತಿಹೆಚ್ಚು ತೇವಾಂಶದ ತಿಂಗಳನ್ನೂ ಕಂಡದ್ದಾಗಿದೆ. ಇವೆಲ್ಲವೂ ಅಭಿವೃದ್ಧಿ ಪಥದಲ್ಲಾಗಿರುವ ಹುಳುಕುಗಳನ್ನು ಬಹಿರಂಗಪಡಿಸಿವೆ. ನಗರದ ಪೂರ್ವಭಾಗ ರಾಜಕಾಲುವೆಗಳ ನೀರಿನಲ್ಲೇ ಮುಳುಗಿಹೋಗಿ ಅಲ್ಲಿನ ಒತ್ತುವರಿಯ ಪರಿಯನ್ನು ಸಾರುತ್ತಿದೆ.

ಮಾಹಿತಿ ತಂತ್ರಜ್ಞಾನದ ಬೃಹತ್ ಕಂಪನಿಗಳ ತಾಣವಾಗಿರುವ ಬಿಬಿಎಂಪಿಯ ಪೂರ್ವ ಹಾಗೂ ಮಹದೇವಪುರ ವಲಯ ಒಂದು ವಾರದಿಂದ ಮಳೆಗೆ ನಲುಗಿಹೋಗಿದೆ. ಇದಕ್ಕೆಲ್ಲ ಕಾರಣ ಇಲ್ಲಿನ ಒತ್ತುವರಿ. ಕೆರೆಯಿಂದ ಕೆರೆಗೆ, ಕಾಲುವೆಯಿಂದ ಕಾಲುವೆಗೆ ಸಂಪರ್ಕ ಕಡಿತವಾಗಿರುವುದರಿಂದ ನೀರೆಲ್ಲ ರಸ್ತೆಗೇ ಹರಿದಿದೆ. ಅಷ್ಟೇ ಅಲ್ಲ, ಬಡಾವಣೆಗಳಿಗೂ ನುಗ್ಗಿ ಜನರನ್ನು ವಸತಿಹೀನರನ್ನಾಗಿಸಿದೆ. ರಾಜಕಾಲುವೆ ಒತ್ತುವರಿ ಈ ಪ್ರದೇಶಗಳಲ್ಲಿ ಮಿತಿಮೀರಿರುವುದು ಈ ಎಲ್ಲ ಸಮಸ್ಯೆಗಳಿಗೆ ಕಾರಣ ಎಂಬುದನ್ನು ನಕ್ಷೆ ಹಾಗೂ ಅಂಕಿ–ಅಂಶಗಳೇ ಬಹಿರಂಗಪಡಿಸಿವೆ.

ಮಹದೇವಪುರ ವಲಯದ ಮಾರತ್‌ಹಳ್ಳಿ, ಸರ್ಜಾಪುರ ರಸ್ತೆ ವ್ಯಾಪ್ತಿಯಲ್ಲಿರುವ ಐಟಿ ಕಂಪನಿ ಆವರಣದಲ್ಲೂ ರಾಜಕಾಲುವೆಗಳು ಒತ್ತುವರಿಯಾಗಿವೆ ಅಥವಾ ಅರ್ಧಕ್ಕಿಂತ ಕಡಿಮೆಯಾಗಿವೆ. ಇದಲ್ಲದೆ, ಬಿಡಿಎ ರಸ್ತೆ ಮಾಡುವಾಗಲೂ ರಾಜಕಾಲುವೆಗಳ ಹರಿವಿಗೆ ತಡೆಯೊಡ್ಡಲಾಗಿದೆ. ಹೊರವರ್ತುಲ ರಸ್ತೆಯಲ್ಲಿ ಮಳೆನೀರು ಒಂದೆಡೆಯಿಂದ ಮತ್ತೊಂದೆಡೆ ಹರಿಯಲು ಹಿಂದೆ ಇದ್ದ ರಾಜಕಾಲುವೆಗಳು ಮಾಯವಾಗಿವೆ ಎಂಬುದು ಸ್ಥಳೀಯ ನಾಗರಿಕರ ಆರೋಪ. ಬಿಬಿಎಂಪಿ ಸಿದ್ಧಪಡಿಸಿರುವ ಒತ್ತುವರಿ ನಕ್ಷೆಯೂ ಅದನ್ನು ಸಾಬೀತುಪಡಿಸುತ್ತದೆ.

ಕೆರೆಗಳ ಹರಿವಿಗೆ ತಡೆ

ಕೋರಮಂಗಲ–ಚೆಲ್ಲಘಟ್ಟ ಕಣಿವೆಯ ಬಹುತೇಕ ಭಾಗವನ್ನು ಹೊಂದಿರುವ ಬೆಳ್ಳಂದೂರು ಕೆರೆಗೆ ಅರಮನೆ ರಸ್ತೆಯಿಂದ ಹಿಡಿದು ಸುತ್ತಮುತ್ತಲಿನ 46 ಕೆರೆಗಳಿಂದ ನೇರ ಅಥವಾ ಪರೋಕ್ಷವಾಗಿ ನೀರು ಹರಿಯುತ್ತದೆ. ಬೆಳ್ಳಂದೂರು ನಂತರ ವರ್ತೂರು ಕೆರೆಗೆ ಹೋಗುತ್ತದೆ. ಇದಲ್ಲದೆ, ವರ್ತೂರಿಗೆ 50 ಕೆರೆಗಳಿಂದ ನೀರು ಹರಿಯುತ್ತದೆ. ಆದರೆ, ಈ ಎರಡು ದೊಡ್ಡ ಕೆರೆಗಳಿಗೆ ರಾಜಕಾಲುವೆಯ ಸಂಪರ್ಕ ಹಲವು ಕಡೆ ಕಡಿದುಹೋಗಿದೆ. ಹೀಗಾಗಿ ಈ ಭಾಗದಲ್ಲಿ ಮಳೆ ನೀರು ಹರಿಯಲು ಸಾಧ್ಯವಾಗದೆ ನೀರು ರಸ್ತೆ, ಬಡಾವಣೆಗಳಿಗೆ ಹರಿಯುತ್ತಿದೆ.

ಸಂಪರ್ಕಜಾಲಕ್ಕೆ ಧಕ್ಕೆ...

'ಐಟಿ ಕಂಪನಿಗಳು ಸೇರಿ ಇಲ್ಲಿ ಬಡಾವಣೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಕೆರೆಗಳ ಸಂಪರ್ಕಜಾಲಕ್ಕೆ ಧಕ್ಕೆ ಉಂಟು ಮಾಡಲಾಗಿದೆ. ಕೆಲವು ಕಡೆ ರಾಜಕಾಲುವೆ ವಿಸ್ತೀರ್ಣ ಕಡಿಮೆಯಾಗಿದ್ದರೆ, ಮತ್ತೆ ಹಲವು ಕಡೆ ಕಾಲುವೆಯನ್ನು ಸಂಪೂರ್ಣ ಮುಚ್ಚಲಾಗಿದೆ. ಹೀಗಾಗಿ ಬೆಳ್ಳಂದೂರು ಭಾಗದಲ್ಲಿ ರಸ್ತೆ, ಬಡಾವಣೆಗಳಲ್ಲಿ ನೀರು ನಿಂತಿದೆ. ಈ ಬಾರಿ ಮಳೆ ಹೆಚ್ಚಾಗಿರುವುದರಿಂದ ಸಂಕಷ್ಟವೂ ದೊಡ್ಡದಾಗಿ ಕಾಣುತ್ತಿದೆ' ಎನ್ನುತ್ತಾರೆ ಬೆಳ್ಳಂದೂರಿನಲ್ಲಿರುವ ಪರಿಸರ ಕಾರ್ಯಕರ್ತ ನಾಗೇಶ್ ಅರಸ್.

ನಾಗೇಶ್ ಅರಸ್

'ಈಗ ಸಮಸ್ಯೆ ಉಂಟಾಗಿರುವ ಬೆಳ್ಳಂದೂರು–ಸರ್ಜಾಪುರ ರಸ್ತೆಯ ಮೂಲಕ ರಾಜಕಾಲುವೆ ಸಾಗಬೇಕು. ಅಲ್ಲಿ ರಾಜಕಾಲುವೆ ಒತ್ತುವರಿಯಾಗಿದೆ. ಹರಳೂರು, ಕಸವನಹಳ್ಳಿ, ಸವಳು ಕೆರೆ ಮೂಲಕ ಬೆಳ್ಳಂದೂರು ಕೆರೆಗೆ ನೀರು ಹರಿಯುತ್ತಿದೆ. ಆದರೆ, ಬಿಬಿಎಂಪಿ ವ್ಯಾಪ್ತಿ ಹೊರಗಿರುವ ಹಾಲನಾಯಕನಹಳ್ಳಿ ಕೆರೆ ತುಂಬಿದರೆ ಜುನ್ನಸಂದ್ರದ ಮೂಲಕ ಸರ್ಜಾಪುರ ಹೊರವರ್ತುಲ ರಸ್ತೆಯ ಮೂಲಕ ಸವಳು ಕೆರೆಗೆ ನೀರು ಹರಿಯಬೇಕು. ಈ ರಾಜಕಾಲುವೆ ಒತ್ತುವರಿಯಾಗಿದೆ. ಹೀಗಾಗಿ ಇಲ್ಲಿ ಸಂಕಷ್ಟ ಎದುರಾಗುತ್ತಿದೆ. ಅಧಿಕಾರಿಗಳು ಹೇಳುವುದಕ್ಕಿಂತ ಅತಿ ಹೆಚ್ಚು ಕಡೆ ಒತ್ತುವರಿಯಾಗಿದೆ. ಎಲ್ಲ ಒತ್ತುವರಿಯನ್ನು ಪ್ರಾಮಾಣಿಕವಾಗಿ ತೆರವು ಮಾಡಿದರಷ್ಟೇ ಸಮಸ್ಯೆ ನಿವಾರಣೆಯಾಗುತ್ತದೆ' ಎಂದರು.

ವಾರ್ಡ್‌ವಾರು ಕುಂದು ಕೊರತೆ ಕೋಶ ಆರಂಭಿಸಿ

ಪಾಲಿಕೆಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿವೃಷ್ಟಿಯಿಂದ ಸಂಕಷ್ಟ ಅನುಭವಿಸುತ್ತಿರುವ ಬೆಂಗಳೂರು ಮಹಾನಗರದ ನಿವಾಸಿಗಳ ಸಮಸ್ಯೆ ನಿವಾರಣೆಗೆ ವಾರ್ಡ್‌ವಾರು ಕುಂದುಕೊರತೆ ಕೋಶವನ್ನು ತಕ್ಷಣವೇ ಸ್ಥಾಪಿಸಿ' ಎಂದು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶಿಸಿದೆ.

'ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ವಿಜಯನ್ ಮೆನನ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಐಟಿ ಕಾರಿಡಾರ್‌ನ ಹಲವು ಭಾಗಗಳು ಸೇರಿದಂತೆ ಆಗ್ನೇಯ ಬೆಂಗಳೂರಿನಲ್ಲಿ ಆ.30 ರಿಂದ ಪದೇ ಪದೇ ಸುರಿಯುತ್ತಿರುವ ಮಳೆ ಮತ್ತು ಇದರಿಂದಾಗಿ ರಸ್ತೆಗಳ ದುಃಸ್ಥಿತಿ ಬಗ್ಗೆ ನ್ಯಾಯಪೀಠದ ಗಮನ ಸೆಳೆದರು. ಚರಂಡಿಗಳಿಂದ ತುಂಬಿ ಹರಿಯುತ್ತಿರುವ ನೀರಿನ ಸಮಸ್ಯೆ ವಿವರಿಸಿದರು.



ಈ ಆಕ್ಷೇಪಣೆಗೆ ಬಿಬಿಎಂಪಿ ಪರ ವಕೀಲರು, 'ನೀರು ನಿಂತಿರುವ ಭಾಗಗಳಲ್ಲಿ ಈಗಾಗಲೇ ಮೋಟರ್‌ಗಳನ್ನು ಅಳವಡಿಸಿ ನೀರು ಖಾಲಿ ಮಾಡಲಾಗುತ್ತಿದೆ. ಬಿಬಿಎಂಪಿ ಅಧಿಕಾರಿಗಳು ಹಗಲು–ರಾತ್ರಿ ಕೆಲಸ ಮಾಡುತ್ತಿದ್ದಾರೆ. ನೆರೆಪೀಡಿತ ಪ್ರದೇಶಗಳಿಂದ ನೀರು ಹರಿಸಲು ವಲಯವಾರು ಮಟ್ಟದಲ್ಲಿ ನಿರಂತರ ಕ್ರಮ ಕೈಗೊಳ್ಳಲಾಗಿದೆ' ಎಂದು ಸಮಜಾಯಿಷಿ ನೀಡಿದರು. ಇದಕ್ಕೆ ನ್ಯಾಯಪೀಠ, 'ವಲಯವಾರು ಮಟ್ಟದಲ್ಲಿ ಸಮಸ್ಯೆ ಆಲಿಸುವುದಕ್ಕಿಂತಲೂ ಪ್ರತಿ ವಾರ್ಡ್‌ನಲ್ಲಿರುವ ವಾರ್ಡ್‌ನಲ್ಲಿ ಕುಂದುಕೊರತೆ ಆಲಿಸುವಂತಾಗಬೇಕು. ನಿವಾಸಿಗಳ ಕುಂದುಕೊರತೆ ನಿಭಾಯಿಸುವಂತೆ ವಾರ್ಡ್ ಎಂಜಿನಿಯರ್‌ಗಳಿಗೆ ಸೂಚನೆ ನೀಡಲು ಸಾಧ್ಯವಿಲ್ಲವೇ' ಎಂದು ಪ್ರಶ್ನಿಸಿತು.

ಈ ಸಲಹೆ ಪಾಲಿಸುವುದಾಗಿ ತಿಳಿಸಿದ ಬಿಬಿಎಂಪಿ ವಕೀಲರು, 'ಅತಿವೃಷ್ಟಿ ಸಂದರ್ಭದಲ್ಲಿ ಕೆರೆಗಳ ಒತ್ತುವರಿ ನಿಯಂತ್ರಿಸಲು ಮತ್ತು ಒತ್ತುವರಿ ತಡೆಯಲು ನಗರದ ಎಲ್ಲಾ ಕೆರೆಗಳ ತೂಬುಗಳಿಗೆ ಗೇಟ್ ಅಳವಡಿಸಲು ಪಾಲಿಕೆಯಿಂದ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ' ಎಂದು ಸ್ಪಷ್ಟಪಡಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಈ ದಿಸೆಯಲ್ಲಿ ಬಿಬಿಎಂಪಿ ಪ್ರಸ್ತಾವನೆಯನ್ನು ಸಿದ್ಧಪಡಿಸಬೇಕು. ಇದಕ್ಕೆ ರಾಜ್ಯ ಸರ್ಕಾರ ಶೀಘ್ರವೇ ಒಪ್ಪಿಗೆ ನೀಡಬೇಕು' ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

ಜಲಾವೃತ ಪ್ರದೇಶ ಪರಿಶೀಲಿಸಿದ ಸಿ.ಎಂ

ಬೆಂಗಳೂರಿನ ಮಹದೇವಪುರದ ಜಲಾವೃತ್ತ ಪ್ರದೇಶಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಡರಾತ್ರಿ ವೀಕ್ಷಿಸಿದರು.

ಬೆಂಗಳೂರು: ಅತಿವೃಷ್ಟಿಯಿಂದ ಸೃಷ್ಟಿಯಾಗಿರುವ ಮಹದೇವಪುರದ ಸಮಸ್ಯೆಗೆ ಅತಿಕ್ರಮಣವೇ ಕಾರಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಳೆ ನೀರು ಆವರಿಸಿದ, ಹಾನಿಯಾದ ಪ್ರದೇಶಗಳಿಗೆ ಮಂಗಳವಾರ ರಾತ್ರಿ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಮಳೆ ನೀರು ನುಗ್ಗಿ, ಅನಾಹುತ ಸೃಷ್ಟಿಸಿದ ಸ್ಥಿತಿಯಲ್ಲೂ ಸ್ಥಳೀಯರ ಸಹಕಾರ ಮನೋಭಾವ ಅಭಿನಂದನೀಯ. ಅಲ್ಲಿನ ಜನರು ಬಹಳಷ್ಟು ಸಹಕಾರ ನೀಡಿದ್ದಾರೆ. ಅದೇ ರೀತಿ ಇಡೀ ಬೆಂಗಳೂರು ಒಂದಾಗಿ ನಿಲ್ಲಬೇಕು. ವಿರೋಧಪಕ್ಷಗಳು ರಾಜಕೀಯ, ಟೀಕೆ ಬಿಟ್ಟು ಕಷ್ಟದಲ್ಲಿರುವ ಜನರಿಗೆ ಸ್ಪಂದಿಸಬೇಕು. ಒಬ್ಬರಿಗೊಬ್ಬರು ಸಹಕಾರ ನೀಡಬೇಕು ಎಂದುದರು.

ಬಿಬಿಎಂಪಿ ಅಧಿಕಾರಿಗಳು ನಾಲ್ಕು ದಿನಗಳಿಂದ ಬಿಡುವಿಲ್ಲದೇ ಕೆಲಸ ಮಾಡುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ, ಅಧಿಕಾರಿಗಳು, ವಲಯ ಆಯುಕ್ತರು ಅತ್ಯಂತ ಕಷ್ಟ ಹಾಗೂ ಪ್ರಾಮಾಣಿಕತೆಯಿಂದ ಜನರಿಗಾಗಿ ಶ್ರಮಿಸುತ್ತಿದ್ದಾರೆ. ಎಷ್ಟೇ ಸಾಮರ್ಥ್ಯದ ಚರಂಡಿ ಇದ್ದರೂ ದೊಡ್ಡ ಪ್ರಮಾಣದ ಮಳೆಗೆ ನೀರು ತುಂಬಿ ಹರಿಯುತ್ತಿದೆ. ಕೆರೆಗಳೂ ತುಂಬಿವೆ. ಹಲವು ಕೆರೆಗಳ ನೀರನ್ನು ಹರಿಸಲಾಗುತ್ತಿದೆ. ಇಂತಹ ಸನ್ನಿವೇಶವನ್ನು ಎಲ್ಲರೂ ಒಗ್ಗಟ್ಟಿನಿಂದ ಎದುರಿಸಬೇಕು ಎಂದು ಕೋರಿದರು.

ಬೆಂಗಳೂರಿನ ಒಂದು ಭಾಗದಲ್ಲಿ ಮಾತ್ರ ಸಮಸ್ಯೆಯಾಗಿದೆ. ಇತರೆ ಭಾಗಗಳ ಜನರು ಆತಂಕ ಪಡುವ ಅಗತ್ಯವಿಲ್ಲ. ಇಂಥ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬಿಬಿಎಂಪಿ ನಿವೃತ್ತ ಎಂಜಿನಿಯರ್‌ಗಳು, ಅನುಭವಿ ಹಿರಿಯರು, ಸಾರ್ವಜನಿಕರು ಸಲಹೆಗಳನ್ನು ನೀಡಬೇಕು. ಸರ್ಕಾರ ಸೂಕ್ತ ಸಲಹೆಗಳನ್ನು ಅನುಷ್ಠಾನಕ್ಕೆ ತರುತ್ತದೆ ಎಂದು ಭರವಸೆ ನೀಡಿದರು.

ನೀರು ಪೂರೈಕೆ ಸಹಜ ಸ್ಥಿತಿಗೆ

ತೊರೆಕಾಡನಹಳ್ಳಿ ನೀರು ಸರಬರಾಜು ಘಟಕದಲ್ಲಿ ನೀರು ನುಗ್ಗಿ ಯಂತ್ರೋಪಕರಣಗಳು ನಿಂತು ಹೋಗಿದ್ದವು. ಬೆಂಗಳೂರಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ವಾಗುವ ಆತಂಕ ದೂರವಾಗಿದೆ. ಹಂತ 1 ಮತ್ತು 2ರ ಪಂಪ್ ಹೌಸ್ ಕೆಲಸ ಪ್ರಾರಂಭಿಸಿವೆ.

ಅಲ್ಪ ಸಮಯದಲ್ಲಿ ನೀರು ಹೊರಹಾಕಿ, ನೀರು ಸರಬರಾಜು ವ್ಯವಸ್ಥೆ ಸರಿಪಡಿಸಿದ ಜಲಮಂಡಳಿ ಅಧ್ಯಕ್ಷರು, ಎಂಜಿನಿಯರ್‌ಗಳು, ನಗರಾಭಿವೃದ್ಧಿ ಕಾರ್ಯದರ್ಶಿ, ಬಿಬಿಎಂಪಿ ಸಿಬ್ಬಂದಿಯನ್ನು ಅಭಿನಂದಿಸಿದರು.

ಬಸ್ ಮುಳುಗಿದರೆ ಚಾಲಕರೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನೀರಿನಲ್ಲಿ ಬಸ್ ಮುಳುಗಿ ಎಂಜಿನ್ ಸೀಜ್ ಆದರೆ ಚಾಲಕರೇ ಹೊಣೆ...

ಇಂತಹದೊಂದು ಸುತ್ತೋಲೆಯನ್ನು ಬಿಎಂಟಿಸಿ ಅಧಿಕಾರಿಗಳು ಹೊರಡಿಸಿದ್ದಾರೆ.

ಘಟಕ–15ರ (ಕೋರಮಂಗಲ) ಹಿರಿಯ ವ್ಯವಸ್ಥಾಪಕರು ಹೊರಡಿಸಿರುವ ಸುತ್ತೋಲೆಯನ್ನು ಡಿಪೊ ಮಾಹಿತಿ ಫಲಕದಲ್ಲಿ ಅಂಟಿಸಲಾಗಿದೆ.

'ಬೆಂಗಳೂರಿನ ಎಲ್ಲೆಡೆ ಮಳೆ ಸುರಿಯುತ್ತಿದ್ದು, ನೀರು ನಿಂತಿರುವ ಕಡೆ ವಾಹನ ಚಾಲನೆ ಮಾಡಬಾರದು. ಒಂದು ವೇಳೆ ಚಾಲನೆ ಮಾಡಿ ಎಂಜಿನ್ ಸೀಜ್ ಆದರೆ ಚಾಲಕರನ್ನೇ ಹೊಣೆ ಮಾಡಲಾಗುವುದು. ಚಾಲನಾ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮವನ್ನೂ ಜರುಗಿಸಲಾಗುವುದು' ಎಂದು ಸುತ್ತೋಲೆಯಲ್ಲಿ ಎಚ್ಚರಿಸಲಾಗಿದೆ.

'ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಹೊರಡಿಸಿರುವ ಸುತ್ತೋಲೆ ಸರಿಯಾಗಿದೆ' ಎಂದು ಸಾರಿಗೆ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
The General public are hereby notified that, our clients have agreed to purchase the Schedule property from its Owners **SMT.DHANALAKSHMI** W/o Sri.M.Venugopal and **SMT.PRABHA. K,** W/o Sri.M.Krishnamurthy residing at 56/1-1, 2nd Cross, 2nd Block, Banashankari 1st Stage, Bengaluru-560050.
Apart from the said Owners, if any person has any manner of claim, right, title, interest or demand of any nature in or over the Schedule property, they are hereby requested to file their objections along with the photocopies of the documents on which they are relying to the proposed sale transaction, with the undersigned within **14 (Fourteen) days** from the date of publication of this notice. Objection/s received thereafter will not be binding on our clients.
SCHEDULE
All that piece and parcel of the agricultural land measuring 3 Acres and 1.04 Gunta of Kharab land bearing Sy.No.24/1, situated at Shetterahalli Village, Kasaba Hobli, Devanahalli Taluk and bounded as follows:
East by : Land in Sy.No.24/3 belonging to Muniraju;
West by : Land bearing Sy.No. 24/2 layout formed by Jayaram;
North by : Savakanahalli Dodda Thimmayya's Land and
South by : Devanahalli-Doddaballapura Road [old NH 207]
Sd/- Ajay Kumar.N
For ISHA LAW CHAMBERS LLP
Advocates & Solicitors
No.101, 4th Floor, Sri Manjunatha Complex, BSK 2nd Stage, Opp : Banashankari BDA Complex, Bengaluru-560070

PUBLIC NOTICE
The public in general is hereby informed that my clients intend to purchase the agricultural land bearing **Sy. No. 137, measuring 310 Acre, including 25 Acre 'A' Kharab**, situated at B.M. Kavale, M.K. Pura Panchayathi, Kengeri Hobli, Bangalore South Taluk, Bangalore District from its present owners **Mr. Hemanand Reddy** son of late C. Mariyappa and **Mr. Shiva Shankar** son of late C. Mariappa.
Any person having any rights, title, claim or interest in the said property, by way of sale, inheritance, possession, succession, mortgage, lien, lease, gift or otherwise howsoever in respect of the same, shall intimate the objection in writing to the undersigned with supporting documents thereof within **Fourteen days** from the date of publication of this notice or else any such claims by anyone shall not be considered and shall be deemed to have been waived and/or abandoned and my clients shall proceed to conclude the negotiations of purchase and no claims shall be entertained thereafter.
Sd/- CHANDAN T.J
Advocate, Mob. 99453 89800
No.1, 3rd Floor, Amar Towers, 1st Cross, 1st Main, Gandhinagar, Bangalore - 560 009

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

JOB OPPORTUNITIES

Teachers/ Professors

WANTED EXPERIENCED Assistant Professors for BCA Course. Qualification-I Class in PG with NET/ SLET/Ph.D. Send resume with all testimonials before 14.09.2022. to The Principal, V.V.N. Degree College, 3, VaniVilas Road, V.V.Puram Bengaluru-04. Email- vvncollege@yahoo.com

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building, Sites, Flats, Converted& Agriculture Lands Call: 7411265189

BANGALOREANS AVAIL Spot Approval on Personal, Business & Mortgage loan from Bank/ NBFC/ Private even for Bad Cibil @ low ROI. Contact: 9071046229. Freelancers, Connectors, Brokers welcomed. High commission paid.

ಕ್ಲಾಸಿಫೈಡ್ಸ್ CONNECT

Entry Free..!
Grand Flea Market in Collaboration with Chittara Presents
ಇಂಡಿಯನ್ ಹಾತ್ ಫೆಸ್ಟಿವಲ್
INDIAN HAAT FESTIVAL
A Shopping Fest
ONAM Shopping Carnival
2nd Sept, Fri to 11th Sept, Sun 2022
Timings: 11 AM - 7 PM
100+ Shopping stalls | Live Performance & More!
Karnataka Chitrakala Parishath
Kumara Krupa Road, Bengaluru-01
The Puppet Show Live
Date : 11th Sept 2022
Timings: 5 pm - 6:30 pm
LED Show Live
Date : 10th Sept 2022
Timings: 5.45 pm - 7 pm
Covid19 Safety Standard are in place | Also, open on Sunday's | Entry Free!
For Details Contact : 6364685716 / 9036658774 | Direct from The Artisans
100+ Shopping Stalls | Live Performance | Much More!



PERSONAL

Lost

LOST
I, Jayalakshmi R/a # 323, 3rd main, Domlur, Blr have lost Sale Deed, Doc No. Identification: PID No. 82-61-1 Old site No. 12 syNo. 58/1 property no. 01. Corporation No.71, House New No.1, 14th Cross, Lakshmipuram formelrly site No. 12, sy.No. 58/1, located at Ulsoor Village, Blr. Measuring 43 ft+ 42 ft/ 2x30ft., E-Road; W-Property old No.16, N-Property old No. 13 & 14; S-Site No.11. If anybody has claim over this Property, by Lease/ Mortgage **Please Contact within 15 days to 9880266604**

LOST
I, Naseema W/o Syed Budden Sab residing at No.790, Varthur (V), Bangalore East Taluk, have lost my original Sale Deed & Gift deed of Doc. No. 4122/1987, 5016/1989, 1712/1992, 2336/1997 of Hosur Sub-Registrar Office, Krishnagiri (Dist).
Finders Please contact:
Contact : 9901003468

Change of Name

I, MUNI RamachandraReddy Mangampalli Residing at I-28, Jambuladinne, Tammadapalli, Banaganapalli Mandal, Kurnool, Andhra Pradesh 518124, have changed my name to K MUNI RAMACHANDRA REDDY vide affidavit dated: 05.09.2022 Sworn before notary: H.Sridhar Rao

I, SHAMEER KHAN, residing at #52, 9th main, 6th cross, Shamanna Garden, Bangalore-26, have changed my name to SHAMEER HANIF KHAN vide affidavit dated 02.09.2022 before Notary K.C. Shashikala, Bangalore.

I, ABDUL Wahid Abdul Jabbar S/o. Abdul Jabbar, Aged about 26 years, Residing at Near Roshan Men's Wear, Old Police Station Road, Muslim Block, Kanakapura Town, Ramanagara District, Have changed my Name from ABDUL WAHID S/o. ABDUL JABBAR to ABDUL WAHID ABDUL JABBAR S/o. ABDUL JABBAR. Vide affidavit dated 02/09/2022. Sworn before advocate & Notary Sri. Ramachandra. B.Sc., LL.B., Kanakapura.

Mrigashira Kolkata
Presents an Exclusive
DESIGNER BOUTIQUE FESTIVAL
Sarees & Kurties from Bengal & Dhakai Sarees from Bangladesh
at SAFINA PLAZA
84/85 infantry road Bangalore-01
Main art Gallery
From 5th to 11th September
Time: 11 am - 9 pm

Book Your Classifieds Ads
Online
Log in to
dhclassifieds.com
DH ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

IN HINDI AT:- PVR CINEMAS {Bangalore} | INOX CINEMAS {Bangalore} | CINEPOLIS CINEMAS {Bangalore} | GOPALAN {Bangalore} | INNOVATIVE MULTIPLEX {Marathahalli} | ROCKLINE MALL {Jalahalli Cross} | KINO CINEMAS {Seegehalli Road} | SWAGATH SHANKARNAG {M. G. Road} | ABHINAY {KG Road} | AKASH {Laggere} | AMRUTH {Bangalore} | ANAND {Tannary Road} | ANJAN {Magadi Road} | BALAJI {Chikalsandra} | BRUNDHA {Hongasandra} | CAUVERY {Sankey Road} | HMT {Jalahalli} | LAKSHMI {Tavarekere} | LAKSHMI {Ramamurthy Nagar} | MANASA {Konankunte} | MUKUNDA {Maruti Seva Nagar} | NAVRANG {Rajaji Nagar} | POORNIMA {Lalbagh} | PRASANNA {Magadi Road} | PRITHVI {Nagavara} | PUSHPANJALI {Sultan Palaya} | RADHAKRISHNA {RT Nagar} | RAVI {Sarjapura} | RENUKA PRASANNA {J P Nagar} | SANDHYA {Madiwala} | SANTOSH {RPC Layout} | SHREE MAHADESHWARA {Bangalore} | VINAYAKA {DJ Halli} | TIRUMALA {Agrha} | URVASHI {Lalbagh} | VAIBHAV {Sanjay Nagar} | SIDDESHWARA {J P Nagar} | VENKATESHWARA {Kona Agrahara} | VINAYAKA {Marathahalli} | VICTORY {Kamakshipalaya} | COORG {Kushallnagar} | SOUNDARYAMAHAL {Dodbelapur} | SRI LEKHA {Chikmangalore} | PRITHVI {Hassan} | MAHAVEER {Mandya} | JAI BHARAT {Tumkur} | DIANA {Udupi} | PVR CINEMAS {Mysore} | INOX CINEMAS {Mysore} | DRC CINEMAS {Mysore} | VISION CINEMAS {Mysore} | BALAJI DELUXE {Mysore} | SANGAM {Mysore} | THIBHADEVI {Mysore} | PVR CINEMAS {Mangalore} | CINEPOLIS CINEMAS {Mangalore} | BHARATH CINEMAS {Mangalore | Manipal | Shivamoga | Kundapura} | BHARATH CINEMAS {Padubidri - Udupi} | LAKSHMI {Shivamoga} | CINE GALAXY {Mangalore} | MOVIETIME {Davanagere} | TRINETRA {Davangere} | NETHRAVATI {Bhadravathi} | SARASWATHI {Hospet} & Other Cinemas.

IN TAMIL AT:- AMRUTH {Lingarajpuram} | VINAYAKA {Mysore Road} | VAINIDHI {Singapur Lay Out } | LAXMI {KGF} & Other Cinemas.

IN KANNADA AT:- POORNIMA {Turuvekere} | VEERBHADRESHWARA {Shivamoga} | VEERBHADRESHWARA {Bhadravathi} | VIJAY LAKSMI {Kadur} | VINAYAKA {Thirtahalli} | MALTESHA {Shikaripura} | SRI SHAILA {Nyamathi} | MARUTHI {Shiralakoppa} | MAHAVEER {Maddur} | MARUTHI {Tumkur} | LAKSHMI {Tiptur} | BRAMARAMBA {Chamarajanagar} | VENKTESHWARA {Chitradurga} | JAI MARUTHI {Sakleshpura} | RAVI {Halgur} | SRI VEERBHADRESHWARA {Ram Pura} | DHANALAXMI {Channarayanapatna} | LAXMI {Pandupura} | BHARATHI {Babu Koppala} | YAJAMANA {Hullahally} | SCVDS {K R Nagar} | SRI VEERBHADRESHWARA {D. M. Kurke} | SRIKANTH {Harihara} | JYOTHI {Mallebennur} | GAYATHRI {Hoovina Hadagali} | SRI GURU {Hassan} | SHREE {Sagar} | BHARATH {Kampli} & Other Cinemas.

IN TELUGU AT:- BHAVANI {Kolar} | NATARAJA {Mulbagilu} | ADARSHA {Chintamani} | KRISHNA {Chickabalapura} | ALANKAR {Pavgada} | PADMA {Challkere} | SRINIVASA {Kadugudi} | RAGHAVENDRA {Bellary} | KRISHNA {Hagaribomanahalli} | BHARATH {Jagalur} | BALA PICTURE PALACE {Hospet} | BALAJI {Siriguppa} | VASAVI {Sandur} | BHARATH {Kampli} | SHOBHA {Bapujinagar} | CHANDRODAYA {Vidhyapeet Circle} & Other Cinemas.
farnaz

ಮಹದೇವಪುರ: ಸಚಿವ ಅಶ್ವತ್ಥನಾರಾಯಣ ಆಶ್ವಾಸನೆ

'ಕಾಲಮಿತಿಯಲ್ಲಿ ಯೋಜನೆ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹದೇವಪುರದಲ್ಲಿ ಅಭಿವೃದ್ಧಿ ಯೋಜನೆಗಳಲ್ಲಿ ಐಟಿ ಕಂಪನಿಗಳ ಸಹಭಾಗಿತ್ವ ಪಡೆಯಲಾಗುವುದು. ಇದರೊಂದಿಗೆ ಎಲ್ಲ ಯೋಜನೆಗಳನ್ನೂ ಕಾಲಮಿತಿಯಲ್ಲಿ ಮುಗಿಸಲಾಗುವುದು' ಎಂದು ಐಟಿ-ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಹದೇವಪುರ ವಲಯದ ಐಟಿ ಕಂಪನಿಗಳ ಪ್ರಮುಖರ ಅಹವಾಲುಗಳನ್ನು ಆಲಿಸಿದ ಬಳಿಕ ಮಾತನಾಡಿದ ಅವರು, 'ಐಟಿ-ಬಿಟಿ ಕಂಪನಿಗಳ ಅಹವಾಲುಗಳನ್ನು ಪರಿಹರಿಸಲೆಂದೇ ವಿಷನ್ ಗ್ರೂಪ್‌ಗಳನ್ನು ರಚಿಸಲಾಗಿದೆ. ಇದಕ್ಕೆ ಐಟಿ ಕಂಪನಿಗಳನ್ನು ನಡೆಸಿರುವವರನ್ನೇ ಅಧ್ಯಕ್ಷರನ್ನಾಗಿ ಮಾಡಲಾಗಿದೆ. 'ಬೆಂಗಳೂರು ಬ್ರಾಂಡ್ ಅನ್ನು ಎಲ್ಲರೂ ಸೇರಿ ಉಳಿಸೋಣ. ಇದಕ್ಕೆ ಅಪಕೀರ್ತಿ ತರುವುದು ಬೇಡ' ಎಂದರು.

ಯೋಜನೆಗಳ ಅನುಷ್ಠಾನದಲ್ಲಿ ತಂತ್ರಜ್ಞಾನವನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಲಾಗುವುದು. ಜತೆಗೆ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ 'ಎಲ್ಸಿಟಾ' ಮಾದರಿಯ ವ್ಯವಸ್ಥೆಯನ್ನು ಇಲ್ಲೂ ಆರಂಭಿಸುವುದನ್ನು ಗಂಭೀರವಾಗಿ ಪರಿಶೀಲಿಸಲಾಗುವುದು. ಮಳೆ ನೀರು ಸರಾಗವಾಗಿ ಹರಿದು ಹೋಗಲು ಇರುವ ಕೆ-100 ವ್ಯವಸ್ಥೆಯನ್ನು ಮಹದೇವಪುರದಲ್ಲೂ ಅಳವಡಿಸಿಕೊಳ್ಳಲಾಗುವುದು. ಈ ಭಾಗಕ್ಕೆ ಕಾವೇರಿ ಕುಡಿಯುವ ನೀರು ಪೂರೈಕೆಯ 5ನೇ ಹಂತದ ಮೂಲಕ ನೀರು ಸರಬರಾಜು ಮಾಡಲಾಗುವುದು. ಉದ್ಯಮಿಗಳೂ ಆತಂಕಕ್ಕೆ ಒಳಗಾಗುವುದು ಬೇಡ' ಎಂದರು.

ಐಟಿ ಕಂಪನಿಗಳ ವಲಯದಿಂದ ಗೋಲ್ಡ್‌ಮ್ಯಾನ್ ಸ್ಯಾಕ್ಸ್‌ನ ರವಿಕೃಷ್ಣನ್, ಇನ್ಫೊಸಿಸ್‌ನ ಸುನೀಲ್‌ಕುಮಾರ್ ಮತ್ತು ಬಿ.ಸಿ. ಶೇಷಾದ್ರಿ, ವೆಲ್ಸ್‌ಫಾರ್ಗೋ ಕಂಪನಿಯ ಅರಿಂದಮ್ ಬ್ಯಾನರ್ಜಿ, ವಿಪ್ರೊದ ಪರಮಿಂದರ್ ಕಾಕ್ರಿಯಾ, ಎಂಫಸಿಸ್‌ನ ದೀಪಾ ನಾಗರಾಜ್, ಇಂಟೆಲ್‌ನ ಮಾನಸ್ ದಾಸ್, ವಿಎಂ ವೇರ್‌ನ ರಾಮಕುಮಾರ್ ನಾರಾಯಣನ್ ಮತ್ತು ಜಯನ್ ದೇಸಾಯಿ, ಟಿಸಿಎಸ್‌ನ ಬೆಂಗಳೂರು ಮುಖ್ಯಸ್ಥ ಸುನೀಲ್ ದೇಶಪಾಂಡೆ, ಆಕ್ಸೆಂಚರ್‌ನ ಅಜಯ್ ವಿಜ್, ಸೊನಾಟಾ ಸಾಫ್ಟ್‌ವೇರ್‌ನ ಬಾಲಾಜಿ ಕುಮಾರ್, ಫಿಲಿಪ್ಸ್‌ನ ಅರವಿಂದ್ ವೈಷ್ಣವ್, ಸೋಲೆಸ್‌ನ ಮಹಾದೇವನ್, ನಾಸ್ಕಾಂನ ಕೆ.ಎಸ್. ವಿಶ್ವನಾಥನ್ ಮತ್ತು ಭಾಸ್ಕರ್ ವರ್ಮಾ ಸಭೆಯಲ್ಲಿ ಇದ್ದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ನಗರವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಅವುಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದರು.

'ಐಟಿ ಕಂಪನಿಗಳು ಧೃತಿಗೆಡಬಾರದು'

'ಬೆಂಗಳೂರು ಬ್ರಾಂಡ್ ಎಲ್ಲಿಗೂ ಹೋಗುವುದಿಲ್ಲ. ಇಂಥ ಮಹಾಮಳೆ ಬಂದರೆ ಎಂತಹ ನಗರವಾದರೂ ಸ್ತಬ್ಧವಾಗುತ್ತದೆ. ಶೇ 80ಕ್ಕಿಂತ ಹೆಚ್ಚಿನ ಭಾಗಕ್ಕೆ ಇಲ್ಲಿ ಏನೂ ಆಗಿಲ್ಲ. ಮಹದೇವಪುರದ ಭಾಗದಲ್ಲಿ ಆಗಿರುವ ಹಾನಿ ಅನಿರೀಕ್ಷಿತ. ಇದರಿಂದ ಐಟಿ ಕಂಪನಿಗಳು ಧೃತಿಗೆಡಬಾರದು'

ಕ್ರಿಸ್ ಗೋಪಾಲಕೃಷ್ಣನ್, ಮುಖ್ಯಸ್ಥ, ಐಟಿ ವಿಷನ್ ಗ್ರೂಪ್

'ಕಳವಳ ವ್ಯಕ್ತಪಡಿಸಿದ್ದಾರೆ'

ನಗರದ ಸಮಸ್ಯೆಗಳ ಬಗ್ಗೆ ಉದ್ಯಮಿ ಮೋಹನ್‌ದಾಸ್ ಪೈ ಅವರು ಟ್ವೀಟ್ ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅಶ್ವತ್ಥನಾರಾಯಣ, 'ನಗರದ ಬಗ್ಗೆ ಅವರು ಒಳ್ಳೆಯ ಟ್ವೀಟ್‌ಗಳನ್ನೂ ಮಾಡಿದ್ದಾರೆ. ಅದನ್ನು ಮರೆತು ಈಗಿನ ಟ್ವೀಟ್‌ಗಳ ಬಗ್ಗೆಯೇ ಚರ್ಚಿಸುವುದು ಸರಿಯಲ್ಲ. ನಗರದ ಬಗ್ಗೆ ಕಳಕಳಿ ಇಟ್ಟುಕೊಂಡೇ ಅವುಗಳನ್ನು ಮಾಡಿದ್ದಾರೆ. ಅವರ ಕಳವಳವನ್ನು ಅರ್ಥ ಮಾಡಿಕೊಳ್ಳಬೇಕಷ್ಟೆ' ಎಂದರು.

ಐಎಎಸ್ ಹುದ್ದೆ ಭರ್ತಿ: ಕೆಪಿಎಸ್‌ಸಿ ಅಧಿಸೂಚನೆ

ಬೆಂಗಳೂರು: ರಾಜ್ಯೇತರ ನಾಗರಿಕ ಸೇವೆ (ನಾನ್ ಸ್ಟೇಟ್ ಸಿವಿಲ್ ಸರ್ವೀಸ್) ಹುದ್ದೆಗಳಿಂದ 2021ನೇ ಸಾಲಿನ ಐಎಎಸ್ ವೃಂದದ ನಾಲ್ಕು ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಗ್ರೂಪ್ 'ಎ' ವೃಂದದ ಅಧಿಕಾರಿಗಳಿಂದ ಕೆಪಿಎಸ್‌ಸಿ ಅರ್ಜಿ ಆಹ್ವಾನಿಸಿದೆ.

ಆಯ್ಕೆಗೆ ಸ್ಪರ್ಧಾತ್ಮಕ ಪರೀಕ್ಷೆ ಅಕ್ಟೋಬರ್ ಕೊನೆಯಲ್ಲಿ ನಡೆಯಲಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೆ. 30 ಕೊನೆಯ ದಿನ.

ರಾಜ್ಯ ನಾಗರಿಕ ಸೇವಾ ವೃಂದದಲ್ಲಿ ಜಿಲ್ಲಾಧಿಕಾರಿ ಹುದ್ದೆಗೆ ತತ್ಸಮಾನವೆಂದು ನಿಗದಿಪಡಿಸಿದ ಗ್ರೂಪ್ 'ಎ' ವೃಂದದ ಗೆಜೆಟೆಡ್ ಹುದ್ದೆಯಲ್ಲಿ 2021ರ ಜ. 1ಕ್ಕೆ 8 ವರ್ಷ ಕರ್ತವ್ಯ ಸಲ್ಲಿಸಿದವರು ಮತ್ತು ವಯೋಮಿತಿ 56 ವರ್ಷ ದಾಟ ದವರು ಅರ್ಜಿ ಸಲ್ಲಿಸಬಹುದು. ಆದರೆ, ರಾಜ್ಯ ಪೊಲೀಸ್ ಸೇವೆ, ಅರಣ್ಯ ಸೇವೆ ಮತ್ತು ನ್ಯಾಯಾಂಗ ಸೇವೆಯಲ್ಲಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ.

'ಎರಡು ಪತ್ರಿಕೆಗಳ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕ ಆಧರಿಸಿ, ರ‍್ಯಾಂಕ್ ಪಟ್ಟಿ ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು. ಈ ಪಟ್ಟಿಯಲ್ಲಿರುವ ಅಧಿಕಾರಿಗಳ ರಹಸ್ಯ ವರದಿ ಪರಿಗಣಿಸಿ, ಐಎಎಸ್ ಹುದ್ದೆಗೆ ಅರ್ಹರಾದವರ ಹೆಸರುಗಳನ್ನು ಕೇಂದ್ರ ಲೋಕಸೇವಾ ಆಯೋಗಕ್ಕೆ (ಯುಪಿಎಸ್‌ಸಿ) ಸರ್ಕಾರ ಶಿಫಾರಸು ಮಾಡಲಿದೆ' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಹಾಲಿಗೆ ₹5 ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಪ್ರತಿ ಲೀಟರ್ ಹಾಲಿಗೆ ₹5 ಹೆಚ್ಚಿಸುವಂತೆ ಆಗ್ರಹಿಸಿ ಸೆ.22ರಂದು ಬೃಹತ್ ಪ್ರತಿಭಟನೆ ನಡೆಸಲು ಬೆಂಗಳೂರು, ಕೋಲಾರ, ತುಮಕೂರು ಮತ್ತು ಮಂಡ್ಯ ಹಾಲು ಒಕ್ಕೂಟಗಳು ತೀರ್ಮಾನಿಸಿವೆ ಎಂದು ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ ತಿಳಿಸಿದರು.

ಹೈನುಗಾರಿಕೆ ಲಾಭದಾಯಕವಲ್ಲ ಎಂಬ ಕಾರಣಕ್ಕಾಗಿ ರೈತರು ಹೈನುಗಾರಿಕೆಯಿಂದ ವಿಮುಖರಾಗುತ್ತಿದ್ದಾರೆ. ಪರಿಣಾಮವಾಗಿ ಪ್ರತಿ ದಿನದ ಹಾಲು ಉತ್ಪಾದನೆ 3 ಲಕ್ಷ ಲೀಟರ್ ಕುಸಿತ ಕಂಡಿದೆ. ಜಾನುವಾರು ಫೀಡ್ಸ್‌ಗೆ ನೀಡುತ್ತಿದ್ದ ಸಬ್ಸಿಡಿಯನ್ನು ಸರ್ಕಾರ ಹಿಂತೆಗೆದುಕೊಂಡಿದ್ದು, ಸದ್ಯ ಚೀಲಕ್ಕೆ ₹1,040 ಆಗಿದೆ. ಹೀಗಾಗಿ, ಲಾಭಕ್ಕಿಂತ ಖರ್ಚು ಹೆಚ್ಚುತ್ತಿದ್ದು, ರೈತರು ಹೈನುಗಾರಿಕೆಯನ್ನು ತೊರೆಯುತ್ತಿದ್ದಾರೆ. ಇದರಿಂದ ಹಾಲು ಉತ್ಪಾದನೆ ಕುಂಠಿತ ಆಗುತ್ತಿದೆ. ಇದು ನಿಜಕ್ಕೂ ಆಘಾತಕಾರಿ' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಎರಡೂ ಅವಧಿಯಲ್ಲಿ ಹಾಲಿಗೆ ಪ್ರೋತ್ಸಾಹಧನ ನೀಡಿದ್ದರು. ಪರಿಸ್ಥಿತಿ ಆಧರಿಸಿ ದರ ಹೆಚ್ಚಳಕ್ಕೆ ಆಸ್ಪದ ನೀಡಿದ್ದರು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದರ ಹೆಚ್ಚಳಕ್ಕೆ ಮಾಡಿದ ಮನವಿಗೆ ಅವರು ಸ್ಪಂದಿಸುತ್ತಿಲ್ಲ ಎಂದು ದೂರಿದರು.

ಈಗಾಗಲೇ ದರ ಹೆಚ್ಚಳಕ್ಕೆ ಆಗ್ರಹಿಸಿ ಲಕ್ಷಾಂತರ ರೈತರು ಮುಖ್ಯಮಂತ್ರಿಗೆ ಪತ್ರ ಚಳವಳಿ ಮೂಲಕ ಮನವಿ ಮಾಡಿದರೂ ಕಿವಿಗೊಡುತ್ತಿಲ್ಲ. ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ದರ ಹೆಚ್ಚಳಕ್ಕೆ ಮನಸ್ಸು ಮಾಡದಿರಬಹುದು. ರೈತರ ಉಳಿವಿ ಗಾಗಿ ಹಾಗೂ ಹಾಲು ಉತ್ಪಾದನೆಯ ಕುಸಿತ ತಡೆಯಲು ದರ ಏರಿಕೆ ಅನಿವಾರ್ಯ ಎಂದರು.

'ಭಾರತೀಯ ಶಿಕ್ಷಣ ಯೂರೋಪ್‌ಗಿಂತಲೂ ಶ್ರೇಷ್ಠ'

ಬೆಂಗಳೂರು: ಭಾರತೀಯ ಸಂಸ್ಕೃತಿ, ಶಿಕ್ಷಣ ಪದ್ಧತಿ ಹಾಗೂ ನಾಗರಿಕತೆ ಯುರೋಪ್‌ಗಿಂತಲೂ ಶ್ರೇಷ್ಠವಾಗಿದೆ ಎಂದು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಕುಲಪತಿ ಶಾಂತಿಶ್ರೀ ಧೂಲಿಪುಡಿ ಪಂಡಿತ್ ಪ್ರತಿಪಾದಿಸಿದರು.

ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ, ಅಖಿಲ ಭಾರತ ರಾಷ್ಟ್ರೀಯ ಶಿಕ್ಷಕ ಮಹಾಸಂಘದ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಉನ್ನತ ಶಿಕ್ಷಣ, ಉನ್ನತ ಭಾರತ' ವಿಚಾರಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಬುಧವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಯುಜಿಸಿಯ ಉಪ ಕಾರ್ಯದರ್ಶಿ ಗೋಪು ಕುಮಾರ್ ನಾಗಪ್ಪನ್, ಕುಲಪತಿಗಳಾದ ಜಯಕರ್ ಶೆಟ್ಟಿ, ನಿರಂಜನ್ ವಾನಳ್ಳಿ, ಲಿಂಗರಾಜ ಗಾಂಧಿ, ಎಬಿಆರ್‌ಎಸ್‌ಎಂ ಅಧ್ಯಕ್ಷ ಜೆ.ಪಿ.ಸಿಂಘಾಲ್, ಜೆಎನ್‌ಯು ಕುಲಪತಿ ಶಾಂತಿಶ್ರೀ ಡಿ.ಪಂಡಿತ್ ಇದ್ದಾರೆ

ಪ್ರಾಚೀನ ನಳಂದ, ತಕ್ಷಶಿಲಾ ವಿಶ್ವವಿದ್ಯಾಲಯಗಳು ಭಾರತೀಯ ಶಿಕ್ಷಣಕ್ಕೆ ಮಹತ್ವದ ಕೊಡುಗೆ ನೀಡಿವೆ. ಗಣಿತ ಶಾಸ್ತ್ರಜ್ಞ ಶ್ರೀನಿವಾಸನ್, ವಿಜ್ಞಾನದಲ್ಲಿ ಆರ್ಯಭಟ, ಭಾಸ್ಕರ, ಸಿ.ವಿ.ರಾಮನ್ ಅವರ ಸಾಧನೆ ಅನನ್ಯ. ಆದರೆ, ಭಾರತೀಯ ಶಿಕ್ಷಣ ಪದ್ಧತಿಯನ್ನು ಮೆಕಾಲೆ ಶಿಕ್ಷಣ ಸಂಪೂರ್ಣ ನಾಶ ಗೊಳಿಸಿತ್ತು. ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿತ್ತು. ಈಗ ಕೇಂದ್ರ ಸರ್ಕಾರ ಭಾರತೀಯ ಅಸ್ಮಿತೆಯನ್ನು ಯುವ ಜನಾಂಗಕ್ಕೆ ಪರಿಚಯಿಸುವ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಬೆಂಗಳೂರು ನಗರ ವಿಶ್ವ ವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ, ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಿಂದಾಗಿ ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಗೆ ಜಾಗತಿಕ ಆಯಾಮ ದೊರೆಯುತ್ತಿದೆ. ಪದವಿ ಕಾಲೇಜುಗಳಲ್ಲಿ ಈಗಾಗಲೇ ಹೊಸ ಶಿಕ್ಷಣ ಪದ್ಧತಿಯ ಬೋಧನೆ ನಡೆಯುತ್ತಿದೆ ಎಂದು ಶ್ಲಾಘಿಸಿದರು.

ಎಬಿಆರ್‌ಎಸ್‌ಎಂ ಅಧ್ಯಕ್ಷ ಜೆ.ಪಿ. ಸಿಂಘಾಲ್, ಈಗಿರುವ ಇಂಡಿಯಾ' ಸಂಸ್ಕೃತಿ, ಶಿಕ್ಷಣವನ್ನು ಭಾರತದ ಸಂಸ್ಕೃತಿ ಮತ್ತು ಶಿಕ್ಷಣವನ್ನಾಗಿ ಪರಿವರ್ತಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎಂ.ಜಯಕರ್, ಉತ್ತರ ವಿಶ್ವವಿದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ, ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲಕೃಷ್ಣ ಜೋಶಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಯುವೋತ್ಸವ ವಾರ್ಷಿಕ ದಿನಾಚರಣೆ: ಅತಿಥಿಗಳು: ಸುಂದರ್ ರಾಜ್, ವಿಶ್ವನಾಥ್.ಪಿ.ಎಸ್., ಕೆ. ಲಕ್ಷ್ಮೀಶ್, ಪದ್ಮಿನಿ ನಾಗರಾಜು, ಅಧ್ಯಕ್ಷತೆ: ಬಿ.ಕೆ. ರಾಮ್, ಆಯೋಜನೆ ಮತ್ತು ಸ್ಥಳ: ರಾಣಿ ಸರಳಾ ದೇವಿ ಪದವಿ ಕಾಲೇಜು, ಜಯನಗರ, ಬೆಳಿಗ್ಗೆ 10.30

ಬಿ.ಕಾಮ್ ಮತ್ತು ಬಿ.ಬಿ.ಎ., ತರಗತಿಗಳ ಉದ್ಘಾಟನಾ ಸಮಾರಂಭ: ಅತಿಥಿಗಳು: ಸ್ವಾಮಿ ನಿತ್ಯಾಸ್ಥಾನಂದಜೀ ಮಹರಾಜ್, ಅಧ್ಯಕ್ಷತೆ: ಕೆ.ಪಿ. ನರಸಿಂಹಮೂರ್ತಿ, ಆಯೋಜನೆ: ಆಚಾರ್ಯ ಪಾಠಶಾಲಾ ಕಾಲೇಜ್ ಆಫ್ ಕಾಮರ್ಸ್, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ತೇಜಸ್ವಿ ಜೀವಲೋಕ-10 ಕಪ್ಪೆಲೋಕ ಛಾಯಾ ಚಿತ್ರ, ಸಾಕ್ಷ್ಯಚಿತ್ರಗಳ ಪ್ರದರ್ಶನ: ಆಯೋಜನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಕರ್ನಾಟಕ ಚಿತ್ರಕಲಾ ಪರಿಷತ್ತು, ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ವಿ.ಕೃ. ಗೋಕಾಕ್ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ಜಿ.ಎಂ. ಹೆಗಡೆ, ಅತಿಥಿಗಳು: ಅಜಯ್ ಕುಮಾರ್ ಸಿಂಗ್, ಎಚ್.ಎನ್. ಸುರೇಶ್, ಶಶಿಧರ ತೋಡ್ಕರ, ಅಧ್ಯಕ್ಷತೆ: ಅನಿಲ್ ಗೋಕಾಕ್, ಆಯೋಜನೆ: ಭಾರತೀಯ ವಿದ್ಯಾಭವನ, ಕೆ.ಆರ್.ಜಿ. ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಶಶಿಧರ್, ಶ್ರೀನಿವಾಸ್ ಅನಂತರಾಮಯ್ಯ, ವರದರಾಜ್

ವಾದ್ಯ ಸಂಗೀತ ಕಾರ್ಯಕ್ರಮ: ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಘಟ: ವರದರಾಜ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಡ್ರೋನ್ ಪ್ರದರ್ಶನ: ಆಯೋಜನೆ: ಮಂಥನ್, ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ, ಸಂಜೆ 6.30

ವಿಭಿನ್ನ ಗಾಯನ ಕಾರ್ಯಕ್ರಮ: ಗಾಯನ: ಎಂ. ಶಿವಸ್ವಾಮಿ, ಅತಿಥಿಗಳು: ಎಂ. ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಅಕ್ಕಯ್' ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಸಂಗೀತ: ರಾಜ್ ಗುರು, ಅಭಿನಯ: ನಯನ ಸೂಡ, ಆಯೋಜನೆ: ರಂಗ ಪಯಣ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

3 ಸಾವಿರ ಸಾಹಿತಿ, ಕಲಾವಿದರಿಗೆ ಮಾಸಾಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ, ಕಷ್ಟದಲ್ಲಿರುವ 3 ಸಾವಿರ ಸಾಹಿತಿಗಳು-ಕಲಾವಿದರಿಗೆ ತಲಾ ₹ 2 ಸಾವಿರ ಮಾಸಾಶನ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

2022ರ ಸೆಪ್ಟೆಂಬರ್ ತಿಂಗಳಿಂದಲೇ ಈ ಆದೇಶ ಅನ್ವಯವಾಗಲಿದೆ. ಮಾಸಾಶನಕ್ಕೆ ಸಾಹಿತಿಗಳು ಹಾಗೂ ಕಲಾವಿದರ ಆಯ್ಕೆಗೆ 2021ರಲ್ಲಿ ಶ್ರೀನಿವಾಸ ಮೈಸೂರು ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು.

ಆಯ್ಕೆ ಸಮಿತಿಯು 2018-19, 2019-20 ಹಾಗೂ 2020-21ನೇ ಸಾಲಿನಲ್ಲಿ ಮಾಸಾಶನಕ್ಕೆ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಪರಿಶೀಲಿಸಿ, ಕಷ್ಟದಲ್ಲಿರುವ ಸಾಹಿತಿಗಳು ಹಾಗೂ ಕಲಾವಿದರನ್ನು ಆಯ್ಕೆ ಮಾಡಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪಯೋನೀರ್ ಡಿಸ್ಟಿಲರೀಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', ಲೆವೆಲ್ 10, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001,
ಫೋನ್: 080 - 4544 8000, ಫ್ಯಾಕ್ಸ್: 080 - 3985 6862
ಇಮೇಲ್: pdlinvestor.india@diageo.com, ವೆಬ್‌ಸೈಟ್: www.pioneerdistilleries.com
ಕಾರ್ಪೊರೇಟ್ ಐಡೆಂಟಿಟಿ ನಂಬರ್: L24116KA1992PLC125992

29ನೇ ವಾರ್ಷಿಕ ಸಾಮಾನ್ಯ ಮಹಾಸಭೆ ಮತ್ತು ಇ-ಮತದಾನದ ಸೂಚನೆ

ಕಂಪನಿಗಳ ಕಾಯ್ದೆ, 2013 (ಕಾಯ್ದೆ) ಮತ್ತು ನಿಯಮಗಳ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಯ ಎಜಿಎಂ ಪ್ರಕಟಣೆಯಲ್ಲಿ ಸೂಚಿಸಿರುವಂತೆ ವ್ಯವಹಾರಗಳನ್ನು ನಡೆಸಲು ವೀಡಿಯೊ ಕಾನ್ಫರೆನ್ಸಿಂಗ್ ("VC") / ಇತರ ಆಡಿಯೊ ದೃಶ್ಯ ಸಾಧನಗಳ ಮೂಲಕ (OAVM). ಹಾಗೂ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 (ಸೆಬಿ (ಲಿಸ್ಟಿಂಗ್ ರೆಗ್ಯುಲೇಷನ್)), ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಹೊರಡಿಸಿದ ಸುತ್ತೋಲೆಗಳ ಅನ್ವಯ, 08, 2020, 17/2020 ದಿನಾಂಕದ ಏಪ್ರಿಲ್ 13, 2020, 20/2020 ದಿನಾಂಕದ ಸುತ್ತೋಲೆ ಸಂಖ್ಯೆ.14/2020 05, 2020, 02/2021 ದಿನಾಂಕ ಜನವರಿ 13, 2021, 19/2021 ದಿನಾಂಕ ಡಿಸೆಂಬರ್ 08, 2021, 21/2021 ದಿನಾಂಕ ಡಿಸೆಂಬರ್ 14, 2021 ಮತ್ತು 2/2022 ದಿನಾಂಕ ಮೇ 05, 2022 ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಅದರ ಸುತ್ತೋಲೆ ಸಂಖ್ಯೆ SEBI/HO/CFD/CMD1/CIR/P/2020/79 ದಿನಾಂಕ ಮೇ 12, 2020, SEBI/HO/CFD/CMD2/CIR/P/2021/11 ದಿನಾಂಕ ಜನವರಿ 15, 2021 ಮತ್ತು SEBI/HO/CFD/CMD2/CIR/P/2022/62 ದಿನಾಂಕ ಮೇ 13, 2022 (ಒಟ್ಟಾರೆಯಾಗಿ ಸಂಬಂಧಿತ ಸುತ್ತೋಲೆಗಳು ಅಥವಾ ಸುತ್ತೋಲೆಗಳು ಎಂದು ಕರೆಯಲಾಗುತ್ತದೆ). ಕಂಪನಿಯ ಈಕ್ವಿಟಿ ಷೇರುದಾರರ 29ನೇ ವಾರ್ಷಿಕ ಸಾಮಾನ್ಯ ಸಭೆ (ಸಭೆ / ಎಜಿಎಂ) 2022 ರ ಸೆಪ್ಟೆಂಬರ್ 29ರ ಗುರುವಾರ ಮಧ್ಯಾಹ್ನ 3.30 ಕ್ಕೆ ನಡೆಯಲಿದೆ ಎಂದು ಸೂಚನೆ ನೀಡಲಾಗಿದೆ.

ಕಂಪನಿಯ ಎಜಿಎಂನ ನೋಟೀಸ್ ಜೊತೆಗೆ 2021-22ರ ಹಣಕಾಸು ವರ್ಷದ ವಾರ್ಷಿಕ ವರದಿಯಲ್ಲಿ ನಿರ್ದೇಶಕರ ಅಂತರ ವರದಿ, ಲಾಭ ಮತ್ತು ನಷ್ಟದ ಹೇಳಿಕೆ, ಬ್ಯಾಲೆನ್ಸ್ ಶೀಟ್ ಮತ್ತು ಅದರ ಲೆಕ್ಕ ಪರಿಶೋಧಕರ ವರದಿಯನ್ನು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ, ಆ ಷೇರುದಾರರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ / ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲಾಗಿದೆಯೋ ಅವರಿಗೆ ಕಳುಹಿಸಲಾಗಿದೆ. 2021-22ರ ವಾರ್ಷಿಕ ವರದಿಯೊಂದಿಗೆ ಎಜಿಎಂನ ಸೂಚನೆ ಕಂಪನಿಯ ವೆಬ್‌ಸೈಟ್ www.pioneerdistilleries.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿ ಅಂದರೆ ಬಿಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಲಭ್ಯವಿವೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ರೆಗ್ಯುಲೇಷನ್ಸ್)ನ ನಿಯಮ 44 ರೊಂದಿಗೆ ಓದಿ ಕಾಯಿದೆಯ ಸೆಕ್ಷನ್ 108ರ ನಿಬಂಧನೆಗಳಿಗೆ ಅನುಸಾರವಾಗಿ, ಕಂಪನಿಯು ತನ್ನ ಸದಸ್ಯರಿಗೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಎಜಿಎಂನಲ್ಲಿ ಅಂಗೀಕರಿಸಲು ಪ್ರಸ್ತಾಪಿಸಲಾದ ನಿರ್ಣಯಗಳ ಮೇಲೆ, ರಿಮೋಟ್ ಇ-ವೋಟಿಂಗ್ ಮತ್ತು ಇ-ವೋಟಿಂಗ್ ಎಜಿಎಂ ಸಮಯದಲ್ಲಿ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಸೇವೆಗಳ ಮೂಲಕ ಸೌಲಭ್ಯವನ್ನು ಒದಗಿಸುತ್ತಿದೆ. ರಿಮೋಟ್ ಇ-ಮತದಾನ ಸೌಲಭ್ಯವು ಸೆಪ್ಟೆಂಬರ್ 26, 2022 ರಂದು ಬೆಳಿಗ್ಗೆ 10.00 ರಿಂದ (IST) ಪ್ರಾರಂಭವಾಗಲಿದೆ ಮತ್ತು ಸೆಪ್ಟೆಂಬರ್ 28, 2022 ರಂದು ಸಂಜೆ 5 ಗಂಟೆಗೆ ಕೊನೆಗೊಳ್ಳುತ್ತದೆ. (IST). ಇ-ವೋಟಿಂಗ್ ಮಾಡ್ಯೂಲ್ ಅನ್ನು CDSL ನಿಂದ ನಿಷ್ಕ್ರಿಯಗೊಳಿಸುತ್ತದೆ. ಎಜಿಎಂನ ವಿಸಿ / ಒಎವಿಎಂ ಸೌಲಭ್ಯದಲ್ಲಿ ಇರುವ ಮತ್ತು ದೂರಸ್ಥ ಇ-ಮತದಾನದ ಮೂಲಕ ಮತ ಚಲಾಯಿಸದ ಸದಸ್ಯರು ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದ ಸದಸ್ಯರು, ಎಜಿಎಂ ಸಮಯದಲ್ಲಿ ಲಭ್ಯವಿರುವ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಸದಸ್ಯರು / ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಕಟ್-ಆಫ್ ದಿನಾಂಕದಂದು ಅಂದರೆ ಸೆಪ್ಟೆಂಬರ್ 22, 2022 ರಂದು ಹೆಸರು ದಾಖಲಾಗಿರುವ ವ್ಯಕ್ತಿಯು ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂ ಸಮಯದಲ್ಲಿ ಇ-ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕದ ಆರಂಭದಲ್ಲಿ ಅಂದರೆ ಸೆಪ್ಟೆಂಬರ್ 22, 2022 ರಂತೆ ಕಂಪನಿಯಲ್ಲಿ ಅವರ ಷೇರುದಾರರಿಗೆ ಅನುಗುಣವಾಗಿರಬೇಕು.

VC/OAVM ಸೌಲಭ್ಯದ ಮೂಲಕ ಎಜಿಎಂನಲ್ಲಿ ಹಾಜರಿರುವ ಮತ್ತು ದೂರಸ್ಥ ಇ-ಮತದಾನದ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸದ ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದ ಷೇರುದಾರರು ಮಾತ್ರ ಈ ಸಮಯದಲ್ಲಿ ಲಭ್ಯವಿರುವ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ ಎಜಿಎಂ. ಎಜಿಎಂ ಸಮಯದಲ್ಲಿ ಲಭ್ಯವಿರುವ ಇ-ಮತದಾನದ ಮೂಲಕ ಷೇರುದಾರರಿಂದ ಯಾವುದೇ ಮತಗಳನ್ನು ಚಲಾಯಿಸಿದರೆ ಮತ್ತು ಅದೇ ಷೇರುದಾರರು VC/OAVM ಸೌಲಭ್ಯದ ಮೂಲಕ ಸಭೆಯಲ್ಲಿ ಭಾಗವಹಿಸದಿದ್ದರೆ, ಅಂತಹ ಷೇರುದಾರರು ನೀಡಿದ ಮತಗಳನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ, ಸೌಲಭ್ಯದಂತೆ ಸಭೆಯಲ್ಲಿ ಇ-ಮತದಾನವು ಸಭೆಯಲ್ಲಿ ಭಾಗವಹಿಸುವ ಷೇರುದಾರರಿಗೆ ಮಾತ್ರ ಲಭ್ಯವಿದೆ. ದೂರಸ್ಥ ಇ-ಮತದಾನದ ಮೂಲಕ ಮತ ಚಲಾಯಿಸಿದ ಷೇರುದಾರರು ಎಜಿಎಂಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಆದಾಗ್ಯೂ, ಅವರು ಎಜಿಎಂ ಸಮಯದಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ಎಜಿಎಂನ ಸೂಚನೆ ರವಾನೆಯಾದ ನಂತರ ಕಂಪನಿಯ ಷೇರುದಾರರಾಗಿರುವ ಮತ್ತು ಪಡೆಯುವ ಯಾವುದೇ ವ್ಯಕ್ತಿಗಳು ಮತ್ತು ಕಟ್-ಆಫ್ ದಿನಾಂಕದಂದು ಷೇರುಗಳನ್ನು ಹಿಡಿದಿಟ್ಟುಕೊಳ್ಳುವುದು ಅಂದರೆ ಸೆಪ್ಟೆಂಬರ್ 22, 2022 ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಬಹುದು ಅಥವಾ AGM ಸಮಯದಲ್ಲಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯುವ ಮೂಲಕ helpdesk.evoting@cdslindia.com ಗೆ ಇಮೇಲ್ ಕಳುಹಿಸುವ ಮೂಲಕ ಮತ ಚಲಾಯಿಸಬಹುದು. ಅವರ ಫೋಲಿಯೊ ನಂ./ಡಿಪಿ ಐಡಿ ಕ್ಲೈಂಟ್ ಐಡಿ ಆದಾಗ್ಯೂ, ಅಂತಹ ಷೇರುದಾರರನ್ನು ಈಗಾಗಲೇ ಇ-ಮತದಾನಕ್ಕಾಗಿ ಸಿಡಿಎಸ್‌ಎಲ್‌ನಲ್ಲಿ ನೋಂದಾಯಿಸಿದ್ದರೆ, ಮತ ಚಲಾಯಿಸಲು ಅಸ್ತಿತ್ವದಲ್ಲಿರುವ ಬಳಕೆದಾರರ ಐಡಿ ಮತ್ತು ಪಾಸ್ವರ್ಡ್ ಅನ್ನು ಬಳಸಬಹುದು. ಅಂತಹ ಸದಸ್ಯರು ಕಂಪನಿಯ ವೆಬ್‌ಸೈಟ್‌ನಿಂದ www.pioneerdistilleries.com ನಲ್ಲಿ ಸಭೆಯ ಪ್ರಕಟಣೆಯನ್ನು ಪಡೆಯಬಹುದು ಅಥವಾ pdlinvestor.india@diagio.com ಅಥವಾ info@vccipl.com ಗೆ ಬರೆಯಿರಿ. ಎಜಿಎಂನ ಸೂಚನೆ ಸಿಡಿಎಸ್‌ಎಲ್ ಇ-ವೋಟಿಂಗ್ ವೆಬ್‌ಸೈಟ್ www.evotingindia.com ನಲ್ಲಿ ಲಭ್ಯವಿರುತ್ತದೆ.

ಕ್ರಮ. ಸಂಖ್ಯೆ.	ವಿವರಗಳು	ದಿನ, ದಿನಾಂಕ ಮತ್ತು ಸಮಯ
1.	29ನೇ ಎಜಿಎಂ ನೋಟಿಸ್ ರವಾನೆ ಪೂರ್ಣಗೊಂಡ ದಿನಾಂಕ:	ಬುಧವಾರ, ಸೆಪ್ಟೆಂಬರ್ 07, 2022
2.	ದೂರಸ್ಥ ಇ-ಮತದಾನ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ:	ಸೋಮವಾರ, ಸೆಪ್ಟೆಂಬರ್ 26, 2022 ಬೆಳಿಗ್ಗೆ 10ಕ್ಕೆ (10.00 ಘಂಟೆ IST)
3.	ದೂರಸ್ಥ ಇ-ಮತದಾನ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ:	ಬುಧವಾರ, ಸೆಪ್ಟೆಂಬರ್ 28, 2022 ಸಂಜೆ 5ಕ್ಕೆ (17.00 ಘಂಟೆ IST)
4.	ಕಟ್-ಆಫ್ ದಿನಾಂಕ	ಸೆಪ್ಟೆಂಬರ್ 22, 2022

ಡಿಮೆಟಿರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಇಮೇಲ್ ವಿಳಾಸಗಳು ಮತ್ತು ಬ್ಯಾಂಕ್ ವಿವರಗಳನ್ನು ತಮ್ಮ ಸಂಬಂಧಿತ ಡಿಪಿ ಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ. ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ಕಂಪನಿಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ಗಳಿಗೆ ("RTA") info@vccipl.com ನಲ್ಲಿ ಬರೆಯುವ ಮೂಲಕ ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ. ಸರಿಯಾಗಿ ತುಂಬಿದ ಮತ್ತು ಸಹಿ ಮಾಡಿದ ಫಾರ್ಮ್ ISR-1 (PAN, KYC, ವಿವರಗಳು ಅಥವಾ ಬದಲಾವಣೆಗಳು/ನವೀಕರಣಕ್ಕಾಗಿ ನಮೂನೆ). ಸದಸ್ಯರು ನಿಗದಿತ ನಮೂನೆಯನ್ನು ಕಂಪನಿಯ ವೆಬ್‌ಸೈಟ್‌ನಿಂದ http://pioneerdistilleries.com/downloads.php ನಲ್ಲಿ ಡೌನ್ಲೋಡ್ ಮಾಡಬಹುದು. ಅದರಂತೆ, ವಾರ್ಷಿಕ ವರದಿಯನ್ನು ಸ್ವೀಕರಿಸಲು ಮೇಲೆ ನಿರ್ದಿಷ್ಟಪಡಿಸಿದಂತೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು / ನವೀಕರಿಸಲು ಸದಸ್ಯರನ್ನು ವಿನಂತಿಸಲಾಗಿದೆ.

ಡಿಮೆಟರಲೈಸ್ಡ್ ಮೋಡ್, ಭೌತಿಕ ಮೋಡ್ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಷೇರುಗಳನ್ನು ಹೊಂದಿರುವ ಸದಸ್ಯರು, ದೂರಸ್ಥ ಇ-ಮತದಾನ ಪ್ರಾರಂಭವಾದ ನಂತರ, ಈ ಕೆಳಗಿನ ಸೂಚನೆಗಳನ್ನು ಅನುಸರಿಸಿ ಮತ ಚಲಾಯಿಸಬಹುದು:

(i) ಷೇರುದಾರರು ಇ-ಮತದಾನ ವೆಬ್‌ಸೈಟ್ www.evotingindia.com ಗೆ ಲಾಗ್ ಇನ್ ಆಗಬೇಕು.

(ii) "ಷೇರುದಾರರು / ಸದಸ್ಯರು" ಮಾಡ್ಯೂಲ್ ಕ್ಲಿಕ್ ಮಾಡಿ.

(iii) ಈಗ ನಿಮ್ಮ ಬಳಕೆದಾರ ಐಡಿ ಅನ್ನು ನಮೂದಿಸಿ
ಎ. ಸಿಡಿಎಸ್‌ಎಗೆ ಲಾಗ್ ಆಗಿ 16 ಅಂಕೆಗಳ ಫಲಾನುಭವಿ ಐಡಿ ನಮೂದಿಸಿ,
ಬಿ. ಎನ್‌ಎಸ್‌ಡಿಎಲ್‌ಗಾಗಿ: 8 ಅಕ್ಷರ ಡಿಪಿ ಐಡಿ ನಂತರ 8 ಅಂಕೆಗಳ ಕ್ಲೈಂಟ್ ಐಡಿ ನಮೂದಿಸಿ,
ಸಿ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಕಂಪನಿಯಲ್ಲಿ ನೋಂದಾಯಿತ ಫೋಲಿಯೊ

(iv) ಮುಂದೆ, ಪ್ರದರ್ಶಿಸಲಾದ ಚಿತ್ರ ಪರಿಶೀಲನೆಯನ್ನು ನಮೂದಿಸಿ ಮತ್ತು ಲಾಗಿನ್ ಕ್ಲಿಕ್ ಮಾಡಿ.

(v) ನೀವು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದರೆ ಮತ್ತು www.evotingindia.com ಗೆ ಲಾಗ್ ಇನ್ ಆಗಿದ್ದರೆ ಮತ್ತು ಹಿಂದಿನ ಇ-ಮತದಾನದ ಮೇಲೆ ಮತ ಚಲಾಯಿಸಿದರೆ ಯಾವುದೇ ಕಂಪನಿ, ನಂತರ ನಿಮ್ಮ ಅಸ್ತಿತ್ವದಲ್ಲಿರುವ ಪಾಸ್‌ವರ್ಡ್‌ಅನ್ನು ಬಳಸಬೇಕಾಗುತ್ತದೆ.

(vi) ನೀವು ಮೊದಲ ಬಾರಿಗೆ ಬಳಕೆದಾರರಾಗಿದ್ದರೆ ಈ ಕೆಳಗಿನ ಹಂತಗಳನ್ನು ಅನುಸರಿಸಿ:

	ಡಿಮ್ಯಾಟ್ ಫಾರ್ಮ್ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ
ಪ್ಯಾನ್	ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಟ್ಟ ನಿಮ್ಮ 10-ಅಂಕಿಯ ಆಲ್ಫಾ-ಸಂಖ್ಯಾ *ಪ್ಯಾನ್ ಅನ್ನು ನಮೂದಿಸಿ (ಡಿಮ್ಯಾಟ್ ಷೇರುದಾರರಿಗೆ ಮತ್ತು ಭೌತಿಕ ಷೇರುದಾರರಿಗೆ ಅನ್ವಯಿಸುತ್ತದೆ) * ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ತಮ್ಮ ಪ್ಯಾನ್ ಅನ್ನು ನವೀಕರಿಸದ ಕಂಪನಿ ಷೇರುದಾರರು/RTA ಕಳುಹಿಸಿದ ಅನುಕ್ರಮ ಸಂಖ್ಯೆಯನ್ನು ಬಳಸಲು ವಿನಂತಿಸಲಾಗಿದೆ ಅಥವಾ info@vccipl.com ಅನ್ನು ಸಂಪರ್ಕಿಸಿ.
ಲಾಭಾಂಶ ಬ್ಯಾಂಕ್ ವಿವರಗಳು ಅಥವಾ ದಿನಾಂಕ ಜನನ (DOB)	ಲಾಗಿನ್ ಆಗಲು ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಅಥವಾ ಕಂಪನಿಯ ದಾಖಲೆಗಳಲ್ಲಿ ದಾಖಲಿಸಿದಂತೆ ಡಿವಿಡೆಂಡ್ ಬ್ಯಾಂಕ್ ವಿವರಗಳು ಅಥವಾ ಜನ್ಮ ದಿನಾಂಕವನ್ನು (dd / mm / yyyy ಸ್ವರೂಪದಲ್ಲಿ) ನಮೂದಿಸಿ. ಎರಡೂ ವಿವರಗಳನ್ನು ಠೇವಣಿ ಅಥವಾ ಕಂಪನಿಯೊಂದಿಗೆ ದಾಖಲಿಸದಿದ್ದರೆ, ಡಿವಿಡೆಂಡ್ ಬ್ಯಾಂಕ್ ವಿವರಗಳ ಕ್ಷೇತ್ರದಲ್ಲಿ ದಯವಿಟ್ಟು ಸದಸ್ಯರ ಐಡಿ / ಫೋಲಿಯೊ ಸಂಖ್ಯೆಯನ್ನು ನಮೂದಿಸಿ.

(vii) ಈ ವಿವರಗಳನ್ನು ಸೂಕ್ತವಾಗಿ ನಮೂದಿಸಿದ ನಂತರ, ಸಲ್ಲಿಸು ಟ್ಯಾಬ್ ಕ್ಲಿಕ್ ಮಾಡಿ.

(viii) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ನಂತರ ನೇರವಾಗಿ ಕಂಪನಿ ಆಯ್ಕೆ ಪರದೆಯನ್ನು ತಲುಪುತ್ತಾರೆ. ಆದಾಗ್ಯೂ, ಷೇರುದಾರರು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹಿಡಿದಿಟ್ಟುಕೊಳ್ಳುವುದು, ಈಗ ಪಾಸ್‌ವರ್ಡ್ ರಚನೆ ಮೆನುವನ್ನು ತಲುಪುತ್ತದೆ. ಅದರಲ್ಲಿ ಅವರು ತಮ್ಮ ಲಾಗಿನ್ ಪಾಸ್‌ವರ್ಡ್ ಅನ್ನು ಕಡ್ಡಾಯವಾಗಿ ಹೊಸ ಪಾಸ್‌ವರ್ಡ್ ಕ್ಷೇತ್ರದಲ್ಲಿ ನಮೂದಿಸಬೇಕಾಗುತ್ತದೆ. ದಯವಿಟ್ಟು ಗಮನಿಸಿ ಈ ಪಾಸ್‌ವರ್ಡ್ ಅನ್ನು ಡಿಮ್ಯಾಟ್ ಹೊಂದಿರುವವರು ಅವರು ಅರ್ಹರಾಗಿರುವ ಇತರೆ ಕಂಪನಿಯಲ್ಲಿ ಮತ ಚಲಾಯಿಸಲು ಸಹ ಬಳಸಬಹುದು, ಆ ಕಂಪನಿಯು ಸಹ ಸಿಡಿಎಸ್‌ಎಲ್ ಮೂಲಕ ಇ - ಮತದಾನ ಆರಿಸಿಕೊಂಡಲ್ಲಿ ನಿಮ್ಮ ಪಾಸ್‌ವರ್ಡ್ ಅನ್ನು ಬೇರೆ ಯಾವುದೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳದಿರಲು ಮತ್ತು ನಿಮ್ಮ ಪಾಸ್‌ವರ್ಡ್ ಗೌಪ್ಯತೆ ಉಳಿಸಿಕೊಳ್ಳಲು ಕಾಳಜಿ ವಹಿಸುವಂತೆ ಬಲವಾಗಿ ಶಿಫಾರಸು ಮಾಡಲಾಗಿದೆ.

(ix) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ, ಈ ಪ್ರಕಟಣೆಯಲ್ಲಿರುವ ನಿರ್ಣಯಗಳ ಮೇಲೆ ಇ-ಮತದಾನಕ್ಕಾಗಿ ಮಾತ್ರ ವಿವರಗಳನ್ನು ಬಳಸಬಹುದು.

(x) ಕಂಪನಿಯ ಇವಿಎಸ್‌ಎನ್ ಕ್ಲಿಕ್ ಮಾಡಿ.

(xi) ಮತದಾನ ಪುಟದಲ್ಲಿ, ನೀವು "RESOLUTION DESCRIPTION" ಅನ್ನು ನೋಡುತ್ತೀರಿ ಮತ್ತು ಮತದಾನಕ್ಕಾಗಿ ಹೌದು / ಇಲ್ಲ ಆಯ್ಕೆಯನ್ನು ನೋಡುತ್ತೀರಿ. ಬಯಸಿದಂತೆ ಹೌದು ಅಥವಾ ಇಲ್ಲ ಆಯ್ಕೆಯನ್ನು ಆರಿಸಿ. ಹೌದು ಆಯ್ಕೆಯು ನೀವು ರೆಸಲ್ಯೂಶನ್‌ಗೆ ಸಮ್ಮತಿಸುತ್ತೀರಿ ಮತ್ತು ಇಲ್ಲ ಆಯ್ಕೆಯು ನೀವು ರೆಸಲ್ಯೂಶನ್‌ಗೆ ಭಿನ್ನಾಭಿಪ್ರಾಯ ಹೊಂದಿದ್ದೀರಿ ಎಂದು ಸೂಚಿಸುತ್ತದೆ.

(xii) ನೀವು ಸಂಪೂರ್ಣ ರೆಸಲ್ಯೂಶನ್ ವಿವರಗಳನ್ನು ವೀಕ್ಷಿಸಲು ಬಯಸಿದರೆ "RESOLUTIONS FILE LINK" ಕ್ಲಿಕ್ ಮಾಡಿ.

(xiii) ನೀವು ಮತ ಚಲಾಯಿಸಲು ನಿರ್ಧರಿಸಿದ ರೆಸಲ್ಯೂಶನ್ (ಗಳನ್ನು) ಆಯ್ಕೆ ಮಾಡಿದ ನಂತರ, "SUBMIT" ಕ್ಲಿಕ್ ಮಾಡಿ. ದೃಢೀಕರಣ ಪೆಟ್ಟಿಗೆಯನ್ನು ಪ್ರದರ್ಶಿಸಲಾಗುತ್ತದೆ. ನೀವೇನಾದರೂ ನಿಮ್ಮ ಮತವನ್ನು ದೃಢೀಕರಿಸಲು ಬಯಸಿದರೆ, ಸರಿ ಕ್ಲಿಕ್ ಮಾಡಿ, ಇಲ್ಲದಿದ್ದರೆ ನಿಮ್ಮ ಮತವನ್ನು ಬದಲಾಯಿಸಲು, "CANCEL" ಕ್ಲಿಕ್ ಮಾಡಿ ಮತ್ತು ಅದಕ್ಕೆ ಅನುಗುಣವಾಗಿ ನಿಮ್ಮ ಮತವನ್ನು ಮಾರ್ಪಡಿಸಿ.

(xiv) ರೆಸಲ್ಯೂಶನ್‌ನಲ್ಲಿ ನಿಮ್ಮ ಮತವನ್ನು ದೃಢೀಕರಿಸಿದ ನಂತರ, ನಿಮ್ಮ ಮತವನ್ನು ಮಾರ್ಪಡಿಸಲು ನಿಮಗೆ ಅನುಮತಿಸಲಾಗುವುದಿಲ್ಲ.

(xv) ಮತದಾನ ಪುಟದಲ್ಲಿ ಮುದ್ರಿಸಲು "ಇಲ್ಲಿ ಕ್ಲಿಕ್ ಮಾಡಿ" ಆಯ್ಕೆಯನ್ನು ಕ್ಲಿಕ್ ಮಾಡುವುದರ ಮೂಲಕ ನೀವು ಚಲಾಯಿಸಿದ ಮತಗಳ ಮುದ್ರಣವನ್ನು ಸಹ ತೆಗೆದುಕೊಳ್ಳಬಹುದು.

(xvi) ಡಿಮ್ಯಾಟ್ ಖಾತೆದಾರನು ಲಾಗಿನ್ ಪಾಸ್‌ವರ್ಡ್ ಅನ್ನು ಮರೆತಿದ್ದರೆ, ನಂತರ ಬಳಕೆದಾರ ಐಡಿ ಮತ್ತು ಇಮೇಜ್ ಪರಿಶೀಲನಾ ಕೋಡ್ ಅನ್ನು ನಮೂದಿಸಿ ಮತ್ತು ಕ್ಲಿಕ್ ಮಾಡಿ ಪಾಸ್‌ವರ್ಡ್ ಮರೆತಿರುವಿರಿ ಮತ್ತು ಸಿಸ್ಟಮ್ ಕೇಳಿದಂತೆ ವಿವರಗಳನ್ನು ನಮೂದಿಸಿ.

(xvii) ವೈಯಕ್ತಿಕವಲ್ಲದ ಷೇರುದಾರರು ಮತ್ತು ಪಾಲಕರಿಗೆ-ದೂರಸ್ಥ ಮತದಾನದ ಸೌಲಭ್ಯ

- ವೈಯಕ್ತಿಕವಲ್ಲದ ಷೇರುದಾರರು (ಅಂದರೆ ವ್ಯಕ್ತಿಗಳು, HUF, NRI ಇತ್ಯಾದಿಗಳನ್ನು ಹೊರತುಪಡಿಸಿ) ಮತ್ತು ಕಸ್ಟೋಡಿಯನ್‌ಗಳು www.evotingindia.com ಗೆ ಲಾಗ್ ಇನ್ ಮಾಡಬೇಕಾಗುತ್ತದೆ ಮತ್ತು "ಕಾರ್ಪೊರೇಟ್‌ಗಳು" ಮಾಡ್ಯೂಲ್‌ನಲ್ಲಿ ತಮ್ಮನ್ನು ನೋಂದಾಯಿಸಿಕೊಳ್ಳಬೇಕು.
- ಸ್ಟಾಂಪ್ ಮತ್ತು ಘಟಕದ ಚಿಹ್ನೆಯನ್ನು ಹೊಂದಿರುವ ನೋಂದಣಿ ಫಾರ್ಮ್‌ನ ಸ್ಕ್ಯಾನ್ ಮಾಡಿದ ಪ್ರತಿಯನ್ನು helpdesk.evoting@cdslindia.com ಗೆ ಇಮೇಲ್ ಮಾಡಬೇಕು.
- ಲಾಗಿನ್ ವಿವರಗಳನ್ನು ಸ್ವೀಕರಿಸಿದ ನಂತರ ನಿರ್ವಾಹಕ ಲಾಗಿನ್ ಮತ್ತು ಪಾಸ್‌ವರ್ಡ್ ಬಳಸಿ ಅನುಸರಣೆ ಬಳಕೆದಾರರನ್ನು ರಚಿಸಬೇಕು. ಅನುಸರಣೆ ಬಳಕೆದಾರರು ತಾವು ಮತ ಹಾಕಲು ಬಯಸುವ ಖಾತೆ(ಗಳನ್ನು) ಲಿಂಕ್ ಮಾಡಲು ಸಾಧ್ಯವಾಗುತ್ತದೆ.
- ಲಾಗಿನ್‌ನಲ್ಲಿ ಲಿಂಕ್ ಮಾಡಲಾದ ಖಾತೆಗಳ ಪಟ್ಟಿಯನ್ನು ಸ್ವಯಂಚಾಲಿತವಾಗಿ ಮ್ಯಾಪ್ ಮಾಡಲಾಗುತ್ತದೆ ಮತ್ತು ಯಾವುದೇ ತಪ್ಪು ಮ್ಯಾಪಿಂಗ್‌ನ ಸಂದರ್ಭದಲ್ಲಿ ಡಿಲಿಂಕ್ ಮಾಡಬಹುದು. ಕಸ್ಟೋಡಿಯನ್ ಪರವಾಗಿ ಅವರು ನೀಡಿದ ಬೋರ್ಡ್ ರೆಸಲ್ಯೂಷನ್ ಮತ್ತು ಪವರ್ ಆಫ್ ಅಟಾರ್ನಿ (POA) ನ ಸ್ಕ್ಯಾನ್ ಮಾಡಿದ ಪ್ರತಿಯನ್ನು, ಯಾವುದಾದರೂ ಇದ್ದರೆ, ಅದನ್ನು ಪರಿಶೀಲಿಸಲು ಸ್ಕ್ರುಟೈನರ್ ಸಿಸ್ಟಮ್‌ನಲ್ಲಿ PDF ಸ್ವರೂಪದಲ್ಲಿ ಅಪ್‌ಲೋಡ್ ಮಾಡಬೇಕು.
- ಪರ್ಯಾಯವಾಗಿ, ವೈಯಕ್ತಿಕವಲ್ಲದ ಷೇರುದಾರರು ಸಂಬಂಧಿತ ಬೋರ್ಡ್ ರೆಸಲ್ಯೂಶನ್ / ಪ್ರಾಧಿಕಾರದ ಪತ್ರ ಇತ್ಯಾದಿಗಳನ್ನು ಕಳುಹಿಸಲು ಕೋರಿದ್ದಾರೆ. ಮತ ಚಲಾಯಿಸಲು ಅಧಿಕಾರ ಹೊಂದಿರುವ ಸರಿಯಾದ ಅಧಿಕೃತ ಅಧಿಕಾರಿಯ ದೃಢೀಕರಣಗೆ ವಿಶೇಷ ಸಹಿ ಸಹಿತ, ಇಮೇಲ್ ಐಡಿ sudhir.compsec@gmail.com ಅಥವಾ ಇಮೇಲ್ ಮೂಲಕ ಪರಿಶೀಲಕರಿಗೆ ಕಳುಹಿಸಲು ಅಥವಾ ಇಮೇಲ್ ಐಡಿ pdlinvestor.india@diageo.com ನಲ್ಲಿರುವ ಕಂಪನಿಯ ವೈಯಕ್ತಿಕ ಟ್ಯಾಬ್‌ನಿಂದ ಮತ ಚಲಾಯಿಸಿದರೆ ಮತ್ತು ಸಿಡಿಎಸ್‌ಎಲ್ ಇ-ಮತದಾನ ವ್ಯವಸ್ಥೆಯಲ್ಲಿ ಅದೇ ರೀತಿ ಅಪ್‌ಲೋಡ್ ಮಾಡದಿದ್ದಲ್ಲಿ ಪರಿಶೀಲನಾಕಾರರು ಅದನ್ನು ಪರಿಶೀಲಿಸುತ್ತಾರೆ.

ಡಿಮೆಟರಲೈಸ್ಡ್ ಮೋಡ್, ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು, ಎಜಿಎಂ ಸಮಯದಲ್ಲಿ, ಈ ಕೆಳಗಿನ ಸೂಚನೆಗಳನ್ನು ಅನುಸರಿಸಿ ಮತ ಚಲಾಯಿಸಬಹುದು:

(i) ಎಜಿಎಂ ದಿನದಂದು ಸಭೆ ಮತ್ತು ಇ-ಮತದಾನಕ್ಕೆ ಹಾಜರಾಗುವ ವಿಧಾನವು ದೂರಸ್ಥ ಇ-ಮತದಾನಕ್ಕಾಗಿ ಮೇಲೆ ತಿಳಿಸಿದ ಸೂಚನೆಗಳಂತೆಯೇ ಇರುತ್ತದೆ.

(ii) ಸಭೆಗೆ ಹಾಜರಾಗಲು VC/OAVM ಲಿಂಕ್ ಲಭ್ಯವಿರುತ್ತದೆ, ಅಲ್ಲಿ ರಿಮೋಟ್ ಇ-ಮತದಾನಕ್ಕಾಗಿ ಮೇಲೆ ತಿಳಿಸಲಾದ ಸೂಚನೆಗಳ ಪ್ರಕಾರ ಯಶಸ್ವಿ ಲಾಗಿನ್‌ಗಳ ನಂತರ ಕಂಪನಿಯ ಇವಿಎಸ್‌ಎನ್ ಪ್ರದರ್ಶಿಸಲಾಗುತ್ತದೆ.

(iii) ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸಿದ ಷೇರುದಾರರು ಸಭೆಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಆದಾಗ್ಯೂ, ಅವರು ಎಜಿಎಂನಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

(iv) ಉತ್ತಮ ಅನುಭವಕ್ಕಾಗಿ ಲ್ಯಾಪ್‌ಟಾಪ್‌ಗಳು / ಐಪ್ಯಾಡ್‌ಗಳ ಮೂಲಕ ಸಭೆಗೆ ಸೇರಲು ಷೇರುದಾರರನ್ನು ಪ್ರೋತ್ಸಾಹಿಸಲಾಗುತ್ತದೆ.

(v) ಸಭೆಯಲ್ಲಿ ಷೇರುದಾರರು ಯಾವುದೇ ತೊಂದರೆ ಉಂಟಾಗದಂತೆ ಕ್ಯಾಮೆರಾ ಮತ್ತು ಉತ್ತಮ ವೇಗದೊಂದಿಗೆ ಇಂಟರ್ನೆಟ್ ಅನ್ನು ಬಳಸಲು ಹೆಚ್ಚಿನ ಅಗತ್ಯವಿದೆ.

(vi) ಮೊಬೈಲ್ ಡಿವೈಸಸ್ ಟ್ಯಾಬ್ಲೆಟ್‌ಗಳಿಂದ ಅಥವಾ ಮೊಬೈಲ್ ಹಾಟ್‌ಸ್ಪಾಟ್ ಮೂಲಕ ಲ್ಯಾಪ್‌ಟಾಪ್ ಮೂಲಕ ಸಂಪರ್ಕಿಸುವ ಭಾಗವಹಿಸುವವರು ಆಯಾ ನೆಟ್‌ವರ್ಕ್‌ನಲ್ಲಿ ಏರಿಳಿತದಿಂದಾಗಿ ಆಡಿಯೋ / ವಿಡಿಯೋ ನಷ್ಟವನ್ನು ಅನುಭವಿಸಬಹುದು ಎಂಬುದನ್ನು ದಯವಿಟ್ಟು ಗಮನಿಸಿ. ಆದ್ದರಿಂದ ಮೇಲಿನ ಯಾವುದೇ ರೀತಿಯ ತೊಂದರೆಗಳನ್ನು ತಗ್ಗಿಸಲು ಸ್ಟೇಬಲ್ ವೈ-ಫೈ ಅಥವಾ ಲ್ಯಾನ್ ಸಂಪರ್ಕವನ್ನು ಬಳಸಲು ಶಿಫಾರಸು ಮಾಡಲಾಗಿದೆ.

(vii) ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಪ್ರಶ್ನೆಗಳನ್ನು ಕೇಳಲು ಇಚ್ಛಿಸುವ ಷೇರುದಾರರು ತಮ್ಮ ಹೆಸರನ್ನು, ಡಿಮ್ಯಾಟ್ ಖಾತೆ ಸಂಖ್ಯೆ/ಫೋಲಿಯೊ ಸಂಖ್ಯೆ, ಇಮೇಲ್ ಐಡಿ, ಮೊಬೈಲ್ ಸಂಖ್ಯೆಯನ್ನು ನಮೂದಿಸಲು **ಸಭೆಗೆ ಕನಿಷ್ಠ 5 ದಿನಗಳ ಮುಂಚಿತವಾಗಿ** ತಮ್ಮ ವಿನಂತಿಯನ್ನು pdlinvestor.india@diageo.com ಗೆ ಕಳುಹಿಸುವ ಮೂಲಕ ತಮ್ಮನ್ನು ಸ್ಪೀಕರ್ ಆಗಿ ನೋಂದಾಯಿಸಿಕೊಳ್ಳಬಹುದು. AGM ಸಮಯದಲ್ಲಿ ಮಾತನಾಡಲು ಇಚ್ಛಿಸದ ಆದರೆ ಪ್ರಶ್ನೆಗಳನ್ನು ಹೊಂದಿರುವ ಷೇರುದಾರರು ತಮ್ಮ ಹೆಸರು, ಡಿಮ್ಯಾಟ್ ಖಾತೆ ಸಂಖ್ಯೆ/ಫೋಲಿಯೊ ಸಂಖ್ಯೆ, ಇಮೇಲ್ ಐಡಿ, ಮೊಬೈಲ್ ಸಂಖ್ಯೆಯನ್ನು pdlinvestor.india@diageo.com ನಲ್ಲಿ ನಮೂದಿಸುವುದಕ್ಕೆ **5 ದಿನಗಳ ಮುಂಚಿತವಾಗಿ** ತಮ್ಮ ಪ್ರಶ್ನೆಗಳನ್ನು ಮುಂಗಡವಾಗಿ ಕಳುಹಿಸಬಹುದು. ಈ ಪ್ರಶ್ನೆಗಳಿಗೆ ಕಂಪನಿಯು ಸೂಕ್ತವಾಗಿ ಪ್ರತಿಕ್ರಿಯಿಸುತ್ತದೆ.

(viii) ತಮ್ಮನ್ನು ಸ್ಪೀಕರ್ ಆಗಿ ನೋಂದಾಯಿಸಿಕೊಂಡ ಷೇರುದಾರರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು ಮಾತ್ರ ಅನುಮತಿಸಲಾಗುತ್ತದೆ.

(ix) VC/OAVM ಸೌಲಭ್ಯದ ಮೂಲಕ AGM ನಲ್ಲಿ ಇರುವ ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತವನ್ನು ಚಲಾಯಿಸದ ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದ ಷೇರುದಾರರು ಮಾತ್ರ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಎಜಿಎಂ ಸಮಯದಲ್ಲಿ ಅರ್ಹರಾಗಿರುತ್ತಾರೆ .

(x) AGM ಸಮಯದಲ್ಲಿ ಲಭ್ಯವಿರುವ ಇ-ವೋಟಿಂಗ್ ಮೂಲಕ ಷೇರುದಾರರಿಂದ ಯಾವುದೇ ಮತಗಳನ್ನು ಚಲಾಯಿಸಿದರೆ ಮತ್ತು ಅದೇ ಷೇರುದಾರರು VC/OAVM ಸೌಲಭ್ಯದ ಮೂಲಕ ಸಭೆಯಲ್ಲಿ ಭಾಗವಹಿಸದಿದ್ದರೆ, ಅಂತಹ ಷೇರುದಾರರು ಮಾಡಿದ ಮತಗಳನ್ನು ಸೌಲಭ್ಯವಾಗಿ ಅಮಾನ್ಯವೆಂದು ಪರಿಗಣಿಸಲಾಗುತ್ತದೆ ಸಭೆಯ ಸಮಯದಲ್ಲಿ ಇ-ಮತದಾನವು ಸಭೆಯಲ್ಲಿ ಭಾಗವಹಿಸುವ ಷೇರುದಾರರಿಗೆ ಮಾತ್ರ ಲಭ್ಯವಿದೆ.

ಸದಸ್ಯರು ತಮ್ಮ ಕುಂದುಕೊರತೆಗಳನ್ನು, ಯಾವುದಾದರೂ ಇದ್ದರೆ, ಶೀಘ್ರ ಪರಿಹಾರಕ್ಕಾಗಿ info@vccipl.com / pdlinvestor.india@diageo.com ಗೆ ಇಮೇಲ್ ಮಾಡಲು ವಿನಂತಿಸಲಾಗಿದೆ. ಎಲೆಕ್ಟ್ರಾನಿಕ್ ವಿಧಾನದಿಂದ ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳ ಸಂದರ್ಭದಲ್ಲಿ, ಸದಸ್ಯರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು:
ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್,
17 ನೇ ಮಹಡಿ, ಪಿ ಜೆ ಟವರ್ಸ್, ದಲಾಲ್ ಸ್ಟ್ರೀಟ್, ಫೋರ್ಟ್, ಮುಂಬೈ - 400 001.
ದೂರವಾಣಿ - 022-23058738 or 022-23058542 or 022-23058543, ಇಮೇಲ್ - helpdesk.evoting@cdslindia.com

ಸದಸ್ಯರು ವಿಸಿ ಮತ್ತು/ಅಥವಾ ಇ-ಮತದಾನದ ಮೂಲಕ ಎಜಿಎಂಗೆ ಹಾಜರಾಗುವ ಬಗ್ಗೆ ಯಾವುದೇ ಪ್ರಶ್ನೆಗಳು ಅಥವಾ ಸಮಸ್ಯೆಗಳನ್ನು ಹೊಂದಿದ್ದರೆ, ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು ("FAQs") ಮತ್ತು ಇ-ಮತದಾನ ಕೈಪಿಡಿಯನ್ನು www.evotingindia.com ನಲ್ಲಿ, ಸಹಾಯ ವಿಭಾಗದ ಅಡಿಯಲ್ಲಿ ಬರೆಯಬಹುದು ಅಥವಾ helpdesk.evoting@cdslindia.com ಗೆ ಇಮೇಲ್ ಮಾಡಿ ಅಥವಾ 022-23058738 or 022-23058542 or 022-23058543 ಅನ್ನು ಸಂಪರ್ಕಿಸಿ.

ಎಲೆಕ್ಟ್ರಾನಿಕ್ ಮೂಲಕ ಮತ ಚಲಾಯಿಸುವ ಸೌಲಭ್ಯದೊಂದಿಗೆ ಸಂಪರ್ಕ ಹೊಂದಿರುವ ಎಲ್ಲಾ ಕುಂದುಕೊರತೆಗಳನ್ನು ಶ್ರೀ ರಾಕೇಶ್ ದಾಳ್ವಿ, ವ್ಯವಸ್ಥಾಪಕರು, (CDSL), ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್, ಎ ವಿಂಗ್, 25 ನೇ ಮಹಡಿ, ಮ್ಯಾರಥಾನ್ ಫ್ಯೂಚರ್, ಮಫತ್ಲಾಲ್ ಮಿಲ್ ಕಾಂಪೌಂಡ್ಸ್, NM ಜೋಶಿ ಮಾರ್ಗ , ಲೋಯರ್ ಪರೆಲ್ (ಪೂರ್ವ), ಮುಂಬೈ - 400013 ಅಥವಾ ಇಮೇಲ್ ಕಳುಹಿಸಿ helpdesk.evoting@cdslindia.com ಅಥವಾ 022-23058738 or 022-23058542 or 022-23058543 ಗೆ ಕರೆ ಮಾಡಿ.

ಪಯೋನೀರ್ ಡಿಸ್ಟಿಲರೀಸ್ ಲಿಮಿಟೆಡ್ ಪರವಾಗಿ

ದಿನಾಂಕ : 07ನೇ ಸೆಪ್ಟೆಂಬರ್, 2022
ಸ್ಥಳ : ಬೆಂಗಳೂರು

ಜೆ. ಸ್ವಾಮಿನಾಥನ್
ಕಂಪನಿ ಕಾರ್ಯದರ್ಶಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಒಳ್ಳೆಯದು ಉಳಿಯಬೇಕಾದರೆ ಕೆಟ್ಟವರೊಂದಿಗೆ ಹೋರಾಡಬೇಕು.

-ಅನಕೃ

ಬಸವರಾಜ ವಿರುದ್ಧ ಆರೋಪ ತನಿಖೆ ನಡೆಸುವುದು ಅಗತ್ಯ

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮ ಪ್ರಕರಣ ಹೊಸ ತಿರುವು ಪಡೆದಿದೆ. ಒಂದು ಹುದ್ದೆ ಕೊಡಿಸಲು ₹ 15 ಲಕ್ಷ ಲಂಚ ಪಡೆದಿದ್ದಾರೆ ಎಂಬ ಆರೋಪವನ್ನು ಕೊಪ್ಪಳ ಜಿಲ್ಲೆ ಕನಕಗಿರಿ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ದಢೇಸೂಗೂರು ಎದುರಿಸುತ್ತಿದ್ದಾರೆ. ಶಾಸಕರ ಜತೆ ನಿವೃತ್ತ ಪೊಲೀಸ್ ಕಾನ್‌ಸ್ಟೆಬಲ್ ಪರಸಪ್ಪ ಮಾತನಾಡಿದ್ದಾರೆ ಎನ್ನಲಾದ ಸಂಭಾಷಣೆಯ ಆಡಿಯೊ ಬಹಿರಂಗವಾಗಿದೆ. ‘ಪಿಎಸ್‌ಐ ನೇಮಕಾತಿಗಾಗಿ ಕೊಟ್ಟಿದ್ದ ₹ 15 ಲಕ್ಷ ವಾಪಸ್ ಕೊಡಿ’ ಎಂದು ಪರಸಪ್ಪ ಅವರ ಮಾತಿನ ಮೂಲಕ ಆರಂಭವಾಗುವ ಆಡಿಯೊದಲ್ಲಿ, ‘ದುಡ್ಡು ಕೊಟ್ಟಿದ್ದೀಯ, ವಾಪಸ್ ಕೊಡುತ್ತೇನೆ ಎಂದು ಹೇಳಿದ್ದೇನಲ್ಲ. ಹಣ ಪಡೆದಿದ್ದೇನೆ. ಆದರೆ, ಸರ್ಕಾರಕ್ಕೆ ಕೊಟ್ಟ ಹಣ ಅದು. ನಿನ್ನ ಕೆಲಸಕ್ಕಾಗಿ ಕೊಟ್ಟಿದ್ದೀಯ. ಸಾಲವನ್ನೇನೂ ಕೊಟ್ಟಿಲ್ಲವಲ್ಲ’ ಎಂದು ಶಾಸಕರು ಹೇಳಿರುವುದು ಆಡಿಯೊದಲ್ಲಿದೆ. ಆ ಧ್ವನಿ ತಮ್ಮದೇ ಎಂದು ದಢೇಸೂಗೂರು ಒಪ್ಪಿಕೊಂಡಿದ್ದಾರೆ. ‘ಈ ವಿಷಯದಲ್ಲಿ ಉಂಟಾಗಿದ್ದ ವಿವಾದ ಇತ್ಯರ್ಥ ಮಾಡಲು ಮಧ್ಯವರ್ತಿ ಕೆಲಸ ಮಾಡಿದ್ದೆ’ ಎಂದೂ ಅವರು ಹೇಳಿಕೊಂಡಿದ್ದಾರೆ. ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಶಾಸಕರು ಭಾಗಿಯಾಗಿರುವ ಆರೋಪಕ್ಕೆ ಇದು ಪುಷ್ಟಿ ನೀಡುವಂತಿದೆ. ಚುನಾಯಿತ ಪ್ರತಿನಿಧಿ ಲಂಚ ಪಡೆಯುವುದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧ. ‘ವ್ಯವಹಾರ’ವನ್ನು ಪರೋಕ್ಷವಾಗಿ ಒಪ್ಪಿಕೊಂಡ ಮೇಲೆ ಅವರ ವಿರುದ್ಧ ಕ್ರಮ ಜರುಗಿಸಲು ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿಗೆ ಸರ್ಕಾರ ಸೂಚನೆ ನೀಡಬೇಕಾಗಿತ್ತು ಅಥವಾ ಸಿಐಡಿ ಅಧಿಕಾರಿಗಳೇ ಪ್ರಕರಣ ದಾಖಲಿಸಬೇಕಾಗಿತ್ತು. ಲೋಕಾಯುಕ್ತ ಸಂಸ್ಥೆಯಾದರೂ ಸ್ವಯಂಪ್ರೇರಿತವಾಗಿ ಶಾಸಕರ ವಿರುದ್ಧ ಪ್ರಕರಣ ದಾಖಲಿಸುವ ಕೆಲಸ ಮಾಡಬೇಕಿತ್ತು. ಆದರೆ, ಅವು ಯಾವುವೂ ಆಗಿಲ್ಲ. ಅದರ ಬದಲಿಗೆ, ದುಡ್ಡು ವಾಪಸ್ ಕೇಳಿದ ಪರಸಪ್ಪ ಅವರನ್ನು ಶಾಸಕರು ಅವಾಚ್ಯವಾಗಿ ಬೈದಿದ್ದಾರೆ ಎನ್ನಲಾದ ಮತ್ತೊಂದು ಆಡಿಯೊ ಹೊರಬಂದಿದೆ. ಅದರಲ್ಲಿ ‘... ನಿನಗೆ ಒದೀತೀನಿ’ ಎಂದು ಶಾಸಕರು ಬೆದರಿಕೆ ಹಾಕಿರುವುದು ಅಕ್ಷಮ್ಯ. ಸಾರ್ವಜನಿಕರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕಾದ ಚುನಾಯಿತ ಪ್ರತಿನಿಧಿಗಳು ಲಜ್ಜೆ ಬಿಟ್ಟು ವರ್ತಿಸುವುದು ಪ್ರಜಾತಂತ್ರಕ್ಕೆ ಮಾಡುವ ಅವಮಾನ. ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆ, ಸೌಜನ್ಯ ಇಲ್ಲದ ಇಂತಹವರು ಚುನಾಯಿತ ಪ್ರತಿನಿಧಿಗಳಾಗಲು ಯೋಗ್ಯರಲ್ಲ. ದಢೇಸೂಗೂರು ವಿರುದ್ಧ ಬಿಜೆಪಿ ಶಿಸ್ತು ಕ್ರಮ ಕೈಗೊಳ್ಳಬೇಕು. ಈ ವಿಚಾರವಾಗಿ ಇಲ್ಲಿಯವರೆಗೆ ಬಿಜೆಪಿ ಅಧ್ಯಕ್ಷರಾಗಲೀ ಸರ್ಕಾರದ ಮುಖ್ಯಸ್ಥರಾಗಲೀ ಚಕಾರ ಎತ್ತಿಲ್ಲ ಎಂಬುದು ಸೋಜಿಗದ ಸಂಗತಿ.

ಪ್ರಕರಣವನ್ನು ಈಗಲಾದರೂ ನ್ಯಾಯಾಂಗ ಅಥವಾ ಲೋಕಾಯುಕ್ತ ತನಿಖೆಗೆ ವಹಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ

2021ರ ಅಕ್ಟೋಬರ್‌ನಲ್ಲಿ 545 ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿ ಪರೀಕ್ಷೆ ನಡೆದಿತ್ತು. ಈ ವರ್ಷದ ಏಪ್ರಿಲ್‌ನಲ್ಲಿ ಪರೀಕ್ಷಾ ಅಕ್ರಮ ಪತ್ತೆಯಾಗಿತ್ತು. ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಎಡಿಜಿಪಿ, ಏಳಕ್ಕೂ ಹೆಚ್ಚು ಡಿವೈಎಸ್‌ಪಿಗಳು ಸೇರಿದಂತೆ ಸುಮಾರು 100 ಮಂದಿಯನ್ನು ಈ ಪ್ರಕರಣದಲ್ಲಿ ಸಿಐಡಿ ಬಂಧಿಸಿದೆ. ಅಕ್ರಮ ನೇಮಕಾತಿಯ ಹಿಂದೆ ಕಾಂಗ್ರೆಸ್‌ನವರು ಇದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಒಳಗೊಂಡಂತೆ ಕೆಲವು ಸಚಿವರು ಆರೋಪಿಸುತ್ತಾ ಬಂದಿದ್ದಾರೆ. ಈ ಅಕ್ರಮದಲ್ಲಿ ಕಾಂಗ್ರೆಸ್ ನಾಯಕರೇ ಭಾಗಿಯಾಗಿದ್ದರೆ ಅವರನ್ನು ಬಂಧಿಸದೇ ಇರುವುದು ಏಕೆ? ಪಿಎಸ್‌ಐ ನೇಮಕಾತಿ ಅಕ್ರಮ ಪತ್ತೆಯಾದ ಬಳಿಕ ಸಹಾಯಕ ಪ್ರಾಧ್ಯಾಪಕರು, ಕೆಪಿಟಿಸಿಎಲ್ ಕಿರಿಯ ಸಹಾಯಕರು ಹಾಗೂ ಶಿಕ್ಷಕರ ನೇಮಕಾತಿ ಪರೀಕ್ಷೆಗಳಲ್ಲೂ ಅಕ್ರಮಗಳು ನಡೆದಿವೆ ಎಂದು ವರದಿಯಾಗಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಈ ಪರಿ ಅಕ್ರಮ ನಡೆಯುತ್ತದೆ ಎಂಬ ಭಾವನೆ ಗಟ್ಟಿಗೊಂಡರೆ, ಯುವ ಸಮುದಾಯವು ನಿರಾಶೆ-ಹತಾಶೆಗೆ ಈಡಾಗುತ್ತದೆ. ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚಿನವು ಅಕ್ರಮ ಎಸಗುವವರ ಪಾಲಾದರೆ ಹಣ ಇಲ್ಲದವರು ಎಲ್ಲಿಗೆ ಹೋಗಬೇಕು? ನೇಮಕಾತಿಗಳಲ್ಲಿನ ಅಕ್ರಮಗಳ ತನಿಖೆಗೆ ವೇಗ ನೀಡಿ, ತಪ್ಪಿತಸ್ಥರಿಗೆ ತ್ವರಿತವಾಗಿ ಶಿಕ್ಷೆಯಾಗುವಂತೆ ನೋಡಿಕೊಂಡರೆ ಯುವ ಸಮುದಾಯದಲ್ಲಿ ಭರವಸೆ ಮೂಡೀತು. ಆದರೆ, ತನಿಖೆ ನಡೆಸಿ, ಅಕ್ರಮಗಳಿಗೆ ಶಾಶ್ವತ ತಡೆ ಹಾಕುವ ಇಚ್ಛಾಶಕ್ತಿಯನ್ನು ತೋರಬೇಕಾದ ಸರ್ಕಾರವು ವಿರೋಧ ಪಕ್ಷದವರತ್ತ ಬೊಟ್ಟು ತೋರುವುದರಲ್ಲೇ ನಿರತವಾಗಿದೆ. ಯಾವುದೇ ಪ್ರಕರಣವು ಜನರ ನೆನಪಿನಲ್ಲಿ ಹೆಚ್ಚು ದಿನ ಇರುವುದಿಲ್ಲ ಎಂಬ ಮಾತಿದೆ. ಜನರಲ್ಲಿನ ಮರೆಯುವ ಗುಣವನ್ನೇ ಸರ್ಕಾರಗಳು ನೆಚ್ಚಿಕೊಳ್ಳಲು ಬಯಸುತ್ತವೆ ಮತ್ತು ಅಕ್ರಮಗಳ ತನಿಖೆಯಲ್ಲಿ ಅನಗತ್ಯ ವಿಳಂಬಕ್ಕೆ ದಾರಿ ಮಾಡಿಕೊಡುವುದನ್ನು ಪರಿಪಾಟವಾಗಿಸಿಕೊಂಡಿವೆ ಎಂಬುದು ಎಲ್ಲರೂ ಬಲ್ಲ ಸತ್ಯ. ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಅದು ಮರುಕಳಿಸುವುದು ಬೇಡ. ಮುಚ್ಚಿಹಾಕುವ ತಂತ್ರ ಬಳಕೆಯಾಗುವುದೂ ಬೇಡ. ಇದಕ್ಕೆ ತಾರ್ಕಿಕ ಅಂತ್ಯ ಕಾಣಿಸಬೇಕು. ಪ್ರಕರಣವನ್ನು ಈಗಲಾದರೂ ನ್ಯಾಯಾಂಗ ಅಥವಾ ಲೋಕಾಯುಕ್ತ ತನಿಖೆಗೆ ವಹಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

ದಿನದ ಟ್ವೀಟ್

ಗುಣಮಟ್ಟ ಕುಸಿದರೆ...

ಮೈಸೂರಿನ ಮಹಾರಾಜರು, ಬ್ರಿಟಿಷರು ನಿರ್ಮಿಸಿದ ಬೆಂಗಳೂರಿನ ಬಹುತೇಕ ಹಳೆಯ ಬಡಾವಣೆಗಳು ಮತ್ತು 90ರ ದಶಕದವರೆಗೆ ಬಿಡಿಎ ನಿರ್ಮಿಸಿದ ಬಡಾವಣೆಗಳು ಪ್ರವಾಹದಿಂದ ಪಾರಾಗಿವೆ. ಯೋಜಿತವಾಗಿ ನಿರ್ಮಾಣಗೊಳ್ಳದ ಹೊರವಲಯದ ಪ್ರದೇಶಗಳು ಮಾತ್ರ ಪ್ರವಾಹದ ಸಮಸ್ಯೆ ಎದುರಿಸುತ್ತಿವೆ. ಆಡಳಿತದ ಗುಣಮಟ್ಟವು 90ರ ದಶಕದ ನಂತರ ಹೇಗೆ ಕುಸಿಯುತ್ತ ಬಂದಿದೆ ಎಂಬುದನ್ನೂ ಇದು ಸೂಚಿಸುತ್ತದೆ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಸೀಟ್ ಬೆಲ್ಟ್ ಧರಿಸುವುದನ್ನು ಕಡ್ಡಾಯಗೊಳಿಸುವುದು ನಿಜಕ್ಕೂ ಒಳ್ಳೆಯದು. ಆದರೆ ಹೆದ್ದಾರಿಗಳಲ್ಲಿ, ನಿಧಾನಗತಿಯಲ್ಲಿ ಸಾಗುವ ಟ್ರಕ್‌ಗಳು ಮಧ್ಯ ಹಾಗೂ ಬಲಭಾಗದ ಪಥಗಳನ್ನು ಬಳಸಿಕೊಂಡು, ಇತರ ವಾಹನಗಳು ತಮ್ಮದಲ್ಲದ ಪಥಕ್ಕೆ ಬರುವಂತೆ ಮಾಡುವುದು ಹೆದ್ದಾರಿಗಳಲ್ಲಿನ ನಿಜವಾದ ಸಮಸ್ಯೆ. ನಿತಿನ್ ಗಡ್ಕರಿ ಅವರು ಈ ಸಮಸ್ಯೆಯನ್ನು ಪರಿಹರಿಸಬಹುದು ಎಂದು ಆಶಿಸೋಣ.

ನಿತಿನ್ ಪೈ, ನಿರ್ದೇಶಕ, ತಕ್ಷಶಿಲಾ ಸಂಸ್ಥೆ

25 ವರ್ಷಗಳ ಹಿಂದೆ

ಸೋಮವಾರ, 8-9-1997

● ಪರಮಾಣು ಸಾಮರ್ಥ್ಯ: ನವಾಜ್ ಒಪ್ಪಿಗೆ

ಇಸ್ಲಾಮಾಬಾದ್, ಸೆಪ್ಟೆಂಬರ್ 7 (ಪಿಟಿಐ)– ಪರಮಾಣು ಅಸ್ತ್ರಗಳನ್ನು ತಯಾರಿಸುವ ಸಾಮರ್ಥ್ಯ ತಮ್ಮ ದೇಶಕ್ಕಿದೆ ಎಂದು ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಅವರು ಬಹಿರಂಗವಾಗಿ ಘೋಷಿಸಿದ್ದಾರೆ.

‘ಪಾಕಿಸ್ತಾನ ಪರಮಾಣು ಅಸ್ತ್ರಗಳನ್ನು ತಯಾರಿಸಬಹುದಾದಂಥ ತಂತ್ರಜ್ಞಾನ ಸಾಮರ್ಥ್ಯ ಹೊಂದಿದೆ ಎಂಬುದು ಈಗಾಗಲೇ ತಿಳಿದಿರುವ ಸಂಗತಿ. ಆ ಬಗ್ಗೆ ಚರ್ಚೆ ನಿಲ್ಲಬೇಕು’ ಎಂದು ಅವರು ಹೇಳಿದ್ದಾರೆ.

1965ರಲ್ಲಿ ನಡೆದ ಭಾರತ- ಪಾಕಿಸ್ತಾನ ಯುದ್ಧದ ಸ್ಮರಣಾರ್ಥ ಲಾಹೋರಿನಲ್ಲಿ ಶನಿವಾರ ಏರ್ಪಡಿಸಲಾಗಿದ್ದ ‘ರಕ್ಷಣಾ ದಿನ’ ಸಮಾರಂಭದಲ್ಲಿ ಮಾತನಾಡಿದ ಅವರು, ‘ಸಾರ್ವಭೌಮ ರಾಷ್ಟ್ರವಾಗಿ ನಮ್ಮ ಬಳಿ ಏನಿದೆಯೋ ಅದು ನಮ್ಮ ಹಕ್ಕು’ ಎಂದರು.

● ಬೆಳಗಾವಿ ಜಿಲ್ಲೆ ವಿಭಜನೆ ನಿರ್ಣಯಕ್ಕೆ ನಿಲುಗಡೆ

ಬೆಳಗಾವಿ, ಸೆಪ್ಟೆಂಬರ್ 7– ಜಿಲ್ಲೆಯನ್ನು ವಿಭಜಿಸಿ ಮೂರು ಜಿಲ್ಲೆಗಳನ್ನು ರಚಿಸುವ ಕುರಿತು ತಾನು ತೆಗೆದುಕೊಂಡಿದ್ದ ನಿರ್ಣಯಕ್ಕೆ ಸರ್ಕಾರ ಇಂದು ನಿಲುಗಡೆ ಹೇಳಿದೆ.

‘ವಿಧಾನಸಭೆ ಉಪಾಧ್ಯಕ್ಷ ಚಂದ್ರಶೇಖರ ಮಾಮನಿ ಅವರು ಜಿಲ್ಲೆಯ ಜನತೆಗೆ ಈ ನಿಲುಗಡೆ ವಿಚಾರ ತಿಳಿಸಬೇಕು’ ಎಂದು ಸೂಚಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುಖ್ಯಮಂತ್ರಿಗಳ ಕಚೇರಿಯಿಂದ ಇಂದು ಫ್ಯಾಕ್ಸ್ ಸಂದೇಶ ತಲುಪಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 8-9-1972

● ಪಟನಾದಲ್ಲಿ ಗೋಲಿಬಾರ್, 120 ಜನರಿಗೆ ಗಾಯ: ಸೇನೆಗೆ ಕರೆ

ಪಟನಾ, ಸೆಪ್ಟೆಂಬರ್ 7– ಪಟನಾದಲ್ಲಿ ಇಂದು ವಿದ್ಯಾರ್ಥಿಗಳು ಮತ್ತು ಪೊಲೀಸರ ನಡುವೆ ಮತ್ತೆ ಘರ್ಷಣೆಗಳು ಸಂಭವಿಸಿ, ಪರಿಸ್ಥಿತಿಯನ್ನೆದುರಿಸಲು ಸೇನೆಗೆ ಸಜ್ಜಾಗುವಂತೆ ಕರೆ ಕೊಡಲಾಯಿತು.

ಲಾಠಿ ಪ್ರಹಾರ, ಅಶ್ರುವಾಯು, ಗೋಲಿಬಾರು ಮತ್ತು ವಿದ್ಯಾರ್ಥಿಗಳ ಕಲ್ಲೆಸೆತಗಳ ಪರಿಣಾಮ ಸುಮಾರು 120 ಜನ ಗಾಯಗೊಂಡಿದ್ದಾರೆ. ಇವರಲ್ಲಿ ಮೂವರು ಪೊಲೀಸರ ಗುಂಡಿನಿಂದ ಗಾಯಗೊಂಡವರು.

● ಅರಬ್ ಗೆರಿಲ್ಲಾಗಳಲ್ಲಿ ಮೂವರು ಒಲಿಂಪಿಕ್ ಗ್ರಾಮದ ಕೆಲಸಗಾರರು

ಬಾನ್, ಸೆಪ್ಟೆಂಬರ್ 7– ಇಸ್ರೇಲ್ ಕ್ರೀಡಾಪಟುಗಳ ಬಿಡಾರದ ಮೇಲೆ ದಾಳಿ ನಡೆಸಿ ಕೊನೆಗೆ ಮಂಗಳವಾರ ರಾತ್ರಿ ವಿಮಾನ ನಿಲ್ದಾಣದಲ್ಲಿ ಸತ್ತ ಐವರು ಅರಬ್ ಭಯೋತ್ಪಾದಕರಲ್ಲಿ ಒಬ್ಬ ಒಲಿಂಪಿಕ್ ಗ್ರಾಮ ನಿರ್ಮಾಣ ಯೋಜನೆಯಲ್ಲಿ ಎಂಜಿನಿಯರ್ ಆಗಿದ್ದನೆಂದೂ, ಆತನಿಗೆ ಒಲಿಂಪಿಕ್ ಗ್ರಾಮದ ಸ್ಥಳ ಪರಿಚಯ ವಿತ್ತೆಂದೂ ಹೇಳಲಾಗಿದೆ. ಇವನೇ ಅರಬ್ ಭಯೋತ್ಪಾದಕ ನಾಯಕನೆಂದೂ ಹೇಳಲಾಗಿದೆ.

20 ಕಿಲೊಗ್ರಾಂ ಬದಲು ಬರೀ 20 ಗ್ರಾಂ ಸಾರಜನಕದಲ್ಲಿ ಮೊದಲಿನಷ್ಟೆ ಭತ್ತ ಬೆಳೆಯಬಹುದೆ?

‘ನ್ಯಾನೊ ಯೂರಿಯಾ’: ನಾನಾ ಪ್ರಶ್ನೆ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಕಳೆದ ವರ್ಷ ಹೊಸದಾಗಿ ಹೊಲಕ್ಕಿಳಿದ ನ್ಯಾನೊ ಯೂರಿಯಾ ಈಗ ವಿವಾದದ ಕಣವಾಗಿದೆ. 45 ಕಿಲೊಗ್ರಾಂ ತೂಕದ ಒಂದಿಡೀ ಮೂಟೆಭರ್ತಿ ಯೂರಿಯಾದ ಬದಲು ಈಗ ಕೇವಲ ಅರ್ಧ ಲೀಟರ್ ಬಾಟಲಿಯಲ್ಲಿರುವ ದ್ರವವನ್ನು ಸಿಂಪಡಿಸಿದರೆ ಸಾಕು. ಬೆಲೆಯೂ ತೀರ ಜಾಸ್ತಿ ಏನಿಲ್ಲ. ಮೂಟೆಗೆ ₹ 242 ಇದ್ದರೆ, ಈ ಅರ್ಧ ಲೀಟರ್ ಯೂರಿಯಾಕ್ಕೆ ₹ 240 ಅಷ್ಟೆ. ಇದನ್ನು ನೀರಿಗೆ ಬೆರೆಸಿ ಭತ್ತ, ಗೋಧಿ, ಜೋಳ ಅಥವಾ ಆಲೂಗಡ್ಡೆ ಪೈರಿನ ಮೇಲೆ ಸಿಂಪಡನೆ ಮಾಡಿದರೆ ಇಳುವರಿ ಮೊದಲಿನಷ್ಟೇ ಇರುತ್ತದೆ. ಅಥವಾ ತುಸು ಹೆಚ್ಚೇ ಸಿಗಬಹುದು. ಹಾನಿಯಂತೂ ಇಲ್ಲ.

ಈ ನ್ಯಾನೊ ದ್ರವದಿಂದ ರೈತರಿಗೆ ಏನೆಲ್ಲ ಅನುಕೂಲವಿದೆ. ಪೇಟೆಯಿಂದ ಯೂರಿಯಾ ಮೂಟೆಗಳನ್ನು ಸಾಗಿಸಿ ತರಬೇಕಾಗಿಲ್ಲ. ಮನೆಯಲ್ಲಿ ತೇವ ತಟ್ಟದಂತೆ ಸುರಕ್ಷಿತ ಇಡಬೇಕಿಲ್ಲ. ಮೂಟೆಯನ್ನು ಹೊತ್ತು ಹೊಲಕ್ಕೆ ಹೋಗುವ ಬದಲು ಈ ಚಿಕ್ಕ ಲೀಟರ್ ಬಾಟಲಿ ಹಿಡಿದು ಹೊರಟರೆ ಸಾಕು.

ಗುಜರಾತ್‌ನ ಕಲೋಲ್ ಎಂಬಲ್ಲಿ ಈ ನ್ಯಾನೊ ಯೂರಿಯಾ ಫ್ಯಾಕ್ಟರಿಯನ್ನು ಕಳೆದ ಮೇ 28ರಂದು ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟಿಸಿ, ‘ಇದೊಂದು ಕ್ರಾಂತಿಕಾರೀ ಸಾಧನೆ’ ಎಂದು ಘೋಷಿಸಿದರು. ನ್ಯಾನೊ ಯೂರಿಯಾದ ಎಲ್ಲ ಸದ್ಗುಣಗಳನ್ನೂ ವಿಜ್ಞಾನಿಗಳನ್ನೂ ಹೊಗಳಿದರು. ಈ ಫ್ಯಾಕ್ಟರಿಯಲ್ಲಿ ದಿನಕ್ಕೆ ಇಂಥ ಒಂದೂವರೆ ಲಕ್ಷ ಬಾಟಲಿಗಳಲ್ಲಿ ನ್ಯಾನೊ ಯೂರಿಯಾ ತಯಾರಾಗುತ್ತಿದೆ. ‘ದೇಶದ ಇತರ ಎಂಟು ಕಡೆಗಳಲ್ಲಿ ಇಂಥದ್ದೇ ಫ್ಯಾಕ್ಟರಿಯನ್ನು ಸ್ಥಾಪಿಸುತ್ತೇವೆ’ ಎಂದರು. ಸಾರಜನಕ ಜೊತೆಗೆ ಸಸ್ಯಗಳಿಗೆ ಬೇಕಾದ ಇತರ ಪೋಷಕ ದ್ರವ್ಯಗಳನ್ನೂ (ಪೊಟ್ಯಾಸಿಯಂ, ರಂಜಕಗಳನ್ನೂ) ನ್ಯಾನೊ ರೂಪದಲ್ಲಿ ಉತ್ಪಾದಿಸಲಿದ್ದೇವೆ ಎಂತಲೂ ಹೇಳಿದರು.

ರಾಜಸ್ಥಾನದ ಹಳ್ಳಿಯೊಂದರಲ್ಲಿ ಜನಿಸಿದ ಡಾ. ರಮೇಶ್ ರಲಿಯಾ (36) ಈ ನ್ಯಾನೊ ದ್ರವವನ್ನು ಸೃಷ್ಟಿಸಿ ಖ್ಯಾತರಾಗಿದ್ದಾರೆ. ಜೋಧಪುರದ ಕೃಷಿ ಸಂಸ್ಥೆಯಲ್ಲಿ ತರಬೇತಿ ಪಡೆದ ಅವರು ವಾಷಿಂಗ್ಟನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ನ್ಯಾನೊ ತಂತ್ರಜ್ಞಾನದಲ್ಲಿ ಈಗಾಗಲೇ ಹದಿನೈದು ಉತ್ಪನ್ನಗಳ ಪೇಟೆಂಟ್ ಪಡೆದಿದ್ದಾರೆ. ದೇಶಕ್ಕೆ ಒಳ್ಳೆಯದಾಗಲೆಂದು ತಮ್ಮ ನ್ಯಾನೊ ಯೂರಿಯಾ ಪೇಟೆಂಟನ್ನು ಉಚಿತವಾಗಿ ಭಾರತದ ಇಫ್ಕೊ (IFFCO) ಸಂಸ್ಥೆಗೆ ನೀಡಿದ್ದಾರೆ. ಇಫ್ಕೊ ಗೊತ್ತಲ್ಲ? ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಮತ್ತು ವಿತರಣೆಯ ಏಕಸ್ವಾಮ್ಯವನ್ನು ಪಡೆದಿರುವ ಇದು ಜಗತ್ತಿನ ಅತಿ ದೊಡ್ಡ ಸಹಕಾರಿ ಸಂಸ್ಥೆ ಎಂದೇ ಹೆಸರಾಗಿದೆ. ಡಾ. ರಲಿಯಾಗೆ ‘ಆತ್ಮನಿರ್ಭರ್ ಚಾಂಪಿಯನ್ ಮೆಡಲ್’ ಸಿಕ್ಕಿದೆ.

ನ್ಯಾನೊ ತಂತ್ರಜ್ಞಾನದ ನಾನಾ ಸದ್ಗುಣಗಳ ಬಗ್ಗೆ ನಾವು ಕೇಳುತ್ತಲೇ ಬಂದಿದ್ದೇವೆ. ‘ಅತಿ ಸೂಕ್ಷ್ಮ ಜಗತ್ತಿನ ಅತಿ ದೊಡ್ಡ ಅನ್ವೇಷಣೆ’ ಎಂಬ ಖ್ಯಾತಿ ಇದರದ್ದು. ನ್ಯಾನೊ ಮೀಟರ್ ಎಂದರೆ ಒಂದು ಮೀಟರಿನ ಶತಕೋಟಿಯಲ್ಲಿ ಒಂದು ಭಾಗ. ನಮ್ಮ ಹೆಬ್ಬೆರಳಿನಲ್ಲಿರುವ ರಕ್ತನಾಳ ಒಂದು ಮಿಲಿಮೀಟರ್ ದಪ್ಪ ಇದೆ ಎಂದುಕೊಂಡರೆ, ಅದರಲ್ಲಿ ಒಂದು ಸಾವಿರ ರಕ್ತಕಣಗಳು ಏಕಕಾಲಕ್ಕೆ ಚಲಿಸಬಲ್ಲವು. ಅಂಥ ಒಂದೊಂದು ರಕ್ತಕಣದಲ್ಲಿ ಔಷಧ (ಅಥವಾ ಬೇರಾವುದೇ) ದ್ರವ್ಯದ ಏಳು ಸಾವಿರ ನ್ಯಾನೊ ಕಣಗಳನ್ನು ತೂರಿಸಬಹುದು. ಅಷ್ಟು ಸೂಕ್ಷ್ಮ ಹಂತದಲ್ಲಿ, ದ್ರವ್ಯಗಳ ಸ್ವರೂಪ, ಗುಣಲಕ್ಷಣ, ಚಲನೆಯ ವೈಖರಿ ಎಲ್ಲ ಬದಲಾಗುತ್ತವೆ. ಯೂರಿಯಾ ಕಣ ಅಷ್ಟು ಚಿಕ್ಕ ಗಾತ್ರದಲ್ಲಿದ್ದರೆ ಅದು ಸಸ್ಯದ ಜೀವಕೋಶದ ಜೊತೆ ಸಲೀಸಾಗಿ ಹೊಕ್ಕು ಹೊರಡುತ್ತ ಸಸ್ಯದ ಬೆಳವಣಿಗೆಗೆ ಚುರುಕು ನೀಡುತ್ತದೆ. ನಮ್ಮ ನಿಜ ಜೀವನದ ಅನುಭವವೂ ಹಾಗೇ ತಾನೆ? ಒತ್ತೊತ್ತಾಗಿ ನಿಂತ ಹತ್ತಾರು ಜನರಿಗಿಂತ ಪ್ರತ್ಯೇಕ ನಿಂತು ಕೈಕಾಲು ಆಡಿಸಬಲ್ಲವನ ತಾಕತ್ತು ಜಾಸ್ತಿ ಇರುತ್ತದೆ.

ನಮ್ಮ ದೇಶಕ್ಕೆ ಇಂಥ ಅಮೋಘ ತಂತ್ರಜ್ಞಾನ ಬೇಕಿತ್ತು, ಏಕೆಂದರೆ, ನಮ್ಮ ಫ್ಯಾಕ್ಟರಿಗಳ ಯೂರಿಯಾ ಉತ್ಪಾದನೆ ದೇಶಕ್ಕೆ ಸಾಕಾಗುತ್ತಿಲ್ಲ. ಬೇರೆ ದೇಶಗಳಿಂದ ಪ್ರತಿವರ್ಷ 40 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ 90 ಲಕ್ಷ ಟನ್ ಯೂರಿಯಾ ಆಮದು ಮಾಡಿಕೊಳ್ಳುತ್ತಿದ್ದೇವೆ. ಈ ಚಿಕ್ಕ ಬಾಟಲಿಯ ನ್ಯಾನೊ ಯೂರಿಯಾ ಬಳಸುತ್ತಿದ್ದರೆ ಇನ್ನು ಮೂರು ವರ್ಷಗಳ ನಂತರ ನಮಗೆ ವಿದೇಶೀ ಯೂರಿಯಾ ಬೇಕಾಗುವುದಿಲ್ಲ ಎಂದು ಮೋದಿಯವರು ಘೋಷಿಸಿದ್ದಾರೆ.

ಪ್ರಧಾನಿಯವರೇ ಆಸಕ್ತಿ ವಹಿಸಿದ ಮೇಲೆ ಕೇಳಬೇಕೆ? ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ವಿಜ್ಞಾನಿಗಳು ನ್ಯಾನೊ ಯೂರಿಯಾ ತುಂಬಿದ ಶೀಶೆಗಳನ್ನು ಹಿಡಿದು ತ್ವರಿತವಾಗಿ ದೇಶದ ತುಂಬೆಲ್ಲ ಓಡಾಡಿ, 90 ಬಗೆಯ ಬೆಳೆಗಳ ಮೇಲೆ, ಎರಡು ಋತುಗಳಲ್ಲಿ ಸಿಂಚನ ಮಾಡಿ ಉಘೇ ಎಂದರು. ಎಲ್ಲೂ ಇಳುವರಿ ಕಮ್ಮಿ ಆಗಿಲ್ಲ; ಬದಲಿಗೆ ಕೆಲವೆಡೆ ಶೇಕಡ 8ರಷ್ಟು ಹೆಚ್ಚೇ ಆಗಿದೆ ಎಂದರು.

ಇದು ನಿಜಕ್ಕೂ ಸಾಧ್ಯವೆ? ಅಥವಾ ಕಣ್ಕಟ್ಟೆ? ಇದರ ಫಲಾಫಲಗಳ ಪೂರ್ತಿ ಅಧ್ಯಯನ ಮಾಡದೆ ಅವಸರದಲ್ಲಿ ಪರಿಚಯಿಸಿದ್ದು ಸರಿಯೆ? ಅಪಸ್ವರ ಎದ್ದಿದೆ. ಐಸಿಎಆರ್ ಸಂಸ್ಥೆಯ ನಿವೃತ್ತ ಉಪ ನಿರ್ದೇಶಕ ಐ.ಪಿ. ಅಬ್ರೋಲ್ ಅವರಿಗೆ ಇದರಲ್ಲೇನೋ ಐಬು ಕಾಣುತ್ತಿದೆ. ‘ಎಲೆಗಳ ಮೇಲೆ ದ್ರವರೂಪದ ಪೋಷಕಾಂಶದ ಸಿಂಪಡನೆಯ ಲಾಭದ ಬಗ್ಗೆ ತುಂಬ ಹಿಂದೆಯೇ ಗೊತ್ತಿದೆ, ಹೊಸದೇನು?’ ಎಂದು ಅವರು ಕೇಳುತ್ತಾರೆ. ಹರಿಯಾಣ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರೊಫೆಸರ್ ಎನ್.ಕೆ.ತೋಮರ್ ಅವರ ಪ್ರಕಾರ, ಇಫ್ಕೊ ಸಂಸ್ಥೆಯ ಈ ಹೆಜ್ಜೆ ಕೃಷಿಕರಿಗೆ ಅಷ್ಟೇ ಅಲ್ಲ, ದೇಶಕ್ಕೇ ಆತ್ಮಘಾತುಕ ಆಗಬಹುದಾಗಿದೆ. ಅವರ ಲೆಕ್ಕಾಚಾರದ ಪ್ರಕಾರ, ಒಂದು ಮೂಟೆಯಲ್ಲಿ 45 ಕಿಲೊ ಯೂರಿಯಾ ಅಂದರೆ 20 ಕಿಲೊಗ್ರಾಂ ಸಾರಜನಕ ಇರುತ್ತದೆ. ಅದೇ ಅರ್ಧ ಲೀಟರ್ ನ್ಯಾನೊದ್ರವದಲ್ಲಿ ಕೇವಲ 20 ಗ್ರಾಂ ಸಾರಜನಕ ಇರುತ್ತದೆ. ಅವೆರಡೂ ಸಮಸಮ ಆಗಲು ಹೇಗೆ ಸಾಧ್ಯ? ‘ಒಂದು ಟನ್ ಭತ್ತ ಬೆಳೆಯಲು 20 ಕಿ.ಗ್ರಾಂ. ಸಾರಜನಕ ಬೇಕೇ ಬೇಕು. ನೀವು ನ್ಯಾನೊ ಕಣಗಳ ರೂಪದಲ್ಲಿ 20 ಗ್ರಾಂ ಸಾರಜನಕ ಕೊಟ್ಟರೆ ಅದರಿಂದ 368 ಗ್ರಾಂ ಭತ್ತ ಸಿಗುತ್ತದೆ ಅಷ್ಟೆ’ ಎಂಬ ವಿವರ ಲೆಕ್ಕಾಚಾರ ನೀಡುವ ಅವರು, ನೀತಿ ಆಯೋಗಕ್ಕೆ ಹಾಗೂ ಕೃಷಿ ವಿಜ್ಞಾನಿಗಳ ರಾಷ್ಟ್ರೀಯ ಅಕಾಡೆಮಿಗೆ ದೂರು ಸಲ್ಲಿಸಿದ್ದಾರೆ. ಐಸಿಎಆರ್ ನಿವೃತ್ತ ಮಹಾನಿರ್ದೇಶಕ ತ್ರಿಲೋಚನ್ ಮಹಾಪಾತ್ರ ಕೂಡ ನ್ಯಾನೊ ಮ್ಯಾಜಿಕ್ಕನ್ನು ನಂಬುತ್ತಿಲ್ಲ. ಇದ್ದುದರಲ್ಲಿ ಸಂತಸದ ಸಂಗತಿ ಏನೆಂದರೆ, ಮೂಟೆಭರ್ತಿ ಯೂರಿಯಾ ಚೆಲ್ಲುವಾಗ ಶೇ 70ರಷ್ಟು ವ್ಯರ್ಥವಾಗಿ ಮಣ್ಣಿಗೆ, ಗಾಳಿಗೆ ಸೇರುತ್ತಿತ್ತು. ಅದರ ಬದಲು ‘ನೇರವಾಗಿ ಈಗ ಎಲೆಗಳಿಗೇ ಸಿಂಪಡನೆ ಮಾಡಿದರೆ ಪರಿಸರಕ್ಕೂ ಒಳ್ಳೆಯದು’ ಎನ್ನುತ್ತಾರೆ ಅವರು.

ಹಿಂದೆಲ್ಲ ಹೊಲದಲ್ಲಿ ಹೆಚ್ಚುವರಿಯಾಗಿ ಸೋರಿದ್ದ ಸಾರಜನಕವನ್ನೇ ಸಸ್ಯಗಳು ಈಗ ನ್ಯಾನೊ ಕಣಗಳ ಸಹಾಯದಿಂದ ಸಮರ್ಥವಾಗಿ ಮೇಲೆತ್ತಿ ಒಂದೆರಡು ವರ್ಷ ಬಳಸಿಕೊಳ್ಳಬಹುದು. ಮುಂದೆ? ಕೆಲ ವರ್ಷಗಳ ನಂತರ ನೆಲವೆಲ್ಲ ಪೂರ್ತಿ ಬರಡಾದ ಮೇಲೆ ‘ಆತ್ಮನಿರ್ಭರ ಅನ್ನೋದು ಆತ್ಮಘಾತುಕ ಆಗಲಾರದೆ?’ ಎಂದು ಚಿಂತನಶೀಲ, ಶ್ರಮಜೀವಿ ರೈತರು ಕೇಳುತ್ತಾರೆ. 1996ರಲ್ಲಿ ರಾಮರ್ ಪಿಳ್ಳೈ ಎಂಬಾತ ಬರೀ ನೀರಿಗೆ ಗಿಡಮೂಲಿಕೆ ಹಾಕಿ ಪೆಟ್ರೋಲ್ ತಯಾರಿಸುತ್ತೇನೆಂದು ಹೇಳಿ ವಿಜ್ಞಾನಿಗಳನ್ನೂ ಸರ್ಕಾರವನ್ನೂ ಏಮಾರಿಸಿದ್ದ. ಈಗಿನದು ಅಂಥ ಭಯಂಕರ ಬುರುಡೆ ಇರಲಿಕ್ಕಿಲ್ಲ. ಏನೇ ಇರಲಿ, ಗುಜರಾತಿನ ಕಲ್ಲೋಲದಲ್ಲಿ ಪ್ರಾರಂಭವಾದ ನ್ಯಾನೊ ಯೂರಿಯಾ ಕ್ರಾಂತಿ ನಾಳೆ ಕೃಷಿರಂಗದ ಅಲ್ಲೋಲ ಕಲ್ಲೋಲಕ್ಕೆ ಕಾರಣವಾಗದಿದ್ದರೆ ಸರಿ.

ಚುರುಮುರಿ

ಜಲಬಾಧೆ

● ಮಣ್ಣೆರಾಜು

ಶಂಕ್ರಿ ಮನೆಗೆ ಮಳೆನೀರು ನುಗ್ಗಿ ಅವಾಂತರವಾಗಿತ್ತು. ಪಾತ್ರೆ ಪದಾರ್ಥಗಳು ನೀರಿನಲ್ಲಿ ತೇಲಾಡುತ್ತಿದ್ದವು. ಸ್ವಚ್ಛ ಮಾಡೋದು ಹೇಗೆ ಅಂತ ಗಂಡ, ಹೆಂಡತಿ ತಲೆ ಮೇಲೆ ಕೈ ಹೊತ್ತು ಟೇಬಲ್ ಮೇಲೆ ಕುಳಿತಿದ್ದರು.

ಪಕ್ಕದ ಮನೆ ಪದ್ಮಾ ಬಂದು, ‘ನಿಮ್ಮ ಮನೆಯೂ ಜಲಮಂಡಳಿ ಆಗಿದೆಯಲ್ರೀ! ನಮ್ಮ ಮನೆಗೂ ನೀರು ನುಗ್ಗಿದೆ, ಕ್ಲೀನ್ ಮಾಡಲು ಹೆಲ್ಪ್ ಮಾಡ್ತೀರೇನೋ ಅಂತ ಕೇಳಲು ಬಂದೆ’ ಅಂದಳು.

‘ನೀವು ‘ನಾಯಿ ಇದೆ ಎಚ್ಚರಿಕೆ’ ಅಂತ ಬೋರ್ಡ್ ಹಾಕಿದ್ದೀರಿ, ನಾಯಿಗೂ ಹೆದರದೆ ನೀರು ನುಗ್ಗಿಬಿಟ್ಟಿತಾ?’ ಶಂಕ್ರಿ ರೇಗಿಸಿದ.

‘ಅವರ ನಾಯಿ ಕಳ್ಳರಿಗೇ ಬೊಗಳೋದಿಲ್ಲ, ಇನ್ನು ನೀರಿಗೆ ಬೊಗಳುತ್ತಾ...’ ಸುಮಿ ಕಿಚಾಯಿಸಿದಳು.

‘ಕಳ್ಳರು ಮನೆಗೆ ನುಗ್ಗಿದರೆ ಪೊಲೀಸರಿಗೆ ಕಂಪ್ಲೇಂಟ್ ಕೊಡಬಹುದು, ನೀರು ನುಗ್ಗಿದರೆ ಯಾರಿಗೆ ಹೇಳೋದು?’ ಪದ್ಮಾಳ ಸಂಕಟ.

‘ಕ್ಲೀನ್ ಮಾಡಲು ನಿಮ್ಮ ಗಂಡ ಹೆಲ್ಪ್ ಮಾಡೋದಿಲ್ವಾ?’

‘ಮಳೆಯಲ್ಲಿ ನೆನೆದು ಶೀತ, ನೆಗಡಿಯಾಗಿ ಅವರು ಮಾತ್ರೆ ನುಂಗಿದ್ದಾರೆ, ನಾನು ದುಃಖ ನುಂಗುವಂತಾಗಿದೆ. ಮಕ್ಕಳು ಪೇಪರ್‌ಬೋಟ್ ಮಾಡಿಕೊಂಡು ಮನೆ ನೀರಲ್ಲಿ ಆಟ ಆಡಿಕೊಂಡಿದ್ದಾರೆ’.

‘ನೀರಿನಲ್ಲಿ ಸಂಸಾರ ಮಾಡುವ ಜಲಚರ ಪ್ರಾಣಿಗಳಾಗಿಬಿಟ್ಟಿದ್ದೀವಿ ನಾವು...’ ಸುಮಿಯೂ ನೊಂದಳು.

‘ನೆಲ, ಜಲ ಎರಡರ ಮೇಲೂ ಬಾಳುವ ಭಾಗ್ಯ ಮನುಷ್ಯರಿಗೂ ಇರಬೇಕಾಗಿತ್ತು’ ಶಂಕ್ರಿ ಆಸೆಪಟ್ಟ.

‘ವ್ಯವಸ್ಥಿತ ರಸ್ತೆ, ಚರಂಡಿ ಇಲ್ಲದೆ ಮನೆಗೆ ನೀರು ನುಗ್ಗುವ ಪರಿಸ್ಥಿತಿ ಬಂದಿದೆ, ನೀವೇ ಬಂದು ಕ್ಲೀನ್ ಮಾಡಿಸಿ ಅಂತ ಕಾರ್ಪೊರೇಟರ್‌ಗೆ ಫೋನ್ ಮಾಡಬೇಕಾಗಿತ್ತು’ ಅಂದಳು ಸುಮಿ.

‘ಮಾಡಿದ್ದೆ, ಅವರ ಹೆಂಡ್ತಿ ರಿಸೀವ್ ಮಾಡಿದ್ದರು, ಅವರ ಮನೆಗೂ ನೀರು ನುಗ್ಗಿದೆಯಂತೆ, ಕಾರ್ಪೊರೇಟರ್ ಮನೆ ಕ್ಲೀನ್ ಮಾಡ್ತಿದ್ದಾರಂತೆ. ಅದನ್ನು ಮುಗಿಸಿ ನಮ್ಮನೆಗೆ ಬರ್ತಾರಂತೆ...’ ಎಂದು ಹೇಳಿ ಪದ್ಮಾ ಹೊರಟಳು.

ಸಂಗತ

ಸಾವು: ಮಾರಾಟಕ್ಕಿಟ್ಟ ಸರಕು?

ಆತ್ಮಪರೀಕ್ಷೆ ಮತ್ತು ಆತ್ಮವಿಮರ್ಶೆಗೆ ಒಳಗಾಗದ ಸಮಾಜದಲ್ಲಿ...

● ರಾಜಕುಮಾರ ಕುಲಕರ್ಣಿ

ಬದುಕಿನಲ್ಲಿ ಲೋಕಾಂತ ಮತ್ತು ಏಕಾಂತಗಳೆಂಬ ಎರಡು ಅವಸ್ಥೆಗಳಿರುತ್ತವೆ ಎಂದಿದ್ದಾರೆ ತಿಳಿದವರು. ಸದಾಕಾಲ ಲೋಕಾಂತದಲ್ಲೇ ಬದುಕುತ್ತಿರುವ ಮನುಷ್ಯನಿಗೆ ಏಕಾಂತವನ್ನು ಪ್ರವೇಶಿಸುವಷ್ಟು ತಾಳ್ಮೆಯಾಗಲೀ ಪುರಸತ್ತಾಗಲೀ ಇಲ್ಲ. ಇಂದಿನ ವೈಭವದ ಆಧುನಿಕ ಜೀವನಶೈಲಿಯಿಂದಾಗಿ ನಿಶ್ಶಬ್ದ ಮತ್ತು ನೀರವ ವಾತಾವರಣದಲ್ಲಿ ಒಬ್ಬಂಟಿಯಾಗಿ ಕುಳಿತು ಮನಸ್ಸನ್ನು ನಿಗ್ರಹಿಸಿಕೊಳ್ಳುತ್ತ ಏಕಾಂತವನ್ನು ಹೊಕ್ಕು ತನ್ನ ವರ್ತನೆಯನ್ನು ವಿಮರ್ಶಿಸಿಕೊಳ್ಳುವ ಆತ್ಮಾವಲೋಕನದ ಗುಣವನ್ನು ಮನುಷ್ಯ ಕಳೆದುಕೊಂಡಿದ್ದಾನೆ. ಆತ್ಮಪರೀಕ್ಷೆ, ಆತ್ಮವಿಮರ್ಶೆಗೆ ಇಂದು ಅವನು ಒಳಗಾಗುತ್ತಿಲ್ಲ. ಸಮಾಜದಲ್ಲಿ ಕ್ರೌರ್ಯ ಮತ್ತು ಹಿಂಸೆ ವಿಜೃಂಭಿಸುತ್ತಿವೆ. ಅದಕ್ಕೆಂದೇ ಇಲ್ಲಿ ಸಾವು ಕೂಡ ಮಾರುಕಟ್ಟೆಯಲ್ಲಿ ಮಾರಾಟಕ್ಕಿಟ್ಟ ಸರಕಿನಂತೆ ಗೋಚರಿಸುತ್ತಿದೆ.

ಇತ್ತೀಚೆಗೆ ಒಂದು ವಾರದ ಅವಧಿಯಲ್ಲಿ ನನ್ನ ಅನುಭವಕ್ಕೆ ಬಂದ ಎರಡು ಪ್ರಸಂಗಗಳು ಇದನ್ನು ಸಾಕ್ಷೀಕರಿಸುವಂತಿವೆ. ಬೆಳಗಿನ ವಾಕಿಂಗ್‌ನಲ್ಲಿ ಆಗಾಗ ಭೇಟಿಯಾಗುವ ಪರಿಚಯದ ಹಿರಿಯರೊಬ್ಬರು ಕೆಲ ದಿನಗಳಿಂದ ಕಾಣಿಸದೇ ಇದ್ದವರು ದಿಢೀರೆಂದು ಪ್ರತ್ಯಕ್ಷರಾದರು. ಅಷ್ಟು ದಿನಗಳ ಅನುಪಸ್ಥಿತಿಗೆ ಕಾರಣ ಕೇಳಿದಾಗ ಅವರು ಹೇಳಿದ್ದಿಷ್ಟು- ‘ಎರಡು ವಾರಗಳ ಹಿಂದೆ ಇದ್ದಕ್ಕಿದ್ದಂತೆ ಕಾಯಿಲೆಯಿಂದ ಆರೋಗ್ಯದಲ್ಲಿ ಏರುಪೇರಾಗಿ ಸಾವಿನ ಭಯ ಮನಸ್ಸನ್ನು ಆವರಿಸಿತು. ಬದುಕಿನಲ್ಲಿ ಇನ್ನೂ ಅನುಭವಿಸಬೇಕಾದದ್ದು ಬಹಳಷ್ಟಿದೆ. ಸಾವಿನ ಭೀತಿಯಿಂದ ಪಾರಾಗಲು ಅನೇಕ ದೇವಸ್ಥಾನಗಳಿಗೆ ಭೇಟಿ ನೀಡಿ ಕಾಣಿಕೆ ಸಮರ್ಪಿಸಿದೆ. ಹನುಮಪ್ಪನಿಗೆ ಗದೆ, ಫಕೀರಪ್ಪನಿಗೆ ಹೂವಿನ ಬುಟ್ಟಿ, ಮಾರಮ್ಮನಿಗೆ ಸೀರೆ ಸಲ್ಲಿಸಿ ಮನೆಯಲ್ಲಿ ಹೋಮ ಹವನಗಳನ್ನು ಮಾಡಿದ್ದಾಯಿತು. ಜೊತೆಗೆ ಆಸ್ಪತ್ರೆಯ ಖರ್ಚು ಬೇರೆ. ಲಕ್ಷಾಂತರ ರೂಪಾಯಿ ಕೈಬಿಟ್ಟು ಹೋದರೂ ಚಿಂತೆಯಿಲ್ಲ ಸಾವಿನ ಭಯ ಈಗ ದೂರವಾಗಿದೆ’.

ಎರಡನೆಯದು ಮೇಲಿನದಕ್ಕೆ ಭಿನ್ನವಾದ ಅನುಭವ. ನನ್ನ ಪಕ್ಕದ ಮನೆಯ ವಯಸ್ಸಾದ ಹಿರಿಯರು ಎದೆನೋವಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಹಿಂತಿರುಗಿದ್ದಾರೆ. ಅವರ ಆರೋಗ್ಯ ವಿಚಾರಿಸಲೆಂದು ಹೋದಾಗ ಅವರು ಹೇಳಿದ್ದು ಹೀಗೆ- ‘ಈಗೀಗ ಸಾವು ಯಾವ ಸಮಯದಲ್ಲಾದರೂ ಬರಬಹುದೆಂದು ಅನಿಸಲಾರಂಭಿಸಿದೆ. ಆಸ್ಪತ್ರೆಯ ಬೆಡ್ ಮೇಲೆ ಮಲಗಿರುವಾಗ ಬದುಕಿನ ಸತ್ಯ ದರ್ಶನವಾಯಿತು. ನಾನು ಇದುವರೆಗೂ ಬದುಕಿನಲ್ಲಿ ಸಾಧಿಸಿರುವುದೇನು ಎಂದು ಅನಿಸಲಾರಂಭಿಸಿದೆ. ಇದುವರೆಗಿನ ಆಯುಷ್ಯವನ್ನು ಸ್ವಂತದ ಬದುಕು ಕಟ್ಟಿಕೊಳ್ಳುವುದರಲ್ಲೇ ಕಳೆದದ್ದಾಯಿತು. ಈಗ ಉಳಿದಿರುವ ಆಯುಷ್ಯದಲ್ಲಿ ಬೇರೆಯವರಿಗಾಗಿ ಬದುಕಬೇಕೆನ್ನುವ ಪ್ರಜ್ಞೆ ಮೂಡಿದೆ. ದುಡಿದು ಗಳಿಸಿದ್ದರಲ್ಲಿ ಒಂದಿಷ್ಟನ್ನು ಸಮಾಜಕ್ಕೆ ನೀಡಬೇಕೆನ್ನುವ ಬಯಕೆ ಪ್ರಬಲವಾಗುತ್ತಿದೆ’.

‘ಜಾತಸ್ಯ ಮರಣಂ ಧ್ರುವಂ’ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಹುಟ್ಟು ಆಕಸ್ಮಿಕ ಆದರೆ ಸಾವು ಅನಿವಾರ್ಯ ಎಂದಿರುವರು ಚಿಂತಕರು. ‘ಮೋಹದ ಹೆಂಡತಿ ತೀರಿದ ಬಳಿಕ ಮಾವನ ಮನೆಯ ಹಂಗಿನ್ಯಾಕೋ’ ಎಂದು ಕವಿಗಳು ಸಾವಿನ ಅನಿವಾರ್ಯವನ್ನು ತಿಳಿಸಿಕೊಟ್ಟಿರುವರು. ‘ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ’ ಎಂದು ಹಾಡಿರುವರು ಕನಕದಾಸರು. ಇಷ್ಟೆಲ್ಲ ಹಿನ್ನೆಲೆಯಿದ್ದೂ ಮನುಷ್ಯ ಚಿರಂಜೀವಿತ್ವದ ಭಾವನೆಯಿಂದ ಸೇಡು, ದ್ವೇಷ, ಕ್ರೌರ್ಯ, ಶೋಷಣೆಯ ಗುಣಗಳನ್ನು ಮೈಗೂಡಿಸಿಕೊಂಡು ಮೃಗೀಯವರ್ತನೆ ತೋರುತ್ತಿದ್ದಾನೆ. ಅಮರತ್ವದ ಭಾವನೆ ಮುನ್ನೆಲೆಗೆ ಬಂದು ಬದುಕಿನ ಕ್ಷಣಿಕತೆಯ ಅರಿವು ಹಿನ್ನೆಲೆಗೆ ಸರಿದಿದೆ.

ವಿಮರ್ಶಕ ಜಿ.ಎಸ್.ಆಮೂರ ಅವರು ಹೇಳಿದಂತೆ, ಮನುಷ್ಯ ನಾಗರಿಕನಾಗಿ ಎಷ್ಟೇ ಮುಂದುವರಿದರೂ ಅವನ ಮೂಲಪ್ರವೃತ್ತಿಗಳಾದ ಕಾಮ, ಕ್ರೋಧ ಮತ್ತು ದ್ವೇಷಗಳಿಂದ ಬಿಡುಗಡೆ ಹೊಂದಲು ಇವತ್ತಿಗೂ ಸಾಧ್ಯವಾಗುತ್ತಿಲ್ಲ. ಒಟ್ಟಾರೆ ನ್ಯಾಯ-ಅನ್ಯಾಯ, ಸತ್ಯ-ಸುಳ್ಳು, ಅಹಿಂಸೆ-ಹಿಂಸೆ, ನೈತಿಕ-ಅನೈತಿಕ ಇವುಗಳ ನಡುವಣ ಗೆರೆ ಬಹಳ ತೆಳುವಾಗುತ್ತಿದ್ದು ಮನುಷ್ಯ ಸಾವಿನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದಾನೆ.

ಸಾವು ಬರಹಗಾರರು ಮತ್ತು ಚಿಂತಕರನ್ನು ನಿರಂತರವಾಗಿ ಕಾಡಿದ ವಸ್ತುವಾಗಿದೆ. ಕತೆ, ಕಾದಂಬರಿ, ಆತ್ಮಕಥೆಗಳಲ್ಲಿ ಸಾವು ಮತ್ತೆ ಮತ್ತೆ ಗಾಢವಾಗಿ ಚರ್ಚೆಗೊಳಗಾಗಿದೆ. ಪಿ.ಲಂಕೇಶ್ ತಮ್ಮ ಆತ್ಮಚರಿತ್ರೆ ‘ಹುಳಿಮಾವಿನ ಮರ’ದಲ್ಲಿ ಸಾವಿನ ಕುರಿತು ಹೀಗೆ ಹೇಳಿಕೊಂಡಿದ್ದಾರೆ– ‘ನನ್ನ ಗಾಢ, ದುಗುಡದ ವೇಳೆಯಲ್ಲಿ ಸಾವಿನ ಹತ್ತಿರ ಇದ್ದಂತಿದ್ದಾಗ ಮುತ್ಸದ್ದಿತನ, ಹೊಂದಾಣಿಕೆ, ಖ್ಯಾತಿ, ಪ್ರಶಸ್ತಿ ಮುಂತಾದವೆಲ್ಲ ಬದುಕಿನೆದುರು, ಸಾವಿನೆದುರು ಗೌಣ ಅನ್ನಿಸುತ್ತಿದ್ದಾಗ ನನ್ನ ಬರವಣಿಗೆಯ ರೀತಿಯೂ ಬದಲಾಯಿತು. ಸಾವು ಇನ್ನು ಮೇಲೆ ನನಗೆ ಕೇವಲ ಕತೆಯಾಗದೆ, ಬದುಕುವ ಅಂತ್ಯ ಎಂಬ ಸತ್ಯ ಮಾತ್ರವಾಗದೆ ನನ್ನ ಉಳಿದ ದಿನಗಳಲ್ಲಿ, ಬರೆದ ಸಾಲುಗಳಲ್ಲಿ ನೆಲೆಸಿ ಎಚ್ಚರಿಸುವ ಛಾಯೆ ಅನ್ನಿಸತೊಡಗಿತು’.

ಸಾವಿನ ನೆನಪು ಬದುಕನ್ನು ಅರ್ಥಪೂರ್ಣವಾಗಿಸಿದೆ ಎಂದು ಸಕಾರಾತ್ಮಕವಾಗಿ ಯೋಚಿಸುವವರೂ ನಮ್ಮ ನಡುವೆ ಇದ್ದಾರೆ. ಮನುಷ್ಯ ಸಾಯದೇ ಇದ್ದರೆ ಈ ಜಗತ್ತು ಎಷ್ಟೊಂದು ಅಸಹ್ಯವಾಗಿರುತ್ತಿತ್ತು ಎಂದು ಚಿಂತಿಸಿದ ಅನಂತಮೂರ್ತಿ ಅವರ ಮಾತಿನಲ್ಲಿ ಸಾವಿನಪ್ರಜ್ಞೆ ಇದೆ. ಸಾವಿಲ್ಲದ ಮನೆಯ ಸಾಸಿವೆಕಾಳು ತರಲು ಹೇಳಿ ಕಿಸಾಗೌತಮಿಗೆ ಸಾವಿನ ಅಸ್ತಿತ್ವದ ಅರಿವು ಮೂಡಿಸಿದ ಬುದ್ಧನ ನಾಡಿನಲ್ಲಿ ಸಾವು ನಮ್ಮನ್ನು ಎಚ್ಚರಿಸುವ ಪ್ರಜ್ಞೆಯಾಗಬೇಕು. ಮೌಲ್ಯಗಳು ಅಪಮೌಲ್ಯಗೊಳ್ಳುತ್ತ ಅನೈತಿಕತೆ, ಅಪ್ರಾಮಾಣಿಕತೆಗಳು ವಿಜೃಂಭಿಸುತ್ತಿರುವಾಗ ಸಾವಿನ ಪ್ರಜ್ಞೆಯಲ್ಲಿ ಬದುಕು ಅರಳಬೇಕಿರುವುದು ಇಂದಿನ ತುರ್ತು ಅಗತ್ಯವಾಗಿದೆ.

ವಾಚಕರ ವಾಣಿ

ಅಸಾಂಸ್ಕೃತಿಕ ನಡೆಗೆ ಬೀಳಲಿ ತಡೆ

ಇಂದಿನ ಗಣೇಶೋತ್ಸವ ತನ್ನ ಸಾಂಸ್ಕೃತಿಕ ಆಯಾಮವನ್ನೇ ಕಳೆದುಕೊಳ್ಳುತ್ತಿದೆ. ಹಾಡು, ಭಜನೆ, ಭಕ್ತಿಗೀತೆ, ಶಾಸ್ತ್ರೀಯ ನೃತ್ಯ, ಸಂಗೀತ, ಪುರಾಣ ವಾಚನದಂತಹ ಸಾತ್ವಿಕ ಚಟುವಟಿಕೆಗಳಿಗೆ ಹೆಸರಾಗಿದ್ದ ಉತ್ಸವದಲ್ಲಿ ಅಬ್ಬರ, ಆಡಂಬರ ವಿಜೃಂಭಿಸುತ್ತಿವೆ. ಅದರಲ್ಲೂ ಡಿ.ಜೆ ಶಬ್ದವಂತೂ ಎಂತಹವರಿಗೂ ಒಂದು ನಿಮಿಷ ಎದೆಬಡಿತ ನಿಂತು ಹೋಗುವಂತೆ ಇರುತ್ತದೆ.

ನಗರದ ಮುಖ್ಯ ರಸ್ತೆಯಲ್ಲಿದ್ದ ಗಣೇಶೋತ್ಸವದ ಮೇಲೆ ಕಣ್ಣು ಹಾಯಿಸಿದಾಗ ನನಗೆ ಒಂದು ಕ್ಷಣ ಭಯವಾಗಿದ್ದಂತೂ ನಿಜ. ಏಕೆಂದರೆ ಅಲ್ಲಿ ಹಾಕಿದ್ದ ಎಲ್ಲಾ ಪೋಸ್ಟರ್‌ಗಳು ವ್ಯಗ್ರತೆಯಿಂದ ಕೂಡಿದ್ದವು. ಒಂದು ಪೋಸ್ಟರ್‌ನಲ್ಲಂತೂ ಶಿವಾಜಿ ತನ್ನನ್ನು ಕೊಲ್ಲಲು ಬಂದ ಅಫ್ಜಲ್ ಖಾನ್‌ನನ್ನು ಹುಲಿಯ ಉಗುರಿನಿಂದ ಸೀಳುತ್ತಿರುವ ಚಿತ್ರವಿತ್ತು. ಈ ಮೂಲಕ ಇವರೆಲ್ಲ ಏನು ಹೇಳಲು ಹೊರಟಿದ್ದಾರೆ ಎಂಬ ಪ್ರಶ್ನೆ ಮೂಡಿ ತಬ್ಬಿಬ್ಬಾಯಿತು. ಸಾಂಸ್ಕೃತಿಕ, ಸಾತ್ವಿಕ, ದೈವಿಕ ಭಾವನೆಗಳನ್ನು ಬೆಳೆಸಬೇಕಾದ ದೇವರ ಉತ್ಸವಗಳು ಹೀಗೆ ರೋಷಾವೇಶದ ಅಭಿವ್ಯಕ್ತಿಗೆ ವೇದಿಕೆಯಾಗುವುದು ತರವೇ?

ಸುವರ್ಣ ಸಿ.ಡಿ., ತರೀಕೆರೆ

ಪ್ಯಾಸೆಂಜರ್ ರೈಲು ಪುನಃ ಆರಂಭಿಸಿ

ಜನಸಾಮಾನ್ಯರು ಪ್ರಯಾಣಿಸಲು ಪ್ಯಾಸೆಂಜರ್ ರೈಲುಗಳು ಅತಿ ಅಗತ್ಯ ಹಾಗೂ ಅನಿವಾರ್ಯವಾಗಿರುತ್ತವೆ. ಬೆಂಗಳೂರು, ಶಿವಮೊಗ್ಗ, ಹುಬ್ಬಳ್ಳಿ ಸೇರಿದಂತೆ ಹಲವು ಮಾರ್ಗಗಳ ಕೆಲವು ಪ್ಯಾಸೆಂಜರ್ ರೈಲುಗಳು ರದ್ದಾಗಿವೆ. ಜನರಿಗೆ ಅನುಕೂಲಕರವಾಗಿರುವ ಪ್ಯಾಸೆಂಜರ್ ರೈಲುಗಳ ಸೇವೆಯನ್ನು ಪುನಃ ಆರಂಭಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು.

ಎಂ.ಆಂಜನೇಯ, ಹಾವೇರಿ

ಹುಳುಕು ಹೊರಬೀಳುವ ಅಂಜಿಕೆಯೇ?

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ‘ಬಿಜೆಪಿ ನೇತೃತ್ವದ ಸರ್ಕಾರವು 40 ಪರ್ಸೆಂಟ್ ಕಮಿಷನ್ ಸರ್ಕಾರ’ ಎಂದು ವಾಗ್ದಾಳಿ ನಡೆಸಿದ್ದಾರೆ. ಇದಕ್ಕೆ ಪ್ರತಿಯಾಗಿ ಆಡಳಿತ ಪಕ್ಷದ ಸಚಿವರು ‘ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಸಮಯದಲ್ಲಿ ಭ್ರಷ್ಟಾಚಾರ ನಡೆದೇ ಇರಲಿಲ್ಲವೆ’ ಎಂದು ಕುಟುಕಿದ್ದಾರೆ. ಇದು ಒಂದು ರೀತಿಯಲ್ಲಿ ‘ನೀನು ಹೊಡೆದಂಗೆ ಮಾಡು, ನಾನು ಅತ್ತಂಗೆ ಮಾಡುತ್ತೇನೆ’ ಎನ್ನುವ ಹಾಗಿದೆ. ಇವರದೇ ಬಹುಮತದ ಸರ್ಕಾರವಿದ್ದೂ, ಹಿಂದಿನ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಆರೋಪಗಳ ಬಗ್ಗೆ ತನಿಖೆ ಮಾಡುವ ತಾಕತ್ತು ಇಲ್ಲವೇ? ಹಾಗೆ ಮಾಡಿದರೆ ಇವರ ಹುಳುಕು ಹೊರಬೀಳುತ್ತದೆ ಎಂಬ ಅಂಜಿಕೆಯೇ?

ಅನಂತ ಪದ್ಮನಾಭ ಎಚ್.ಎಮ್., ಬೆಂಗಳೂರು

ಅರಿಯಬೇಕಿದೆ ಸೀಟ್ ಬೆಲ್ಟ್ ಮಹತ್ವ

ಉದ್ಯಮಿ ಸೈರಸ್ ಮಿಸ್ತ್ರಿ ಅವರ ಸಾವಿಗೆ ಕಾರಣವಾದ ರಸ್ತೆ ಅಪಘಾತವು ಸೀಟ್ ಬೆಲ್ಟ್ ಮಹತ್ವದ ಬಗ್ಗೆ ಬೆಳಕು ಚೆಲ್ಲಿದೆ. ಹಿಂಬದಿ ಪ್ರಯಾಣಿಕರಿಗೂ ಸೀಟ್ ಬೆಲ್ಟ್ ಕಡ್ಡಾಯ, ಇಲ್ಲದಿದ್ದರೆ ದಂಡ ವಿಧಿಸಲಾಗುವುದು ಎಂದು ಕೇಂದ್ರ ಸಾರಿಗೆ ಸಚಿವರು ಹೇಳಿದ್ದಾರೆ. ಜನರ ಸುರಕ್ಷತೆಗೆ ಈ ಕ್ರಮ ಅತ್ಯಗತ್ಯ. ದಿನನಿತ್ಯ ದೇಶದಾದ್ಯಂತ ನೂರಾರು ಮಂದಿ ರಸ್ತೆ ಅಪಘಾತಗಳಲ್ಲಿ ಮೃತಪಡುತ್ತಿದ್ದಾರೆ. ಇವರಲ್ಲಿ, ಅಪಘಾತವಾದಾಗ ಸೀಟ್ ಬೆಲ್ಟ್ ಹಾಕಿಕೊಳ್ಳದೇ ಇದ್ದ ಕಾರಣಕ್ಕೆ ಪ್ರಾಣ ಕಳೆದುಕೊಂಡಿರುವವರೂ ಬಹಳಷ್ಟು ಜನ ಇರುತ್ತಾರೆ. ಈಗ ಖ್ಯಾತನಾಮರೊಬ್ಬರ ಸಾವು ಸೀಟ್ ಬೆಲ್ಟ್‌ನ ಮಹತ್ವವನ್ನು ಮುನ್ನೆಲೆಗೆ ತಂದಿದೆ. ಈ ಅಪಘಾತದಿಂದ ಹೆದ್ದಾರಿಯ ವಿನ್ಯಾಸದೋಷ, ರಸ್ತೆಗಳ ಅಸಮರ್ಪಕ ನಿರ್ವಹಣೆಯಂತಹ ವಿಷಯಗಳ ಬಗ್ಗೆಯೂ ಗಮನ ಹರಿಯುವಂತಾದರೆ ಒಳ್ಳೆಯದು.

ಎ.ಜೆ.ಜಾವಿದ್, ಹಾಸನ

ಹೌದು, ದನ ಕಾಯ್ತಾ ಇದ್ದೀವಿ...!

ಗೋವುಗಳನ್ನು ದತ್ತು ಪಡೆದು, ಪುಣ್ಯಕೋಟಿ ಯೋಜನೆ ಬೆಂಬಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಸರ್ಕಾರಿ ನೌಕರರಿಗೆ ಕರೆ ನೀಡಿದ್ದಾರೆ (ಪ್ರ.ವಾ., ಸೆ. 7). ಗೋಹತ್ಯಾ ನಿಷೇಧ ಕಾಯ್ದೆ ಜಾರಿಗೆ ಬಂದ ಮೇಲೆ, ರೈತರು ಮುದಿ ಹಸುಗಳನ್ನು ಮಾರಲಾಗದೆ, ಸಾಕಲೂ ಆಗದೆ ಗೋಶಾಲೆಗಳು ದೊಡ್ಡದಾಗಿವೆ. ಗೋವುಗಳನ್ನು ದತ್ತು ಪಡೆದು ನಗದು ರೂಪದಲ್ಲಿ ಹಣ ಕೊಟ್ಟರೂ ಅವುಗಳ ಹೊಟ್ಟೆ ತುಂಬುವ ಖಾತರಿಯಿಲ್ಲ. ಅದಕ್ಕೆ ಬದಲಾಗಿ, ಮುಖ್ಯಮಂತ್ರಿ ಕರೆಯನ್ನು ಸ್ವಲ್ಪ ಬದಲಾವಣೆ ಮಾಡಿ, ಒಬ್ಬೊಬ್ಬ ನೌಕರರಿಗೂ ಒಂದೊಂದು ಗೋವು ಹಿಡಿದುಕೊಡುವುದೇ ಸೂಕ್ತವಾಗಿದೆ. ಕಚೇರಿಗಳ ಮುಂದೆ ಕಟ್ಟಿ ಸಾಕಬಹುದು. ಖಾಲಿ ಕುರ್ಚಿಗಳನ್ನು ತೋರಿಸಿ ‘ಕಾಫಿಗೆ ಹೋಗಿದ್ದಾರೆ’ ಎಂದು ಹೇಳುವ ಬದಲು, ‘ಹುಲ್ಲು ಹಾಕಲು, ನೀರಿಡಲು ಹೋಗಿದ್ದಾರೆ’ ಎಂದು ಧ್ವನಿ ಬದಲಿಸಬಹುದು.

ಕಚೇರಿಗೆ ಬರುವ ಕೆಲವು ರಾಜಕಾರಣಿಗಳು ‘ಏನ್ ಮಾಡ್ತಾ ಇದ್ದೀರಿ? ಎಲ್ಲಾ ಸೇರಿಕೊಂಡು ದನ ಕಾಯ್ತೀರಾ’ ಎಂದು ಏರು ಮಾತಿನಲ್ಲಿ ಪ್ರಶ್ನೆ ಮಾಡಿದಾಗ ‘ಹೌದು’ ಅಂತ ಸಮರ್ಥಿಸಲೂ ಬಹುದು. ಕಚೇರಿಗಳಿಗೆ ವರ್ಷಗಟ್ಟಲೆ ಬರಿಗೈಯಲ್ಲೇ ಅಲೆದಾಡುವ ರೈತರು, ಒಂದು ಹಿಡಿ ಹುಲ್ಲನ್ನಾದರೂ ತರುವ ಪರಿಪಾಟ ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ!

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಆ... ಯೋಗ!

ಬಹಳ ದಿನಗಳಿಂದ
ಪ್ರಶ್ನೆಯೊಂದು ಕಾಡುತ್ತಿತ್ತು
ರಾಜ್ಯ ಸರ್ಕಾರಿ ನೌಕರ
ಬಂಧುಗಳಿಗೆ
ಏಳನೇ ವೇತನ ಆಯೋಗ
ರಚನೆ ಯಾವಾಗ?
ಅಂತೂ ಆಗಿಹೋಯಿತು...
ಮೊನ್ನೆ ಘೋಷಣೆ
ಬರುವ ತಿಂಗಳು
ಆ... ಯೋಗ!

ಮ.ಗು.ಬಸವಣ್ಣ
ಸುತ್ತೂರು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಪಥ ಚಹರೆ, ಹೆಸರು ಬದಲು

ಇಂಡಿಯಾ ಗೇಟ್

ಪುನರ್ ಅಭಿವೃದ್ಧಿ ಮೊದಲು

ಪುನರ್ ಅಭಿವೃದ್ಧಿ ನಂತರ

ನಾಲೆ ಪಕ್ಕದ ನಡಿಗೆ ಹಾದಿ

ಮೊದಲು


ನಂತರ

1,125 ವಾಹನಗಳ ನಿಲುಗಡೆ ಸೌಲಭ್ಯ | **35** ಇಂಡಿಯಾ ಗೇಟ್ ಬಳಿ ಬಸ್ ನಿಲುಗಡೆ ಸೌಲಭ್ಯ | **900** ಹೊಸದಾಗಿ ಸ್ಥಾಪಿಸಲಾದ ದೀಪದ ಕಂಬಗಳ ಸಂಖ್ಯೆ | **1,000** ಕಾಂಕ್ರೀಟ್ ಗೂಟಗಳ ಬದಲಿಗೆ ಶಿಲೆಯ ಗೂಟಗಳು | **3.90** ಲಕ್ಷ ಚದರ ಅಡಿ ಪ್ರದೇಶದಲ್ಲಿ ಮರ, ಗಿಡ ಬೆಳೆಸಲಾಗಿದೆ | **15.5** ಕಿ.ಮೀ ನಡಿಗೆ ಪಥವನ್ನು ಅಭಿವೃದ್ಧಿಪಡಿಸಲಾಗಿದೆ | **400** ಬೆಂಚುಗಳನ್ನು ಜನರಿಗೆ ಕುಳಿತುಕೊಳ್ಳಲು ಅಳವಡಿಸಲಾಗಿದೆ | **150** ಕಸದ ಡಬ್ಬಗಳನ್ನು ಇರಿಸಲಾಗಿದೆ | **50** ದಾರಿಯ ಮಾಹಿತಿ ಕೊಡುವ ಫಲಕಗಳು

ದೇಶದ ಅಧಿಕಾರ ಕೇಂದ್ರವಾಗಿರುವ ದೆಹಲಿಯ ಲ್ಯುಟೆನ್ಸ್ ಪ್ರದೇಶವನ್ನು ಪುನರ್ ಅಭಿವೃದ್ಧಿಪಡಿಸುವ ಯೋಜನೆಯನ್ನು ಕೇಂದ್ರ ಸರ್ಕಾರವು 2019ರಲ್ಲಿ ಪ್ರಕಟಿಸಿತು. ಸಂಸತ್ ಭವನ, ಪ್ರಧಾನಿ ಕಚೇರಿ, ಪ್ರಧಾನಿ ನಿವಾಸ, ಉಪರಾಷ್ಟ್ರಪತಿ ನಿವಾಸಗಳನ್ನು ಹೊಸದಾಗಿ ನಿರ್ಮಿಸುವುದು ಈ ಯೋಜನೆಯಲ್ಲಿ ಸೇರಿವೆ. ಸಚಿವಾಲಯಗಳು ಮತ್ತು ಇಲಾಖೆಗಳ ಕಚೇರಿಗಳಿಗಾಗಿ ಇತರ ಕಟ್ಟಡಗಳನ್ನೂ ನಿರ್ಮಿಸಲಾಗುವುದು. ಇದು ₹20,000 ಕೋಟಿ ವೆಚ್ಚದ ಯೋಜನೆ. ಇದರ ಭಾಗವಾಗಿ ರಾಜಪಥದ ಉದ್ದಕ್ಕೂ ಇರುವ ಸೆಂಟ್ರಲ್ ವಿಸ್ತಾ ಅವೆನ್ಯೂ ಪ್ರದೇಶವನ್ನೂ ನವೀಕರಿಸಲಾಗಿದೆ. ವಿಜಯ ಚೌಕದಿಂದ ಇಂಡಿಯಾ ಗೇಟ್ ವರೆಗಿನ ನವೀಕೃತ ಪ್ರದೇಶವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಉದ್ಘಾಟಿಸಲಿದ್ದಾರೆ.

ಸೆಂಟ್ರಲ್ ವಿಸ್ತಾ ಅವೆನ್ಯೂ ಪ್ರದೇಶವು ಪುನರ್ ಅಭಿವೃದ್ಧಿ ಬಳಿಕ ಹೆಚ್ಚು ಆಕರ್ಷಕಗೊಂಡಿದೆ. ಜನರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ. ವಿವಿಧ ರಾಜ್ಯಗಳ ಆಹಾರಗಳನ್ನು ಮಾರುವ ಅಂಗಡಿಗಳು ಇಲ್ಲಿ ತೆರೆದುಕೊಳ್ಳಲಿವೆ. ವಿವಿಧ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳಿವೆ, ನಡೆದಾಡುವ ಪ್ರದೇಶದಲ್ಲಿ ಕೆಂಪು ಶಿಲೆಗಳನ್ನು ಹಾಸಲಾಗಿದೆ. ಸುತ್ತಲೂ ಹಸಿರು ಹೊದಿಕೆಯನ್ನು ಹೆಚ್ಚಿಸಲಾಗಿದೆ. ಹೆಚ್ಚು ವಾಹನಗಳ ನಿಲುಗಡೆ ಸಾಧ್ಯವಾಗುವಂತೆ ನಿಲುಗಡೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ.

ಪುನರ್ ಅಭಿವೃದ್ಧಿಗಾಗಿ ರಾಜಪಥವನ್ನು 20 ತಿಂಗಳ ಹಿಂದೆ ಮುಚ್ಚಲಾಗಿತ್ತು. ಇನ್ನು ಮುಂದೆ ಈ ಪ್ರದೇಶವು ಸಂದರ್ಶಕರಿಗಾಗಿ ತೆರೆದುಕೊಳ್ಳಲಿದೆ. ಉದ್ಘಾಟನಾ ಕಾರ್ಯಕ್ರಮದ ಕಾರಣದಿಂದಾಗಿ ಇಂಡಿಯಾ ಗೇಟ್‌ನಿಂದ ಮಾನ್ ಸಿಂಗ್ ರಸ್ತೆವರೆಗೆ ಸಂದರ್ಶಕರಿಗೆ ಗುರುವಾರ ಪ್ರವೇಶ ಇಲ್ಲ. ಶುಕ್ರವಾರದಿಂದ ಜನರು ಇಲ್ಲಿ ಮುಕ್ತವಾಗಿ ಓಡಾಡಬಹುದು.

ಇಲ್ಲಿ ಐದು ವ್ಯಾಪಾರ ವಲಯಗಳನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದರಲ್ಲಿಯೂ 40 ಅಂಗಡಿಗಳಿಗೆ ಅವಕಾಶ ಇದೆ. ಇಂಡಿಯಾ ಗೇಟ್ ಸಮೀಪ ಎರಡು ವಲಯಗಳನ್ನು ನಿರ್ಮಿಸಲಾಗಿದ್ದು, ತಲಾ ಎಂಟು ಅಂಗಡಿಗಳು ಇಲ್ಲಿ ಇವೆ. ರಾಜ್ಯಗಳ ವಿಶಿಷ್ಟ ಆಹಾರಗಳ ಮಾರಾಟಕ್ಕೆ ಇಲ್ಲಿ ಅವಕಾಶ ಕೊಡಲಾಗುವುದು. ಕೆಲವು ರಾಜ್ಯಗಳು ಇಲ್ಲಿ ಅಂಗಡಿ ಹಾಕಲು ಆಸಕ್ತಿ ವ್ಯಕ್ತಪಡಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಐಸ್‌ಕ್ರೀಮ್ ಗಾಡಿಗಳಿಗೆ ಮಾರಾಟ ವಲಯಗಳಲ್ಲಿ ಮಾತ್ರ ಅವಕಾಶ ಇರುತ್ತದೆ.

ಇಲ್ಲಿ ಇರುವ ನಾಲೆಗಳು 19 ಎಕರೆ ಪ್ರದೇಶವನ್ನು ವ್ಯಾಪಿಸಿವೆ. ನಾಲೆಗಳಲ್ಲಿ ವಾಯುಪೂರಕ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಹೀಗಾಗಿ ನೀರು ಸ್ವಚ್ಛವಾಗಿಯೇ ಇರಲಿದೆ. ಈ ನಾಲೆಗಳಲ್ಲಿ 16 ಸೇತುವೆಗಳಿವೆ. ಕೃಷಿ ಭವನ ಮತ್ತು ವಾಣಿಜ್ಯ ಭವನದ ಸಮೀಪ ಇರುವ ನಾಲೆಗಳಲ್ಲಿ ಬೋಟಿಂಗ್‌ಗೆ ಅವಕಾಶ ನೀಡಲಾಗುವುದು.



2.85 ಕಿ.ಮೀ. ರಾಜಪಥದ ಉದ್ದ

ಇನ್ನು ಕರ್ತವ್ಯಪಥ

ಸೆಂಟ್ರಲ್ ವಿಸ್ತಾದ ಪ್ರಮುಖ ಭಾಗವಾದ ರಾಜಪಥಕ್ಕೆ 'ಕರ್ತವ್ಯಪಥ' ಎಂದು ಮರುನಾಮಕರಣ ಮಾಡಲು ಸರ್ಕಾರ ಸಿದ್ಧತೆ ನಡೆಸಿದೆ. ಇದಕ್ಕೆ ಸಂಬಂಧಿಸಿದಂತೆ ಉತ್ತರ ದೆಹಲಿ ಮಹಾನಗರ ಪಾಲಿಕೆಯು (ಎನ್‌ಡಿಎಂಸಿ) ನಿರ್ಣಯವನ್ನು ಈಗಾಗಲೇ ಅಂಗೀಕರಿಸಿದೆ.

ಸೆಂಟ್ರಲ್ ವಿಸ್ತಾ ಪ್ರದೇಶದಲ್ಲಿರುವ ಇಂಡಿಯಾ ಗೇಟ್‌ನಿಂದ ರಾಷ್ಟ್ರಪತಿ ಭವನದವರೆಗೆ ವ್ಯಾಪಿಸಿರುವ ರಸ್ತೆಯೇ ರಾಜಪಥ. ಗಣರಾಜ್ಯೋತ್ಸವದ ಪಥಸಂಚಲನ ನಡೆಯುವುದು ಇದೇ ರಾಜಪಥದಲ್ಲಿ. 1911ರಲ್ಲಿ ಬ್ರಿಟನ್ ರಾಜ 5ನೇ ಜಾರ್ಜ್ ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಸ್ವಾಗತಿಸಲು ಈ ರಸ್ತೆ, ಅದರ ಇಕ್ಕೆಲದಲ್ಲಿನ ಕೊಳ ಮತ್ತು ಹುಲ್ಲುಹಾಸನ್ನು ಅಭಿವೃದ್ಧಿಪಡಿಸಲಾಗಿತ್ತು. ಈ ಕಾರಣದಿಂದ ಈ ಮಾರ್ಗಕ್ಕೆ ಕಿಂಗ್ಸ್‌ವೇ ಎಂದು ಹೆಸರಿಡಲಾಗಿತ್ತು. ನಂತರದಲ್ಲಿ ಇದನ್ನು ರಾಜಪಥ ಎಂದು ಬದಲಿಸಲಾಗಿತ್ತು.

ರಾಜಪಥ ಎಂಬುದು ವಸಾಹತುಶಾಹಿಯ ಕುರುಹು. ಹಾಗಾಗಿ ಅದನ್ನು ಬದಲಿಸಬೇಕಿದೆ. ರಾಜಪಥ ಎಂಬ ಪದವು ಜೀತವನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಅದನ್ನು ಕರ್ತವ್ಯಪಥ ಎಂದು ಮರುನಾಮಕರಣ ಮಾಡಲಾಗುತ್ತದೆ ಎಂದು ಎನ್‌ಡಿಎಂಸಿ ಹೇಳಿದೆ. ದೆಹಲಿ ಬಿಜೆಪಿ ನಾಯಕರೂ ಇದೇ ಮಾತು ಹೇಳಿದ್ದಾರೆ.

ಆಧಾರ: ಪಿಟಿಐ, ಸೆಂಟ್ರಲ್ ವಿಸ್ತಾ ಅಧಿಕೃತ ಜಾಲತಾಣ, ಎಚ್‌ಸಿಪಿ ಡಿಸೈನ್ ಲಿಮಿಟೆಡ್

ಭಾರಿ ವಿರೋಧ

ಲ್ಯುಟೆನ್ಸ್ ಪ್ರದೇಶವನ್ನು ಮರು ಅಭಿವೃದ್ಧಿಪಡಿಸುವ ಯೋಜನೆಗೆ ವಿರೋಧವೂ ವ್ಯಕ್ತವಾಗಿತ್ತು. ಮೊದಲನೆಯದಾಗಿ, ಲ್ಯುಟೆನ್ಸ್ ಪ್ರದೇಶಕ್ಕೆ ಪಾರಂಪರಿಕ ಮೌಲ್ಯ ಇದೆ. ಸಂಸತ್ತು ಸೇರಿದಂತೆ ಇಲ್ಲಿ ಇರುವ ಹಲವು ಕಟ್ಟಡಗಳಿಗೆ ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸ ಇದೆ. ಪುನರ್ ಅಭಿವೃದ್ಧಿಯಿಂದಾಗಿ ಹಲವು ಕಟ್ಟಡಗಳು ನೆಲಸಮವಾಗುತ್ತವೆ ಅಥವಾ ಅವುಗಳ ಸ್ವರೂಪಕ್ಕೆ ಧಕ್ಕೆ ಆಗುತ್ತದೆ ಎಂದು ಪ್ರತಿಪಾದಿಸುವವರು ಇದ್ದಾರೆ. ಇದು ಸೆಂಟ್ರಲ್ ವಿಸ್ತಾ ಯೋಜನೆಗೆ ಇದ್ದ ಪ್ರಮುಖ ವಿರೋಧ.

ದೇಶವು ಕೋವಿಡ್ ಸಾಂಕ್ರಾಮಿಕದ ಸಂಕಷ್ಟದಲ್ಲಿ ಇದ್ದಾಗಲೇ ಸರ್ಕಾರವು ಯೋಜನೆಗಾಗಿ ₹20 ಸಾವಿರ ಕೋಟಿ ಮಂಜೂರು ಮಾಡಿತ್ತು. ಇದಕ್ಕೆ ಕೆಲ ರಾಜಕೀಯ ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದವು. ಯೋಜನೆಯನ್ನು ರದ್ದುಗೊಳಿಸಿ ಈ ಮೊತ್ತವನ್ನು ಕೋವಿಡ್ ಸಾಂಕ್ರಾಮಿಕದಿಂದ ಆದ ನಷ್ಟ ಪರಿಹಾರಕ್ಕೆ ಬಳಸಿಕೊಳ್ಳಬೇಕು ಎಂದು ಆಗ್ರಹಿಸಿದ್ದವು.

ರಾಜಪಥದ ನಾಲೆ

ಮೊದಲು


ನಂತರ

ಬಿಗಿ ಭದ್ರತೆ

ಹೊಸದಾಗಿ ನಿರ್ಮಿಸಲಾಗಿರುವ ಸೌಲಭ್ಯಗಳಿಗೆ ಹಾನಿ ಮಾಡುವುದನ್ನು ತಡೆಯಲು, ಅವುಗಳನ್ನು ಕದ್ದೊಯ್ಯುವುದನ್ನು ತಡೆಯಲು ಭಾರಿ ಭದ್ರತೆಯ ವ್ಯವಸ್ಥೆ ಮಾಡಲಾಗಿದೆ. ದಿನದ 24 ಗಂಟೆಯೂ ಇಲ್ಲಿ ಭದ್ರತೆ ಇರುತ್ತದೆ. ಸುಮಾರು 80 ಮಂದಿ ಭದ್ರತಾ ಸಿಬ್ಬಂದಿ ಇಲ್ಲಿ ಸದಾ ಕಾವಲಿಗೆ ಇರುತ್ತಾರೆ. ರಾಜಪಥವು ದೆಹಲಿಯ ಅತ್ಯಂತ ಜನಪ್ರಿಯ ಸಾರ್ವಜನಿಕ ಸ್ಥಳ. ಇಲ್ಲಿಗೆ ದಿನವೂ ಸಾವಿರಾರು ಜನರು ಭೇಟಿ ಕೊಡುತ್ತಾರೆ. ಹಾಗಾಗಿ, ಇಲ್ಲಿನ ಸ್ವಚ್ಛತೆಯನ್ನು ನಿರ್ವಹಿಸುವುದು ಕ್ಲಿಷ್ಟಕರ ಕೆಲಸ. ಹಾಗಾಗಿ, ನೈರ್ಮಲ್ಯ ಕಾಯ್ದುಕೊಳ್ಳಲು ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರನ್ನು ನಿಯೋಜಿಸಲಾಗಿದೆ.

ರಾಜಪಥದ ರಸ್ತೆ

ಮೊದಲು

ನಂತರ

ಹುಲ್ಲುಹಾಸು

ಮೊದಲು

ನಂತರ

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಬೆಂಗಳೂರಿನಲ್ಲಿ ಸುರಿದಿರುವ ಮಳೆ ಪ್ರಮಾಣವು ನಿರ್ವಹಣೆ ಮಾಡಲಾಗದಷ್ಟು ಅಧಿಕವಾಗಿದೆ ಎಂದು ರಾಜ್ಯ ಸರ್ಕಾರ ಹೇಳುತ್ತಿರುವುದು ಸಮರ್ಥನೀಯವೇ

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 219

ಮುಕ್ಕಣ್ಣನಿಂದ ಭಸ್ಮವಾದ ಮನ್ಮಥ

ನಾರದನು 'ಓ ಬ್ರಹ್ಮನೇ, ಪಾರ್ವತಿಯನ್ನು ನೋಡಿ ಮರುಳಾದ ಶಿವ ಮತ್ತೆ ಮನ್ಮಥನ ಮೋಹಪಾಶಕ್ಕೆ ಸಿಲುಕಲಿಲ್ಲವೆ? ಮುಂದೇನಾಯಿತು ಎಂಬುದನ್ನು ನನಗೆ ಹೇಳು' ಎಂದು ಕೌತುಕನಾಗಿ ಕೇಳುತ್ತಾನೆ. ಬ್ರಹ್ಮನು ಶಿವಪುರಾಣ ಮುಂದುವರೆಸುತ್ತಾನೆ.

ಪಾರ್ವತಿಯನ್ನು ನೋಡಿ ಇಂದೇಕೆ ತನಗೆ ಮನೋವಿಕಾರವಾಯಿತು ಅಂತ ಮಹಾಯೋಗಿಯಾದ ಮಹೇಶ್ವರನಿಗೆ ಆಶ್ಚರ್ಯವಾಗುತ್ತದೆ. 'ಘೋರವಾದ ತಪವನ್ನು ಮಾಡುತ್ತಿರುವ ತನಗೆ ವಿಘ್ನಗಳೇಕೆ ಬಂದವು? ಯಾವ ದುಷ್ಟನಿಂದ ಮನಸ್ಸು ವಿಕಾರಹೊಂದಿತು? ಪಾರ್ವತಿಯ ಸೌಂದರ್ಯವರ್ಣನೆ ಮಾಡಿದೆನಲ್ಲಾ? ಇದೆಂಥ ತಪ್ಪು ಮಾಡಿದೆ. ಇದು ತಪೋಧರ್ಮಕ್ಕೆ ವಿರುದ್ಧವಾಯಿತು' ಎಂದು ಪರಿತಪಿಸಿದ ಶಿವ. ತಾನು ಮಾಡಿರುವ ತಪ್ಪಿಗೆ ಪ್ರಾಯಶ್ಚಿತ್ತದ ಸದ್ಗತಿ ಕೊಡುವ ಮಹಾತ್ಮರು ಇಲ್ಲಿ ಯಾರಾದರೂ ಇರುವರೊ – ಎಂದು ಸುತ್ತಲೂ ನೋಡಿದ. ಆಗ ಮೂರ್ಖನಾದ ಮನ್ಮಥ ಬಾಣವನ್ನು ಬಿಲ್ಲಿಗೇರಿಸಿಕೊಂಡು ಗರ್ವದಿಂದ ನಿಂತಿದ್ದನ್ನು ಕಂಡ. ಮನ್ಮಥನನ್ನು ನೋಡಿದ ಪರಮೇಶ್ವರನಿಗೆ ತನಗಾದ ಮನೋವಿಕಾರಕ್ಕೆ ಈತನೇ ಕಾರಣ ಎಂಬುದು ಮನದಟ್ಟಾಯಿತು. ಕೂಡಲೇ ಶಿವನ ಮನದಲ್ಲಿ ಮಹಾಕ್ರೋಧ ಉಕ್ಕಿತು.

ಶಿವ ಕ್ರೋಧಗೊಂಡಿರುವುದನ್ನು ತಿಳಿದುಕೊಳ್ಳದ ಮದಾಂಧ ಮನ್ಮಥ ಮೂರ್ಖನಂತೆ ಮಹಾಮೋಹಕವಾದ ಪುಷ್ಪಬಾಣವನ್ನು ಶಿವನ ಮೇಲೆ ಪ್ರಯೋಗಿಸಿಯೇ ಬಿಟ್ಟ. ಮನ್ಮಥನ ಜನ್ಮದಲ್ಲೇ ಎಂದೂ ವ್ಯರ್ಥವಾಗದ ಆ ಬಾಣವು ಶಿವನಲ್ಲಿ ವ್ಯರ್ಥವಾಯಿತು. ತನ್ನ ಬತ್ತಳಿಕೆಯಲ್ಲೇ ಅತ್ಯಂತ ಬಲಿಷ್ಠವಾದ ಬಾಣ ಶಿವನ ಮುಂದೆ ವ್ಯರ್ಥವಾದುದನ್ನು ನೋಡಿ ಮನ್ಮಥ ತುಂಬಾ ಭಯಗೊಂಡ. ಉರಿಗೋಪದಿಂದ ತನ್ನೆಡೆ ನೋಡುತ್ತಿರುವ ಶಿವನನ್ನು ನೋಡಿ ಹೆದರಿಕೆಯಿಂದ ನಡುಗಿದ. ಶಿವನ ಕೋಪದಿಂದ ಪಾರಾಗಲು ಇಂದ್ರ ಮತ್ತಿತರ ದೇವತೆಗಳ ಸಹಾಯಕ್ಕಾಗಿ ಸ್ಮರಿಸಿದ.

ಇಂದ್ರ ಮತ್ತಿತರ ದೇವತೆಗಳು ತಕ್ಷಣವೇ ಧಾವಿಸಿ ಬಂದರು. ಕೋಪೋದ್ರಿಕ್ತನಾಗಿ ಮನ್ಮಥನತ್ತ ನೋಡುತ್ತಿದ್ದ ಶಿವನಿಗೆ ನಮಸ್ಕರಿಸಿ, ಭಕ್ತಿಯಿಂದ ಸ್ತೋತ್ರ ಮಾಡಿದರು. ಆದರೆ ದೇವತೆಗಳ ಸ್ತೋತ್ರಕ್ಕೂ ಕರಗದ ಶಿವನ ಕ್ರೋಧದ ಜ್ವಾಲೆಗಳು ಮೇಲುಮುಖವಾಗಿ ಹರಡಿ ಪ್ರಳಯಾಗ್ನಿಯಂತೆ ಉರಿಯತೊಡಗಿತು. ಅಗ್ನಿಯು ಆಕಾಶವನ್ನೆಲ್ಲಾ ವ್ಯಾಪಿಸಿ ಮನ್ಮಥನ ಸುತ್ತಲೂ ಉರಿಯ ತೊಡಗಿತು. ಇದನ್ನು ನೋಡಿದ ದೇವತೆಗಳು ದಿಗಿಲು ಬಿದ್ದು, 'ಓ ದೇವ ಕ್ಷಮಿಸು. ಮದನನನ್ನು ಕ್ಷಮಿಸು' ಎಂದು ಶಿವನನ್ನು ಗೋಗರೆದರು. ದೇವತೆಗಳ ಮೊರೆಗೆ ಶಿವನ ಉರಿಗಣ್ಣು ಮಣಿಯದೆ ಮನ್ಮಥನನ್ನು ಸುಟ್ಟು ಭಸ್ಮಮಾಡಿತು.

ಶಿವನನ್ನು ಸಂಸಾರಿಯಾಗಿ ಮಾಡುವ ಪಣತೊಟ್ಟು ಬಂದ ಮನ್ಮಥ ಮೃತನಾದುದನ್ನು ಕಂಡು ದೇವತೆಗಳು ದುಃಖಗೊಂಡರು. ತಮ್ಮ ಬದುಕು ಸರ್ವನಾಶವಾಯಿತು ಎಂದು ರೋದಿಸಿದರು. ಮನ್ಮಥನ ಪ್ರಯತ್ನ ವಿಫಲವಾಗಿದ್ದಲ್ಲದೆ, ಆತ ಪ್ರಾಣ ಸಹ ಕಳೆದುಕೊಂಡಿದ್ದನ್ನು ನೋಡಿ ಪಾರ್ವತಿ ತುಂಬಾ ನೊಂದುಕೊಂಡಳು. ಮನ್ಮಥನ ಸಾವನ್ನು, ದೇವತೆಗಳ ಗೋಳನ್ನು ನೋಡಲಾರದೆ ಆಕೆ ಬಹಳ ದುಃಖದಿಂದ ಸಖಿಯರೊಡನೆ ತನ್ನ ಮನೆಗೆ ಹಿಂತಿರುಗಿದಳು.

ಇತ್ತ ರತಿ ತನ್ನ ಪತಿ ಮನ್ಮಥ ಭಸ್ಮವಾದೊಡನೆಯೇ ದುಃಖದಿಂದ ಮೂರ್ಛೆಹೋದಳು. 'ಈಗೇನು ಮಾಡಲಿ? ಎಲ್ಲಿಗೆ ಹೋಗಲಿ? ದೇವತೆಗಳು ಇದೇನನ್ನು ಮಾಡಿದರು? ನನ್ನ ಪತಿಯನ್ನು ಕೊಲ್ಲಿಸಿರುವರಲ್ಲಾ? ಅಯ್ಯೋ! ನಾಥ, ನಿನಗೆಂಥ ಸಾವು ಬಂತು? ಓ ಪ್ರಾಣಪ್ರಿಯ' ಎಂದು ರತಿದೇವಿ ಪರಿಪರಿಯಾಗಿ ವಿಲಾಪಿಸಿದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಕನೊಬ್ಬನ ದೇಹದ ಮೇಲೆ ಉಪ್ಪಿನ ರಾಶಿ ಇರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅದರ ಜತೆಯಲ್ಲಿ, 'ನೀರಿನಲ್ಲಿ ಮುಳುಗಿ ಸತ್ತವರನ್ನು ಬದುಕಿಸುವ ವಿಧಾನವಿದು. ಅಂತಹವರ ದೇಹವನ್ನು 150 ಕೆ.ಜಿ.ಯಷ್ಟು ಉಪ್ಪಿನ ರಾಶಿಯಲ್ಲಿ ಮುಚ್ಚಿ, 3-4 ತಾಸು ಕಾಯಬೇಕು. ಮುಖ ಮಾತ್ರ ಕಾಣುವಂತಿರಬೇಕು. ಅವರ ದೇಹದಲ್ಲಿರುವ ನೀರನ್ನು ಉಪ್ಪು ಹೀರಿಕೊಳ್ಳುತ್ತದೆ. ಇದರಿಂದ ಆ ವ್ಯಕ್ತಿಗೆ ಪ್ರಜ್ಞೆ ಬರುತ್ತದೆ. ಆಗ ಅವರನ್ನು ವೈದ್ಯರ ಬಳಿ ಕರೆದುಕೊಂಡು ಹೋಗಬಹುದು. ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ ನಂತರವೂ ಈ ಚಿಕಿತ್ಸೆ ನೀಡಿದರೆ ಅವರು ಬದುಕುಳಿಯುತ್ತಾರೆ' ಎಂಬ ವಿವರ ನೀಡಲಾಗಿದೆ. ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್‌ನಲ್ಲಿ ಈ ಪೋಸ್ಟ್ ಸಾವಿರಾರು ಸಂಖ್ಯೆಯಲ್ಲಿ ಹಂಚಿಕೆಯಾಗಿದೆ.

'ಇದು ಸುಳ್ಳು ಸುದ್ದಿ' ಎಂದು ಇಂಡಿಯಾ ಟುಡೇ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಮನುಷ್ಯನ ದೇಹದಿಂದ ನೀರನ್ನು ಉಪ್ಪು ಹೀರಿಕೊಳ್ಳುವುದಿಲ್ಲ. ನೀರಿನಲ್ಲಿ ಮುಳುಗಿ ಸತ್ತವರನ್ನು ಈ ರೀತಿ ಬದುಕಿಸಲು ಸಾಧ್ಯವಿಲ್ಲ. ಮಿದುಳು ಮತ್ತು ಹೃದಯ ಸಂಪೂರ್ಣ ನಿಷ್ಕ್ರಿಯವಾದ ನಂತರ ಯಾರನ್ನೂ ಬದುಕಿಸಲು ಸಾಧ್ಯವಿಲ್ಲ. ಹೀಗಾಗಿ ನೀರಿನಲ್ಲಿ ಮುಳುಗಿದವರಿಗೆ ಪ್ರಥಮ ಚಿಕಿತ್ಸೆ ನೀಡಿ, ತಕ್ಷಣವೇ ವೈದ್ಯರಲ್ಲಿಗೆ ಒಯ್ಯಬೇಕು. ಉಪ್ಪಿನ ರಾಶಿಯಲ್ಲಿ ಮುಚ್ಚಿ ಇಡುವುದರಿಂದ ಯಾವುದೇ ಪ್ರಯೋಜನ ಇಲ್ಲ. ಬದಲಿಗೆ, ಬದುಕುಳಿಯುವ ಸಾಧ್ಯತೆಯನ್ನು ಇದು ಕಮರಿಸುವ ಅಪಾಯವೂ ಇದೆ ಎಂದು ವೈದ್ಯರು ಹೇಳಿದ್ದಾರೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ. ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಈ ರೀತಿ ಮಾಡಿ ಇಬ್ಬರು ಮೃತಪಟ್ಟಿದ್ದಾರೆ. ಕರ್ನಾಟಕದಲ್ಲಿ ನೀರಿನಲ್ಲಿ ಮುಳುಗಿ ಸತ್ತಿದ್ದ ಬಾಲಕನನ್ನು ಈ ರೀತಿ ಬದುಕಿಸುವ ಯತ್ನ ವಿಫಲವಾಗಿದೆ.

ಗುಂಡಣ್ಣ

ಬೆರಗಿನ ಬೆಳಕು – ಗುರುರಾಜ ಕರಜಗಿ

ಸ್ವಾಮಿ ಭಕ್ತಿ

ಪ್ರತ್ಯಕ್ಷವಿಲ್ಲದಾ ಸ್ವಾಮಿಯಂ ನೆನೆನೆನೆದು |
ಸತ್ಯಭಕ್ತಿಯ ಸೇವೆಗೆಯ್ದವಂ ಭರತಂ ||
ನಿತ್ಯಜೀವನದಿ ನೀನಾ ನಯವನನುಸರಿಸೊ |
ಸ್ವತ್ವದಾಶೆಯ ನೀಗಿ – ಮಂಕುತಿಮ್ಮ || 710 ||

ಪದ-ಅರ್ಥ: ಸೇವೆಗೆಯ್ದವಂ = ಸೇವೆಯನ್ನು ಮಾಡಿದವನು, ನೀನಾ = ನೀನು + ಆ, ನಯವನನುಕರಿಸೊ = ನಯವನು(ನೀತಿಯನ್ನು) + ಅನುಕರಿಸೊ, ಸ್ವತ್ವದಾಶೆಯ = ಸ್ವತ್ವದ (ತನ್ನದೆಂಬ ಭಾವದ) + ಆಶೆಯ, ನೀಗಿ = ಕಳೆದುಕೊಂಡು.

ವಾಚ್ಯಾರ್ಥ: ಕಣ್ಣಮುಂದಿಲ್ಲದ ಸ್ವಾಮಿಯಾದ ರಾಮನನ್ನು ಸದಾ ನೆನೆಯುತ್ತಾ ಸತ್ಯವಾದ ಭಕ್ತಿಯ ಸೇವೆಯನ್ನು ಮಾಡಿದವನು ಭರತ. ನಿತ್ಯದ ಬದುಕಿನಲ್ಲಿ, ಸ್ವಂತದ್ದೆಂಬ ಭಾವದ ಆಸೆಯನ್ನು ಕಳೆದುಕೊಂಡು, ನೀನು ಅದೇ ನೀತಿಯನ್ನು ಅನುಸರಿಸು.

ವಿವರಣೆ: ರಾಮಾಯಣದಲ್ಲಿ ಸ್ವಾಮಿಭಕ್ತಿಯ ಅನೇಕ ಉದಾಹರಣೆಗಳು ದೊರೆಯುತ್ತವೆ. ರಾವಣನಲ್ಲಿಯ ಹೆದರಿಕೆ, ಭಕ್ತಿಗಳ ಮಿಶ್ರಣದಿಂದ ಮಾರೀಚ, ಚಿನ್ನದ ಜಿಂಕೆಯಾಗಿ ಪ್ರಾಣ ಕಳೆದುಕೊಂಡದ್ದು ಒಂದಾದರೆ, ತನ್ನ ಒಡತಿಗೆ, ಅನ್ಯಾಯವಾಗಬಾರದೆಂಬ ಒಂದೇ ಕಾರಣಕ್ಕೆ ತನಗೆ ಉಚಿತವೆನ್ನಿಸಿದ ಸಲಹೆಯನ್ನು ಕೊಟ್ಟು, ರಾಮಾಯಣದ ದಾರುಣ ಪ್ರಸಂಗಕ್ಕೆ ಕಾರಣವಾದ ಮಂಥರೆಯದೂ ಸ್ವಾಮಿಭಕ್ತಿಯೇ. ಲಕ್ಷ್ಮಣನ ಸ್ವಾಮಿಭಕ್ತಿ ಮತ್ತೊಂದು. ಅದು ಅವನನ್ನು ಸದಾ ಕಾಲ ರಾಮನ ನೆರಳಾಗಿಯೇ ಇರುವಂತೆ ನೋಡಿಕೊಂಡಿತು. ಸುಗ್ರೀವನಿಗೆ ಹನುಮಂತನದೂ ಸ್ವಾಮಿಭಕ್ತಿ. ಆದರೆ ಆಂಜನೇಯನ ಸ್ವಾಮಿನಿಷ್ಠೆ ಶ್ರೀರಾಮನಲ್ಲಿ ಅತ್ಯದ್ಭುತ ಹಂತವನ್ನು ತಲುಪಿತು. ಶಬರಿಯದೂ ಸ್ವಾಮಿನಿಷ್ಠೆಯೇ. ರಾಮನಿಗಾಗಿ ಬದುಕೆಲ್ಲ ಕಾದವಳು ಶಬರಿ.

ಭರತನದೊಂದು ವಿಶೇಷ. ಆತನೂ ಅಣ್ಣನೊಡನೆ ಕಾಡಿಗೆ ಹೋಗಲು, ರಾಜ್ಯತ್ಯಾಗಮಾಡಲು ಮನಸ್ಸಿದ್ದವನೆ. ಆದರೆ ಅವನು ಆಗ ಇರಲಿಲ್ಲ. ಆದರೆ ಅಣ್ಣನ ಆಜ್ಞೆಯಂತೆ, ತಾಯಂದಿರ ಆರೈಕೆಗೆ, ದೇಶದ ರಕ್ಷಣೆಗೆ ನಿಲ್ಲಲೇಬೇಕಾಯಿತು. ಮನಸ್ಸಿಲ್ಲದಿದ್ದರೂ ರಾಜ್ಯವನ್ನು ನಡೆಸಬೇಕಾಯಿತು. ಕಾಡಿನಲ್ಲಿ, ಜನವಸತಿಯಿಂದ, ಭೋಗ, ಭಾಗ್ಯಗಳಿಂದ ದೂರವಾಗಿದ್ದಾಗ ಸನ್ಯಾಸಿಯ ಬದುಕು ಸಹಜವಾದೀತು. ಯಾಕೆಂದರೆ ಅಲ್ಲಿ ಬೇರೆ ಆಕರ್ಷಣೆಗಳಿಗೆ ದಾರಿಯಿಲ್ಲ. ಆದರೆ ಎಲ್ಲ ಹೊಳಪು, ಚಮತ್ಕಾರಗಳ ನಡುವೆಯೇ ಇದ್ದು ಧರ್ಮವನ್ನು ಪಾಲಿಸುವುದು ನಿಜಕ್ಕೂ ಸಾಹಸದ ಕೆಲಸ. ಭರತ ಈಗ ಚಕ್ರವರ್ತಿಯಾಗಿದ್ದಾನೆ. ಆಯೋಧ್ಯೆ ಅವನ ರಾಜಧಾನಿ. ಆದರೆ ಭರತ ನಗರವನ್ನು ಪ್ರವೇಶಿಸದೆ ನಂದೀಗ್ರಾಮದಲ್ಲೇ ಉಳಿದು, ಅಧಿಕಾರ, ಯೌವನ, ಹಣ ಇವೆಲ್ಲವುಗಳನ್ನು ಹೊಂದಿಯೂ, ಸನ್ಯಾಸಿಯಂತೆ ಬದುಕಿದ್ದೊಂದು ಮಹತ್ತರ ಸಾಧನೆ. ರಾಮ ಹತ್ತಿರದಲ್ಲೂ ಇಲ್ಲ, ಹದಿನಾಲ್ಕು ವರ್ಷ ಮರಳಿ ಬರುವಂತಿಲ್ಲ ಎಂಬುದು ಗೊತ್ತಿದ್ದರೂ, ಸದಾ ಅವನ ಸ್ಮರಣೆಯಲ್ಲೇ, ಭಕ್ತಿಯಿಂದ ರಾಜಕಾರ್ಯವನ್ನು ಸೇವೆಯೆಂಬಂತೆ ಮಾಡಿದವನು ಭರತ. ಕಗ್ಗ, ನಮಗೆ ಭರತನ ಬದುಕು ಮಾದರಿಯಾಗಲಿ ಎಂದು ಆಶಿಸುತ್ತದೆ. ಭಗವಂತ ನಮ್ಮ ಸ್ವಾಮಿ, ನಮ್ಮ ಕರ್ತೃ. ಅವನು ನಮ್ಮನ್ನು ಕಾರ್ಯಮಾಡುವಂತೆ ಭೂಮಿಗೆ ಕಳುಹಿಸಿದ್ದಾನೆ. ಅವನನ್ನು ಒಂದು ಕ್ಷಣವೂ ಮರೆಯದೆ, ಸ್ಮರಿಸುತ್ತ, ನಮಗೆ ಒದಗಿ ಬಂದ ಕಾರ್ಯಗಳನ್ನು ನಿರ್ವಂಚನೆಯಿಂದ, ಸ್ವಾರ್ಥ-ತ್ಯಾಗದಿಂದ ಮಾಡುವುದೇ ನಾವು ಅವನಿಗೆ ತೋರಬಹುದಾದ ಭಕ್ತಿಯ ಸೇವೆ. ಅದೇ ನಮ್ಮ ಸ್ವಾಮಿಭಕ್ತಿಯ ಕಾರ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ತ್ರಯೋದಶಿ ಗಂ. 21-03 ನಕ್ಷತ್ರ: ಶ್ರವಣ ಗಂ. 13-46 ಯೋಗ: ಅತಿಗಂಡ ಗಂ. 21-40, ಕರಣ: ಕೌಲವ ಗಂ. 10-34, ಸಿಂಹ ಮಾಸದ 22 ನೇ ದಿನ. ರಾಹುಕಾಲ : ಮಧ್ಯಾಹ್ನ 01:30 –03:00 ಸೂರ್ಯೋದಯ : 06-23 ಸೂರ್ಯಾಸ್ತ : 06-33 ಮುಸ್ಲಿಂ ದಿನಾಂಕ : 11 ಸಫರ್, ದಿನ ವಿಶೇಷ : ಓಣಮ್ ಅಥವಾ ತಿರು ಓಣಮ್ ದಿನ (ಕೇರಳ), ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ : 9, 12

ಮೇಷ: ವ್ಯವಹಾರ ಸಂಬಂಧಿ ಮಾತುಕತೆಗಳು ಇಂದು ಫಲ ನೀಡಲಿವೆ. ನಿಮ್ಮ ಮಿತ್ರವೃಂದದಲ್ಲಿ ಕಂಡುಬರುವ ಗೊಂದಲ ಹಾಗೂ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿಕೊಡುವುದರಲ್ಲಿ ಯಶಸ್ವಿಯಾಗುವಿರಿ.

ವೃಷಭ: ಬಹಳ ದಿನಗಳ ನಿಮ್ಮ ಕನಸನ್ನು ನನಸು ಮಾಡುವಂತಹ ಅವಕಾಶಗಳು ಈ ದಿನ ಲಭಿಸಲಿವೆ. ಸಂತೋಷದ ಮನೋಭಾವದಲ್ಲಿರುವ ನೀವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಔಷಧ ಮಾರಾಟಗಾರರಿಗೆ ಲಾಭ.

ಮಿಥುನ: ಸಂಶೋಧಕರಿಗೆ ಈ ದಿನ ಬಹಳಷ್ಟು ಮಹತ್ವಪೂರ್ಣವಾದದ್ದು ಎಂದೆನಿಸಲಿದೆ. ನಿಮ್ಮ ಸಂತೋಷಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಅವಕಾಶ ಸಿಗುವುದು. ಸಕಾರಾತ್ಮಕ ಮನೋಭಾವದಿಂದ ಮನಸ್ಸು ಗೆಲ್ಲುವಿರಿ.

ಕರ್ಕಾಟಕ: ಇಂದು ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನ ಪ್ರಯೋಗಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ತಂದೆಯಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ. ಸಮಸ್ಯೆ ಇತ್ಯರ್ಥಗೊಳ್ಳಲಿದೆ.

ಸಿಂಹ: ಇಂದು ನಿಮ್ಮ ಭಾವನೆಗಳನ್ನು ಇತರರ ಮುಂದೆ ಹಂಚಿಕೊಳ್ಳುವುದು ಸರಿಯಲ್ಲ. ದೈವಾನುಗ್ರಹದಿಂದ ಸಂತಾನ ಭಾಗ್ಯದ ಸುದ್ದಿ ಕೇಳುವಿರಿ, ಅದರ ಫಲವಾಗಿ ಮನೆಯಲ್ಲಿ ಸಂಭ್ರಮದ ವಾತಾವರಣ ಸೃಷ್ಟಿಯಾಗಲಿದೆ.

ಕನ್ಯಾ: ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಯೊಂದಿಗೆ ಮಾತುಕತೆ ನಡೆಸಿ. ಮಕ್ಕಳಿಗೆ ಹಿಂದೆ ಕೊಟ್ಟಿದ್ದ ಮಾತನ್ನು ಉಳಿಸಿಕೊಳ್ಳಲು ಈ ದಿನ ನೀವು ಶಕ್ತರಾಗುವಿರಿ. ಮನೆಯಲ್ಲಿ ಅತಿಥಿ ಸತ್ಕಾರ ನಡೆಸಿ.

ತುಲಾ: ಆಸಕ್ತಿಕರ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ನಿಮ್ಮ ಹೊಸ ಯೋಜನೆಗಳಿಗೆ ಸಹಕಾರಿಯಾಗಲಿದೆ. ಹಾಸ್ಯ ಲೇಖನಗಳಿಂದ ಪ್ರಸಿದ್ಧಿ ಪಡೆಯಬಹುದು. ಆಫೀಸಿನಲ್ಲಿ ಎಲ್ಲರೊಡನೆ ನೇರವಾಗಿ ವ್ಯವಹರಿಸಿ.

ವೃಶ್ಚಿಕ: ಹಲವು ದಿನಗಳಿಂದ ಬರಬೇಕಾಗಿರುವ ಹಣ ಸಂಜೆಯ ವೇಳೆಗೆ ಕೈ ಸೇರುವುದು. ಈ ದಿನದ ಕಾರ್ಯ ಕಲಾಪಗಳು ನಿಮ್ಮ ಯೋಚನೆಯಂತೆ ಸುಗಮವಾಗಿ ಸಾಗುವುದು.

ಧನು: ನೀವು ಯೋಚಿಸಿಯೇ ಇರದ ಸನ್ನಿವೇಶಗಳು ಎದುರಾಗಿ ಅಚ್ಚರಿಯನ್ನು ಮೂಡಿಸಲಿವೆ. ಕೌಟುಂಬಿಕ ವಿಚಾರದಲ್ಲಿ ಹೆಚ್ಚಿನ ಜವಾಬ್ದಾರಿಯುತ ಸ್ಥಾನದಲ್ಲಿರುವಂತೆ ಭಾಸವಾಗಲಿದೆ. ಬಹುಕಾಲದ ಆಸೆಗಳು ಇಂದು ಪೂರೈಸಲಿದೆ.

ಮಕರ: ಭಿನ್ನ ವಿಭಿನ್ನ ಜನರನ್ನು ಭೇಟಿಯಾಗಲಿರುವುದರಿಂದ ವೃತ್ತಿ ಬದುಕು ಹಾಗೂ ಸಾಮಾಜಿಕ ಬದುಕಿನಲ್ಲಿ ಬದಲಾವಣೆಯ ಗಾಳಿ ಬೀಸಲಿದೆ. ಯಾವುದೇ ಆಡಂಬರವಿಲ್ಲದೆ ಸರಳ ರೀತಿಯಲ್ಲಿ ಬದುಕು ನಡೆಸುವುದು ಇಷ್ಟವಾಗುವುದು.

ಕುಂಭ: ತುರ್ತು ವಿಷಯಗಳ ಬಗ್ಗೆ ಅಧಿಕ ಗಮನ ಹರಿಸಿ. ಕೌಟುಂಬಿಕ ಸಂಬಂಧಗಳು ಸದೃಢಗೊಳ್ಳಲಿವೆ. ಅನ್ಯರಲ್ಲಿ ಯಾವುದೇ ವಿಚಾರಗಳನ್ನು ಅನಗತ್ಯ ಚರ್ಚಿಸದಿರಿ. ಅಸಹಾಯಕ ಸಂದರ್ಭ ಎದುರಿಸಬೇಕಾಗಬಹುದು.

ಮೀನ: ಕಳೆದುಹೋದ ದಿನಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವುದರಿಂದ ಅನೇಕ ಪ್ರಶ್ನೆಗಳಿಗೆ ಉತ್ತರ ದೊರಕಲಿದೆ. ಮಗಳ ಮದುವೆ ಕಾರ್ಯ ಕಲಾಪಗಳು ಸುಗಮವಾಗಿ ಸಾಗಿರುವುದು ನೆಮ್ಮದಿ ಉಂಟುಮಾಡುತ್ತದೆ.

ಪದಬಂಧ 5073 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಮುದ್ರ ಅಥವಾ ನದಿಯ ಉಬ್ಬರ (3)
6.ಬೇರೇನಲ್ಲ! ಇದು ಹೊಣೆಗೇಡಿತನ! (5)
7.ತವರಿನಲ್ಲಿ ಹಬ್ಬಿರುವ ಬಳ್ಳಿ (3)
10.ಉಪವಾಸದಿಂದ ಮರಣ ಹೊಂದುವ ವ್ರತ (5)
15.ಕೈಯನ್ನು ಕೊನೆಗಿಟ್ಟಾಗ ಕಾಣಿಸಿದ ಮಿಶ್ರಣ (3)
16.ಸಂಸಾರದ ಸೆರೆಯಿದು (5)
17.ಸಾಗಿಸುವಿಕೆಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ

1.ನಡುವೆ ಧ್ವನಿ ಕೊಟ್ಟರೆ ಇದು ಅಶ್ವಾಸನೆ! (4)
2.ಕುಂಬಾರನ ಚಕ್ರವಿದು (3)
3.ಬೇರಿಗೊರಗಿರುವ ಈತ ಪಕ್ಕಾ ಆಲಸಿ! (3)
4.ಕೊನೆಗೆ ವಾಲುತ್ತಾ ಕೇಳಿರುವ ಪ್ರಶ್ನೆ (3)
5.ಪುಸ್ತಕದ ಒಂದು ಅಧ್ಯಾಯ ಪದದಲ್ಲಿದೆ! (4)
8.ಇದು ಕನ್ನಡಿಗನ ಎಕ್ಸ್‌ಪ್ರಿಮೆಂಟ್! (3)
9.ವೇಷ ಧರಿಸಿ ಒಳಹೋಗುವಿಕೆ! (3)
11.ನಡುವೆ ಲೋಭವನ್ನು ತೋರಿಸಿ ಆಸೆ ಹುಟ್ಟಿಸುವುದು (4)
12.ರಾಜನ ಗೃಹ ಇಲ್ಲಿದೆ (4)
13.ಬಾಂಧವ್ಯ ಇಲ್ಲಿ ಬಂದಿದೆ (3)
14.ಇದಂತೂ ಬೆಲೆಕಟ್ಟಲಾಗದುದು (3)
15.ಸಾರವುಳ್ಳ ಕುಟುಂಬ (3)



5072ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ನವಸಾಗರ 4.ಕೋರಿಕೆ 6.ಮಟ್ಟಸ 8.ರಮಣ 9.ಮಾವುತ 10.ತರಂಗ 11.ಮಧುರ 13.ಪ್ರಾಕಾರ 14.ರಜತೋತ್ಸವ.

ಮೇಲಿಂದ ಕೆಳಕ್ಕೆ: 1.ನವಸುಮ 2.ಪರಿಮಾಣ 5.ತರತಮ 7.ಸಮಾಗಮ 10.ತರಕಾರಿ 12.ರಥೋತ್ಸವ

ಸುಡೊಕು 5459

	2			3		4		
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5458 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1



ಶಿಕ್ಷಕರ ಅರ್ಹತಾ ಪರೀಕ್ಷೆ

ಅರ್ಜಿ ಸಲ್ಲಿಕೆಗೆ ಸೆ.30 ಕೊನೆ ದಿನ

ಸಾರ್ವಜನಿಕ ಶಿಕ್ಷಣ ಇಲಾಖೆ, ಪ್ರಸಕ್ತ ಸಾಲಿನ (2022) ಶಿಕ್ಷಕರ ಅರ್ಹತಾ ಪರೀಕ್ಷೆಗೆ ಅರ್ಜಿ (Karnataka Teacher eligibility test) ಆಹ್ವಾನಿಸಿದೆ. ಸೆ.1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಅರ್ಜಿ ಸಲ್ಲಿಕೆಗೆ ಸೆ.30 ಕೊನೆ ದಿನ. ಶುಲ್ಕ ಪಾವತಿಸುವುದಕ್ಕೂ ಇದೇ ಕೊನೆಯ ದಿನ.

ವಿದ್ಯಾರ್ಹತೆ :

ಪತ್ರಿಕೆ-I : 1 ರಿಂದ 5ನೇ ತರಗತಿಗವರೆಗೆ ಶಿಕ್ಷಕರಾಗಲು ಟಿಇಟಿಗೆ ಅರ್ಜಿ ಸಲ್ಲಿಸುವವರು ಪಿಯುಸಿ ಮತ್ತು ಡಿ.ಇಡಿ ಪಾಸಾಗಿರಬೇಕು.

ಪತ್ರಿಕೆ 2: 6 ರಿಂದ 8ನೇ ತರಗತಿಗೆ ಶಿಕ್ಷಕರಾಗಲು ಬಯಸುವವರು ಪದವಿ ಮತ್ತು ಬಿ.ಇಡಿ ಪಾಸಾಗಿರಬೇಕು. ಡಿ.ಇಡಿ, ಬಿ.ಇಡಿ/ಬಿ.ಎಸ್ಸಿ ಬಿ.ಇಡಿ ಪರೀಕ್ಷೆ ಹಾಜರಾಗಿ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಪದವಿ/ಪಿಯುಸಿಯಲ್ಲಿ ಕನಿಷ್ಠ ಎಷ್ಟು ಅಂಕಗಳಿರಬೇಕು ಎಂಬುದೂ ಸೇರಿದಂತೆ ವಿದ್ಯಾರ್ಹತೆಗೆ ಸಂಬಂಧಿಸಿದ ಸಂಪೂರ್ಣ ವಿವರಗಳಿಗೆ ಇಲಾಖೆ ಹೊರಡಿಸಿರುವ ಅಧಿಸೂಚನೆಯಲ್ಲಿನ 7ನೇ ಅಂಶವನ್ನು ಗಮನಿಸಬಹುದು. (ಅಧಿಸೂಚನೆ ಓದಲು ಈ ಲಿಂಕ್‌ಗೆ ಭೇಟಿ ನೀಡಿ: www.schooleducation.kar.nic.in/cacellpdfs/TET-2022/2_KARTET2022_NOTIFICATION01092022.pdf)

ಅರ್ಜಿ ಸಲ್ಲಿಸುವ ವಿಧಾನ

ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು. ನಿಗದಿತ ಶುಲ್ಕವನ್ನೂ ಆನ್‌ಲೈನ್ ಮೂಲಕವೇ ಪಾವತಿಸಬೇಕು. http://www.schooleducation.kar.nic.in ಈ ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬೇಕು. ಬೇರೆ ಯಾವುದೇ ವಿಧಾನದ ಮೂಲಕ ಅರ್ಜಿ ಸಲ್ಲಿಸುವಂತಿಲ್ಲ.

ಅರ್ಜಿಯ ಜೊತೆಗೆ, ಅಭ್ಯರ್ಥಿಯು ಸಹಿ ಹಾಕಿದ ಇತ್ತೀಚಿನ ಭಾವಚಿತ್ರವನ್ನು ಅಪ್ಲೋಡ್ ಮಾಡಬೇಕು. ಅಂಗವಿಕಲ ಕೋಟಾದಡಿ ವಿನಾಯಿತಿ ಬಯಸಿದಲ್ಲಿ, ಸಂಬಂಧಿಸಿದ ಪ್ರಮಾಣ ಪತ್ರವನ್ನು ಅಪ್ಲೋಡ್ ಮಾಡಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರಹೊಂದಿರಬೇಕು.

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿ, ಸ್ಕ್ಯಾನ್ ಮಾಡಿದ ತಮ್ಮ ಭಾವಚಿತ್ರ ಹಾಗೂ ಸಹಿಯನ್ನು 'ಜೆಪಿಜಿ'(Ex: Photo.JPG Format) ನಮೂನೆಯಲ್ಲಿ ಅಪ್‌ಲೋಡ್ ಮಾಡಬೇಕು.

ಜಾಲತಾಣದಲ್ಲಿ ನೀಡಲಾದ ಸೂಚನೆಗಳನ್ನು ಓದಿ ಅರ್ಥೈಸಿಕೊಂಡು, ಅದರಂತೆ ಸೂಕ್ತ ಸಿದ್ಧತೆಯೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಬೇಕು. ನಂತರ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ ಹಾಗೂ ಪೂರ್ಣವಿವರಗಳನ್ನೊಳಗೊಂಡ ಅರ್ಜಿಯ ಕಂಪ್ಯೂಟರ್ ಜನರೇಟೆಡ್ ಪ್ರತಿಯ ಪಿಡಿಫ್ ಪುಟವನ್ನು ಪಡೆದುಕೊಳ್ಳಬೇಕು.

ಜೀವಿತಾವಧಿಗೆ ಮಾನ್ಯತೆ

ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಮಾಣ ಪತ್ರ ಜೀವಾತಾವಧಿಯವರಿಗೆ ಮಾನ್ಯತೆ ಹೊಂದಿರುತ್ತದೆ. ಒಮ್ಮೆ ಅರ್ಹತೆ ಪಡೆದವರು ಮತ್ತೆ ಮತ್ತೆ ಪರೀಕ್ಷೆ ಬರೆಯುವ ಅವಶ್ಯಕತೆಯಿಲ್ಲ. ಒಂದು ವೇಳೆ ಹೆಚ್ಚು ಅಂಕ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಮಾತ್ರ ಮತ್ತೆ ಪರೀಕ್ಷೆ ಬರೆಯಬಹುದಾಗಿದೆ.

ಪರೀಕ್ಷಾ ಶುಲ್ಕ ವಿವರ

ಸಾಮಾನ್ಯವರ್ಗ, 2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳಿಗೆ ಪತ್ರಿಕೆ 1 ಕ್ಕೆ ₹ 700 ಪತ್ರಿಕೆ 1 ಹಾಗೂ ಪತ್ರಿಕೆ 2 ಕ್ಕೆ ಸೇರಿ ₹1000 ಪಾವತಿಸಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಭ್ಯರ್ಥಿಗಳು, ಪತ್ರಿಕೆ-1ಕ್ಕೆ ₹350, ಪತ್ರಿಕೆ 1 ಮತ್ತು 2 ಸೇರಿ ₹500 ಇರುತ್ತದೆ. ಆನ್‌ಲೈನ್ ಬ್ಯಾಂಕಿಂಗ್, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಶುಲ್ಕ ಪಾವತಿಸಬಹುದು.

ಪರೀಕ್ಷಾ ದಿನಾಂಕ

ಇದೇ ನವೆಂಬರ್ 6ರಂದು ಬೆಳಿಗ್ಗೆ 9 ರಿಂದ 12ರವರೆಗೆ ಮತ್ತು ಮಧ್ಯಾಹ್ನ 1.30 ರಿಂದ 4 ರವರೆಗೆ ಪರೀಕ್ಷೆಗಳು ನಡೆಯಲಿವೆ. ಪ್ರವೇಶ ಪತ್ರಗಳನ್ನು ಅಕ್ಟೋಬರ್ 21 ರಿಂದ ಆನ್‌ಲೈನ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ.

ಗಮನಿಸಿ

- ಪರಿಶಿಷ್ಟ ಜಾತಿ / ಪರಿಶಿಷ್ಟವರ್ಗ / ಪ್ರವರ್ಗ-1 / ವಿಶೇಷ ಅಗತ್ಯತೆಯುಳ್ಳ ಅಭ್ಯರ್ಥಿಗಳಿಗೆ ಅರ್ಹ ವಿದ್ಯಾರ್ಹತೆಯಲ್ಲಿ ನಿಗದಿಪಡಿಸಿರುವ ಅಂಕಗಳಲ್ಲಿ ಶೇ 5 ರಷ್ಟು ವಿನಾಯಿತಿ ನೀಡಲಾಗಿದೆ.
- ಎನ್.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದಂತಹ ಡಿಪ್ಲೊಮಾ / ಪದವಿ ಕೋರ್ಸುಗಳನ್ನು ಮಾತ್ರ ಶಿಕ್ಷಕರ ಅರ್ಹತಾ ಪರೀಕ್ಷೆ ಬರೆಯಲು ಇಚ್ಛಿಸುವ ಅಭ್ಯರ್ಥಿಗಳ ವಿದ್ಯಾರ್ಹತೆಯಲ್ಲಿ ಪರಿಗಣಿಸಲಾಗಿದೆ. ಆದಾಗ್ಯೂ ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದಿಂದ ಮಾನ್ಯತೆ ಪಡೆದಂತಹ ಡಿಪ್ಲೊಮಾ ಇನ್ ಎಜುಕೇಶನ್ (ವಿಶೇಷ ಶಿಕ್ಷಣ) ಹಾಗೂ ಬಿ.ಇಡಿ (ವಿಶೇಷ ಶಿಕ್ಷಣ) ಪದವಿಯನ್ನು ಸಹ ಪರಿಗಣಿಸಲಾಗಿದೆ.
- ಅಂತಿಮ ವರ್ಷದ/ಸೆಮಿಸ್ಟರ್‌ನ ಪರೀಕ್ಷೆಯಲ್ಲಿ ನಿಗದಿತ ಅಂಕಗಳನ್ನು ಪಡೆದು ಉತ್ತೀರ್ಣತೆ ಹೊಂದಿದಲ್ಲಿ ಮಾತ್ರ ಕರ್ನಾಟಕ ಶಿಕ್ಷಕರ ಅರ್ಹತಾ ಪ್ರಮಾಣ ಪತ್ರ ಮಾನ್ಯ ಮಾಡಲಾಗುವುದು.

ಮಾಹಿತಿಗಾಗಿ ಜಾಲತಾಣಗಳು: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಲಿಂಕ್ ಕ್ಲಿಕ್ ಮಾಡಿ: https://sts.karnataka.gov.in/TET/

ಶಿಕ್ಷಕರ ಅರ್ಹತಾ ಪರೀಕ್ಷೆ ಕುರಿತ ಅಧಿಸೂಚನೆಗಾಗಿ https://www.schooleducation.kar.nic.in/cacellpdfs/TET-2022/1_KARTET2022_PRAKATANE01092022.pdf

ಪರೀಕ್ಷೆ ಕುರಿತ ಪೂರ್ಣ ಮಾಹಿತಿಗಾಗಿ https://www.schooleducation.kar.nic.inಗೆ ಭೇಟಿ ನೀಡಿ.

(ಮುಂದಿನ ವಾರ: ಪತ್ರಿಕೆ 1 ಮತ್ತು 2ರಲ್ಲಿರುವ ವಿಷಯಗಳ ಕುರಿತ ವಿವರ)

ವೇಗದ ಓದಿಗೆ ಸ್ಕಿಮ್ಮಿಂಗ್ ತಂತ್ರ

ಆರ್.ಬಿ.ಗುರುಬಸವರಾಜ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವಾಗ, ಕಡಿಮೆ ಅವಧಿಯಲ್ಲಿ ಹೆಚ್ಚು ಅಂಶಗಳನ್ನು ಓದುವುದು ಅನಿವಾರ್ಯವಾಗುತ್ತದೆ. ಇಂತಹ ವೇಳೆಯಲ್ಲಿ ವೇಗದ ಓದಿಗೆ ಪೂರಕವಾದ ತಂತ್ರಗಾರಿಕೆ ಅನುಸರಿಸಬೇಕಾದ ಅನಿವಾರ್ಯತೆ ಬರುತ್ತದೆ. ವೇಗದ ಓದಿಗೆ ಪೂರಕವಾದ ತಂತ್ರಗಾರಿಕೆಯೇ ಸ್ಕಿಮ್ಮಿಂಗ್.

ಸ್ಕಿಮ್ಮಿಂಗ್ ಎನ್ನುವುದು ಓದುವ ಪಠ್ಯದಲ್ಲಿನ ಮೂಲ ಕಲ್ಪನೆಯನ್ನು ಸಂಗ್ರಹಿಸಲು ಬಳಸುವ ಕ್ರಿಯೆಯಾಗಿದೆ. ಪಠ್ಯದಲ್ಲಿ ನಮ್ಮ ನಿರ್ದಿಷ್ಟ ಓದಿಗೆ ಬೇಕಾದ ಅಂಶಗಳಿವೆಯೇ, ಇಲ್ಲವೇ ಎಂಬುದನ್ನು ಕಣ್ಣಾಡಿಸುವ ಮೂಲಕ ಪ್ರಮುಖಾಂಶಗಳನ್ನು ಹುಡುಕುವ ಕ್ರಿಯೆಯೇ 'ಸ್ಕಿಮ್ಮಿಂಗ್'. ಪಠ್ಯವನ್ನು ಸ್ಕಿಮ್ಮಿಂಗ್ ಮಾಡುವುದು ಎಂದರೆ ಪಠ್ಯದ ಮುಖ್ಯ ಕಲ್ಪನೆ ಅಥವಾ ಸಾರಾಂಶವನ್ನು ಪಡೆಯಲು ಅದನ್ನು ವೇಗವಾಗಿ ಓದುವುದು ಎಂದರ್ಥ. ಓದಬೇಕಾದ ಪಠ್ಯದಲ್ಲಿನ ಸಾಮಾನ್ಯ ಸಂಗತಿಗಳಿಗಿಂತ ವಿಶೇಷ ಸಂಗತಿಗಳು ಅಥವಾ ವಿಶೇಷ ಮಾಹಿತಿಗಳನ್ನು ಹುಡುಕುವ ಪ್ರಕ್ರಿಯೆಯೂ ಹೌದು.

ಸ್ಕಿಮ್ಮಿಂಗ್ ಮಾಡುವಾಗ ಪಠ್ಯದಲ್ಲಿನ ಅಂಕಿ-ಅಂಶಗಳನ್ನು, ವಿವರವಾದ ಮಾಹಿತಿಯನ್ನು ಸಂಪೂರ್ಣವಾದ ಕಥೆಗಳನ್ನು ಉದ್ದೇಪೂರ್ವಕವಾಗಿಯೇ ಕೈಬಿಡಲಾಗುತ್ತದೆ. ಏಕೆಂದರೆ ಸ್ಕಿಮ್ಮಿಂಗ್ ಕೇವಲ ಪ್ರಮುಖ ಅಂಶಗಳತ್ತ ಚಿತ್ತ ಹರಿಸುವ ತಂತ್ರವಾಗಿದೆ. ಈ ತಂತ್ರದಲ್ಲಿ ಪ್ರತಿ ಪದಗಳನ್ನು ಓದುವ ಬದಲು ನಮಗೆ ಬೇಕಾದ ಅಂಶಗಳತ್ತ ಮಾತ್ರ ಗಮನ ಹರಿಸಬೇಕು.

ಪ್ಯಾರಾದ ಪ್ರಾರಂಬದ ಪದಗಳು ಮತ್ತು ಕೊನೆ ಪದಗಳನ್ನು ಗಮನಿಸಿದರೆ ಇಡೀ ಪ್ಯಾರಾದ ಸಾರಾಂಶವನ್ನು ಗ್ರಹಿಸಬಹುದು. ಪಠ್ಯದಲ್ಲಿನ ದಪ್ಪ ಅಕ್ಷರಗಳತ್ತ ಚಿತ್ತ ಹರಿಸುವುದರಿಂದ ಪದಗಳ ನಡುವಿನ ಹೊಂದಣಿಕೆ ಮತ್ತು ಅರ್ಥವನ್ನು ಗ್ರಹಿಸಬಹುದು. ಇದರಿಂದ ಸಮಯ ಉಳಿತಾಯವಾಗುತ್ತದೆ.

ಓದಿನ ತಂತ್ರ

ಸ್ಕಿಮ್ಮಿಂಗ್ ಯಾಕೆ ಬೇಕು?

- ಓದಿನ ವೇಗವನ್ನು ಹೆಚ್ಚಿಸುತ್ತದೆ.
- ಓದಿಗೆ ಖಚಿತತೆ ನೀಡುತ್ತದೆ.
- ಪ್ರಮುಖಾಂಶಗಳ ಓದಿಗೆ ಹೆಚ್ಚು ಪೂರಕ.
- ಪೂರ್ವಜ್ಞಾನವನ್ನು ಸ್ಮರಿಸಿಕೊಳ್ಳಲು ಸಹಾಯಕ.
- ಸಮಯವನ್ನು ಉಳಿಸುತ್ತದೆ.
- ಓದಿಗೆ ನಿರ್ದಿಷ್ಟತೆ ಸಿಗುತ್ತದೆ.

ಅನುಸರಿಸಬೇಕಾದ ಕ್ರಮಗಳು

- ಮೊದಲು ಶೀರ್ಷಿಕೆ ಓದಿ. ಸಾಮಾನ್ಯವಾಗಿ ಶೀರ್ಷಿಕೆಗಳು ನಿಮಗೆ ಪಠ್ಯದ ಪ್ರಮುಖ ಕಲ್ಪನೆಯನ್ನು ನೀಡುತ್ತವೆ. ಶೀರ್ಷಿಕೆಯಲ್ಲೇ ಈ ಮಾಹಿತಿ ನಿಮಗೆ ಅನ್ವಯವಾಗುವದಿಲ್ಲ ಎನ್ನುವುದು ತಿಳಿದರೆ ಅದನ್ನು ಬಿಟ್ಟು ಬೇರೆಯ ಪಠ್ಯವನ್ನು ಓದಬಹುದು.
- ನಂತರ ಪಠ್ಯದ ಉಪ ಶೀರ್ಷಿಕೆಗಳನ್ನು (ಯಾವುದಾದರೂ ಇದ್ದರೆ) ಓದಿ. ಇದು ಪಠ್ಯ ಏನಿದೆ ಎಂಬುದರ ಕುರಿತು ಮೂಲಭೂತ ಕಲ್ಪನೆಯನ್ನು ನೀಡುತ್ತದೆ.
- ಪಠ್ಯದ ಮೊದಲ ಪ್ಯಾರ ಓದಿ. ಇದು ಪಠ್ಯದ ಪೂರ್ವ ಪೀಠಿಕೆಯಾಗಿರುತ್ತದೆ. ಓದುವ ಪಠ್ಯದ ಅಗತ್ಯತೆಯನ್ನು ತಿಳಿಸುತ್ತದೆ.
- ನಂತರ ಪಠ್ಯದ ಮೊದಲ ಕೆಲವು ಸಾಲುಗಳನ್ನು ಓದಿ. ಇದು ನಿಮಗೆ ಪಠ್ಯದ ಸಾರಾಂಶವನ್ನು ನೀಡುತ್ತದೆ.
- ಎಲ್ಲಾ ಪ್ಯಾರಾಗಳ ಮೊದಲ ಸಾಲುಗಳನ್ನೂ ಓದಬಹುದು ಮತ್ತು ಪಠ್ಯದ ಕುರಿತು ಹೆಚ್ಚಿನ ವಿಚಾರಗಳನ್ನು ಪಡೆಯಲು ಅವುಗಳಲ್ಲಿ ದಪ್ಪ ಅಕ್ಷರಗಳ ಪದಗಳ ಮೇಲೆ ಗಮನ ಕೇಂದ್ರೀಕರಿಸಬಹುದು.
- ನೀವು ಮಾಹಿತಿ ಹುಡುಕುತ್ತಿರುವ ಪ್ರಮುಖ ಪದ/ಪದಗುಚ್ಛಗಳ ಮೇಲೆ ಗಮನ ಕೇಂದ್ರೀಕರಿಸಿ.
- ಪ್ರಮುಖ ಮಾಹಿತಿ/ಅಂಶಗಳನ್ನು ಹೈಲೈಟ್ ಮಾಡಿ ಅಥವಾ ಕೆಳಗೆ ಗೆರೆ ಎಳೆದು ಗುರುತಿಸಿಕೊಳ್ಳಿ.
- ಪ್ಯಾರಾದ ಮೊದಲ ಸಾಲು ಓದಿದಂತೆ ಪ್ಯಾರಾದ ಕೊನೆಯ ಸಾಲನ್ನೂ ಗಮನಿಸಿ.
- ಪಠ್ಯದ ಕೊನೆಯ ಭಾಗದ ಮೇಲೆ ಗಮನ ಹರಿಸಿ. ಅದು ಇಡೀ ಪಠ್ಯದ ಅಂತಿಮ ತೀರ್ಮಾನವನ್ನು ತಿಳಿಸುತ್ತದೆ.



ಮೂನ್‌ಲೈಟಿಂಗ್

ಔದ್ಯೋಗಿಕ ಕ್ಷೇತ್ರದಲ್ಲೊಂದು ನೈತಿಕ ಬಿಕ್ಕಟ್ಟು

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನ ಕುರಿತಮಾಹಿತಿ ಇಲ್ಲಿದೆ.

ಯು. ಟಿ. ಆಯಿಶ ಫರ್ಝಾನಾ

ಒಂದು ಸಂಸ್ಥೆಯಲ್ಲಿ ಕೆಲಸ ಮಾಡುವ ಉದ್ಯೋಗಿಗಳು ತಮ್ಮ ಕಂಪನಿಯ ಮಾಲೀಕರ ಗಮನಕ್ಕೆ ತಾರದೇ, ಮತ್ತೊಂದು ಕಂಪನಿಯಲ್ಲಿ ಉದ್ಯೋಗ ಮಾಡುವುದನ್ನು 'ಮೂನ್‌ಲೈಟಿಂಗ್' ಎನ್ನುತ್ತಾರೆ. ಸರಳವಾಗಿ ಹೇಳಬೇಕೆಂದರೆ, ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಉದ್ಯೋಗಗಳನ್ನು ಮಾಡುವುದು.

ವ್ಯಕ್ತಿಯೊಬ್ಬ ಹಗಲಿನ ವೇಳೆ(ಕಚೇರಿ ಸಮಯದಲ್ಲಿ) ಮೂಲ ಕಂಪನಿಯಲ್ಲಿ ಕೆಲಸ ಮಾಡುತ್ತಾ, ರಾತ್ರಿ ವೇಳೆ ಅಥವಾ ವಾರಾಂತ್ಯದಲ್ಲಿ ಮತ್ತೊಂದು ಕಡೆ ಕೆಲಸ ಮಾಡುತ್ತಾನೆ. ಇದಕ್ಕೆ 'ಮೂನ್‌ಲೈಟಿಂಗ್' ಎಂದು ಕರೆಯಲಾಗುತ್ತದೆ.

ಅಮೆರಿಕನ್ನರು ಹೆಚ್ಚುವರಿ ಆದಾಯಕ್ಕಾಗಿ ತಮ್ಮ ನಿಯಮಿತ ವಾದ (ಬೆಳಿಗ್ಗೆ 9 ರಿಂದ ಸಂಜೆ 5ರವರೆಗಿನ) ಉದ್ಯೋಗದ ಜೊತೆಗೆ, ಹೆಚ್ಚುವರಿಯಾಗಿ ಎರಡನೇ ಉದ್ಯೋಗವನ್ನು ಆಶ್ರಯಿ ಸುವ ಹಿನ್ನೆಲೆಯಲ್ಲಿ ಈ ಪರಿಭಾಷೆಯು ಬೆಳಕಿಗೆ ಬಂದಿದೆ.

ಭಾರತದಲ್ಲಿ ಮೂನ್‌ಲೈಟಿಂಗ್ ಕಾನೂನುಬಾಹಿರವೇ ?

- ಕೈಗಾರಿಕಾ ಕಾಯ್ದೆ ಪ್ರಕಾರ ಮೂನ್‌ಲೈಟಿಂಗ್ ಅಥವಾ ಏಕಕಾಲಕ್ಕೆ ಎರಡು ಕಂಪನಿಗಳಲ್ಲಿ ಉದ್ಯೋಗ ಮಾಡುವುದನ್ನು ಭಾರತದಲ್ಲಿ ನಿಷೇಧಿಸಲಾಗಿದೆ. ಆದಾಗ್ಯೂ, ಕೆಲವು ರಾಜ್ಯಗಳಲ್ಲಿ ಐಟಿ ಕಂಪನಿಗಳು ಆ ನಿಯಮದಿಂದ ವಿನಾಯಿತಿ ಪಡೆದಿವೆ.
- ಭಾರತದಲ್ಲಿ ಮೂನ್‌ಲೈಟಿಂಗ್ ಎನ್ನುವುದು ಉದ್ಯೋಗದಾತರ ಇಚ್ಛೆಯನ್ನು ಅವಲಂಬಿಸಿದೆ. ಈ ನೀತಿಗೆ ಸಂಬಂಧಿಸಿದಂತೆ ಯಾವುದೇ ನಿಖರ ಕಾನೂನು ಇಲ್ಲ. ಆದರೂ, ವ್ಯಕ್ತಿಯೊಬ್ಬ ಏಕಕಾಲಕ್ಕೆ ಎರಡು ಕೆಲಸಗಳನ್ನು ಮಾಡುತ್ತಿದ್ದರೆ, ಕಂಪನಿಯು, 'ಉದ್ಯೋಗದ ಒಪ್ಪಂದ'ದಲ್ಲಿ ಮಾಡಿಕೊಂಡ ಗೌಪ್ಯತೆಯ ಉಲ್ಲಂಘನೆಯ ಕಾರಣ ನೀಡಿ, ಆತನಿಗೆ ಇತರೆಡೆ ಕೆಲಸ ನಿರ್ವಹಿಸದಂತೆ ತಡೆ ಹಿಡಿಯಬಹುದು. ಈ ಹಿನ್ನೆಲೆಯಲ್ಲಿ ವ್ಯಕ್ತಿಯು ಉದ್ಯೋಗಕ್ಕೆ ಸೇರುವ ಮೊದಲು ಅಥವಾ ವ್ಯವಹಾರ ಆರಂಭಿಸುವ ಮೊದಲು ಇಂಥ ಗೊಂದಲಗಳನ್ನು ನಿವಾರಿಸಿಕೊಂಡೆ ಮುಂದಕ್ಕೆ ಹೆಜ್ಜೆ ಇಡಬೇಕು.
- 'ಉದ್ಯೋಗದ ಒಪ್ಪಂದ'ದಲ್ಲಿ ನೌಕರನು ಒಂದೇ ಉದ್ಯೋಗ ಮಾಡಬೇಕೆಂಬ ನಿಯಮವಿದ್ದರೆ, ಆಗ ನೌಕರನು ಇತರ ಕಂಪನಿಗಳಲ್ಲಿ ಕೆಲಸ ಮಾಡುವಂತಿಲ್ಲ. ಒಂದೊಮ್ಮೆ ಆ ನಿಯಮ ಉಲ್ಲಂಘಿಸಿ ಕೆಲಸ ಮಾಡಿದರೆ ಅದನ್ನು ವಂಚನೆ ಎಂದು ಪರಿಗಣಿಸಲಾಗುತ್ತದೆ. ಸಾಧಾರಣವಾಗಿ ಹೆಚ್ಚಿನ ಉದ್ಯೋಗ ಒಪ್ಪಂದಗಳು ಇದೇ ರೀತಿಯ ನಿಯಮವನ್ನು ಹೊಂದಿರುತ್ತವೆ.
- ಉದ್ಯೋಗ ಒಪ್ಪಂದಗಳಲ್ಲಿ ಅಂತಹ ಷರತ್ತುಗಳಿಲ್ಲದಿದ್ದರೆ ಅಥವಾ ನಿಯಮ ಸಡಿಲಿಕೆಗೆ ಅವಕಾಶವಿದ್ದರೆ ಮೂನ್‌ಲೈಟಿಂಗ್ ಅನ್ನು ಮೋಸ ಎಂದು ಪರಿಗಣಿಸಲಾಗುವುದಿಲ್ಲ.

ಮೂನ್‌ಲೈಟಿಂಗ್ ಪರ ವಾದಗಳು

- ವಿಭಿನ್ನ ರೀತಿಯ ಪ್ರತಿಭೆ ಅಥವಾ ಕೌಶಲಗಳನ್ನು ಹೊಂದಿರುವವರಿಗೆ ಹೆಚ್ಚಿನ ಆದಾಯಗಳಿಕೆಗೆ ಮೂನ್‌ಲೈಟಿಂಗ್ ಅವಕಾಶ ನೀಡುತ್ತದೆ.
- ಕಚೇರಿ ಸಮಯದ ಬಳಿಕ ವಿರಾಮದ ಸಮಯದಲ್ಲಿ ಮತ್ತು ವಾರಾಂತ್ಯದಲ್ಲಿ ಬೇರೆ ಬೇರೆ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದರಿಂದ ಇದು ಪೂರ್ಣ ಸಮಯದ ಉದ್ಯೋಗಿಗಳ ಉತ್ಪಾದಕತೆಯ ಮೇಲೆ ಪರಿಣಾಮ ಬೀರುವುದಿಲ್ಲ.
- ಮೂನ್‌ಲೈಟಿಂಗ್‌ನಿಂದ ಉದ್ಯೋಗಿಗಳು ಹೆಚ್ಚು ಆದಾಯ ಗಳಿಸಬಹುದು. ಸಾಲಗಳನ್ನು ತೀರಿಸಿಕೊಳ್ಳಬಹುದು. ಉಳಿತಾಯ ಮತ್ತು ಹೂಡಿಕೆ ಹೆಚ್ಚಿಸಲು ನೆರವಾಗುತ್ತದೆ. ವಿಭಿನ್ನ ರೀತಿಯ ಕೆಲಸ ಅನುಭವ ಪಡೆಯಬಹುದು. ವ್ಯಕ್ತಿಯು ತನ್ನ ಉದ್ಯೋಗದ ಜೊತೆಗೆ ಸಾಂಸ್ಕೃತಿಕ ಹಾಗೂ ಕಲಾ ಕೌಶಲಗಳಂತಹ 'ಪ್ರವೃತ್ತಿ' ಮುಂದುವರಿಸಬಹುದು.

ಮೂನ್ ಲೈಟಿಂಗ್ ವಿರುದ್ಧ ವಾದಗಳು

- ಮೂನ್‌ಲೈಟಿಂಗ್‌ನಿಂದ ಉದ್ಯೋಗಿಯು ತಮ್ಮ ಮೂಲ ಸಂಸ್ಥೆಗೆ ಗುಣಮಟ್ಟದ ಸಮಯ ಕೊಡುವುದಿಲ್ಲ.
- ಮೂಲ ಕಂಪನಿಯಲ್ಲಿನ ಕೆಲಸದ ದಕ್ಷತೆ ಮತ್ತು ಉತ್ಪಾದಕತೆಯ ಮೇಲೆ ಪರಿಣಾಮಬೀರುತ್ತದೆ.
- ಅತಿಯಾದ ಕೆಲಸದಿಂದ ದಣಿದು ಉತ್ಸಾಹ ಹೀನರಾಗಬಹುದು. ಆಗ ಹೆಚ್ಚು ಮುತುವರ್ಜಿಯಿಂದ ಕಾರ್ಯನಿರ್ವಹಿಸಲು ಸಹಜವಾಗಿಯೇ ಕಷ್ಟವಾಗುತ್ತದೆ.
- ಉದ್ಯೋಗಿಗಳು ವಿಶ್ರಾಂತಿ ಪಡೆಯುವುದರಿಂದ ಅವರ ಶಕ್ತಿ ಮತ್ತು ಚೈತನ್ಯ ಹೆಚ್ಚುತ್ತದೆ. ಇದರಿಂದ ಕೆಲಸದ ದಕ್ಷತೆಯೂ ಹೆಚ್ಚಾಗುತ್ತದೆ. ಕಂಪನಿಯಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಈ ವಿಶ್ರಾಂತಿ ಅಗತ್ಯ. ಅದೇ ಕಾರಣಕ್ಕೆ ಉದ್ಯೋಗಿಗಳಿಗೆ ರಜಾ ದಿನಗಳನ್ನು ನೀಡಲಾಗುತ್ತದೆ. ಹಾಗಾಗಿ, ಇಂಥ ಬಿಡುವಿನ ವೇಳೆಯಲ್ಲಿ ತಮ್ಮ ಉದ್ಯೋಗಿಗಳು ಬೇರೆ ಕ್ಷೇತ್ರಗಳಲ್ಲಿ ಅಥವಾ ಉದ್ಯೋಗಗಳಲ್ಲಿ ಶಕ್ತಿ ವ್ಯಯಿಸುವುದನ್ನು ಕಂಪನಿಗಳು ಬಯಸುವುದಿಲ್ಲ.
- ಮೂನ್‌ಲೈಟಿಂಗ್ ಕೆಲಸಗಾರರು ಒಂದು ಕಂಪನಿಯ ಗೌಪ್ಯ ಮಾಹಿತಿಯನ್ನು ಇತರ ಕಂಪನಿಗಳಿಗೆ ಬಹಿರಂಗ ಪಡಿಸಿದ ಎಷ್ಟೋ ಪ್ರಕರಣಗಳು ಬೆಳಕಿಗೆ ಬಂದಿವೆ. ಆದ್ದರಿಂದ, ಮೂನ್‌ಲೈಟಿಂಗ್‌ಗೆ ಸಂಬಂಧಿಸಿದಂತೆ ಗೌಪ್ಯತೆಯ ಉಲ್ಲಂಘನೆಯು ಪ್ರಾಥಮಿಕ ಕಾಳಜಿಯಾಗಿದೆ ಎನ್ನಬಹುದು.
- ಈ ಮೂನ್‌ಲೈಟಿಂಗ್‌ನಿಂದಾಗಿ ಕಳೆದ ಎರಡು ವರ್ಷಗಳಿಂದ ಐಟಿ ಕಂಪನಿಗಳು ನುರಿತ ಉದ್ಯೋಗಿಗಳನ್ನು ಸತತವಾಗಿ ಕಳೆದುಕೊಳ್ಳುತ್ತಿವೆ. ಏಕೆಂದರೆ ಒಮ್ಮೆ ಬಿಡುವಿನ ನೌಕರಿ ಇಷ್ಟವಾದರೆ ನೌಕರನು ಮತ್ತೆ ಅದನ್ನೇ ಪ್ರಧಾನ ನೌಕರಿಯನ್ನಾಗಿ ಸ್ವೀಕರಿಸುವ ಸಾಧ್ಯತೆ ಹೆಚ್ಚು. ಅಂದ ಹಾಗೆ, ಶೇ 78 ರಷ್ಟು ಕಾರ್ಪೊರೇಟ್ ಸಂಸ್ಥೆಗಳು, ಹೊಸ ಉದ್ಯೋಗಿಗಳನ್ನು ಕಂಪನಿಗೆ ನೇಮಿಸಿಕೊಳ್ಳಲು ಕಷ್ಟಪಡುತ್ತಿದ್ದರೆ, ಶೇ 64ರಷ್ಟು ಕಂಪನಿಗಳಿಗೆ ಇರುವ ಪ್ರತಿಭಾವಂತ ಉದ್ಯೋಗಿಗಳನ್ನು ಉಳಿಸಿಕೊಳ್ಳುವುದೇ ಒಂದು ಸವಾಲಾಗಿದೆ ಎಂದು ವಿಲ್ಲೀಸ್ ಟವರ್ ವ್ಯಾಟ್ಸನ್ ನಡೆಸಿದ 'ರೀ ಇಮ್ಯಾಜಿನಿಂಗ್ ವರ್ಕ್ ಮತ್ತು ರಿವಾರ್ಡ್ಸ್ ಸಮೀಕ್ಷೆ' ಯಿಂದ ತಿಳಿದುಬಂದಿದೆ.

ಮೂನ್‌ಲೈಟಿಂಗ್' – ಅಭಿಪ್ರಾಯಗಳು

- ವಿಪ್ರೊ ಅಧ್ಯಕ್ಷ ರಿಷಾದ್ ಪ್ರೇಮ್‌ಜಿ ಮೂನ್‌ಲೈಟಿಂಗ್ ಅನ್ನು 'ಮೋಸದ ಕೆಲಸ' ಎಂದು ಇತ್ತೀಚೆಗೆ ಟ್ವೀಟ್ ಮಾಡಿದ್ದಾರೆ.
- ಇನ್ಫೋಸಿಸ್ ಮಾಜಿ ನಿರ್ದೇಶಕ ಮೋಹನ್‌ದಾಸ್ ಪೈ ಅವರು 'ಮೂನ್‌ಲೈಟಿಂಗ್' ಮೋಸವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. 'ಕೆಲಸಗಾರನು ತನ್ನ ಅಧಿಕೃತ ಕೆಲಸದ ಸಮಯದ ನಂತರವೇ ತನ್ನ ಆಸಕ್ತಿಯ ಇತರ ಕೆಲಸವನ್ನು ಮಾಡುತ್ತಾನೆ. ಆತ ತಾನು ಬಯಸಿದ್ದನ್ನು ಮಾಡಲು ಅರ್ಹನಾಗಿದ್ದು, ಅದು ಆತನ ಸ್ವಾತಂತ್ರ್ಯ' ಎಂದು ಹೇಳಿದ್ದಾರೆ.
- ಟಾಟಾ ಕನ್ಸಲ್ಟೆನ್ಸಿ ಸಿಇಒ ಎನ್.ಗಣಪತಿ ಸುಬ್ರಹ್ಮಣ್ಯಂ ಇದನ್ನು 'ನೈತಿಕ ಸಮಸ್ಯೆ' ಎಂದು ಪರಿಗಣಿಸಿದ್ದಾರೆ.
- ಟೆಕ್ ಮಹೀಂದ್ರಾದ ಕಾರ್ಯನಿರ್ವಾಹಕ ನಿರ್ದೇಶಕ ಸಿಪಿ ಗುರ್ನಾನಿ 'ನಮ್ಮ ಸಂಸ್ಥೆ ಈ ನಿಟ್ಟನಲ್ಲಿ ಒಂದು ನೀತಿ ರೂಪಿಸಲಿದೆ' ಎಂದು ಹೇಳಿಕೊಂಡಿದ್ದಾರೆ. 'ನೌಕರರಿಗೆ ಏಕಕಾಲದಲ್ಲಿ ಬಹು ಉದ್ಯೋಗಗಳನ್ನು ಮುಂದುವರಿಸಲು ಅವಕಾಶ ನೀಡಬೇಕು. ಆದರೆ ಆ ಉದ್ಯೋಗಿಗಳು ಮೂಲ ಕಂಪನಿಯೊಂದಿಗೆ ತಾವು ಮಾಡುತ್ತಿರುವ ಎರಡನೇ ಉದ್ಯೋಗದ ಕುರಿತು ಮುಕ್ತವಾಗಿರಬೇಕು. ಹೆಚ್ಚುವರಿ ಉದ್ಯೋಗದ ಬಗ್ಗೆ ಮಾಹಿತಿ ಹಂಚಿಕೊಳ್ಳಬೇಕು' ಎಂಬ ಅಂಶವನ್ನು ನೀತಿಯಲ್ಲಿ ಅಳವಡಿಸಲಾಗುತ್ತದೆ' ಎಂದು ಹೇಳಿದ್ದಾರೆ.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು ಮಾಹಿತಿಗೆ

ಮೂನ್‌ಲೈಟಿಂಗ್ ಸೇರಿದಂತೆ ಮತ್ತಷ್ಟು ಮಾಹಿತಿಗೆ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ವಿಡಿಯೊ ಸಹಿತ ಸರಳಗನ್ನಡದ ವಿವರಣೆಗಳಿಗಾಗಿ ಪ್ರಜಾವಾಣಿ-ಡೆಕ್ಕನ್‌ಹೆರಾಲ್ಡ್‌ನ 'ಮಾಸ್ಟರ್‌ಮೈಂಡ್'ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ಉದ್ಯೋಗ ವಾರ್ತೆ

ಕೆಪಿಎಸ್‌ಸಿ: ಸಹಾಯಕ ಎಂಜಿನಿಯರ್ ಹುದ್ದೆಗಳಿಗಾಗಿ ಅರ್ಜಿ ಆಹ್ವಾನ

ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ), ಫೆಬ್ರುವರಿ 2022ರಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ ಹುದ್ದೆಗಳ(ಗ್ರೇಡ್ -1) ಭರ್ತಿಗಾಗಿ ಅರ್ಜಿ ಆಹ್ವಾನಿಸಿತ್ತು. ಅರ್ಜಿ ಸಲ್ಲಿಸಲು ಮಾರ್ಚ್ 30 ಕೊನೆ ದಿನವಾಗಿತ್ತು. ನಂತರ ಅರ್ಜಿ ಸಲ್ಲಿಕೆಯ ಕೊನೆ ದಿನವನ್ನು ಮೊದಲ ಬಾರಿಗೆ ಏಪ್ರಿಲ್ 18ರವರೆಗೆ ವಿಸ್ತರಿಸಿತ್ತು. ಈಗ ಪುನಃ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿ, ಅಧಿಸೂಚನೆ ಹೊರಡಿಸಿದೆ.

ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಿದ್ದ ವೇಳೆ 129 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿತ್ತು. ಈಗ ಹೊಸದಾಗಿ 100 ಹುದ್ದೆಗಳನ್ನು ಸೇರಿಸಿ, ಅಧಿಸೂಚನೆ ಪರಿಷ್ಕರಿಸಿ ಒಟ್ಟು 229 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಸೆ. 2ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಸೆ. 30 ಅರ್ಜಿ ಸಲ್ಲಿಕೆಗೆ ಕೊನೆ ದಿನ. ಅ.1, ಶುಲ್ಕ ಪಾವತಿಗೆ ಕೊನೆ ದಿನ ಎಂದು ಪರಿಷ್ಕೃತ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಗಮನಿಸಿ: 21ಫೆಬ್ರುವರಿ 2022ರ ಅಧಿಸೂಚನೆಯ ಅನ್ವಯ ಇದೇ ಹುದ್ದೆಗೆ ಅರ್ಜಿ ಸಲ್ಲಿಸದ ಅಭ್ಯರ್ಥಿಗಳು ಮಾತ್ರ ಈಗ ಅರ್ಜಿ ಸಲ್ಲಿಸಬೇಕು. ಈಗಾಗಲೇ ಈ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೆ ಸಲ್ಲಿಸುವ ಅಗತ್ಯವಿಲ್ಲ.

ಶೈಕ್ಷಣಿಕ ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ನಾಗರಿಕ/ಪರಿಸರ ವಿಷಯದಲ್ಲಿ ಬಿ.ಇ ಪೂರ್ಣಗೊಳಿಸಿರಬೇಕು.

ವಯೋಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷಗಳು, ಗರಿಷ್ಠ 35 ವರ್ಷಗಳು. ಪರಿಶಿಷ್ಟ ಜಾತಿ ಮತ್ತು ಪರಿಷ್ಟವರ್ಗ, ಕೆಟಗರಿ–1ರ ಅಭ್ಯರ್ಥಿಗಳಿಗೆ 5 ವರ್ಷಗಳು, ಕೆಟಗರಿ 2ಎ/2ಬಿ/3ಎ ಮತ್ತು 3ಬಿ ಅಭ್ಯರ್ಥಿಗಳಿಗೆ 3 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಕೆಟಗರಿ–1/ ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಕೆಟಗರಿ -2ಎ/2ಬಿ/3ಎ ಮತ್ತು 3ಬಿ ಅಭ್ಯರ್ಥಿಗಳಿಗೆ ₹ 300. ಸಾಮಾನ್ಯ ಅಭ್ಯರ್ಥಿಗಳಿಗೆ ₹600. ಪ್ರೊಸಸಿಂಗ್ ಶುಲ್ಕ(ಎಲ್ಲ ಅಭ್ಯರ್ಥಿಗಳಿಗೆ) ₹35.

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿಯಲ್ಲಿ ಸರಿಯಾದ ಇಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆ ನಮೂದಿಸಬೇಕು. ಈ ಹಿನ್ನೆಲೆಯಲ್ಲಿ ಇಮೇಲ್ ಐಡಿ ಇಲ್ಲದಿದ್ದರೆ ಕ್ರಿಯೇಟ್ ಮಾಡಿಕೊಳ್ಳಬೇಕು. ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ಹೊಂದಿರಬೇಕು. ಹಾಗೆಯೇ ಆನ್‌ಲೈನ್ ಮೂಲಕ ಶುಲ್ಕ ಪಾವತಿಸಬೇಕು. ಅರ್ಜಿ ಸಲ್ಲಿಸುವ ಜಾಲತಾಣ: https://www.kpscrecruitment.in/RPS/Home.aspx

ಆಯ್ಕೆ ಪ್ರಕ್ರಿಯೆ: ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪರಿಷ್ಕೃತ ಅಧಿಸೂಚನೆಗಾಗಿ ಇಲಾಖೆ ವೆಬ್‌ಸೈಟ್ ನೋಡಬಹುದು.

ಬಹು ಆಯ್ಕೆಯ ಪ್ರಶ್ನೆಗಳು

ಬಾದಾಮಿಯ ಚಾಲುಕ್ಯರು

ಕೆಪಿಎಸ್‌ಸಿ, ಯುಪಿಎಸ್‌ಸಿ ಸೇರಿದಂತೆ ಮುಂದೆ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ. ಈ ಸರಣಿಯಲ್ಲಿ 'ಬಾದಾಮಿ ಚಾಲುಕ್ಯರ' ಕುರಿತ ಪ್ರಶ್ನೋತ್ತರಗಳನ್ನು ನೀಡಲಾಗಿದೆ.

ಸಾಮಾನ್ಯ ಜ್ಞಾನ

1. ಬಾದಾಮಿಯ ಚಾಲುಕ್ಯರ ಕಾಲದ ಬೆಳವಣಿಗೆಗಳ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ವಿಕ್ರಮಾದಿತ್ಯನ ರಾಣಿಯಾದ ಲೋಕ ಮಹಾದೇವಿಯು ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯವನ್ನು ಕಟ್ಟಿಸಿದ್ದು ಅದು ಈಗ ವಿರೂಪಾಕ್ಷ ದೇಗುಲವೆಂದು ಪ್ರಸಿದ್ಧವಾಗಿದೆ.

ಬಿ. ವಿಕ್ರಮಾದಿತ್ಯನ ದ್ವಿತೀಯ ರಾಣಿ ತ್ರೈಲೋಕ್ಯ ಮಹಾದೇವಿಯು ತ್ರೈಲೋಕೇಶ್ವರ ದೇವಾಲಯವನ್ನು ಕಟ್ಟಿಸಿದ್ದು ಅದು ಇಂದು ಮಲ್ಲಿಕಾರ್ಜುನ ದೇಗುಲವೆಂದು ಹೆಸರಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

2. ಬಾದಾಮಿ ಚಾಲುಕ್ಯರ ಕಾಲದ ಆಡಳಿತಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಚಾಲುಕ್ಯರು ಪ್ರಬಲವಾದ ಸೇನಾಡಳಿತವನ್ನು ಸಂಘಟಿಸಿದ್ದು ಅದನ್ನು 'ಕರ್ನಾಟ ಬಲ' ಎಂದು ಕರೆಯಲಾಗುತ್ತಿತ್ತು.

ಬಿ. ವರಾಹ ರಾಜ ಚಿಹ್ನೆಯಾಗಿದ್ದು ಪಾಲಿಧ್ವಜ ಅವರ ಧ್ವಜವಾಗಿತ್ತು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

3. ಬಾದಾಮಿ ಚಾಲುಕ್ಯರ ಕಾಲದ ಭೂ ಘಟಕಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

* ಮಂಡಲ, ವಿಷಯ, ದೇಶ, ನಾಡು, ಭೋಗ, ರಾಷ್ಟ್ರ, ಕಂಪಣ, ಗ್ರಾಮ ಇವುಗಳಲ್ಲಿ ಯಾವುದು ಬಾದಾಮಿ ಚಾಲುಕ್ಯರ ಕಾಲದಲ್ಲಿ ಭೂ ಘಟಕಗಳಾಗಿರಲಿಲ್ಲ ?

ಎ. ಕಂಪಣ ಮತ್ತು ವಿಷಯ

ಬಿ. ಭೋಗ ಮತ್ತು ರಾಷ್ಟ್ರ

ಸಿ. ವಿಷಯ ಮತ್ತು ಮಂಡಲ

ಡಿ. ಯಾವುದು ಅಲ್ಲ

ಉತ್ತರ: ಡಿ

4. ಬಾದಾಮಿ ಚಾಲುಕ್ಯರ ಕಾಲದ ಭೂ ಕಂದಾಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಭಾಗಕಾರ ಮತ್ತು ವಡ್ಡರಾವುಳ ಇವು ಭೂಕಂದಾಯಗಳಾಗಿದ್ದವು.

ಬಿ. ಪೆರ್ಜುಂಕವು ಆ ಕಾಲದ ವಾಣಿಜ್ಯ ತೆರಿಗೆಯಾಗಿತ್ತು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

5. ಬಾದಾಮಿ ಚಾಲುಕ್ಯರ ಕಾಲದ ವ್ಯಾಪಾರ ವಹಿವಾಟುಗಳ ಬಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಸಮಾನವೃತ್ತಿಯ ಜನರು ಜೊತೆಗೂಡಿ ಸಂಘಗಳನ್ನು ರಚಿಸಿಕೊಂಡಿದ್ದು ಇವುಗಳನ್ನು ಶ್ರೇಣಿಗಳು ಎಂದು ಕರೆಯಲಾಗುತ್ತಿತ್ತು.

ಬಿ. ಅಯ್ಯಾವೊಳೆ ಐನೂರ್ವರು, ಪಟ್ಟಣಿಗಾರು, ತುಂಬುಲಿಗರು ಇವು ಪ್ರಖ್ಯಾತವಾದ ಶ್ರೇಣಿಗಳಾಗಿದ್ದವು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

6. ಬಾದಾಮಿ ಚಾಲುಕ್ಯರ ಕಾಲದ ವ್ಯಾಪಾರ ವಹಿವಾಟುಗಳ ಬಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಅಯ್ಯಾವೊಳೆ ಐನೂರ್ವರು ಎನ್ನುವುದು ಆಗ ಚಾಲ್ತಿಯಲ್ಲಿದ್ದ 500 ಮಹಾರಾಜರನ್ನೊಳಗೊಂಡ ವರ್ತಕ ಸಂಘಗಳ ಮಹಾಶ್ರೇಣಿ ಆಗಿತ್ತು.

ಬಿ. ಇದು ಈಸ್ಟ್ ಇಂಡಿಯಾ ಕಂಪನಿಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ:4

7. ಬಾದಾಮಿ ಚಾಲುಕ್ಯರ ಕಾಲದ ಧಾರ್ಮಿಕ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಬಾದಾಮಿಯ ಚಾಲುಕ್ಯರು ಜೈನ, ಬೌದ್ಧ ಧರ್ಮಗಳ ಮತ್ತು ಶೈವ, ವೈಷ್ಣವ ಪಂಥಗಳ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹಗಳನ್ನು ನೀಡಿದ್ದರು.

ಬಿ. ಈ ಕಾಲದಲ್ಲಿ ಪಾಶುಪತ ಮತ್ತು ಲಕುಲೀಶ ಪಂಥಗಳು ಸಾಕಷ್ಟು ಜನಪ್ರಿಯತೆಯನ್ನು ಪಡೆದುಕೊಂಡಿದ್ದವು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

8. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಚಾಲ್ತಿಯಲ್ಲಿದ್ದ ಪನ್ನಸ, ಮತ್ತರು, ಮರುತ್ತರು, ನಿವರ್ತನ ಮುಂತಾದ ಪದಗಳು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

ಎ. ಭೂ ಕಂದಾಯ ವ್ಯವಸ್ಥೆ.

ಬಿ. ಭೂ ಮಾಪನ ವ್ಯವಸ್ಥೆಯ ಮಾಪಕಗಳು.

ಸಿ. ವಾಣಿಜ್ಯ ಕಂದಾಯ ವಿಭಾಗಗಳು.

ಡಿ. ವರ್ತಕ ಸಂಘಗಳ ಹೆಸರುಗಳು.

ಉತ್ತರ: ಬಿ

9. ಬಾದಾಮಿ ಚಾಲುಕ್ಯರ ಕಾಲದ ಶಾಸನಗಳಲ್ಲಿ ಕಂಡುಬರುವ ವೀಸಾ, ಬಾಂಡಸೇರು, ಕುಳ ಮುಂತಾದ ಉಲ್ಲೇಖಗಳು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

ಎ. ತೂಕ ಮತ್ತು ಮಾಪಕದ ಸಾಧನಗಳು.

ಬಿ. ಭೂಮಾಪನದ ಅಳತೆಗಳು.

ಸಿ. ಕುಟುಂಬ ವ್ಯವಸ್ಥೆಯ ಘಟಕಗಳು.

ಡಿ. ಆಡಳಿತ ವ್ಯವಸ್ಥೆಯ ಘಟಕಗಳು.

ಉತ್ತರ. ಎ

10. ಬಾದಾಮಿ ಚಾಲುಕ್ಯರ ಶಾಸನಗಳಲ್ಲಿ ಕಂಡು ಬರುವ ಧರಣ, ವೀಸ, ಪೊನ್ನ ಮತ್ತು ಬೇಳೆ ಮುಂತಾದವು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

ಎ. ಸೈನ್ಯಾಡಳಿತದ ಒಳಗಿನ ಘಟಕಗಳು.

ಬಿ. ಆಹಾರ ಧಾನ್ಯಗಳ ವಿಧಗಳು.

ಸಿ. ನಾಣ್ಯಗಳ ವಿಧಗಳು.

ಡಿ. ಆಡಳಿತದ ಘಟಕಗಳು.

ಉತ್ತರ. ಸಿ

'ಭಾರತ ಒಗ್ಗೂಡಿಸಿ'ಯನ್ನು ಸಮರ್ಥಿಸಿಕೊಂಡ ಕಾಂಗ್ರೆಸ್ ನಾಯಕರು

'ಕೈ' ಯಾತ್ರೆ ವಿರುದ್ಧ ಬಿಜೆಪಿ ವಾಗ್ದಾಳಿ

ನವದೆಹಲಿ/ಕನ್ಯಾಕುಮಾರಿ (ಪಿಟಿಐ): 'ಭಾರತ ಒಗ್ಗೂಡಿಸಿ' ಯಾತ್ರೆಯ ಕುರಿತಂತೆ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರ ಮಧ್ಯೆ ಬುಧವಾರ ವಾಕ್ಸಮರ ನಡೆದಿದೆ. ಬಿಜೆಪಿ ಮುಖಂಡರು ಯಾತ್ರೆಯನ್ನು ಪ್ರಶ್ನಿಸಿದ್ದರೆ, ಕಾಂಗ್ರೆಸ್ ಮುಖಂಡರು ಸಮರ್ಥಿಸಿಕೊಂಡಿದ್ದಾರೆ. ಕಾಂಗ್ರೆಸ್‌ನ ಯಾತ್ರೆಯು ಎರಡನೇ ಸ್ವಾತಂತ್ರ್ಯ ಸಮರವಾಗಿದೆ. ಇದರಲ್ಲಿ ಬಿಜೆಪಿಗೆ ಯಾವ ಪಾತ್ರವೂ ಇಲ್ಲ. ಆದರೆ, ಈ ಯಾತ್ರೆಯಿಂದಾಗಿ ಆ ಪಕ್ಷವು ನಿರ್ನಾಮವಾಗಲಿದೆ ಎಂದು ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಹೇಳಿದ್ದಾರೆ.

ಮಹಾತ್ಮ ಗಾಂಧಿ ಅವರು ಮಾಡು ಇಲ್ಲವೇ ಮಡಿ ಎಂಬ ಘೋಷಣೆಯನ್ನು ಕೊಟ್ಟ ಸ್ವಾತಂತ್ರ್ಯ ಹೋರಾಟದಲ್ಲಿ ಬಿಜೆಪಿಗೆ ಯಾವ ಪಾತ್ರವೂ ಇರಲಿಲ್ಲ. 'ಒಗ್ಗೂಡೋಣ ಎಂದು ನಾವು ಹೇಳಿದರೆ, ವಿಭಜಿಸೋಣ' ಎಂದು ಅವರು ಹೇಳುತ್ತಾರೆ ಎಂದು ಚಿದಂಬರಂ ಹೇಳಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು 'ಭಾರತ ಒಗ್ಗೂಡಿಸಿ' ಯಾತ್ರೆಯನ್ನು ಟೀಕಿಸಿದ್ದಾರೆ. ರಾಹುಲ್ ಅವರ ಪೂರ್ವಜರು ಭಾರತವನ್ನು ವಿಭಜಿಸಿದ್ದರ ಕುರಿತು ವಿಷಾದವಿದ್ದರೆ, ಪಾಕಿಸ್ತಾನ, ಬಾಂಗ್ಲಾ ದೇಶವನ್ನು ಭಾರತದ ಜತೆಗೆ ಸೇರಿಸಲು ಅವರು ಯತ್ನಿಸಲಿ ಎಂದು ಶರ್ಮಾ ಅವರು ಹೇಳಿದ್ದಾರೆ. ಅಖಂಡ ಭಾರತವನ್ನು ಸೃಷ್ಟಿಸಲು ಅವರು ಪ್ರಯತ್ನ ಮಾಡಲಿ ಎಂದಿದ್ದಾರೆ.

1947ರಲ್ಲಿ ಒಮ್ಮೆ ಮಾತ್ರ ಭಾರತವು ವಿಭಜನೆಗೊಂಡಿತು. ಕಾಂಗ್ರೆಸ್ ಪಕ್ಷವು ವಿಭಜನೆಗೆ ಒಪ್ಪಿಕೊಂಡದ್ದು ಅದಕ್ಕೆ ಕಾರಣ. ರಾಹುಲ್ ಅವರಿಗೆ ಒಗ್ಗೂಡಿಸುವುದು ಬೇಕಿದ್ದರೆ ಅವರ ಯಾತ್ರೆಯು ಪಾಕಿಸ್ತಾನಕ್ಕೆ ಹೋಗಬೇಕು ಎಂದು ಹಿಂದೆ ಕಾಂಗ್ರೆಸ್‌ನಲ್ಲಿಯೇ ಇದ್ದ ಶರ್ಮಾ ಹೇಳಿದ್ದಾರೆ.

ರಾಜೀವ್ ಸ್ಮಾರಕಕ್ಕೆ ಭೇಟಿ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು 'ಭಾರತವನ್ನು ಒಗ್ಗೂಡಿಸಿ' ಯಾತ್ರೆಗೆ ಚಾಲನೆ ನೀಡುವುದಕ್ಕೆ ಮುನ್ನ, ತಮ್ಮ ತಂದೆ ರಾಜೀವ್ ಗಾಂಧಿ ಅವರ ಸ್ಮಾರಕಕ್ಕೆ ಭೇಟಿ ಕೊಟ್ಟರು. ಈ ಸ್ಮಾರಕವು ಶ್ರೀಪೆರಂಬುದೂರ್‌ನಲ್ಲಿದೆ. 'ದ್ವೇಷ ಮತ್ತು ವಿಭಜನೆಯ ರಾಜಕಾರಣಕ್ಕೆ ನನ್ನ ಪ್ರೀತಿಯ ದೇಶವನ್ನು ಕಳೆದುಕೊಳ್ಳುವುದಿಲ್ಲ' ಎಂದು ಈ ಸಂದರ್ಭದಲ್ಲಿ ಅವರು ಪ್ರತಿಜ್ಞೆ ಮಾಡಿದರು.

ಇಲ್ಲಿ ಆಯೋಜಿಸಿದ್ದ ಪ್ರಾರ್ಥನಾ ಸಭೆಯಲ್ಲಿ ಅವರು ಭಾಗಿಯಾದರು.

'ದ್ವೇಷ ಮತ್ತು ವಿಭಜನೆಯ ರಾಜಕಾರಣಕ್ಕೆ ನನ್ನ ತಂದೆ ಬಲಿಯಾದರು. ಆದರೆ, ನನ್ನ ದೇಶವನ್ನೂ ಹಾಗೆಯೇ ಕಳೆದುಕೊಳ್ಳಲು ನಾನು ಬಯಸುವುದಿಲ್ಲ. ಪ್ರೀತಿಯು ದ್ವೇಷವನ್ನು ಗೆಲ್ಲುತ್ತದೆ. ಭರವಸೆಯು ಭೀತಿಯನ್ನು ಸೋಲಿಸುತ್ತದೆ. ಎಲ್ಲರೂ ಜತೆಯಾಗಿ ನಾವು ಇವುಗಳನ್ನು ಗೆಲ್ಲಬಹುದು' ಎಂದು ರಾಹುಲ್ ಟ್ವಿಟರ್‌ನಲ್ಲಿ ಹೇಳಿಕೊಂಡಿದ್ದಾರೆ. ರಾಜೀವ್ ಅವರನ್ನು ಆತ್ಮಹತ್ಯಾ ಬಾಂಬರ್ ಮೂಲಕ ಎಲ್‌ಟಿಟಿಇ 1991ರಲ್ಲಿ ಶ್ರೀಪೆರಂಬುದೂರ್‌ನಲ್ಲಿ ಹತ್ಯೆ ಮಾಡಿತ್ತು.

ರಾಹುಲ್ ಅವರು ಚೆನ್ನೈಗೆ ಮಂಗಳವಾರ ರಾತ್ರಿಯೇ ಬಂದಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಇತರ ನಾಯಕರು ತಮಿಳುನಾಡಿನ ಶ್ರೀಪೆರಂಬುದೂರ್‌ನಲ್ಲಿರುವ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಸ್ಮಾರಕಕ್ಕೆ ಬುಧವಾರ ಭೇಟಿ ನೀಡಿ ಗೌರವ ಸಲ್ಲಿಸಿದರು —ಪಿಟಿಐ ಚಿತ್ರ

ಭವ್ಯ ಪರಂಪರೆಯ ನಮ್ಮ ಪಕ್ಷಕ್ಕೆ ಇದೊಂದು ಮಹತ್ವದ ಸಂದರ್ಭ. ಈ ಯಾತ್ರೆಯು ಪಕ್ಷಕ್ಕೆ ಚೈತನ್ಯ ತುಂಬಲಿದೆ ಎಂಬ ವಿಶ್ವಾಸ ನನಗಿದೆ

ಸೋನಿಯಾ ಗಾಂಧಿ
ಕಾಂಗ್ರೆಸ್ ಅಧ್ಯಕ್ಷೆ

ಭಾರತ ಒಗ್ಗೂಡಿಸಿ ಯಾತ್ರೆಯು ದೇಶದ ಎರಡನೇ ಸ್ವಾತಂತ್ರ್ಯ ಹೋರಾಟವಾಗಿದೆ. ವಿಭಜನಕಾರಿ ಶಕ್ತಿಗಳು ಸೋಲುವವರೆಗೆ ಇದು ಮುಂದುವರಿಯಲಿದೆ

ಪಿ.ಚಿದಂಬರಂ
ಕಾಂಗ್ರೆಸ್ ಮುಖಂಡ

ಕಾಶ್ಮೀರದಿಂದ ಕನ್ಯಾಕುಮಾರಿ ಯವರೆಗೆ, ಸಿಲ್ಚರ್‌ನಿಂದ ಸೌರಾಷ್ಟ್ರದವರೆಗೆ ದೇಶವು ಒಗ್ಗಟ್ಟಾಗಿಯೇ ಇದೆ. ದೇಶವನ್ನು ಒಗ್ಗೂಡಿಸುವ ಅಗತ್ಯವೇನೂ ಇಲ್ಲ

ಹಿಮಂತ ಬಿಸ್ವ ಶರ್ಮಾ
ಅಸ್ಸಾಂ ಮುಖ್ಯಮಂತ್ರಿ



ಪೋಸ್ಟರ್‌ನಲ್ಲಿ ವಾದ್ರಾ: ಬಿಜೆಪಿ ಟೀಕೆ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಗಂಡ, ಉದ್ಯಮಿ ರಾಬರ್ಟ್ ವಾದ್ರಾ ಅವರು 'ಭಾರತವನ್ನು ಒಗ್ಗೂಡಿಸಿ' ಯಾತ್ರೆಯ ಪೋಸ್ಟರ್‌ನ ಫೋಟೊಗಳನ್ನು ಟ್ವೀಟ್ ಮಾಡಿದ್ದಾರೆ. ಈ ಪೋಸ್ಟರ್‌ನಲ್ಲಿ ವಾದ್ರಾ ಅವರ ಫೋಟೊ ಕೂಡ ಇದೆ. ಇದು ಬಿಜೆಪಿಯ ಟೀಕೆಗೆ ಕಾರಣವಾಗಿದೆ. ಭ್ರಷ್ಟಾಚಾರದ ವಿರುದ್ಧ ವಾದ್ರಾ ಅವರು ಮಾತನಾಡಲಿದ್ದಾರೆಯೇ ಎಂದು ಬಿಜೆಪಿ ಪ್ರಶ್ನಿಸಿದೆ.

ವಾದ್ರಾ ಅವರು ಯಾತ್ರೆಯಲ್ಲಿ ಸೇರಿಕೊಂಡಿದ್ದಾರೆ ಎಂಬುದು ಸೋಜಿಗ ಉಂಟು ಮಾಡಿದೆ ಎಂದು ಬಿಜೆಪಿ ಮುಖಂಡ ರವಿಶಂಕರ ಪ್ರಸಾದ್ ಹೇಳಿದ್ದಾರೆ.

'ಭಾರತವನ್ನು ಒಗ್ಗೂಡಿಸಿ ಯಾತ್ರೆಯು ನಿಜವಾಗಿ ಪರಿವಾರವನ್ನು ಒಗ್ಗೂಡಿಸಿ ಮತ್ತು ಭ್ರಷ್ಟಾಚಾರವನ್ನು ಒಗ್ಗೂಡಿಸಿ ಯಾತ್ರೆಯಾಗಿದೆ' ಎಂದು ಬಿಜೆಪಿ ವಕ್ತಾರ ಶೆಹಜಾದ್ ಜೈ ಹಿಂದ್ ಹೇಳಿದ್ದಾರೆ.

ಜಮೀನು ಖರೀದಿಯಲ್ಲಿ ಭ್ರಷ್ಟಾಚಾರ ಎಸಗಲಾಗಿದೆ ಎಂಬ ಆರೋಪದ ಕೆಲವು ಪ್ರಕರಣಗಳು ವಾದ್ರಾ ವಿರುದ್ಧ ದಾಖಲಾಗಿವೆ.

ಹಿಜಾಬ್: ವಾದಗಳ ಸಿಂಧುತ್ವ ಪ್ರಶ್ನಿಸಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸುವುದನ್ನು ಸಮರ್ಥಿಸುವ ವಾದಗಳ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಬುಧವಾರ ಪ್ರಶ್ನಿಸಿದೆ. 'ಉಡುಗೆ ತೊಡುಗೆ ಧರಿಸುವ ಹಕ್ಕನ್ನು ಅತಾರ್ತಿಕ ಮಟ್ಟಕ್ಕೆ ಕೊಂಡೊಯ್ಯಲು ಆಗದು. ಇದು ಕೇವಲ ಒಂದು ಸಮುದಾಯದ ಸಮಸ್ಯೆ. ಇತರರು ವಸ್ತ್ರ-ಸಂಹಿತೆಯನ್ನು ಪಾಲಿಸುತ್ತಿದ್ದಾರೆ' ಎಂದು ಹೇಳಿದೆ.

'ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಎಲ್ಲ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮಾರ್ಚ್ 15ರಂದು ಕರ್ನಾಟಕ ಹೈಕೋರ್ಟ್ ಸಾರಾಸಗಟಾಗಿ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ 22 ಅರ್ಜಿದಾರರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಸೋಮವಾರದಿಂದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಪೀಠ ಆರಂಭಿಸಿದೆ.

ಎರಡನೇ ದಿನದ ವಿಚಾರಣೆಯ ವೇಳೆ ಮುಸ್ಲಿಂ ವಿದ್ಯಾರ್ಥಿಗಳ ಪರ ವಾದ ಮಂಡಿಸಿದ ಹಿರಿಯ ವಕೀಲ ದೇವದತ್ ಕಾಮತ್, 'ಸಂವಿಧಾನದ 19ನೇ (1) (ಎ) (ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ) ಪರಿಚ್ಛೇದದ ಅನುಸಾರ, ಅಭಿವ್ಯಕ್ತಿ ಸ್ವಾತಂತ್ರ್ಯದ ಅನುಸಾರ ತಾವು ಧರಿಸುವ ಉಡುಪನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಎಲ್ಲರಿಗೆ ಇದೆ' ಎಂದರು. ಈ ವಾದವನ್ನು ಒಪ್ಪದ ನ್ಯಾಯಮೂರ್ತಿಗಳು, 'ಈ ವಾದವನ್ನು ನಾವು ಅತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಆಗದು. ನೀವು ಉಡುಪು ಧರಿಸುವ ಹಕ್ಕನ್ನು ಮೂಲಭೂತ ಹಕ್ಕು ಎಂದು ವಾದಿಸಿದರೆ, ಉಡುಪು ಧರಿಸದೆ ಇರುವುದು ಸಹ ಮೂಲಭೂತ ಹಕ್ಕು ಆಗುತ್ತದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ದೇವದತ್ ಕಾಮತ್, 'ನಾನು ಇಲ್ಲಿ ಕ್ಲೀಷೆಯ ವಾದ ಮಂಡಿಸುತ್ತಿಲ್ಲ. ಇಲ್ಲಿ ನಾನು ಒಂದು ಅಂಶದ ಸಮರ್ಥನೆ ಮಾಡುತ್ತಿದ್ದೇನೆ. ಉಡುಪು ಧರಿಸದೆ ಶಾಲೆಗಳಿಗೆ ಯಾರೂ ಬರುತ್ತಿಲ್ಲ' ಎಂದರು.

ಆಗ ನ್ಯಾಯಪೀಠ, 'ಉಡುಪು ಧರಿಸುವ ಹಕ್ಕನ್ನು ಯಾರೂ ತಿರಸ್ಕರಿಸುತ್ತಿಲ್ಲ' ಎಂದಿತು.

ವಾದ ಮುಂದುವರಿಸಿದ ದೇವದತ್ ಕಾಮತ್, 'ಎಲ್ಲ ಧರ್ಮಗಳು ಒಂದೇ ಎಂಬುದು ಸಂವಿಧಾನದ ನಿಲುವು' ಎಂದರು. ಅರುಣಾ ರಾಯ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲೇಖಿಸಿ, 'ದೇವರು ಇರುವುದು ಒಬ್ಬನೇ. ಆದರೆ, ಸುಶಿಕ್ಷಿತ ಜನರು ಅದನ್ನು ವಿಭಿನ್ನವಾಗಿ ವಿವರಿಸುತ್ತಾರೆ' ಎಂದು ಪೀಠದ ಗಮನ ಸೆಳೆದರು. ಆಗ ನ್ಯಾಯಪೀಠವು, 'ಎಲ್ಲ ಧರ್ಮಗಳು ಇದನ್ನು ಒಪ್ಪುತ್ತವೆಯೇ. ಈ ಯೋಚನಾ ಲಹರಿಯನ್ನು ಎಲ್ಲ ಧರ್ಮಗಳಲ್ಲಿ ಅಂಗೀಕರಿಸಲಾಗಿದೆಯೇ' ಎಂದು ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಕಾಮತ್, ತಾವು ಕೇವಲ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲೇಖಿಸುತ್ತಿರುವುದಾಗಿ ಹೇಳಿದರು.

ವಿದ್ಯಾರ್ಥಿಗಳು ಶಿಕ್ಷಣದ ಹಕ್ಕನ್ನು ಪಡೆಯಲು ಅವರ ಮೂಲಭೂತ ಹಕ್ಕುಗಳನ್ನು ಬಲಿ ಕೊಡಬೇಕೇ ಎಂದು ಪ್ರಶ್ನಿಸಿದ ಕಾಮತ್, 'ವಿದ್ಯಾರ್ಥಿಗಳು ಧರಿಸುವುದು ಬುರ್ಖಾ ಅಲ್ಲ. ಅವರು ಧರಿಸುವುದು ಹಿಜಾಬ್. ಇದು ಕೇವಲ ತಲೆಯ ಮೇಲೆ ಹಾಕುವ ಸ್ಕಾರ್ಫ್. ಇತರ ಧರ್ಮದ ವಿದ್ಯಾರ್ಥಿಗಳು ಕೂಡ ತಿಲಕ, ರುದ್ರಾಕ್ಷಿ, ಕ್ರಾಸ್ ಇತ್ಯಾದಿಗಳನ್ನು ಧರಿಸುತ್ತಿದ್ದಾರೆ' ಎಂದು ಗಮನ ಸೆಳೆದರು.

ಆಗ ನ್ಯಾಯಮೂರ್ತಿಗಳು, ಉಡುಪಿನೊಳಗೆ ಏನು ಧರಿಸುತ್ತಾರೆ ಎಂಬುದರ ಬಗ್ಗೆ ಇಲ್ಲಿ ಯಾರೂ ತಲೆ ಕೆಡಿಸಿಕೊಂಡಿಲ್ಲ ಎಂದರು.

ದೇವದತ್ ಕಾಮತ್, 'ನಮ್ಮ ಸಂವಿಧಾನ ಸಕಾರಾತ್ಮಕ ಜಾತ್ಯತೀತತೆಯನ್ನು ಸಾರುತ್ತದೆ. ಯಾವುದೇ ಧಾರ್ಮಿಕ ಭಾವನೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸಲು ಅವಕಾಶ ನೀಡದ ಫ್ರಾನ್ಸ್ ನಂತಹ ದೇಶಗಳಲ್ಲಿ ಜಾರಿಯಲ್ಲಿರುವ ನಕಾರಾತ್ಮಕ ಜಾತ್ಯತೀತತೆ ಅಲ್ಲ' ಎಂದು ವಾದಿಸಿದರು.

ಬಳಿಕ ಪ್ರಕರಣದ ವಿಚಾರಣೆಯನ್ನು ಗುರುವಾರ ಬೆಳಿಗ್ಗೆ 11.30ಕ್ಕೆ ಮುಂದೂಡಲಾಯಿತು.

'ಸಿಯುಇಟಿ ಜತೆ ನೀಟ್, ಜೆಇಇ ವಿಲೀನ ಇಲ್ಲ'

ಕೋಟ (ರಾಜಸ್ಥಾನ): 'ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ಜೆಇಇ ಮತ್ತು ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್ ಅನ್ನು ಮುಂದಿನ ಎರಡು ವರ್ಷಗಳ ತನಕ ಸಾಮಾನ್ಯ ವಿಶ್ವ ವಿದ್ಯಾಲಯ ಪ್ರವೇಶ ಪರೀಕ್ಷೆ (ಸಿಯುಟಿಇ) ಜತೆಗೆ ವಿಲೀನ ಮಾಡುವ ಯೋಜನೆ ಇಲ್ಲ' ಎಂದು ಕೇಂದ್ರ ಶಿಕ್ಷಣ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಧರ್ಮೇಂದ್ರ ಪ್ರಧಾನ್ ಬುಧವಾರ ಹೇಳಿದ್ದಾರೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ಅವರು ಕಳೆದ ತಿಂಗಳು ಮುಂದಿನ ದಿನಗಳಲ್ಲಿ ಜೆಇಇ, ನೀಟ್ ಅನ್ನು ಸಿಯುಇಟಿ ಜತೆಗೆ ವಿಲೀನಗೊಳಿಸಲಾಗುವುದು ಎಂದು ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಧರ್ಮೇಂದ್ರ ಪ್ರಧಾನ್ ಅವರು, ಸದ್ಯಕ್ಕೆ ವಿಲೀನಗೊಳಿಸುವ ಸಾಧ್ಯತೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

'ಇನ್ನು ಮುಂದೆ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಇತರ ಪುಸ್ತಕಗಳ ಮೊರೆ ಹೋಗಬೇಕಿಲ್ಲ. 9ನೇ ತರಗತಿಯಿಂದಲೇ ಪಠ್ಯಪುಸ್ತಕಗಳಲ್ಲಿ ಹೆಚ್ಚಿನ ವಿಷಯ, ಮಾಹಿತಿಯನ್ನು ನೀಡಲಾಗುವುದು' ಎಂದು ಹೇಳಿದರು.

ವಿದ್ಯಾರ್ಥಿಯನ್ನು ಥಳಿಸಿ, ತಲೆಯನ್ನು ನೆಲಕ್ಕೆ ಉಜ್ಜಿದ ಶಿಕ್ಷಕ

ಭದೋಹಿ(ಪಿಟಿಐ): ಏಳು ವರ್ಷದ ದಲಿತ ವಿದ್ಯಾರ್ಥಿಯನ್ನು ಶಿಕ್ಷಕರೊಬ್ಬರು ಥಳಿಸಿ, ಆತನ ತಲೆಯನ್ನು ನೆಲಕ್ಕೆ ಉಜ್ಜಿದ ಪೈಶಾಚಿಕ ಕೃತ್ಯ ಉತ್ತರ ಪ್ರದೇಶದ ಭದೋಹಿ ಜಿಲ್ಲೆಯಲ್ಲಿ ವರದಿಯಾಗಿದೆ.

ಹಲ್ಲೆಗೊಳಗಾದ ಬಾಲಕ ಕಿಯೋರೌನಾ ಪ್ರದೇಶದ ಗಂಗಾಪುರ ತಾಲಿಯಾ ಗ್ರಾಮದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಎರಡನೇ ತರಗತಿ ವಿದ್ಯಾರ್ಥಿ. ಮೈದಾನದಲ್ಲಿ ಆಟವಾಡುತ್ತಿದ್ದಾಗ ಬಾಲಕನ ಮೇಲೆ ಶಿಕ್ಷಕ ಹಲ್ಲೆ ನಡೆಸಿದ್ದಾರೆ. ಮುಖದ ಮೇಲೆ ಬಲವಾಗಿ ಗುದ್ದಿದ್ದಾರೆ. ಬಳಿಕ ಕೆಡವಿ, ತಲೆಯನ್ನು ನೆಲಕ್ಕೆ ಉಜ್ಜಿದ್ದಾರೆ ಎಂದು ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ಬಾಲಕನ ಬಲಗಣ್ಣಿನ ಮೇಲೆ ಬಲವಾದ ಗಾಯವಾಗಿದೆ. ಬಾಲಕನ ಚಿಕ್ಕಪ್ಪ ದೂರು ದಾಖಲಿಸಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಮಾನ್ಯತೆರಹಿತ ರಾಜಕೀಯ ಪಕ್ಷಗಳ ವಿರುದ್ಧ ತನಿಖೆ

ದೇಶದಾದ್ಯಂತ ಐ.ಟಿ ದಾಳಿ

ನವದೆಹಲಿ (ಪಿಟಿಐ): 'ನೋಂದಾಯಿತ, ಮಾನ್ಯತೆ ಇಲ್ಲದ ರಾಜಕೀಯ ಪಕ್ಷ'ಗಳ (ಆರ್‌ಯುಪಿಪಿ) ವಿರುದ್ಧದ ತೆರಿಗೆ ವಂಚನೆ ಆರೋಪ ಹಾಗೂ ಅವುಗಳು ನಡೆಸಿವೆ ಎನ್ನಲಾದ ಸಂಶಯಾಸ್ಪದ ಹಣ ಕಾಸು ವ್ಯವಹಾರಗಳ ಕುರಿತ ತನಿಖೆಗೆ ಸಂಬಂಧಿಸಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವಿವಿಧ ರಾಜ್ಯಗಳಲ್ಲಿ ಬುಧವಾರ ದಾಳಿ ನಡೆಸಿದ್ದಾರೆ.

ಗುಜರಾತ್, ದೆಹಲಿ, ಉತ್ತರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಛತ್ತೀಸಗಡ, ಹರಿಯಾಣ ಸೇರಿದಂತೆ ಕನಿಷ್ಠ 110 ಸ್ಥಳಗಳಲ್ಲಿ ದಾಳಿಗಳನ್ನು ನಡೆಸಲಾಗಿದೆ ಎಂದು ಇಲಾಖೆ ಮೂಲಗಳು ಹೇಳಿವೆ.

'ಆರ್‌ಯುಪಿಪಿಗಳು ಹಾಗೂ ಅವರು ಪ್ರವರ್ತಕರ ಆದಾಯದ ಮೂಲ ಹಾಗೂ ವೆಚ್ಚ ಕುರಿತು ಇಲಾಖೆಯು ತನಿಖೆ ಕೈಗೊಂಡಿದೆ. ಕಾನೂನು ಬಾಹಿರವಾಗಿ ಈ ಪಕ್ಷಗಳು ದೇಣಿಗೆ ಪಡೆಯುತ್ತಿವೆ ಎಂಬ ಆರೋಪಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಆರ್‌ಯುಪಿಪಿಗಳಿಗೆ ಸಂಬಂಧಿಸಿ ಇತ್ತೀಚೆಗೆ ಚುನಾವಣಾ ಆಯೋಗವು ಮಾಡಿದ್ದ ಶಿಫಾರಸಿನ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ.

ಆರ್‌ಯುಪಿಪಿಗಳಿಗೆ ಸಂಬಂಧಿಸಿ ಇತ್ತೀಚೆಗೆ ಆಯೋಗವು ಭೌತಿಕ ಪರಿಶೀಲನೆ ಕೈಗೊಂಡಿತ್ತು. ಈ ಪೈಕಿ ಅಸ್ತಿತ್ವದಲ್ಲಿಯೇ ಇರದ 198 ಪಕ್ಷಗಳನ್ನು ಆರ್‌ಯುಪಿಪಿ ಪಟ್ಟಿಯಿಂದ ಆಯೋಗವು ತೆಗೆದುಹಾಕಿತ್ತು.

ಕಾಯ್ದೆ ಹಾಗೂ ಚುನಾವಣಾ ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ 2,100ಕ್ಕೂ ಅಧಿಕ ಆರ್‌ಯುಪಿಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿಯೂ ಆಯೋಗ ಹೇಳಿತ್ತು. ಅಧಿಕೃತ ಮೂಲಗಳ ಪ್ರಕಾರ, ದೇಶದಲ್ಲಿ 2,800 ನೋಂದಾಯಿತ, ಮಾನ್ಯತೆರಹಿತ ಪಕ್ಷಗಳಿವೆ.

ಎನ್‌ಜಿಒಗಳ ಮೇಲೂ ದಾಳಿ: ಈ ನಡುವೆಯೇ, ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ಉಲ್ಲಂಘನೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ತನಿಖೆಯ ಭಾಗವಾಗಿ ದೆಹಲಿ ಮೂಲದ ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ಸೆಂಟರ್ ಫಾರ್ ರಿಸರ್ಚ್ (ಸಿಪಿಆರ್) ಮತ್ತು ಜಾಗತಿಕ ಮಟ್ಟದ ಎನ್‌ಜಿಒ ಆಕ್ಸ್‌ಫ್ಯಾಮ್ ಇಂಡಿಯಾ ಮತ್ತು ಬೆಂಗಳೂರು ಮೂಲದ ಮಾಧ್ಯಮ ಸಂಸ್ಥೆಯಾದ ಇಂಡಿಪೆಂಡೆಂಟ್ ಆ್ಯಂಡ್ ಪಬ್ಲಿಕ್ ಸ್ಪಿರಿಟೆಡ್ ಮೀಡಿಯ ಫೌಂಡೇಷನ್(ಐಪಿಎಸ್‌ಎಂಎಫ್) ಮೇಲೂ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಸಂಸ್ಥೆಗಳು ಎಫ್‌ಸಿಆರ್‌ಎ ಮೂಲಕ ಪಡೆದಿರುವ ದೇಣಿಗೆಯ ರಶೀದಿ ಮತ್ತು ಸಂಸ್ಥೆಗಳ ಬ್ಯಾಲೆನ್ಸ್ ಶೀಟ್‌ಗಳನ್ನು ಐ.ಟಿ. ಇಲಾಖೆ ಪರಿಶೀಲನೆ ನಡೆಸುತ್ತಿದೆ ಎನ್ನಲಾಗಿದೆ. ಆದರೆ ದಾಳಿ ಕುರಿತು ಈ ಯಾವ ಸಂಸ್ಥೆಗಳೂ ಪ್ರತಿಕ್ರಿಯೆ ನೀಡಿಲ್ಲ.

ಮಣಿಪಾಲ್ ಗ್ರೂಪ್ಸ್ ಮೇಲೂ ದಾಳಿ

ಬೆಂಗಳೂರು: ಮಣಿಪಾಲ್ ಗ್ರೂಪ್ಸ್‌ನ ಹಣಕಾಸು ವಿಭಾಗದ ಕಚೇರಿಗಳ ಮೇಲೆ ಆದಾಯ ತೆರಿಗೆ(ಐ.ಟಿ) ಇಲಾಖೆ ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದು, ದಾಖಲೆಗಳ ಪರಿಶೀಲನೆ ಮುಂದುವರಿಸಿದ್ದಾರೆ.

200ಕ್ಕೂ ಹೆಚ್ಚು ಸಿಬ್ಬಂದಿ ಬೆಳಗಿನ ಜಾವ 6 ಗಂಟೆಗೆ ಗ್ರೂಪ್‌ನ ಕಚೇರಿಗಳಲ್ಲಿ ಶೋಧ ಆರಂಭಿಸಿದರು. ಮಿಲ್ಲರ್ ರಸ್ತೆ, ಹಳೇ ವಿಮಾನ ನಿಲ್ದಾಣ ರಸ್ತೆ, ಕೆಂಪಾಪುರ, ದೊಡ್ಡಬಳ್ಳಾಪುರ ರಸ್ತೆ ಸೇರಿ ನಗರದ 20 ಕಡೆ ಶೋಧ ನಡೆಸಿದರು. ಗ್ರೂಪ್ಸ್‌ನ ಉಡುಪಿ ಕಚೇರಿಗಳ ಮೇಲೆಯೂ ದಾಳಿ ನಡೆದಿದೆ. ಶೋಧದ ಬಗ್ಗೆ ಐ.ಟಿ ಅಧಿಕಾರಿಗಳು ಅಧಿಕೃತ ಮಾಹಿತಿಯನ್ನು ನೀಡಿಲ್ಲ. ಶೋಧ ಮುಂದುವರಿದಿದೆ ಎಂದಷ್ಟೇ ಮೂಲಗಳು ತಿಳಿಸಿವೆ.

ಕೋವಿಂದ್‌ಗೆ ಝಡ್ ಪ್ಲಸ್ ಭದ್ರತೆ

ನವದೆಹಲಿ (ಪಿಟಿಐ): ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಕೇಂದ್ರ ಸರ್ಕಾರ 'ಝಡ್ ಪ್ಲಸ್' ಶ್ರೇಣಿಯ ವಿಐಪಿ ಭದ್ರತೆಯನ್ನು ಒದಗಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕೋವಿಂದ್ ಅವರು ಪ್ರಯಾಣಿಸುವ ವೇಳೆ ಶಸ್ತ್ರ ಸಜ್ಜಿತ ಬೆಂಗಾವಲು ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆ ಭದ್ರತೆ ಒದಗಿಸಲಿದೆ. ಸೆಪ್ಟೆಂಬರ್ 5ರಿಂದಲೇ ಯೋಧರು ಕೋವಿಂದ್ ಅವರ ಭದ್ರತೆಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ ಎನ್ನಲಾಗಿದೆ.

ಭಾರತ ಒಗ್ಗೂಡಿಸಿ ಯಾತ್ರೆ ಶುರು

ಒಂದನೇ ಪುಟದಿಂದ...

ತಮಿಳುನಾಡು ಕಾಂಗ್ರೆಸ್‌ನ ಅಧ್ಯಕ್ಷರು, ಪದಾಧಿಕಾರಿಗಳು, ಶಾಸಕರು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

ದೇಶದಾದ್ಯಂತ 50,000 ಜನರು ಈ ಯಾತ್ರೆಯಲ್ಲಿ ಭಾಗಿಯಾಗಲು ಹೆಸರು ನೋಂದಾಯಿಸಿದ್ದಾರೆ. ಆದರೆ 120 ಮಂದಿ ಕನ್ಯಾಕುಮಾರಿಯಿಂದ ಕಾಶ್ಮೀರದ ಶ್ರೀನಗರದವರೆಗೆ ಯಾತ್ರೆ ನಡೆಸಲಿದ್ದಾರೆ. ಈ 120 ಜನರ ತಂಡವು ಗುರುವಾರ ಬೆಳಿಗ್ಗೆ 7 ಗಂಟೆ ಮತ್ತು ಮಧ್ಯಾಹ್ನ 3.30ಕ್ಕೆ ಎರಡು ತಂಡಗಳಲ್ಲಿ ಇಲ್ಲಿನ ವಿವೇಕಾನಂದ ಪಾಲಿಟೆಕ್ನಿಕ್‌ನಿಂದ ಯಾತ್ರೆ ಆರಂಭಿಸಲಿದೆ.

ಪ್ರತಿದಿನ 20–23 ಕಿ.ಮೀ. ನಷ್ಟು ದೂರವನ್ನು ಈ ತಂಡವು ಕ್ರಮಿಸಲಿದ್ದು, ಹಾದಿ ಮಧ್ಯೆ ಜನರ ಜತೆ ಸಂವಾದ ನಡೆಸಲಿದೆ. ಜತೆಗೆ ಜನರು ಈ ಯಾತ್ರೆಗೆ ಜತೆಯಾಗಲಿದ್ದಾರೆ. ಈ ತಂಡವು ಸೆಪ್ಟೆಂಬರ್ 11ರಂದು ಕೇರಳ ತಲುಪಲಿದ್ದು, ರಾಜ್ಯದ ಉದ್ದಕ್ಕೂ 18 ದಿನ ಯಾತ್ರೆ ನಡೆಸಲಿದೆ. ನಂತರ ಸೆಪ್ಟೆಂಬರ್ 30ರಂದು ಕರ್ನಾಟಕವನ್ನು ತಲುಪಲಿದೆ. ಕರ್ನಾಟಕದಲ್ಲಿ ಒಟ್ಟು 21 ದಿನ ಯಾತ್ರೆ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

'ಮಹದಾಯಿ ನದಿ ನೀರು ಕೆಸರುಮಯ'

ಪಣಜಿ (ಪಿಟಿಐ): ಗೋವಾದ ದೂದ್‌ಸಾಗರ ಜಲಪಾತದ ಬಳಿಯಿರುವ ಮಹದಾಯಿ ನದಿ ನೀರು ಕೆಲವೆಡೆ ಕೆಸರುಮಯವಾಗಿದ್ದು, ಗೋವಾ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿ ಈ ಬಗ್ಗೆ ತನಿಖೆ ಆರಂಭಿಸಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

'ನದಿ ನೀರು ಕೆಲವು ಪ್ರದೇಶಗಳಲ್ಲಿ ಕೆಸರುಮಯವಾಗುತ್ತಿರುವ ಬಗೆಗಿನ ವರದಿಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳಕ್ಕೆ ತಜ್ಞರ ತಂಡವನ್ನು ಕಳುಹಿಸಲಾಗಿದೆ' ಎಂದು ಗೋವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಮಹೇಶ್ ಪಾಟೀಲ್ ಹೇಳಿದ್ದಾರೆ.

'ನಾವು ಮಾಲಿನ್ಯದ ಮೂಲವನ್ನು ಕಂಡುಹಿಡಿಯಬೇಕು. ನದಿ ದಡದಲ್ಲಿ ಯಾವುದೇ ಕೈಗಾರಿಕೆಗಳಿಲ್ಲ,ಕಬ್ಬಿಣದ ಅದಿರು ಗಣಿಗಾರಿಕೆ ಚಟುವಟಿಕೆಯೂ ನಿಂತುಹೋಗಿದೆ.ಮಾಲಿನ್ಯದ ಮೂಲವನ್ನು ಕಂಡುಹಿಡಿಯಲು ಸಂಪೂರ್ಣ ಸಮೀಕ್ಷೆ ನಡೆಸುವಂತೆ ತಂಡಕ್ಕೆ ಸೂಚಿಸಲಾಗಿದೆ' ಎಂದರು.

'ಸರ್ಕಾರಿ ಶಾಲೆ ಮುಚ್ಚುವುದು ಅಪಾಯಕಾರಿ'

ಚಂಡೀಗಡ: 'ಸ್ವಾತಂತ್ರ್ಯ ನಂತರ ದೇಶದಲ್ಲಿ ಶಿಕ್ಷಣಕ್ಕೆ ಮಹತ್ವ ನೀಡದೇ ತಪ್ಪು ಮಾಡಲಾಗಿದೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬುಧವಾರ ಹೇಳಿದ್ದಾರೆ.

ತಮ್ಮ ತವರು ಜಿಲ್ಲೆ ಹಿಸ್ಸಾರ್‌ನಲ್ಲಿ ಬುಧವಾರ ಆಮ್ ಆದ್ಮಿ ಪಕ್ಷದ 'ಮೇಕ್ ಇಂಡಿಯಾ ನಂ.1' ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹರಿಯಾಣದಲ್ಲಿ ಆಡಳಿತಾರೂಢ ಬಿಜೆಪಿ ಸರ್ಕಾರ ಹಾಗೂ ಹಿಂದಿನ ಕಾಂಗ್ರೆಸ್ ಸರ್ಕಾರಗಳು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿವೆ' ಎಂದು ಆರೋಪಿಸಿದರು.

. ಸರ್ಕಾರಿ ಶಾಲೆಗಳನ್ನು ಉನ್ನತೀಕರಿಸುವ ಬದಲು ಮುಚ್ಚುತ್ತಿರುವುದು ಪ್ರಸ್ತುತ ದಿನಗಳಲ್ಲಿ ಅಪಾಯಕಾರಿಯಾದ ಪ್ರವೃತ್ತಿಯಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಸುದೀರ್ಘ ಅವಧಿಗೆ ರೈಲ್ವೆ ಭೂಮಿ ಗುತ್ತಿಗೆ ನೀತಿಗೆ ಸಂಪುಟ ಅಸ್ತು

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಗತಿ ಶಕ್ತಿ ಕಾರ್ಯಕ್ರಮಕ್ಕಾಗಿ ರೈಲ್ವೆ ಭೂಮಿಯನ್ನು ಸುದೀರ್ಘ ಅವಧಿಗೆ ಗುತ್ತಿಗೆ ನೀಡುವ ನೀತಿಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಬುಧವಾರ ಒಪ್ಪಿಗೆ ದೊರೆತಿದೆ.

ದೇಶದ ವಿವಿಧೆಡೆ 300 'ಕಾರ್ಗೊ ಟರ್ಮಿನಲ್'ಗಳನ್ನು ನಿರ್ಮಿಸುವ ಮೂಲಕ 1.25 ಲಕ್ಷ ಉದ್ಯೋಗ ಸೃಷ್ಟಿಸಲು ಇದರಿಂದ ಅನುಕೂಲ ಆಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

'ಸದ್ಯ 5 ವರ್ಷದವರೆಗೆ ಭೂಮಿ ಗುತ್ತಿಗೆ ನೀಡುವ ವ್ಯವಸ್ಥೆ ಇತ್ತು. ಹೊಸ ನೀತಿಯ ಪ್ರಕಾರ ರೈಲ್ವೆ ಭೂಮಿಯನ್ನು 35 ವರ್ಷದವರೆಗೂ ಗುತ್ತಿಗೆ ಪಡೆಯಬಹುದಾಗಿದೆ' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

'ಮುಂದಿನ ಐದು ವರ್ಷಗಳಲ್ಲಿ 300 ಕಾರ್ಗೊ ಟರ್ಮಿನಲ್‌ಗಳನ್ನು ನಿರ್ಮಿಸುವ ಹಾಗೂ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ. ಈ ನೀತಿಯಿಂದ ರೈಲ್ವೆ ಇಲಾಖೆಗೂ ಹೆಚ್ಚು ಆದಾಯ ದೊರೆಯಲಿದೆ. ಜೊತೆಗೆ ಉದ್ಯೋಗ ಸೃಷ್ಟಿಯೂ ಸಾಧ್ಯವಾಗಲಿದೆ' ಎಂದು ಹೇಳಿದ್ದಾರೆ.

ಶಾಲೆಗಳ ನಿರ್ಮಾಣಕ್ಕೆ ₹27,360 ಕೋಟಿ

ಪಿ.ಎಂ–ಶ್ರೀ ಯೋಜನೆಯಡಿ ದೇಶದಲ್ಲಿ 14 ಸಾವಿರಕ್ಕೂ ಅಧಿಕ ಶಾಲೆಗಳ ನಿರ್ಮಾಣಕ್ಕೆ ಒಟ್ಟು ₹27,360 ಕೋಟಿ ಅನುದಾನ ಒದಗಿಸಲೂ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್ ಹಾಗೂ ಅನುರಾಗ್ ಠಾಕೂರ್, 'ಈ ಯೋಜನೆಯಡಿ ಕೇಂದ್ರೀಯ ವಿದ್ಯಾಲಯ ಮತ್ತು ನವೋದಯ ಶಾಲೆಗಳು ಹಾಗೂ ಸರ್ಕಾರಿ ಶಾಲೆಗಳನ್ನು ಬಲಪಡಿಸಲಾಗುತ್ತದೆ. ಐದು ವರ್ಷಗಳಲ್ಲಿ ನಿಗದಿತ ಸಂಖ್ಯೆಯ ಶಾಲೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದ್ದು, ಇದಕ್ಕೆ ₹27,360 ಕೋಟಿ ವೆಚ್ಚವಾಗಲಿದೆ. ಈ ಪೈಕಿ ಕೇಂದ್ರ ಸರ್ಕಾರವು ₹18,128 ಕೋಟಿ ಭರಿಸಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಶಿಕ್ಷಕರ ದಿನಾಚರಣೆಯಂದು ಪ್ರಧಾನಿ ನರೇಂದ್ರ ಮೋದಿಯವರು ಈ ಯೋಜನೆಯನ್ನು ಘೋಷಿಸಿದ್ದರು. ಇದರಿಂದ 1.87 ಲಕ್ಷ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಬಹುದು ಎಂದು ಅಂದಾಜಿಸಲಾಗಿದೆ.

ಎಸ್‌ಬಿಐಗೆ ₹85 ಸಾವಿರ ದಂಡ

ಒಂದನೇ ಪುಟದಿಂದ...

ಚೆಕ್ ಅವಧಿ ಮೀರಿದೆ ಎಂದು ಬ್ಯಾಂಕ್ ಅಧಿಕಾರಿ ₹177 ದಂಡ ವಿಧಿಸಿದ್ದರು. ಇದನ್ನು ವಾದಿರಾಜಾಚಾರ್ಯ ಅವರು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಪ್ರಶ್ನಿಸಿದರು. ಅರ್ಜಿದಾರರ ಪರ ಬಸವಪ್ರಭು ಹೊಸಕೇರಿ ವಕಾಲತ್ತು ಹಾಕಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ, ಸದಸ್ಯರಾದ ವಿ.ಅ.ಬೋಳಶೆಟ್ಟಿ, ಪಿ.ಸಿ.ಹಿರೇಮಠ ಅವರು, 'ಇದು ಬ್ಯಾಂಕಿನವರ ನಿರ್ಲಕ್ಷ್ಯದಿಂದ ಆಗಿರುವ ಹಾನಿ. ಅರ್ಜಿದಾರರು ಕೇಳಿರುವಂತೆ ಎಸ್‌ಬಿಐ ಬ್ಯಾಂಕ್ ₹50,177 ನೀಡಬೇಕು. ₹ 25ಸಾವಿರ ದಂಡ, ಜತೆಗೆ ನ್ಯಾಯಾಲಯದ ವೆಚ್ಚ ₹ 10ಸಾವಿರ ಭರಿಸಬೇಕು' ಎಂದು ಆದೇಶಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ವಾದಿರಾಜಾಚಾರ್ಯ, 'ನಾನು ಕನ್ನಡದ ಅಭಿಮಾನಿ. ಬ್ಯಾಂಕಿನ ತ್ರಿಭಾಷಾ ಸೂತ್ರದಂತೆ ಕನ್ನಡದಲ್ಲಿ ಚೆಕ್ ನೀಡಿದ್ದೆ. ಆದರೆ ಅಂಕಿಯನ್ನು ತಪ್ಪಾಗಿ ಅರ್ಥೈಸಿ ನನಗೆ ದಂಡ ಹಾಕಿದ್ದರು. ನನ್ನ ದೂರನ್ನು ಪುರಸ್ಕರಿಸಿ, ಆಯೋಗವು ನ್ಯಾಯ ದೊರಕಿಸಿದೆ. ಜತೆಗೆ ಆದೇಶವನ್ನೂ ಕನ್ನಡದಲ್ಲೇ ನೀಡುವಂತೆ ತಿಳಿಸಿದೆ' ಎಂದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, 'ಕನ್ನಡ ಮಾಯವಾಗುತ್ತಿರುವ ಸಂದರ್ಭದಲ್ಲಿ ಆಮ್ಲಜನಕದಂತೆ ಈ ಆದೇಶ ಹೊರಬಿದ್ದಿದೆ. ಇದಕ್ಕಾಗಿ ವಾದಿರಾಜಾಚಾರ್ಯ ಅವರಿಗೆ ಅಭಿನಂದನೆಗಳು. ಈ ಆದೇಶದ ಅನ್ವಯ ಬ್ಯಾಂಕ್‌ಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ ಒತ್ತಡವನ್ನು ಇನ್ನಷ್ಟು ಹೆಚ್ಚಿಸಲಾಗುವುದು' ಎಂದರು.



ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ವಿಡಿಯೊಗಳ ನೇರಪ್ರಸಾರ

ಇಂದು

ಮಿಸಳ್ ಹಾಪ್ಚಾ

ಕೆವಿಎಲ್‌ಇ ಸಂಸ್ಥೆ ಇತಿಹಾಸ ದಾಖಲಿಸುತ್ತ...

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9

ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಷೇರುಪೇಟೆ ವಹಿವಾಟು

168



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,655
ಇಂದಿನ ಅಂತ್ಯ	17,624
▼	31
ದಿನದ ಕನಿಷ್ಠ	17,484

ವಿನಿಮಯ ದರ

$ ಡಾಲರ್	79.95
£ ಪೌಂಡ್	91.84
€ ಯುರೊ	79.15
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹452

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1620 (1620)
ಸೋಯಾ (ರಿಫೈಂಡ್)	₹1210 (1230)
ಸೂರ್ಯಕಾಂತಿ (ರಿಫೈಂಡ್)	₹1400 (1440
ಪಾಮೋಲಿನ್	₹965 (985)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹137.50
ಗುಡ್ ಲಾಟ್	₹131.50

(ಪ್ರತಿ ಕೆ.ಜಿಗೆ)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಕುಮಟ	
ಚಿಪ್ಪು	29069-34019
ಕೋಕ	20509-33899
ಫ್ಯಾಕ್ಟರಿ	13069-24001
ಹಳೆಚಾಲಿ	43569-47599
ಹೊಸಚಾಲಿ	38999-43299
ಕಾರ್ಕಳ	
ಹೊಸತು	40000-47500
ಪುತ್ತೂರು	
ಹೊಸತು	34500-47500
ಶಿವಮೊಗ್ಗ	
ಗೊಬರಲು	17500-40069
ರಾಶಿ	51059-55109
ಸಿದ್ದಾಪುರ	
ಚಿಪ್ಪು	29199-35399
ಚಾಲಿ	39899-44139
ಕೋಕ	31799-34709
ರಾಶಿ	50599-53299
ತಟ್ಟಿಬೆಟ್ಟೆ	44099-51399
ಶಿರಸಿ	
ಬೆಟ್ಟೆ	39116-48211
ಬಿಳಿಗೋಟು	27899-37109
ಚಾಲಿ	40019-44629
ರಾಶಿ	49999-53499
ಯಲ್ಲಾಪುರ	
ಚಿಪ್ಪು	28319-34869
ಚಾಲಿ	37369-44000
ಕೋಕ	19122-32866
ಕೆಂಪುಗೋಟು	35400-35600
ರಾಶಿ	49199-55199
ತಟ್ಟಿಬೆಟ್ಟೆ	38000-48800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16000	16250	230.25 ಸೆಂಟ್ಸ್
ಎಸಿ	9100	8500	8850	
ಆರ್‌ಪಿ	9900	9800	9850	ಲಂಡನ್
ಆರ್‌ಸಿ	4800	4600	4700	2262 ಡಾಲರ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಜಾಗತಿಕ ಆರ್ಥಿಕ ಬಿಕ್ಕಟ್ಟು ಪರಿಣಾಮ ಬೀರದು: ಮೂಡಿಸ್

‘ಭಾರತದ ಚೇತರಿಕೆಗೆ ಅಡ್ಡಿ ಇಲ್ಲ’

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಎದುರಾಗಿರುವ ಆರ್ಥಿಕ ಬಿಕ್ಕಟ್ಟು ಭಾರತದ ಅರ್ಥ ವ್ಯವಸ್ಥೆಯ ಚೇತರಿಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇಲ್ಲ ಎಂದು ಮೂಡಿಸ್ ಇನ್‌ವೆಸ್ಟರ್ಸ್ ಸರ್ವೀಸ್ ಹೇಳಿದೆ.

ರಷ್ಯಾ–ಉಕ್ರೇನ್ ಸಂಘರ್ಷ, ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇರುವುದು, ಕೇಂದ್ರೀಯ ಬ್ಯಾಂಕ್‌ಗಳ ಹಣಕಾಸು ನೀತಿ ಬಿಗಿಗೊಂಡಿರುವುದು ಸೇರಿದಂತೆ ಹಲವು ಸವಾಲುಗಳನ್ನು ಜಾಗತಿಕ ಆರ್ಥಿಕತೆಯು ಎದುರಿಸುತ್ತಿದೆ. ಈ ಸವಾಲುಗಳು ಭಾರತದ ಅರ್ಥ ವ್ಯವಸ್ಥೆಯ ಚೇತರಿಕೆ ಹಾದಿಗೆ ಅಡ್ಡಿಯಾಗುವ ಸಂಭವ ಇಲ್ಲ ಎಂದು ತಿಳಿಸಿದೆ.

ಮುಖ್ಯಾಂಶಗಳು

- ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಶೇ 7.6 ಬೆಳವಣಿಗೆ ನಿರೀಕ್ಷೆ
- ಆರ್ಥಿಕ ಮುನ್ನೋಟ ಸ್ಥಿರ: ಮೂಡಿಸ್

ಭಾರತದ ಆರ್ಥಿಕತೆಯು ಹಿಂದಿನ ಹಣಕಾಸು ವರ್ಷದಲ್ಲಿ ಶೇ 8.7ರಷ್ಟು ಬೆಳವಣಿಗೆ ಕಂಡಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು



ವರ್ಷದಲ್ಲಿ ಶೇ 7.6ರಷ್ಟು ಬೆಳವಣಿಗೆ ಕಾಣಲಿದೆ. 2023–24ನೇ ಹಣಕಾಸು ವರ್ಷದಲ್ಲಿ ಶೇ 6.3ರಷ್ಟು ಬೆಳವಣಿಗೆ ಕಾಣಲಿದೆ ಎಂದು ಸಂಸ್ಥೆಯು ಅಂದಾಜು ಮಾಡಿದೆ.ಐ

ಮುನ್ನೋಟ ಸ್ಥಿರ: ಸಂಸ್ಥೆಯು ಭಾರತಕ್ಕೆ ಹೂಡಿಕೆ ಶ್ರೇಣಿಯಲ್ಲಿ ಅತ್ಯಂತ ಕಡಿಮೆಯದ್ದಾಗಿರುವ ‘ಬಿಎಎ3’ ರೇಟಿಂಗ್ ನೀಡಿದೆ. ಆದರೂ, ದೇಶದ ಆರ್ಥಿಕ ಮುನ್ನೋಟವು ಸ್ಥಿರವಾಗಿರಲಿದೆ ಎಂದು ಹೇಳಿದೆ.

ಬಂಡವಾಳ ಲಭ್ಯತೆ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಆರ್ಥಿಕ ಬೆಳವಣಿಗೆಯ ಮೇಲೆ ಈ ಹಿಂದೆ ನಿರೀಕ್ಷೆ ಮಾಡಿದ್ದಕ್ಕಿಂತಲೂ ಕಡಿಮೆ ಅಪಾಯ ಉಂಟುಮಾಡಲಿವೆ. ಕೋವಿಡ್ ಸಾಂಕ್ರಾಮಿಕದ ನಂತರ ಆರ್ಥಿಕತೆಯಲ್ಲಿ ಕಂಡು-ಬರುತ್ತಿರುವ ಚೇತರಿಕೆಗೆ ಅನುಕೂಲ ಮಾಡಿಕೊಡಲಿವೆ ಎಂದು ತಿಳಿಸಿದೆ.

ಅದಾನಿ: 3 ಗಿಗಾ ಫ್ಯಾಕ್ಟರಿ

ನವದೆಹಲಿ (ಪಿಟಿಐ): ಅದಾನಿ ಸಮೂಹವು ಸೌರಫಲಕ, ಪವನ ವಿದ್ಯುತ್ ಟರ್ಬೈನ್ ಹಾಗೂ ಹೈಡ್ರೋಜನ್ ಎಲೆಕ್ಟ್ರೊಲೈಸರ್ ತಯಾರಿಕೆಗೆ ಮೂರು ಗಿಗಾ ಫ್ಯಾಕ್ಟರಿಗಳ-ನ್ನು ಆರಂಭಿಸುವುದಾಗಿ ಹೇಳಿದೆ.

ಇದು ಪರಿಸರ ಪೂರಕ ಇಂಧನಗಳ ಮೇಲಿನ ₹ 5.58 ಲಕ್ಷ ಕೋಟಿ ಹೂಡಿಕೆಯ ಭಾಗ.

ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ 2030ರೊಳಗೆ ವಿಶ್ವದಲ್ಲಿ ಮೊದಲ ಸ್ಥಾನವನ್ನು ಹೊಂದುವ ಗುರಿ ಅದಾನಿ ಸಮೂಹಕ್ಕೆ ಇದೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹800-1200
ಸಣ್ಣ	₹400-800

ಮುಂಬೈ ಧಾರಣೆ

ಶೇಂಗಾ

7–9-2022

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1150 (1180)
ಪಾಮ್ ವಾರದ ಡೆಲಿವರಿ	963 (993)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,300 (50,500)
ಬೆಳ್ಳಿ ಕೆ.ಜಿ 53,350 (53,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಾಮಾಜಿಕ ಜಾಲತಾಣ: ಹೊಸ ಮಾರ್ಗಸೂಚಿ ಶೀಘ್ರ?

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವ ಸಾಮರ್ಥ್ಯ ಹೊಂದಿರುವವರಿಗೆ ಅನ್ವಯವಾಗುವ ಕೆಲವು ಮಾರ್ಗ-ಸೂಚಿಗಳನ್ನು ಕೇಂದ್ರ ಸರ್ಕಾರವು ಶೀಘ್ರದಲ್ಲಿಯೇ ರೂಪಿಸಲಿದೆ.

ಮಾರ್ಗಸೂಚಿಗಳು ಜಾರಿಗೆ ಬಂದ ನಂತರದಲ್ಲಿ ಇಂತಹ ವ್ಯಕ್ತಿಗಳು ಯಾವುದಾದರೂ ಉತ್ಪನ್ನದ ಪರ ಮಾತನಾಡುವಾಗ, ಆ ಉತ್ಪನ್ನದ ಜೊತೆ ತಾವು ಹೊಂದಿರುವ ನಂಟು ಯಾವ ಬಗೆಯದ್ದು ಎಂಬುದನ್ನು ಬಹಿರಂಗಪ-ಡಿಸಬೇಕಾಗುತ್ತದೆ.

‘ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಮಾರ್ಗಸೂಚಿಗಳ-ನ್ನು ರೂಪಿಸುತ್ತಿದೆ’ ಎಂದು ಅಧಿಕಾ-ರಿಯೊಬ್ಬರು ತಿಳಿಸಿದ್ದಾರೆ. ಇನ್‌ಸ್ಟಾ-ಗ್ರಾಂನಂತಹ ವೇದಿಕೆಗಳಲ್ಲಿ ಬಹಳಷ್ಟು ಜನ ಬೆಂಬಲಿಗರನ್ನು ಹೊಂದಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವ ವ್ಯಕ್ತಿಗಳು ಹಣ ಪಡೆದು ಕೆಲವು ಉತ್ಪನ್ನಗಳ ಪರ ಅಭಿಪ್ರಾಯ ವ್ಯಕ್ತಪಡಿಸುವುದಿದೆ.

ಹೊಸ ಮಾರ್ಗಸೂಚಿಗಳು ಜಾರಿಗೆ ಬಂದ ನಂತರದಲ್ಲಿ, ಹಣ ಪಡೆದು ಯಾವುದಾದರೂ ಉತ್ಪನ್ನದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸುವುದಿದ್ದರೆ, ಹಾಗೆ ಮಾಡುವವರು ಆ ಉತ್ಪನ್ನದ ಬ್ರ್ಯಾಂಡ್ ಜೊತೆ ತಾವು ಹೊಂದಿರುವ

ನಂಟು ಏನು ಎಂಬುದನ್ನು ಬಹಿರಂಗಪ-ಡಿಸಬೇಕಾಗುತ್ತದೆ. ಮಾರ್ಗಸೂಚಿಗಳು ಇನ್ನು ಹದಿನೈದು ದಿನಗಳಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ.

ಅಷ್ಟೇ ಅಲ್ಲ, ಇ–ವಾಣಿಜ್ಯ ವೆಬ್‌ಸೈ-ಟ್‌ಗಳಲ್ಲಿ ನಕಲಿ ರಿವ್ಯೂ ಪ್ರಕಟವಾಗು-ವುದನ್ನು ತಡೆಯಲು ನಿಯಮಗಳನ್ನು ಸಚಿವಾಲಯ ಅಂತಿಮಗೊಳಿಸಿದೆ. ನಿಯಮಗಳನ್ನು ಶೀಘ್ರದಲ್ಲಿಯೇ ಪ್ರಕಟಿ-ಸಲಾಗುತ್ತದೆ ಎಂದು ಗೊತ್ತಾಗಿದೆ.

ನಕಲಿ ರಿವ್ಯೂಗಳ ಪ್ರಭಾವ ಎಷ್ಟಿದೆ ಎಂಬ ಬಗ್ಗೆ ಚರ್ಚಿಸಲು ಇಲಾಖೆಯು ಭಾರತೀಯ ಜಾಹೀರಾತು ಗುಣಮಟ್ಟ ಮಂಡಳಿ (ಎಎಸ್‌ಸಿಐ), ಇ–ವಾಣಿಜ್ಯ ಕಂಪನಿಗಳ ಜೊತೆ ಮೇ ತಿಂಗಳಲ್ಲಿ ಸಭೆ ನಡೆಸಿತ್ತು. ನಕಲಿ ರಿವ್ಯೂಗಳು ಗ್ರಾಹಕರನ್ನು ದಾರಿ ತಪ್ಪಿಸುತ್ತವೆ. ಇ–ವಾಣಿಜ್ಯ ವೇದಿಕೆಗಳ ಮೂಲಕ ಉತ್ಪನ್ನಗಳನ್ನು ಖರೀದಿಸುವವರು ರಿವ್ಯೂಗಳನ್ನು ಬಹಳವಾಗಿ ನೆಚ್ಚಿಕೊಂ-ಡಿರುತ್ತಾರೆ.

ಸುದ್ದಿ 2 ನಿಮಿಷ

ನಿಯಂತ್ರಿಸುವ ಮಟ್ಟಕ್ಕೆ ತಗ್ಗಿದ ಹಣದುಬ್ಬರ: ನಿರ್ಮಲಾ

ನವದೆಹಲಿ (ಪಿಟಿಐ): ‘ಹಣದುಬ್ಬರವು ನಿಯಂತ್ರಿಸಬ-ಹುದಾದ ಮಟ್ಟಕ್ಕೆ ಇಳಿಕೆ ಆಗಿದೆ. ಹೀಗಾಗಿ ಆರ್ಥಿಕ ಬೆಳವಣಿಗೆಯು ಸರ್ಕಾರದ ಆದ್ಯತೆಯಾಗಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ತಿಳಿಸಿದ್ದಾರೆ.

‘ಉದ್ಯೋಗ ಸೃಷ್ಟಿ ಮತ್ತು ಸಂಪತ್ತಿನ ಸಮಾನ ಹಂಚಿಕೆಯು ಆದ್ಯತೆಯ ಇತರ ವಿಷಯಗಳಾಗಿವೆ’ ಎಂದು ಇಂಡಿಯಾ ಐಡಿಯಾಸ್ ಸಮಿತ್‌ನಲ್ಲಿ ಅವರು ಹೇಳಿದ್ದಾರೆ.

‘ಹಣದುಬ್ಬರವು ಆದ್ಯತಾ ವಿಷಯ ಅಲ್ಲ. ಆದ್ಯತೆ ಅಲ್ಲ ಎನ್ನುವುದು ಹಲವರಲ್ಲಿ ಅಚ್ಚರಿ ಮೂಡಿಸುವುದಿಲ್ಲ ಎಂದು ನಾನು ಭಾವಿಸುವೆ. ಏಕೆಂದರೆ, ಕೆಲವು ತಿಂಗಳುಗಳಿಂದ ಹಣದುಬ್ಬರವನ್ನು ನಿಯಂತ್ರಿಸಬಹುದಾದ ಮಟ್ಟಕ್ಕೆ ತರಲಾಗಿದೆ’ ಎಂದು ನಿರ್ಮಲಾ ತಿಳಿಸಿದ್ದಾರೆ.

ಅಮೆರಿಕ ಮತ್ತು ಯುರೋಪ್‌ನ ಕೇಂದ್ರೀಯ ಬ್ಯಾಂಕ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಸುತ್ತಿವೆ. ಇದರಿಂದಾಗಿ ಉಂಟಾಗುತ್ತಿರುವ ಅಸ್ಥಿರತೆಯನ್ನು ಆರ್‌ಬಿಐ ನಿರ್ವಹಿಸುವ ವಿಶ್ವಾಸವಿದೆ ಎಂದು ಅವರು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇ 7.01ರಷ್ಟು ಇದ್ದಿದ್ದು ಜುಲೈನಲ್ಲಿ ಶೇ 6.71ಕ್ಕೆ ಇಳಿಕೆ ಆಗಿದೆ. ಹೀಗಿದ್ದರೂ ಸತತ ಏಳನೇ ತಿಂಗಳಿನಲ್ಲಿಯೂ ಹಣದುಬ್ಬರವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟವಾದ ಶೇ 6ಕ್ಕಿಂತ ಹೆಚ್ಚಿದೆ.

‘ಬ್ಯಾಂಕ್ ಖಾಸಗೀಕರಣ: 10 ವರ್ಷಗಳ ಕಾರ್ಯಸೂಚಿ ಅಗತ್ಯ’

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಎಲ್ಲಾ ಬ್ಯಾಂಕ್‌ಗಳನ್ನು ಖಾಸ-ಗೀಕರಣಗೊಳಿಸುವ ಕುರಿತು 10 ವರ್ಷಗಳ ಕಾರ್ಯಸೂಚಿ ಹೊಂದುವಂತೆ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ಡಿ. ಸುಬ್ಬರಾವ್ ಅವರು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಈ ರೀತಿಯಲ್ಲಿ ಕಾರ್ಯಸೂಚಿ ರೂಪಿಸುವುದರಿಂದ ಎಲ್ಲ ಷೇರುದಾರರಿಗೂ ಭವಿಷ್ಯದ ಕುರಿತು ಅಂದಾಜು ಮಾಡಲು ಅನುಕೂಲ ಆಗಲಿದೆ ಎಂದು ಅವರು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಕಾರ್ಪೊರೇಟ್ ಕಾರ್ಯವಿಧಾನ ಅಳವಡಿಸುವ ಮೂಲಕ ಆರ್‌ಬಿಐನ ಏಕರೂಪದ ನಿಬಂಧನೆಗಳ ವ್ಯಾಪ್ತಿಗೆ ತರುವಂತೆ ಮಾಡುವ ಬಗ್ಗೆ ಸರ್ಕಾರ ಆಲೋಚಿಸಬೇಕಿದೆ ಎಂದಿದ್ದಾರೆ.

ಸುಬ್ಬರಾವ್ ಪ್ರಕಾರ, ಸರ್ಕಾರಿ ಬ್ಯಾಂಕ್‌ಗಳ ಖಾಸಗೀಕರಣದಿಂದ ಭಾರತದ ಆರ್ಥಿಕತೆಯ ಮೇಲೆ ಎರಡು ರೀತಿಯ ಪರಿಣಾಮಗಳು ಆಗಲಿವೆ. ಬ್ಯಾಂಕಿಂಗ್ ವ್ಯವಸ್ಥೆ ಒಟ್ಟಾರೆಯಾಗಿ ದಕ್ಷವಾಗಲಿದೆ. ವಿತ್ತೀಯ ಒಳಗೊಳ್ಳುವಿಕೆ ಮತ್ತು ಆದ್ಯತಾ ವಲಯಕ್ಕೆ ಸಾಲ... ಹೀಗೆ ಕೆಲವು ನಿರ್ಬಂಧಗಳಿಂದ ಸರ್ಕಾರಿ ಬ್ಯಾಂಕ್‌ಗಳು ಮುಕ್ತವಾಗಲಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿನ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲಾ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ರಣಬೀರ್, ಆಲಿಯಾಗೆ ದೇಗುಲ ಪ್ರವೇಶಕ್ಕೆ ತಡೆ

ಉಜ್ಜೈನ್ (ಪಿಟಿಐ): ಬಾಲಿವುಡ್‌ನ ತಾರಾ ದಂಪತಿ ರಣಬೀರ್ ಕಪೂರ್ ಮತ್ತು ಆಲಿಯಾ ಭಟ್‌ಗೆ ಮಧ್ಯ ಪ್ರದೇಶದಲ್ಲಿ ದೇಗುಲ ಪ್ರವೇಶ ನಿರಾಕರಿಸ-ಲಾಗಿದೆ.

ಉಜ್ಜೈನಿಯಲ್ಲಿರುವ ಪ್ರಸಿದ್ಧ ಮಹಾಕಾಲ್ ದೇಗುಲಕ್ಕೆ ತೆರಳಿ ಪೂಜೆ ಸಲ್ಲಿಸಲು ರಣಬೀರ್ ಮತ್ತು ಆಲಿಯಾ ಭಟ್ ನಿರ್ಧರಿಸಿದ್ದರು. ಆದರೆ, ಬಜರಂಗ ದಳ ಕಾರ್ಯಕರ್ತರು ದೇಗುಲ ಪ್ರವೇಶ ನಿರಾಕರಿಸಿದ್ದಾರೆ.

ರಣಬೀರ್ ಕೆಲಸಮಯದ ಹಿಂದೆ, ಸಂದರ್ಶನವೊಂದರಲ್ಲಿ ಗೋಮಾಂಸ ತಿನ್ನಲು ಇಷ್ಟ ಎಂದು ಹೇಳಿಕೊಂಡಿದ್ದರು. ಹಿಂದುಗಳ ಭಾವನೆಗೆ ಅವರು ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿ ಬಜರಂಗದಳ ಕಾರ್ಯಕರ್ತರು ದೇಗುಲ ಬಳಿ ಪ್ರತಿಭಟನೆ ನಡೆಸಿದ್ದಾರೆ. ಲಾಠಿ ಚಾರ್ಜ್ ಮಾಡಿದರೂ, ಕಾರ್ಯಕರ್ತರು ಸ್ಥಳದಿಂದ ತೆರಳದೇ ಪ್ರತಿಭಟಿಸಿ-ದ್ದಾರೆ. ಘಟನೆ ಸಂಬಂಧ ಪ್ರಕರಣ ದಾಖಲಾಗಿದೆ.

‘ಶೇ 47ಕ್ಕೂ ಅಧಿಕ ಔಷಧಗಳಿಗೆ ಒಪ್ಪಿಗೆ ಇರಲಿಲ್ಲ’

ನವದೆಹಲಿ (ಪಿಟಿಐ): ಭಾರತದ ಖಾಸಗಿ ವಲಯದಲ್ಲಿ 2019ರಲ್ಲಿ ಬಳಸಿದ ಆ್ಯಂಟಿಬಯೊಟಿಕ್‌ಗಳ (ಜೀವಪ್ರತಿರೋಧಕ ಔಷಧ) ಪೈಕಿ ಶೇ 47ಕ್ಕೂ ಹೆಚ್ಚಿನ ಪ್ರಮಾಣದ ಔಷಧಗಳಿಗೆ ಭಾರತೀಯ ಔಷಧ ಮಹಾನಿಯಂತ್ರಕರ (ಡಿಸಿಜಿಐ) ಅನುಮೋದನೆಯೇ ಇರಲಿಲ್ಲ ಎಂದು ಅಧ್ಯಯನವೊಂದು ತಿಳಿಸಿದೆ.

ಅಮೆರಿಕದ ಬಾಸ್ಟನ್ ವಿಶ್ವವಿದ್ಯಾ-ಲಯ ಹಾಗೂ ನವದೆಹಲಿ ಮೂಲದ ‘ಪಬ್ಲಿಕ್ ಹೆಲ್ತ್ ಫೌಂಡೇಷನ್’ ಈ ವಿಷಯ ಕುರಿತು ಸಂಶೋಧನೆ ಕೈಗೊಂಡಿದ್ದವು. ಈ ಸಂಶೋಧನಾ ವರದಿ ‘ಲ್ಯಾನ್ಸೆಟ್’ ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

ಭಾರತದಲ್ಲಿ ಬಳಕೆಯಾಗುವ ಒಟ್ಟು ಆ್ಯಂಟಿಬಯೊಟಿಕ್‌ಗಳ ಪೈಕಿ ಶೇ 85–90ರಷ್ಟು ಪ್ರಮಾಣದ ಈ ಔಷಧ ಖಾಸಗಿ ವಲಯದಲ್ಲಿಯೇ ಬಳಕೆ-ಯಾಗುತ್ತದೆ. ಅಂದಾಜು 5 ಸಾವಿರ ಔಷಧ ತಯಾರಕ ಕಂಪನಿಗಳು ಹಾಗೂ 9 ಸಾವಿರ ಸ್ಟಾಕಿಸ್ಟ್‌ಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ವರದಿ ಸಿದ್ಧಪಡಿಸಲಾಗಿದೆ. 2019ರಲ್ಲಿ ‘ಅಜಿಥ್ರೊಮೈಸಿನ್ 500 ಎಂಜಿ’ ಮಾತ್ರೆ ಅತಿ ಹೆಚ್ಚು (ಶೇ 7.6) ಬಳಕೆಯಾಗಿದೆ.

ಓಣಂ ಸಂಭ್ರಮ... ಓಣಂ ಹಬ್ಬದ ಪ್ರಯುಕ್ತ ಕೊಚ್ಚಿಯ ಎರ್ನಾಕುಲಂನಲ್ಲಿ ಇರುವ ತ್ರಿಕ್ಕಾಕರ ದೇವಸ್ಥಾನದಲ್ಲಿ ಪೂರಂ ಮೆರವಣಿಗೆ ನಡೆಯಿತು –ಪಿಟಿಐ

ಮುಳುಗಿದ ವಾಹನ: ‘ಎಂಜಿನ್ ಪ್ರೊಟೆಕ್ಟರ್’ ವಿಮೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯಲ್ಲಿ ವಾಹನ ಮುಳುಗಿ, ಅದರಿಂದ ಎಂಜಿನ್‌ಗೆ ಹಾನಿ ಆದಾಗ ವಿಮಾ ಪರಿಹಾರ ಪಡೆಯಲು ‘ಎಂಜಿನ್ ಪ್ರೊಟೆಕ್ಟರ್’ ಆ್ಯಡ್ ಆನ್ ಇದ್ದರೆ ಒಳಿತು ಎಂದು ವಿಮಾ ತಜ್ಞರು ಹೇಳುತ್ತಾರೆ.

ವಾಹನಕ್ಕೆ ಆಕಸ್ಮಿಕವಾಗಿ ಆಗುವ ಹಾನಿಗೆ ಪರಿಹಾರ ಪಡೆಯಲು ವಾಹನ ಮಾಲೀಕರು ಓನ್ ಡ್ಯಾಮೇಜ್ ವಿಮೆ ಪಡೆದಿರುತ್ತಾರೆ. ಇದಕ್ಕೆ ಹೆಚ್ಚುವರಿಯಾಗಿ ‘ಎಂಜಿನ್ ಪ್ರೊಟೆಕ್ಟರ್’ ಸೌಲಭ್ಯ ಪಡೆಯಲು ಅವಕಾಶ ಇದೆ.

ವಾಹನವನ್ನು ಮನೆಯಲ್ಲಿ ಪಾರ್ಕ್ ಮಾಡಿದ್ದಾಗ ಭಾರಿ ಮಳೆ ಸುರಿದು, ಎಂಜಿನ್‌ಗೆ ನೀರು ನುಗ್ಗಿ ಹಾನಿ ಉಂಟಾದರೆ ಎಂಜಿನ್ ಪ್ರೊಟೆಕ್ಟರ್ ಆ್ಯಡ್ ಆನ್ ಸೌಲಭ್ಯ ಇಲ್ಲದಿದ್ದರೂ ವಿಮೆ ಪರಿಹಾರ ಪಡೆಯಬಹುದು. ಆದರೆ, ಇಂತಹ ಸಂದರ್ಭದಲ್ಲಿ ವಾಹನ ಚಾಲಕರು ವಾಹನ ಸ್ಟಾರ್ಟ್ ಮಾಡಲು ಯತ್ನಿಸಬಾರದು ಎಂದು ಮೂಲಗಳು ವಿವರಿಸಿವೆ.

‘ಎಂಜಿನ್‌ಗೆ ನೀರು ನುಗ್ಗಿದ್ದಾಗಲೂ ವಾಹನ ಸ್ಟಾರ್ಟ್ ಮಾಡಲು ಯತ್ನಿಸಿದಾಗ ಆಗುವ ಹಾನಿಗೆ ವಿಮಾ ಪರಿಹಾರ ಸಿಗಬೇಕು ಎಂದಾದರೆ, ಎಂಜಿನ್ ಪ್ರೊಟೆಕ್ಟರ್ ಸೌಲಭ್ಯ ಪಡೆದಿ-ರಬೇಕಾಗುತ್ತದೆ’ ಎಂದು ಮೂಲಗಳು ವಿವರಿಸಿವೆ.

‘ಎಂಜಿನ್ ಪ್ರೊಟೆಕ್ಟರ್’ ಆ್ಯಡ್ ಆನ್ ಸೌಲಭ್ಯ ಪಡೆಯದವರು, ಇಂತಹ ಸಂದರ್ಭಗಳಲ್ಲಿ ಎಂಜಿನ್‌ಗೆ ಆಗುವ ಹಾನಿಯ ರಿಪೇರಿಗೆ ತಾವೇ ಹಣ ಪಾವತಿಸಬೇಕು.

ಎಂಜಿನ್‌ಗೆ ನೀರು ನುಗ್ಗಿದೆ ಎಂದಾದಲ್ಲಿ ವಾಹನ ಸ್ಟಾರ್ಟ್ ಮಾಡಲು ಮುಂದಾಗಬಾರದು. ವಾಹನದ ಡೀಲರ್ ಕಂಪನಿ ಅಥವಾ ವಿಮಾ ಕಂಪನಿಗೆ ಕರೆ ಮಾಡಿ ವಾಹನವನ್ನು ಟೋ ಮಾಡಿಕೊಂಡು ಹೋಗಲು ಮನವಿ ಮಾಡಬೇಕು. ಆಗ ಅವರು ವಾಹನಕ್ಕೆ ಆಗಿರುವ ನಷ್ಟ ಯಾವ ಬಗೆಯದ್ದು ಎಂಬುದನ್ನೂ ಗಮನಿಸುತ್ತಾರೆ ಎಂದು ಬಜಾಜ್ ಅಲಯನ್ಸ್ ಜನರಲ್ ಇನ್ಶುರೆನ್ಸ್ ಕಂಪನಿಯ ಮೋಟರ್ ಬ್ಯುಸಿನೆಸ್ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಸುಭಾಶಿಷ್ ಮಜುಮ್ದಾರ್ ಹೇಳಿದ್ದಾರೆ.

ಎಂಜಿನ್ ಪ್ರೊಟೆಕ್ಟರ್ ಸೌಲಭ್ಯವನ್ನು ಸಾಮಾನ್ಯವಾಗಿ ಇತರ ಆ್ಯಡ್ ಆನ್‌ಗಳ ಜೊತೆಯಲ್ಲಿಯೇ ಮಾರಾಟ ಮಾಡಲಾಗುತ್ತದೆ. ವಿಮೆ ಖರೀದಿಸುವಾಗ ಅಥವಾ ವಿಮೆ ನವೀಕರಿಸುವಾಗ ಇದನ್ನು ಖರೀದಿಸಬೇಕು. ಅವಧಿ ಮಧ್ಯದಲ್ಲಿ ಈ ಸೌಲಭ್ಯ ಪಡೆಯಲಾಗದು ಎಂದು ಮಜುಮ್ದಾರ್ ತಿಳಿಸಿದ್ದಾರೆ.

ಎಲ್‌ಎಸಿಯಲ್ಲಿ ಸೇನಾ ನಿಯೋಜನೆಯಲ್ಲಿ ಬದಲಾವಣೆ

ದಿನ್‌ಜನ್ (ಅಸ್ಸಾಂ) (ಪಿಟಿಐ): ಯುದ್ಧ ಸ್ಥಿತಿ ನಿರ್ಮಾಣವಾದರೆ, ಸೇನೆಯು ಸನ್ನ-ದ್ಧವಾಗಿರಬೇಕು ಎನ್ನುವ ದೃಷ್ಟಿಯಿಂದ ಅರುಣಾಚಲ ಪ್ರದೇಶದಲ್ಲಿರುವ ವಾಸ್ತವ ನಿಯಂತ್ರಣ ರೇಖೆ ಉದ್ದಕ್ಕೂ ಸೇನಾ ನಿಯೋಜನೆಗೆ ಸಂಬಂಧಿಸಿದಂತೆ ಮಹತ್ವದ ಬದಲಾವಣೆಗಳನ್ನು ಮಾಡಲಾಗುತ್ತಿದೆ ಎಂದು ಭಾರತೀಯ ಸೇನೆಯ ಉನ್ನತ ಮಟ್ಟದ ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾವು ಪೂರ್ವ ಲಡಾಖ್ ಪ್ರದೇಶದಲ್ಲಿ 2 ವರ್ಷಗಳಿಗೂ ಹೆಚ್ಚು ಕಾಲದಿಂದ ಸಂಘರ್ಷ ಸ್ಥಿತಿಯನ್ನು ನಿರ್ಮಾಣ ಮಾಡಿದೆ. ಆದ್ದರಿಂದ ಸೇನೆಯು ಈ ಕ್ರಮ ಕೈಗೊಳ್ಳುತ್ತಿದೆ ಎನ್ನಲಾಗುತ್ತಿದೆ.

‘ರಸ್ತೆ, ಸೇತುವೆ, ಸುರಂಗ ಹಾಗೂ ಹೆಲಿಪ್ಯಾಡ್ ಸೇರಿದಂತೆ ಅಗತ್ಯ ಮೂಲ-ಸೌಕರ್ಯಗಳು ಕಾಲಮಿತಿಯೊಳಗೆ ನಿರ್ಮಾಣವಾಗಬೇಕು ಎಂದೂ ಯೋಜಿಸಲಾಗಿದೆ’ ಎಂದು 2 ಮೌಂಟನ್ ಡಿವಿಜನ್‌ನ ಮುಖ್ಯಸ್ಥ ಮೇಜರ್ ಜನರಲ್ ಎಂ.ಎಸ್. ಬೈನ್ಸ್ ಹೇಳಿದ್ದಾರೆ.

ಸಚಿವರ ಮನೆ ಮೇಲೆ ಸಿಬಿಐ ದಾಳಿ

ಕೋಲ್ಕತ್ತ (ಪಿಟಿಐ): ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳದ ಸಚಿವ ಮಲಯ್ ಘಟಕ್ ಅವರಿಗೆ ಸೇರಿದ ನಿವಾಸಗಳ ಮೇಲೆ ಸಿಬಿಐ ದಾಳಿ ನಡೆಸಿದೆ.

ಅಲ್ಲದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟಕ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಸಮನ್ಸ್ ಜಾರಿ ಮಾಡಿದೆ. ಸೆ.14ರ ಒಳಗಾಗಿ ದೆಹಲಿಯ ಇ.ಡಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

ಉಜ್ಜಯಿನಿ ಓಂಕಾರೇಶ್ವರ್ ಖಜರಾವೊ ಚಿತ್ರಕೂಟ ಕಾಶಿ,ಗಯಾ,ಪ್ರಯಾಗ 21.10.2022 04.11.2022, ರಿಂದ 12/16 ದಿನಗಳು. ದೆಹಲಿ ವೈಷ್ಣವಿದೇವಿ ಶಕ್ತಿಪೀಠಗಳು ಕುಲು,ಮನಾಲಿ 31.10.2022 05.11.2022 ರಿಂದ 12/16 ದಿನಗಳು. ಸೋಮನಾಥ್ ಮಾತ್ರಗಯಾ,ದ್ವಾರಕಾ ಅಷ್ಟ ಜ್ಯೋತಿರ್ಲಿಂಗಗಳು ಅಲಹಾಬಾದ್ 31.10.2022 05.11.2022 ರಿಂದ 15/18 ದಿನಗಳು. ಗೌಹಾಟಿ,ಸಿಕ್ಕಿಂ,ಡಾರ್ಜಲಿಂಗ್ ಕೊಲ್ಕತ್ತ,ಪುರಿ ಭುವನೇಶ್ವರ್10.11.2022 25.11.2022 ರಿಂದ 14/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

17.09.2022, 01.11.2022 13ದಿನಗಳು ವಿಮಾನದಲ್ಲಿ ಕಾಶಿ, ಗಯಾ, ಆಗ್ರಾ, ಅಲಹಬಾದ್, ಅಯೋಧ್ಯೆ, ನೈಮಿಷ್ಯಾರಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್ 9945445809 9902433500

ಸುಸಜ್ಜಿತ ವ್ಯವಸ್ಥೆಯೊಂದಿಗೆ: 02.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 06.10.2022 ರಿಂದ 12/9 ದಿನಗಳ ಕಾಶಿ,ಗಯಾ,ದೆಹಲಿ. 07.11.2022 13.11.2022 ರಿಂದ 8/10/16 ದಿನಗಳ ಜಗನ್ನಾಥ್‌ಪುರಿ ಕೊನಾರ್ಕ್, ಕೊಲ್ಕತ್ತ,ಕಾಶಿ,ನೇಪಾಳ ಮುಕ್ತಿನಾಥ್ 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.11.2022 ರಿಂದ 8/11/17 ದಿನಗಳ ಗುಜರಾತ್,ರಾಜಸ್ಥಾನ್ 02.11.2022 04.12.2022 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 11.12.2022 30.12.2022 ರಿಂದ 5 ದಿನಗಳ ದುಬೈ,ಅಬುಧಾಬಿ. 02.12.2022 ರಿಂದ 8 ದಿನಗಳ ಕಾಂಬೋಡಿಯಾ ವಿಯಟ್ನಂ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

15/9/22, 8/10/22 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್, 6/10/22 ನೇಪಾಳ್, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-98447 08666, 9844702666

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 8197650569, 7204396011

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225388/ 9611225266

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

★||ಶ್ರೀಚಾಮುಂಡೇಶ್ವರಿ||★ ಜ್ಯೋತಿಷ್ಯರು ಸ್ತ್ರೀಪುರುಷ ಪ್ರೇಮವಿಚಾರ, ಪ್ರೀತಿಯಲ್ಲಿಮೋಸ, ಆರೋಗ್ಯ, ದಾಂಪತ್ಯ, ಸಾಲಭಾದೆ, ಸಂತಾನಫಲ, ಮದುವೆ, ಇನ್ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. 8050061378

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331

dhclassifieds@deccanherald.co.in www.dhclassifieds.com

ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿ; ಫೈನಲ್‌ಗೆ ಬಾಬರ್ ಆಜಂ ಪಡೆ: ಭಾರತದ ಕನಸು ಭಗ್ನ

ಅಫ್ಗನ್ ದಿಟ್ಟ ಹೋರಾಟ: ಪಾಕ್‌ಗೆ ಜಯ

ಶಾರ್ಜಾ: ಪಾಕಿಸ್ತಾನದ ನಸೀಂ ಶಾ ಹೊಡೆದ ಎರಡು ಸಿಕ್ಸರ್‌ಗಳು ಅಫ್ಗಾನಿಸ್ತಾನ ತಂಡದ ದಿಟ್ಟ ಹೋರಾಟವನ್ನು ವ್ಯರ್ಥಗೊಳಿಸಿದವು. ಇನ್ನೊಂದೆಡೆ ಏಷ್ಯಾ ಕಪ್ ಟಿ20 ಟೂರ್ನಿಯ ಫೈನಲ್ ಪ್ರವೇಶಿಸುವ ಭಾರತದ ಸಣ್ಣ ಆಸೆಯೂ ಕಮರಿತು.

1 ವಿಕೆಟ್ ಅಂತರದಿಂದ ರೋಚಕ ಜಯ ಸಾಧಿಸಿದ ಪಾಕಿಸ್ತಾನ ತಂಡವು ಫೈನಲ್ ಪ್ರವೇಶಿಸಿತು.

ಬುಧವಾರ ರಾತ್ರಿ ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ರೋಚಕ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವು ಮೊದಲು ಬ್ಯಾಟಿಂಗ್ ಮಾಡಿ 129 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಆದರೆ ಬೌಲರ್‌ಗಳು ತೋರಿದ ಅಮೋಘ ಆಟಕ್ಕೆ ಪಾಕಿಸ್ತಾನ ತಂಡವು ಜಯಗಳಿಸಲು ಹರಸಾಹಸ ಪಡಬೇಕಾಯಿತು. ತಲಾ ಮೂರು ವಿಕೆಟ್ ಗಳಿಸಿದ ಫಜಲ್‌ಹಕ್ ಫಾರೂಖಿ ಹಾಗೂ ಫರೀದ್ ಅಹಮದ್ ಮಲಿಕ್ ಅಫ್ಗನ್ ತಂಡವನ್ನು ಜಯದ ಹೊಸ್ತಿಲಿಗೆ ತಂದು ನಿಲ್ಲಿಸಿದ್ದರು.

ಆದರೆ, ಕೊನೆಯ ಓವರ್‌ನಲ್ಲಿ ಪಾಕ್ ಗೆಲುವಿಗೆ 11 ರನ್‌ಗಳ ಅಗತ್ಯವಿತ್ತು. ಕೇವಲ ಒಂದು ವಿಕೆಟ್ ಮಾತ್ರ ಉಳಿದಿತ್ತು. ಫಾರೂಖಿ ಬೌಲಿಂಗ್ ಮಾಡಿದ 20ನೇ ಓವರ್‌ನ ಮೊದಲ ಎರಡೂ ಎಸೆತಗಳನ್ನು ಸಿಕ್ಸರ್‌ಗೆ ಎತ್ತಿದ ನಸೀಂ ಶಾ ಪಾಕ್ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು. ಪಾಕ್ ಆಟಗಾರರು ಸಂಭ್ರಮಿಸಿದರೆ, ಅಫ್ಗನ್ ಆಟಗಾರರು ಕಣ್ಣೀರಿಟ್ಟರು.

ಪಾಕಿಸ್ತಾನ ಆಟಗಾರರ ಜಯದ ಸಂಭ್ರಮ– ಎಎಫ್‌ಪಿ ಚಿತ್ರ

ರವೂಫ್ ಬೌಲಿಂಗ್: ಟಾಸ್ ಗೆದ್ದ ಪಾಕಿಸ್ತಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರವೂಫ್ (26ಕ್ಕೆ2) ಬೌಲಿಂಗ್ ಮುಂದೆ ಅಫ್ಗನ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 129 ರನ್ ಗಳಿಸಿತು. ಆರಂಭಿಕ ಬ್ಯಾಟರ್‌ಗಳಾದ ಹಜರತ್‌ಉಲ್ಲಾ ಝಝೈ (21ರನ್) ಹಾಗೂ ಗುರ್ಬಾಜ್ (17 ರನ್) ಉತ್ತಮ ಆರಂಭ ನೀಡಿದರು. ಮೂರು ಓವರ್ ಗಳಲ್ಲಿ 36 ರನ್ ಸೇರಿಸಿದರು.

ಆದರೆ ನಾಲ್ಕನೇ ಓವರ್‌ನಲ್ಲಿ ಹ್ಯಾರಿಸ್ ಸ್ವಿಂಗ್‌ಗೆ ಗುರ್ಬಾಜ್ ಕ್ಲೀನ್‌ಬೌಲ್ಡ್ ಆದರು. ನಂತರದ ಓವರ್‌ನಲ್ಲಿ ಮೊಹಮ್ಮದ್ ಹಸನೈನ್ ಬೌಲಿಂಗ್‌ನಲ್ಲಿ ಝಝೈ ಕೂಡ ಔಟಾದರು. ಈ ಹಂತದಲ್ಲಿ ಇಬ್ರಾಹಿಂ ಜದ್ರಾನ್ (35; 37ಎ) ತಾಳ್ಮೆಯ ಇನಿಂಗ್ಸ್ ಕಟ್ಟಲು ಪ್ರಯತ್ನಿಸಿದರು. ಆದರೆ ಇನ್ನೊಂದು ಬದಿಯಲ್ಲಿ ಬ್ಯಾಟರ್‌ಗಳು ಕಾಲೂರಲು ಪಾಕ್ ಬೌಲರ್‌ಗಳು ಬಿಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 6ಕ್ಕೆ129 (ಹಜರತ್‌ಉಲ್ಲಾ ಝಝೈ 21, ರೆಹಮಾನುಲ್ಲಾ ಗುರ್ಬಾಜ್ 17, ಇಬ್ರಾಹಿಂ ಜದ್ರಾನ್ 35, ರಶೀದ್ ಖಾನ್ ಔಟಾಗದೆ 18, ಹ್ಯಾರಿಸ್ ರವೂಫ್ 26ಕ್ಕೆ2, ನಸೀಂ ಶಾ 19ಕ್ಕೆ1, ಮೊಹಮ್ಮದ್ ಹುಸೇನ್ 34ಕ್ಕೆ1). ಪಾಕಿಸ್ತಾನ: 19.2 ಓವರ್‌ಗಳಲ್ಲಿ 9ಕ್ಕೆ 131 (ಮೊಹಮ್ಮದ್ ರಿಜ್ವಾನ್ 20, ಇಫ್ತಿಕಾರ್ ಅಹಮದ್ 30, ಶಾದಾಬ್ ಖಾನ್ 36, ಫಜಲ್‌ಹಕ್ ಫಾರೂಕಿ 31ಕ್ಕೆ3, ಫರೀದ್ ಅಹಮದ್ ಮಲಿಕ್ 31ಕ್ಕೆ3, ರಶೀದ್ ಖಾನ್ 25ಕ್ಕೆ2) ಫಲಿತಾಂಶ: ಪಾಕಿಸ್ತಾನಕ್ಕೆ 1 ವಿಕೆಟ್ ಜಯ.

ಸೂಪರ್ 4 ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್ಸ್	ರನ್‌ರೇಟ್
ಶ್ರೀಲಂಕಾ	2	2	0	4	0.351
ಪಾಕಿಸ್ತಾನ	2	2	0	4	0.241
ಭಾರತ	2	0	2	0	-0.125
ಅಫ್ಗಾನಿಸ್ತಾನ	2	0	2	0	-0.452

ಭಾರತಕ್ಕೆ ಅಫ್ಗಾನಿಸ್ತಾನ ಸವಾಲು

ರೋಹಿತ್ ಬಳಗಕ್ಕೆ ಸಮಾಧಾನಕರ ಜಯದ ನಿರೀಕ್ಷೆ

ದುಬೈ (ಪಿಟಿಐ): ಭಾರತ ತಂಡದ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶದ ಕನಸು ಕಮರಿದೆ.

ಟೂರ್ನಿಯಿಂದ ನಿರ್ಗಮಿಸುವ ಮುನ್ನ ರೋಹಿತ್ ಶರ್ಮಾ ಬಳಗವು ಗುರುವಾರ ಸೂಪರ್ ಫೋರ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರು ಕಣಕ್ಕಿಳಿಯಲಿದೆ.

ಪಾಕಿಸ್ತಾನ ಹಾಗೂ ಶ್ರೀಲಂಕಾ ಎದುರು ಸೋತಿದ್ದ ಭಾರತ ತಂಡದ ಫೈನಲ್ ಹಾದಿಯು ಬಹುತೇಕ ಮುಚ್ಚಿತ್ತು. ಅಫ್ಗಾನಿಸ್ತಾನ ತಂಡವು ಬುಧವಾರ ಪಾಕಿಸ್ತಾನ ಎದುರು ಸೋಲುವುದರೊಂದಿಗೆ ರೋಹಿತ್ ಪಡೆ ಫೈನಲ್ ಸ್ಪರ್ಧೆಯಿಂದ ಹೊರಬಿದ್ದಿತು.

ಅಫ್ಗಾನಿಸ್ತಾನ ಗುಂಪು ಹಂತದಲ್ಲಿ ಉತ್ತಮವಾಗಿ ಆಡಿತ್ತು. ಶ್ರೀಲಂಕಾ ಎದುರಿನ ಸೂಪರ್ ಫೋರ್ ಪಂದ್ಯದಲ್ಲಿಯೂ ದಿಟ್ಟವಾಗಿ ಆಡಿತ್ತು. ಹಣಾಹಣಿಯಲ್ಲಿ ಸೋತರೂ ರೆಹಮಾನುಲ್ಲಾ ಗುರ್ಬಾಜ್ ಹಾಗೂ ಇಬ್ರಾಹಿಂ ಜದ್ರಾನ್ ಅವರ ಅಬ್ಬರದ ಬ್ಯಾಟಿಂಗ್ ಗಮನ ಸೆಳೆದಿತ್ತು.

ರೋಹಿತ್ ಶರ್ಮಾ

ಅನುಭವಿ ರಶೀದ್ ಖಾನ್, ಫಜಲ್ ಹಕ್ ಫಾರೂಕಿ ಹಾಗೂ ಮುಜೀಬ್ ಉರ್ ರೆಹಮಾನ್ ಈ ಟೂರ್ನಿಯಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದ್ದಾರೆ. ಆದ್ದರಿಂದ ಭಾರತದ ಬ್ಯಾಟಿಂಗ್ ಪಡೆಗೆ ದಿಟ್ಟ ಸವಾಲೊಡ್ಡಬಲ್ಲ ಸಾಮರ್ಥ್ಯವೂ ಇವರಿಗೆ ಇದೆ.

ಭಾರತ ತಂಡದಲ್ಲಿ ವೈಫಲ್ಯ ಅನುಭವಿಸಿರುವ ರಿಷಭ್ ಪಂತ್ ಅವರನ್ನು ಕೈಬಿಟ್ಟು, ದಿನೇಶ್ ಕಾರ್ತಿಕ್‌ಗೆ ಅವಕಾಶ ನೀಡುವ ಸಾಧ್ಯತೆ ಇದೆ. ಆದರೆ ಬೌಲಿಂಗ್‌ನಲ್ಲಿ ಹೆಚ್ಚು ಬದಲಾವಣೆ ಮಾಡುವ ಸಾಧ್ಯತೆ ಇಲ್ಲ. ಏಕೆಂದರೆ ಆವೇಶ್ ಖಾನ್ ಗಾಯಗೊಂಡಿರುವುದರಿಂದ ಭುವನೇಶ್ವರ್ ಕುಮಾರ್, ಅರ್ಷದೀಪ್ ಸಿಂಗ್ ಹಾಗೂ ಹಾರ್ದಿಕ್ ಪಾಂಡ್ಯ ಅವರೇ ವೇಗದ ವಿಭಾಗವನ್ನು ನಿಭಾಯಿಸಬಹುದು. ಚಾಹಲ್‌ಗೆ ವಿಶ್ರಾಂತಿ ನೀಡಿ ರವಿ ಬಿಷ್ಣೋಯಿಗೆ ಅವಕಾಶ ನೀಡಬಹುದು.

ಮುಂಬರುವ ಟಿ20 ವಿಶ್ವಕಪ್‌ಗೆ ತಂಡವನ್ನು ರೂಪಿಸುವತ್ತ ಚಿತ್ತ ನೆಟ್ಟಿರುವ ಭಾರತ ತಂಡಕ್ಕೆ ಈ ಪಂದ್ಯವೂ ಪ್ರಯೋಗದ ವೇದಿಕೆ ಯಾಗಲಿದೆ.

‘ತಂಡದಲ್ಲಿ ಆಡಿರುವ ಮೂವರು ಮಧ್ಯಮವೇಗಿಗಳ ಆಟವು ತೃಪ್ತಿಕರವಾಗಿದೆ. ಆವೇಶ್ ಖಾನ್ ಫಿಟ್‌ನೆಸ್ ಟೆಸ್ಟ್ ಉತ್ತೀರ್ಣರಾಗಿಲ್ಲ. ವಿಶ್ವಕಪ್ ಟೂರ್ನಿಯಲ್ಲಿ ನಾಲ್ವರು ವೇಗಿಗಳನ್ನು ಆಡಿಸಬೇಕಾಗಬಹುದು. ಆದ್ದರಿಂದ ಸದ್ಯದ ಸಂಯೋಜನೆ ಚೆನ್ನಾಗಿದೆ’ ಎಂದು ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೊದಲ ಗೆಲುವಿನ ತವಕ

ಭಾರತ, ನ್ಯೂಜಿಲೆಂಡ್ ‘ಎ’ ತಂಡಗಳ ‘ಟೆಸ್ಟ್’ ಇಂದಿನಿಂದ

• ಬಸೀರಅಹ್ಮದ್ ನಗಾರಿ

ಹುಬ್ಬಳ್ಳಿ: ಮೂರು ವರ್ಷಗಳ ನಂತರ ಹುಬ್ಬಳ್ಳಿಯ ರಾಜನಗರ ಕ್ರೀಡಾಂಗಣವು ಪ್ರಥಮ ದರ್ಜೆ ಪಂದ್ಯದ ಆಯೋಜನೆಗೆ ಸಿದ್ಧಗೊಂಡಿದೆ.

ಗುರುವಾರ ಇಲ್ಲಿ ಭಾರತ ‘ಎ’ ಹಾಗೂ ನ್ಯೂಜಿಲೆಂಡ್ ‘ಎ’ ತಂಡಗಳ ನಡುವಣ ಎರಡನೇ ‘ಟೆಸ್ಟ್’ ಪಂದ್ಯ ಆರಂಭವಾಗಲಿದೆ. ನಾಲ್ಕು ದಿನಗಳ ಪಂದ್ಯ ಇದಾಗಿದೆ. ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿಯು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿತ್ತು. ರನ್‌ಗಳ ಹೊಳೆಯೇ ಹರಿದಿದ್ದ ಆ ಪಂದ್ಯವು ಡ್ರಾ ಆಗಿತ್ತು.

ಬಿರುಸಿನ ಅಭ್ಯಾಸ: ಸೆ.5ರಂದೇ ಇಲ್ಲಿಗೆ ಬಂದಿರುವ ಉಭಯ ತಂಡಗಳ ಆಟಗಾರರು ಎರಡು ದಿನ ನೆಟ್ಸ್‌ನಲ್ಲಿ ತಾಲೀಮು ಮಾಡಿವೆ. ಮುಖ್ಯ ಕೋಚ್ ವಿವಿಎಸ್ ಲಕ್ಷ್ಮಣ ಮಾರ್ಗದರ್ಶನದಲ್ಲಿ ಕುಲದೀಪ್ ಯಾದವ್, ರಾಹುಲ್ ಚಾಹರ್, ಅಭಿಮನ್ಯು ಈಶ್ವರನ್, ಉಮರ್ ಮಲೀಕ್ ಹಾಗೂ ಕರ್ನಾಟಕದ ಪ್ರಸಿದ್ಧ ಕೃಷ್ಣ ಬದಲಿಗೆ ತಂಡದಲ್ಲಿ ಸ್ಥಾನ ಪಡೆದಿರುವ ಶಾರ್ದೂಲ್ ಠಾಕೂರ್ ಕಠಿಣ ಅಭ್ಯಾಸ ನಡೆಸಿದರು. ಮಧ್ಯಾಹ್ನದ ಬಳಿಕ ನ್ಯೂಜಿಲೆಂಡ್ ತಂಡದ ಆಟಗಾರರು ಅಭ್ಯಾಸ ಮಾಡಿದರು.

ಬಲಾಬಲ: ಪ್ರವಾಸಿ ತಂಡಕ್ಕೆ ಹೋಲಿಸಿದರೆ, ಆತಿಥೇಯ ತಂಡದ ಆಟಗಾರರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಹಿಂದಿನ ಪಂದ್ಯದಲ್ಲಿ ಕೀವಿಸ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ್ದ ರಜತ್ ಪಾಟೀದಾರ್, ಅಭಿಮನ್ಯು ಈಶ್ವರನ್, ತಿಲಕ್ ವರ್ಮಾ ಶತಕ ಗಳಿಸಿದ್ದರು. ನಾಯಕ ಪ್ರಿಯಾಂಕ್ ಪಾಂಚಾಲ್, ಋತುರಾಜ್ ಗಾಯಕವಾಡ್, ಸರ್ಫರಾಜ್ ಖಾನ್ ಅವರಿಂದಲೂ ಉತ್ತಮ ಆಟ ನಿರೀಕ್ಷಿಸಬಹುದು.

ಮೊದಲ ಪಂದ್ಯದಲ್ಲಿ ಮುಕೇಶ ಕುಮಾರ್ ಐದು ವಿಕೆಟ್ ಗಳಿಸಿದ್ದರು. ಅನುಭವಿಗಳಾದ ಕುಲದೀಪ್ ಯಾದವ್ ಹಾಗೂ ಶಾರ್ದೂಲ್ ಠಾಕೂರ್, ಅರ್ಜಾನ್ ನಾಗವಸಾವಲ್ಲಾ, ಯಶ್ ದಯಾಳ್, ಸರ್ಫರಾಜ್ ಖಾನ್ ಫಾರ್ಮ್‌ನಲ್ಲಿದ್ದಾರೆ.

ಕೀವಿಸ್ ಪಡೆಯ ಜೋ ಕಾರ್ಟರ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ರಾಬರ್ಟ್ ಒಡೊನಿಲ್, ಚಾಪ್‌ಮನ್ ಅವರಿಂದ ಉತ್ತಮ ಆಟ ನಿರೀಕ್ಷಿಸಬಹುದು.

ನೆಟ್ಸ್‌ನಲ್ಲಿ ಬುಧವಾರ ಅಭ್ಯಾಸ ನಡೆಸುತ್ತಿದ್ದ ಆಟಗಾರ ಕುಲದೀಪ್ ಯಾದವ್ ಅವರಿಗೆ ಕೋಚ್ ವಿವಿಎಸ್ ಲಕ್ಷ್ಮಣ್ ಮಾರ್ಗದರ್ಶನ ಮಾಡಿದರು– ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ರಾಜನಗರದ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳು

ರಣಜಿ ಪಂದ್ಯಗಳು	
2012-13	ಕರ್ನಾಟಕ–ಹರಿಯಾಣ
2013-14	ಕರ್ನಾಟಕ–ಪಂಜಾಬ್
2015-16	ಕರ್ನಾಟಕ–ಜಮ್ಮು ಮತ್ತು ಕಾಶ್ಮೀರ
2015-16	ಕರ್ನಾಟಕ–ದೆಹಲಿ
2016-17	ಗುಜರಾತ್–ಮುಂಬೈ
‘ಟೆಸ್ಟ್’ ಪಂದ್ಯಗಳು	
2013	ಭಾರತ ‘ಎ’ ಮತ್ತು ವೆಸ್ಟ್ ಇಂಡೀಸ್ ‘ಎ’
2019	ಭಾರತ ‘ಎ’–ಶ್ರೀಲಂಕಾ ‘ಎ’

ನೆಹರೂ ಕ್ರೀಡಾಂಗಣದಲ್ಲಿ ರಣಜಿ ಪಂದ್ಯಗಳು

1971-72	ಮೈಸೂರು–ಕೇರಳ
1976-77	ಕರ್ನಾಟಕ–ಆಂಧ್ರ
1992-93	ಕರ್ನಾಟಕ–ಹೈದರಾಬಾದ್

ಮಳೆಯ ಸಾಧ್ಯತೆ

ಮೂರು ವರ್ಷಗಳ ಬಳಿಕ ಕ್ರಿಕೆಟ್ ಪಂದ್ಯಕ್ಕೆ ಆತಿಥ್ಯ ವಹಿಸಿರುವ ಹುಬ್ಬಳ್ಳಿಯಲ್ಲಿ ಬುಧವಾರ ಮೋಡಕವಿದ ವಾತಾವರಣವಿತ್ತು. ಆದ್ದರಿಂದ ಪಂದ್ಯಗಳು ನಡೆಯುವ ದಿನಗಳಲ್ಲಿಯೂ ಮಳೆ ಸುರಿಯುವ ಸಾಧ್ಯತೆ ಇದೆ ಎನ್ನಲಾಗಿದೆ. ಸ್ಪರ್ಧಾತ್ಮಕ ಪಿಚ್ ಸಿದ್ಧಗೊಳಿಸಲಾಗಿದೆ.

ಹಾಕಿ ಕರ್ನಾಟಕ ಚುನಾವಣೆ ಇಂದು; ಫಲಿತಾಂಶಕ್ಕೆ ತಡೆಗೆ ಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಕಿ ಕರ್ನಾಟಕದ ಸರ್ವಸದಸ್ಯರ ಮಹಾಸಭೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಪೂರ್ವ ನಿಗದಿಯಂತೆ ಗುರುವಾರದಂದೇ (ಸೆ.08) ನಡೆಸಲು ಹೈಕೋರ್ಟ್ ಅವಕಾಶ ಕಲ್ಪಿಸಿದೆ.

"ನನ್ನ ಹೆಸರನ್ನು ಜಿಲ್ಲಾ ಪ್ರತಿನಿಧಿಗಳ ಪಟ್ಟಿಯಿಂದ ಕೈಬಿಡಲಾಗಿದೆ" ಎಂದು ಆಕ್ಷೇಪಿಸಿ ಹಾಕಿಪಟು ಆಶಿಶ್ ಕುಮಾರ್ ಬಲ್ಲಾಳ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಬಲ್ಲಾಳ್ ಅವರ ಹೆಸರು ಕೈಬಿಟ್ಟಿರುವ ಕುರಿತಂತೆ ಐದು ದಿನಗಳ ಒಳಗೆ ವಿವರಣೆ ನೀಡಬೇಕು’ ಎಂದು ಹಾಕಿ ಕರ್ನಾಟಕಕ್ಕೆ ನಿರ್ದೇಶಿಸಿರುವ ನ್ಯಾಯಪೀಠ ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

‘ಈಗಾಗಲೇ ಘೋಷಿಸಿರುವಂತೆ ಚುನಾವಣೆಗಳು ಇದೇ 8ರಂದು ನಡೆಯಲಿ. ಆದರೆ ರಿಟ್ ಅರ್ಜಿ ವಿಚಾರಣೆ ಮುಗಿಯುವತನಕ ಹಾಕಿ ಕರ್ನಾಟಕದ ಚುನಾವಣೆ ಫಲಿತಾಂಶ ಪ್ರಕಟಿಸಬಾರದು’ ಎಂದು ಇದೇ ವೇಳೆ ನಿರ್ದೇಶಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ ವಾದ ಮಂಡಿಸಿದರು. ಎ. ಮೊಹಮದ್ ತಾಹಿರ್ ವಕಾಲತ್ತು ವಹಿಸಿದ್ದರು.

‘ಹಾಕಿ ಕರ್ನಾಟಕ ಸಂಸ್ಥೆಯ ಪದಾಧಿಕಾರಿಗಳ ಚುನಾವಣೆಗಾಗಿ ಸಿದ್ಧಪಡಿಸಲಾಗಿರುವ ಜಿಲ್ಲಾ ಪ್ರತಿನಿಧಿಗಳ ಯಾದಿಯು ನ್ಯಾಯಸಮ್ಮತವಾಗಿಲ್ಲ.

ಆಶಿಶ್ ಬಲ್ಲಾಳ್

ಅಧಿಕಾರದಲ್ಲಿರುವ ಹಾಲಿ ಸಮಿತಿಯು ಜಿಲ್ಲಾ ಸಂಸ್ಥೆಗಳಿಂದ ಸೂಚಿತ ಪ್ರತಿನಿಧಿಗಳನ್ನು ಕೈಬಿಟ್ಟು, ತನಗೆ ಆಪ್ತರಾದವರ ಹೆಸರನ್ನು ಸೇರಿಸಿದೆ’ ಎಂದು ಭಾರತ ಹಾಕಿ ತಂಡದ ಮಾಜಿ ಗೋಲ್ ಕೀಪರ್ ಆಗಿರುವ ಆಶಿಶ್ ಕುಮಾರ್ ಬಲ್ಲಾಳ್ ಇತ್ತೀಚೆಗೆ ಆರೋಪಿಸಿದ್ದರು.

‘ಹಾಕಿ ಉಡುಪಿಯಿಂದ ನನ್ನ ಹೆಸರು ಶಿಫಾರಸು ಮಾಡಲಾಗಿತ್ತು. ಆದರೆ ಹೆಸರು ಕೈಬಿಟ್ಟಿರುವುದಕ್ಕೆ ಯಾವುದೇ ಸ್ಪಷ್ಟನೆಯನ್ನು ಹಾಕಿ ಕರ್ನಾಟಕ ನೀಡಿಲ್ಲ. ರಾಜ್ಯದ 7–8 ಜಿಲ್ಲಾ ಸಂಸ್ಥೆಗಳೊಂದಿಗೆ ಇದೇ ರೀತಿಯ ಅನ್ಯಾಯವಾಗಿದೆ. ತಮಗೆ ಬೇಕಾದಂತೆ ಜಿಲ್ಲಾ ಸಂಸ್ಥೆಗಳನ್ನು ರಚಿಸಿಕೊಳ್ಳಲಾಗಿದೆ. ಸದ್ಯ ಸಿದ್ಧವಾಗಿರುವ ಪ್ರತಿನಿಧಿಗಳ ಪಟ್ಟಿಯಲ್ಲಿ ಇರುವವರಲ್ಲಿ ಬಹುತೇಕರು ಹಾಕಿ ಆಟಗಾರರೇ ಅಲ್ಲ’ ಎಂದೂ ಬಲ್ಲಾಳ್ ಆಪಾದಿಸಿದ್ದರು.

ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ್ದ ಹಾಕಿ ಕರ್ನಾಟಕದ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ, ‘ಆಶಿಶ್ ಅವರ ಅರ್ಜಿಯು ಕೊನೆಯ ದಿನಾಂಕದ ಸಮಯ ಮೀರಿದ ನಂತರ ಕಚೇರಿ ತಲುಪಿತ್ತು. ಹಾಕಿ ಉಡುಪಿಯನ್ನು ಇತ್ತೀಚೆಗಷ್ಟೇ ಅಮಾನ್ಯಗೊಳಿಸಲಾಗಿತ್ತು. ಆದ್ದರಿಂದ, ಬಲ್ಲಾಳ್ ಅವರ ಅರ್ಜಿ ಪರಿಗಣಿಸಿಲ್ಲ’ ಎಂದು ಸ್ಪಷ್ಟನೆ ನೀಡಿದ್ದರು.

ರ‍್ಯಾಂಕಿಂಗ್: ಅನುಪಮಾಗೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಭಾರತದ ಅನುಪಮಾ ಉಪಾಧ್ಯಾಯ ಅವರು ಬಿಡಬ್ಲ್ಯುಎಫ್ ಜೂನಿಯರ್ ಬ್ಯಾಡ್ಮಿಂಟನ್ ರ‍್ಯಾಂಕಿಂಗ್‌ನ 19 ವರ್ಷದೊಳಗಿನವರ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಇದರೊಂದಿಗೆ ಈ ಸಾಧನೆ ಮಾಡಿದ ದೇಶದ ಎರಡನೇ ಬ್ಯಾಡ್ಮಿಂಟನ್ ಆಟಗಾರ್ತಿ ಎನಿಸಿಕೊಂಡಿದ್ದಾರೆ. ಅನುಪಮಾ, ಈ ವರ್ಷದ ಆರಂಭದಲ್ಲಿ ಉಗಾಂಡ ಮತ್ತು ಪೋಲೆಂಡ್‌ಗಳಲ್ಲಿ ನಡೆದ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದರು.

ಸ್ಯಾಫ್ ಫುಟ್‌ಬಾಲ್: ಭಾರತ ಶುಭಾರಂಭ

ನವದೆಹಲಿ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಆರಂಭ ಮಾಡಿದೆ.

ನೇಪಾಳದ ಕಠ್ಮಂಡುವಿನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಭಾರತದ ಮಹಿಳೆಯರು ಬುಧವಾರ 3–0ಯಿಂದ ಪಾಕಿಸ್ತಾನಕ್ಕೆ ಸೋಲುಣಿಸಿದರು. ಇದರೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಸತತ 27ನೇ ಜಯ ಸಂಪಾದಿಸಿತು.

ಪಾಕಿಸ್ತಾನ ತಂಡದ ನಾಯಕಿ ಮರಿಯಾ ಜಮೀಲ್ ಖಾನ್ ಅವರು ಪಂದ್ಯದ 20ನೇ ನಿಮಿಷದಲ್ಲಿ ‘ಉಡುಗೊರೆ ಗೋಲು’ ನೀಡುವ ಮೂಲಕ ಭಾರತ ತಂಡದ ಖಾತೆ ತೆರೆಯಿತು.

ಭಾರತದ ಸಂಧ್ಯಾ ಅವರು ಒದ್ದ ಚೆಂಡನ್ನು ತಡೆಯುವ ಯತ್ನದಲ್ಲಿ ಎದುರಾಳಿ ಗೋಲ್‌ಕೀಪರ್ ಶಹೀದ್ ಬುಕಾರಿ ಮರಿಯಾ ಅವರತ್ತ ತಳ್ಳಿದರು. ಈ ಹಂತದಲ್ಲಿ ಮರಿಯಾ ಗಡಿಬಿಡಿಯಲ್ಲಿ ಚೆಂಡನ್ನು ತಮ್ಮದೇ ಗೋಲುಪೆಟ್ಟಿಗೆಗೆ ಸೇರಿಸಿದರು.

21ನೇ ನಿಮಿಷದಲ್ಲಿ ಡ್ಯಾಂಗ್ಮೈ ಗ್ರೇಸ್ ಸೊಗಸಾದ ಗೋಲು ಗಳಿಸಿ ತಂಡದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಬಳಿಕ 55ನೇ ನಿಮಿಷದಲ್ಲಿ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಲಭಿಸಿದರೂ ಗೋಲು ದಾಖಲಾಗಲಿಲ್ಲ. ಆದರೆ ಹೆಚ್ಚುವರಿ ಅವಧಿಯಲ್ಲಿ ಸೌಮ್ಯಾ ಗುಗಲೋತ್ ಕಾಲ್ಚಳಕ ತೋರಿ ಭಾರತದ ಗೆಲುವನ್ನು ಖಚಿತಪಡಿಸಿದರು.

ಇದೇ 10ರಂದು ನಡೆಯುವ ತನ್ನ ಎರಡನೇ ಪಂದ್ಯದಲ್ಲಿ ಭಾರತ ತಂಡವು ಮಾಲ್ದೀವ್ಸ್ ತಂಡವನ್ನು ಎದುರಿಸಲಿದೆ.

ಬ್ಯಾಸ್ಕೆಟ್‌ಬಾಲ್: ಭಾರತಕ್ಕೆ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ತಂಡವು ಫಿಬಾ 18 ವರ್ಷದೊಳಗಿನ ಮಹಿಳಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮತ್ತೆ ನಿರಾಸೆ ಅನುಭವಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ‘ಎ’ ಡಿವಿಷನ್‌ನ ಪಂದ್ಯದಲ್ಲಿ ಕೊರಿಯಾ 69–47 ಪಾಯಿಂಟ್‌ಗಳಿಂದ ಭಾರತ ತಂಡಕ್ಕೆ ಸೋಲುಣಿಸಿತು. ಕೊರಿಯಾ ತಂಡಕ್ಕಾಗಿ ಸೋಲ್ ಕಿಮ್ 15 ಮತ್ತು ಸಿವೊಯಿನ್ ಕೊ 14 ಪಾಯಿಂಟ್ಸ್ ಕಲೆಹಾಕಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಸೆಯೊಂಜಿನ್ ಪಾರ್ಕ್ (10) ಮಿಂಚಿದರು. ಭಾರತದ ಯಶ್‌ರೀತ್ ಕೌರ್ ಗಳಿಸಿದ 13 ಪಾಯಿಂಟ್ಸ್ ವ್ಯರ್ಥವಾದವು.

ಕೊರಿಯಾ ತಂಡವು ಪಂದ್ಯದ ಆರಂಭದಿಂದಲೇ ಪಾರಮ್ಯ ಮೆರೆಯಿತು. ಮೊದಲ ಕ್ವಾರ್ಟರ್‌ನಲ್ಲಿ ಆ ತಂಡ 20 ಪಾಯಿಂಟ್ಸ್ ಗಳಿಸಿದರೆ ಭಾರತ ಕೇವಲ 8 ಅಂಕ ಗಳಿಸಿತ್ತು. ಅದೇ ಲಯವನ್ನು ಕೊನೆಯವರೆಗೂ ಮುಂದುವರಿಸಿಕೊಂಡು ಹೋಗುವಲ್ಲಿ ಕೊರಿಯಾ ಯಶಸ್ವಿಯಾಯಿತು.

ಮತ್ತೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 111–44ರಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತು.

ಜಪಾನ್ 107–35 ಪಾಯಿಂಟ್ಸ್‌ನಿಂದ ಇಂಡೋನೇಷ್ಯಾ ಎದುರು ಗೆದ್ದಿತು. ವಿಜೇತ ತಂಡದ ಪರ ನಾಯಕಿ ಮಿಸಾಕ ಸಸಾಕಿ 17 ಪಾಯಿಂಟ್ಸ್ ಗಳಿಸಿ ಮಿಂಚಿದರು. ಚಿನಾಮಿ ಯುಕೊಯಾಮಾ (12) ಕೂಡ ಗೆಲುವಿಗೆ ಕೊಡುಗೆ ನೀಡಿದರು.

ಇನ್ನೊಂದು ಪಂದ್ಯದಲ್ಲಿ ಚೀನಾ ತೈಪೆ 74–61ರಿಂದ ಚೀನಾ ಎದುರು ಜಯ ಸಾಧಿಸಿತು.

ಭಾರತ ತಂಡದ ಸತ್ಯಾ ಕೃಷ್ಣಮೂರ್ತಿ (ಬಲ) ಅವರು ಕೊರಿಯಾ ಆಟಗಾರ್ತಿಯೊಂದಿಗೆ ಚೆಂಡಿಗಾಗಿ ಪೈಪೋಟಿ ನಡೆಸಿದರು
– ಪ್ರಜಾವಾಣಿ ಚಿತ್ರ/ ಬಿ. ಎಚ್. ಶಿವಕುಮಾರ್

ಭಾರತ ಮೂಲದ ವಕೀಲ ಅಮೆರಿಕದ ಜಿಲ್ಲಾ ನ್ಯಾಯಾಧೀಶ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕ ವಕೀಲ ಅರುಣ್ ಸುಬ್ರಮಣಿಯನ್ ಅವರನ್ನು ನ್ಯೂಯಾರ್ಕ್‌ನ ದಕ್ಷಿಣ ಭಾಗದ ಜಿಲ್ಲೆಯೊಂದರ ಜಿಲ್ಲಾ ನ್ಯಾಯಾಧೀಶರನ್ನಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ನೇಮಿಸಿದ್ದಾರೆ.

ಈ ಕುರಿತು ಶ್ವೇತಭವನದಿಂದ ಸೆನೆಟ್‌ಗೆ ಮಾಹಿತಿ ನೀಡಲಾಗಿದೆ. ಸೆನೆಟ್ ಇದಕ್ಕೆ ಒಪ್ಪಿಗೆ ಸೂಚಿಸಿದ್ದೇ ಆದರೆ, ಭಾರತ ಮಾತ್ರವಲ್ಲ, ದಕ್ಷಿಣ ಏಷ್ಯಾ ಭಾಗದ ವ್ಯಕ್ತಿಯೊಬ್ಬರು ಇದೇ ಮೊದಲ ಬಾರಿಗೆ ಅಮೆರಿಕದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ನೇಮಕವಾದಂತಹ ಹೆಗ್ಗಳಿಕೆಗೆ ಪಾತ್ರವಾಗಲಿದ್ದಾರೆ.

ಭಾರತೀಯ ಮೂಲದ ಇಬ್ಬರಿಗೆ ಸಚಿವ ಸ್ಥಾನ

ಸಂಪುಟ: ಸುನಕ್ ಬೆಂಬಲಿಗರಿಗಿಲ್ಲ ಸ್ಥಾನ

ಲಂಡನ್ (ಪಿಟಿಐ): ಬ್ರಿಟನ್‌ನ ನೂತನ ಪ್ರಧಾನಿ ಲಿಜ್ ಟ್ರಸ್ ಅವರು ತಮ್ಮ ಸಚಿವ ಸಂಪುಟಕ್ಕೆ ಸಚಿವರನ್ನು ನೇಮಕ ಮಾಡುವ ಪ್ರಕ್ರಿಯೆ ಆರಂಭಿಸಿದ್ದು, ನಿರೀಕ್ಷೆಯಂತೆಯೇ ಭಾರತೀಯ ಮೂಲದ ಸುವೆಲ್ಲಾ ಬ್ರೇವರ್‌ಮನ್ ಅವರನ್ನು ಗೃಹ ಸಚಿವರನ್ನಾಗಿ ನಿಯೋಜಿಸಿದ್ದಾರೆ. ಇನ್ನೊಬ್ಬ ಭಾರತೀಯ ಮೂಲದ ಸಂಸದ ಅಲೋಕ್ ಶರ್ಮಾ ಅವರನ್ನು ಪರಿಸರ ಕಾರ್ಯಕ್ರಮಗಳ ಹೊಣೆಗಾರಿಕೆಯಾದ ಸಿಒಪಿ26 ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.

ಕನ್ಸರ್ವೇಟಿವ್ ಪಕ್ಷದ ನಾಯಕ ಸ್ಥಾನಕ್ಕಾಗಿ ನಡೆದ ಸ್ಪರ್ಧೆಯಲ್ಲಿ ತಮಗೆ ತೀವ್ರ ಪ್ರತಿಸ್ಪರ್ಧೆ ಒಡ್ಡಿದ್ದ ರಿಷಿ ಸುನಕ್ ಅವರನ್ನು ಬೆಂಬಲಿಸಿದ್ದ ಯಾರೊಬ್ಬರಿಗೂ ಸಂಪುಟದಲ್ಲಿ ಸ್ಥಾನ ನೀಡಿಲ್ಲ. ಹೀಗೆ ಸಚಿವ ಸ್ಥಾನದಿಂದ ವಂಚಿತರಾದ ಹಿರಿಯ ಸಂಸದರ ಪೈಕಿ ಮಾಜಿ ಕಾನೂನು ಸಚಿವ ಡೊಮಿನಿಕ್ ರಾಬ್, ಸಾರಿಗೆ ಸಚಿವ ಗ್ರ್ಯಾಂಟ್ ಶಾಪ್ಸ್, ಆರೋಗ್ಯ ಸಚಿವ ಸ್ಟೀವ್ ಬರ್ಕ್ಲೇ ಸೇರಿದ್ದಾರೆ.

ಸುವೆಲ್ಲಾ ಬ್ರೇವರ್‌ಮನ್

ಅಲೋಕ್ ಶರ್ಮಾ

ಲಿಜ್ ಅವರು ಈ ಬೆಳವಣಿಗೆ ಹೊರತಾಗಿ ತಮ್ಮ ಸಂಪುಟದಲ್ಲಿ ಕೆಲವೊಂದು ಪ್ರಾದೇಶಿಕ ಮತ್ತು ಜನಾಂಗೀಯ ವೈವಿಧ್ಯತೆಯನ್ನು ಮೆರೆದಿದ್ದಾರೆ. ಶ್ರೀಲಂಕಾ ಮೂಲದ ರಾನಿಲ್ ಜಯವರ್ಧನೆ ಅವರನ್ನು ಪರಿಸರ, ಆಹಾರ ಮತ್ತು ಗ್ರಾಮೀಣ ವ್ಯವಹಾರಗಳ ಸಚಿವರನ್ನಾಗಿ ನೇಮಿಸಿದ್ದಾರೆ. ಬೆನ್ ವಾಲೇಸ್ ಅವರನ್ನು ರಕ್ಷಣಾ ಸಚಿವರನ್ನಾಗಿ ಮಾಡುವ ಮೂಲಕ ಭಾರಿ ದೊಡ್ಡ ಬದಲಾವಣೆ ತಂದಿದ್ದಾರೆ.

ಘಾನಾ ಮೂಲದ ಕ್ವಾಸಿ ಕ್ವಾರ್ಟೆಂಗ್ ಅವರನ್ನು ಬ್ರಿಟನ್‌ನ ಪ್ರಥಮ ಕಪ್ಪು ವರ್ಣೀಯ ಹಣಕಾಸು ಸಚಿವರನ್ನಾಗಿ ನೇಮಿಸಲಾಗಿದ್ದರೆ, ಸಿಯಾರಾ ಲಿಯೋನ್ ಮೂಲದ ಜೇಮ್ಸ್ ಕ್ಲೆವರ್ಲೆ ಅವರನ್ನು ವಿದೇಶಾಂಗ ಸಚಿವರನ್ನಾಗಿ ಮಾಡಲಾಗಿದೆ. ಲಿಜ್ ಅವರಿಗೆ ಅತ್ಯಂತ ನಿಕಟರಾಗಿದ್ದ ತೆರೇಸ್ ಕೊಫೇ ಅವರನ್ನು ಉಪಪ್ರಧಾನಿ, ಆರೋಗ್ಯ ಸಚಿವರನ್ನಾಗಿ ಹಾಗೂ ವೆಂಡಿ ಮಾರ್ಟನ್ ಅವರನ್ನು ಸಂಸದೀಯ ಸಚಿವೆ ಮತ್ತು ಪ್ರಥಮ ಮಹಿಳಾ ಮುಖ್ಯ ಸಚೇತಕರಾಗಿ ನೇಮಿಸಲಾಗಿದೆ.

ಜೆಎನ್‌ಯು: ಪ್ರತಿಭಟನೆಗೆ ₹15 ಸಾವಿರ ದಂಡ–ಆರೋಪ

ನವದೆಹಲಿ (ಪಿಟಿಐ): ‘ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕಾಗಿ ವಿಶ್ವವಿದ್ಯಾಲಯದ ಆಡಳಿತವು ತಮಗೆ ₹ 10ರಿಂದ ₹ 15 ಸಾವಿರದ ತನಕ ನಗದು ದಂಡ ವಿಧಿಸಿದ್ದು, ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ನಿರಾಕರಿಸಿದೆ’ ಎಂದು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿಗಳ ಒಂದು ಗುಂಪು ಆರೋಪಿಸಿದೆ.

ವಿಶ್ವವಿದ್ಯಾಲಯದ ಈ ಕ್ರಮವು ವಿದ್ಯಾರ್ಥಿಗಳಿಗೆ ಕಿರುಕುಳ ನೀಡುವ ಉದ್ದೇಶವನ್ನು ಹೊಂದಿದೆ ಎಂದೂ ವಿದ್ಯಾರ್ಥಿಗಳು ದೂರಿದ್ದಾರೆ.

ಆದರೆ, ಜೆಎನ್‌ಯು ಮುಖ್ಯ ಪ್ರಾಕ್ಟರ್ (ವಿದ್ಯಾರ್ಥಿಗಳ ಮೇಲ್ವಿಚಾರಕ) ರಜನೀಶ್ ಕುಮಾರ್ ಮಿಶ್ರಾ ಅವರು ಈ ಆರೋಪಗಳನ್ನು ನಿರಾಕರಿಸಿದ್ದಾರೆ.

ಚೀನಾ ಭೂಕಂಪ: ಸತ್ತವರ ಸಂಖ್ಯೆ 74ಕ್ಕೆ ಏರಿಕೆ, ಕೋವಿಡ್ ನಿರ್ಬಂಧಕ್ಕೆ ಬೇಸರ

ಬೀಜಿಂಗ್ (ಎಪಿ): ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ಸೋಮವಾರ ಸಂಭವಿಸಿದ ಭೂಕಂಪದಲ್ಲಿ ಸತ್ತವರ ಸಂಖ್ಯೆ 74ಕ್ಕೆ ಏರಿಕೆಯಾಗಿದ್ದು, 26 ಮಂದಿ ನಾಪತ್ತೆಯಾಗಿದ್ದಾರೆ. ಭೂಮಿಯೇ ಕಂಪಿಸುತ್ತಿರುವ ಈ ಸಂದರ್ಭದಲ್ಲೂ ಸರ್ಕಾರ ವಿಧಿಸಿರುವ ಕೋವಿಡ್ ಲಾಕ್‌ಡೌನ್‌ನ ಕಠಿಣ ನಿಯಮಗಳಿಂದಾಗಿ ಇಲ್ಲಿನ ಜನರು ಬೇಸತ್ತಿದ್ದಾರೆ.

ಕಠಿಣ ಕೋವಿಡ್ ನಿಯಮ ಇರುವ ಕಾರಣ, ಕಂಪನದಿಂದ ತಪ್ಪಿಸಿಕೊಳ್ಳಲು ಮನೆಯಿಂದ ಹೊರಬರಲೂ ಸಾಧ್ಯವಾಗದ ಸ್ಥಿತಿಯಲ್ಲಿ ಜನರಿದ್ದಾರೆ. ನಿಯಮಗಳ ವಿರುದ್ಧ ಜನರು ಆನ್‌ಲೈನ್ ಮೂಲಕ ಪ್ರತಿಭಟಿಸುತ್ತಿದ್ದಾರೆ. ಈ ಪ್ರಾಂತ್ಯದಲ್ಲಿ 2.1 ಕೋಟಿ ಜನರಿದ್ದು, ಇಲ್ಲಿ ಲಾಕ್‌ಡೌನ್‌ನ ಕಠಿಣ ನಿಯಮಗಳನ್ನು ಹೇರಲಾಗಿದೆ.

ಭಯಭೀತ ಜನರು ತಮ್ಮ ಅಪಾರ್ಟ್‌ಮೆಂಟ್‌ಗಳಿಂದ ಮನೆಗಳಿಂದ ಹೊರಬರಲು ಪೊಲೀಸರು ಹಾಗೂ ಆರೋಗ್ಯ ಕಾರ್ಯಕರ್ತರು ಅವಕಾಶ ಮಾಡಿಕೊಡಲಿಲ್ಲ. ಈ ಕ್ರಮ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಕೊರೊನಾ ಸೋಂಕು ಮೊದಲ ಬಾರಿಗೆ ಹರಡಿದ ವುಹಾನ್ ನಗರದಲ್ಲಿನ ಜನರು, ‘ಲಾಕ್‌ಡೌನ್ ತೆರವುಗೊಳಿಸಿ, ಇಲ್ಲವೆ ಕೊರೊನಾ ಪರೀಕ್ಷೆಗೆ ಒಳಪಡುವುದಿಲ್ಲ’ ಎಂದು ಪೊಲೀಸರತ್ತ ಕೂಗುತ್ತಿರುವ ವಿಡಿಯೊಗಳು ವೈರಲ್ ಆಗುತ್ತಿವೆ.

ಚೀನಾದಲ್ಲಿ ಸದ್ಯ 33 ನಗರಗಳ 6.5 ಕೋಟಿ ಜನರು ವಿವಿಧ ಬಗೆಯ ಕೋವಿಡ್ ನಿರ್ಬಂಧಗಳ ನಡುವೆ ಜೀವನ ಸಾಗಿಸುತ್ತಿದ್ದಾರೆ. ಇಂತಹ ನಗರಗಳಲ್ಲಿ 13 ಪ್ರಾಂತೀಯ ರಾಜಧಾನಿಗಳೂ ಸೇರಿವೆ.

ಸಿಚುವಾನ್ ಪ್ರಾಂತ್ಯದಲ್ಲಿರುವ ಮೊಜಿ ನಗರದಲ್ಲೂ ಭೂಕಂಪನವಾಗಿದ್ದು, ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡವರಿಗಾಗಿ ಚೀನಾ ಸೇನೆ ಮಂಗಳವಾರ ಹುಡುಕಾಟ ನಡೆಸಿತು –ಎಪಿ/ಪಿಟಿಐ ಚಿತ್ರ

ಗುರಿ ಸಾಧಿಸುವವರೆಗೂ ಮಿಲಿಟರಿ ಕಾರ್ಯಾಚರಣೆ: ಪುಟಿನ್

ಮಾಸ್ಕೊ (ಎಪಿ): ‘ಉಕ್ರೇನ್‌ನಲ್ಲಿ ತನ್ನ ಗುರಿಗಳನ್ನು ಸಾಧಿಸುವವರೆಗೂ ರಷ್ಯಾ ಮಿಲಿಟರಿ ಕಾರ್ಯಾಚರಣೆಯನ್ನು ಮುಂದುವರಿಸಲಿದೆ’ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಬುಧವಾರ ಹೇಳಿದರು.

ಇದೇ ವೇಳೆ, ನಿರ್ಬಂಧ ವಿಧಿಸುವ ಮೂಲಕ ರಷ್ಯಾವನ್ನು ಮೂಲೆಗೆ ತಳ್ಳುವ ಪಾಶ್ಚಿಮಾತ್ಯ ಪ್ರಯತ್ನಗಳನ್ನು ಪುಟಿನ್ ಲೇವಡಿ ಮಾಡಿದರು.

ರಷ್ಯಾದ ಪೂರ್ವ ಭಾಗದ ಬಂದರು ನಗರವಾದ ವ್ಲಾಡಿವೋಸ್ಟಾಕ್‌ನಲ್ಲಿ ನಡೆದ ವಾರ್ಷಿಕ ಆರ್ಥಿಕ ವೇದಿಕೆಯಲ್ಲಿ ಮಾತನಾಡಿದ ಅವರು, ‘ಉಕ್ರೇನ್ ಪೂರ್ವದಲ್ಲಿರುವ ನಾಗರಿಕರನ್ನು ರಕ್ಷಿಸಲೆಂದೇ ಈ ಸೇನಾ ಕಾರ್ಯಾಚರಣೆ ನಡೆಸಲಾಗಿದೆ. ಎಂಟು ವರ್ಷಗಳಿಂದ ಅಲ್ಲಿ ನಾಗರಿಕರಿಗೆ ಹಿಂಸೆ ನೀಡಲಾಗುತ್ತಿತ್ತು’ ಎಂದು ಹೇಳಿದರು.

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ಫ್ರೀಸ್ಟೈಲ್ ತಂಡಗಳಿಗೆ ಅಗ್ರಸ್ಥಾನ

ಅನೀಶ್, ಉತ್ಕರ್ಷ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಎರಡನೇ ದಿನವೂ ಪಾರಮ್ಯ ಮುಂದುವರಿಸಿದರು.

ಗುವಾಹಟಿಯ ಡಾ. ಜಾಕೀರ್ ಹುಸೇನ್ ಈಜುಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ‌ಲ್ಲಿ ಬುಧವಾರ ಅನೀಶ್ ಎಸ್. ಗೌಡ (1500 ಮೀ. ಫ್ರೀಸ್ಟೈಲ್), ಉತ್ಕರ್ಷ್ ಪಾಟೀಲ (200 ಮೀ. ಬ್ಯಾಕ್‌ಸ್ಟ್ರೋಕ್) ಚಿನ್ನ ಗೆದ್ದರು. ಶಿವ ಎಸ್. (200 ಮೀ. ಬ್ಯಾಕ್‌ಸ್ಟ್ರೋಕ್) ಬೆಳ್ಳಿ ಪದಕ ಜಯಿಸಿದರು.

ಮಹಿಳೆಯರ 4X100 ಮೀ. ಫ್ರೀಸ್ಟೈಲ್‌ನಲ್ಲಿ ಧೀನಿಧಿ ದೇಸಿಂಗು, ಶ್ರೀಚರಣಿ ತುಮು, ರುಜುಲಾ ಎಸ್. ಮತ್ತು ಲಿತೇಶಾ ಮಂದಣ್ಣ ಅವರಿದ್ದ ತಂಡ ಚಿನ್ನದ ಪದಕಕ್ಕೆ ಮುತ್ತಿಟ್ಟಿತು. ಇದೇ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಸಂಭವ್ ಆರ್, ಪೃಥ್ವಿ ಎಂ, ಶಿವ ಎಸ್. ಮತ್ತು ಅನೀಶ್ ಅವರನ್ನೊಳಗೊಂಡ ತಂಡವು ಕಂಚು ಗೆದ್ದಿತು.

ಅನೀಶ್ ಎಸ್ ಗೌಡ

ಫಲಿತಾಂಶಗಳು: ಪುರುಷರು: 1500 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ–1 (ಕರ್ನಾಟಕ), ಕಾಲ: 16 ನಿ. 8.84ಸೆ, ಶುಶ್ರೂತ್ ಕಾಪ್ಸೆ (ಆರ್‌ಎಸ್‌ಪಿಬಿ–2, ಅನುರಾಗ್ ಸಿಂಗ್ (ಉತ್ತರಪ್ರದೇಶ)–3.

200 ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ್ ಸಂತೋಷ್ ಪಾಟೀಲ್ –1, ಕಾಲ: 2 ನಿ. 4.61ಸೆ, ಶಿವ ಎಸ್.–2 (ಇಬ್ಬರೂ ಕರ್ನಾಟಕ), ತನ್ಮಯ್ ದಾಸ್ (ಆರ್‌ಎಸ್‌ಪಿಬಿ)–3.

50 ಮೀ. ಫ್ರೀಸ್ಟೈಲ್: ಪವನ್ ಗುಪ್ತಾ (ಆರ್‌ಎಸ್‌ಪಿಬಿ)–1, ಕಾಲ: 23.43ಸೆ, ರುದ್ರಾಂಶ್ ಮಿಶ್ರಾ (ಎಸ್‌ಎಸ್‌ಸಿಬಿ)–2, ನಿಮಿಷ್ ಮುಲೆ (ಎಸ್‌ಎಸ್‌ಸಿಬಿ)–3.

4X100 ಮೀ. ಫ್ರೀಸ್ಟೈಲ್: ಎಸ್‌ಎಸ್‌ಸಿಬಿ–1, ಕಾಲ: 3 ನಿ. 29.88 ಸೆ, ತಮಿಳುನಾಡು–2, ಕರ್ನಾಟಕ–3

ಮಹಿಳೆಯರು: 400 ಮೀ. ಮೆಡ್ಲೆ: ರಿಚಾ ಮಿಶ್ರಾ (ಪೊಲೀಸ್)–1 , ಕಾಲ: 5 ನಿ. 12. 48 ಸೆ, ಶೃಂಗಿ ಬಾಂದೇಕರ್ (ಗೋವಾ)–2, ದಿಶಾ ಭಂಡಾರಿ (ಉತ್ತರ ಪ್ರದೇಶ)–3.

200 ಮೀ. ಬ್ಯಾಕ್‌ಸ್ಟ್ರೋಕ್: ಮಾನಾ ಪಟೇಲ್ (ಗುಜರಾತ್)–1, ಕಾಲ: 2 ನಿ. 20.9 ಸೆ., ಪಲಕ್ ಜೋಷಿ (ಮಹಾರಾಷ್ಟ್ರ)–2, ಪ್ರತಿಷ್ಠಾ ದಾಂಗಿ (ಮಹಾರಾಷ್ಟ್ರ)–3.

4X100 ಮೀ. ಫ್ರೀಸ್ಟೈಲ್: ಕರ್ನಾಟಕ–1, ಕಾಲ: 4 ನಿ. 3.73ಸೆ., ಮಹಾರಾಷ್ಟ್ರ–2, ತಮಿಳುನಾಡು–3.

ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿನ್ಸ್ ಒಲಾರಿಚೆ ಮತ್ತು ನಿಖಿಲ್ ತರಾಜ್ ಮುರುಗನ್ ಕುಮಾರವ ಗಳಿಸಿದ ತಲಾ ಎರಡು ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂ‌ಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ 5–0ಯಿಂದ ಯಂಗ್ ಚಾಲೆಂಜರ್ಸ್ ತಂಡದ ಎದುರು ಗೆದ್ದಿತು. ಪ್ರಿನ್ಸ್ 33 ಮತ್ತು 75ನೇ ನಿಮಿಷ, ನಿಖಿಲ್ ರಾಜ್ 40 ಮತ್ತು 78ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಶರತ್ ರಾಜ್ ಕುಮಾರ್ ತಂಡದ ಮತ್ತೊಂದು ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 2–0ಯಿಂದ ಬೆಂಗಳೂರು ಈಗಲ್ಸ್ ಎದುರು ಗೆದ್ದಿತು. ರೂಟ್ಸ್ ತಂಡಕ್ಕಾಗಿ ವಿಶಾಲ್ ಆರ್. 20ನೇ ನಿಮಿಷ ಮತ್ತು ಅನಿರುದ್ಧ ಮುಕುಂದನ್ 79ನೇ ನಿಮಿಷ ಪೆನಾಲ್ಟಿ ಅವಕಾಶದಲ್ಲಿ ಗೋಲು ದಾಖಲಿಸಿದರು.

ಗುರುವಾರ ನಡೆಯುವ ಪಂದ್ಯಗಳಲ್ಲಿ ಎಡಿಇ ಎಫ್‌ಸಿ–ಎಂಇಜಿ ಸೆಂಟರ್ ಎಫ್‌ಸಿ ನಡುವೆ ಮಧ್ಯಾಹ್ನ 2 ಗಂಟೆಗೆ ಮತ್ತು ಕೊಡಗು ಎಫ್‌ಸಿ ಮತ್ತು ಡೆಕ್ಕನ್ ಎಫ್‌ಸಿ ತಂಡಗಳ ನಡುವೆ ಮಧ್ಯಾಹ್ನ 4 ಗಂಟೆಗೆ ಹಣಾಹಣಿ ನಡೆಯಲಿದೆ.

ಮಾಡರ್ನ್ ಗರ್ಲ್ಸ್ ಜಯಭೇರಿ: ಉಷಂ ಪುಷ್ಪಾರಾಣಿ ಗಳಿಸಿದ ಗಳಿಸಿದ ಎರಡು ಗೋಲುಗಳ ನೆರವಿನಿಂದ ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಕರ್ನಾಟಕ ವಿಮೆನ್ಸ್ ಲೀಗ್ ಟೂರ್ನಿಯಲ್ಲಿ ಜಯ ಗಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಮಾಡರ್ನ್ ಗರ್ಲ್ಸ್ 5–0ಯಿಂದ ರೆಬೆಲ್ಸ್ ವುಮೆನ್ಸ್ ಎದುರು ಗೆದ್ದಿತು. ಪುಷ್ಪಾರಾಣಿ 65 ಮತ್ತು 87ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ತನ್ವಿ ಗಾವ್ಡೆ (44ನೇ ನಿ.) ಮತ್ತು ಧನಶ್ರೀ ಕದಂ (62ನೇ ನಿ.) ಮತ್ತು ಉಷಂ ಲಕ್ಷ್ಮಿದೇವಿ (77ನೇ ನಿ.) ತಲಾ ಒಂದು ಗೋಲು ಹೊಡೆದರು.

ಗುರುವಾರ ನಡೆಯುವ ಪಂದ್ಯದಲ್ಲಿ ಮಾತೃ ಪ್ರತಿಷ್ಠಾನ ಎಫ್‌ಸಿ– ಮಿಸಾಕಾ ಯುನೈಟೆಡ್ ಎಫ್‌ಸಿ ಸೆಣಸಲಿವೆ.

ಕಚನೊವ್‌ಗೆ ಮಣಿದ ಕಿರ್ಗಿಯೊಸ್

ಅಮೆರಿಕ ಓಪನ್ ಟೆನಿಸ್ ಟೂರ್ನಿ: ನಾಲ್ಕರ ಘಟ್ಟಕ್ಕೆ ಕಾಸ್ಪರ್ ರೂಡ್ ಲಗ್ಗೆ

ನ್ಯೂಯಾರ್ಕ್ (ಎಎಫ್‌ಪಿ): ಜಿದ್ದಾಜಿದ್ದಿನ ಹಣಾಹಣಿಯಲ್ಲಿ ನಿಕ್ ಕಿರ್ಗಿಯೊಸ್ ಅವರಿಗೆ ಸೋಲುಣಿಸಿದ ರಷ್ಯಾದ ಕರೆನ್ ಕಚನೊವ್ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಅರ್ಥರ್ ಆ್ಯಶ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಹಣಾಹಣಿಯಲ್ಲಿ 27ನೇ ಶ್ರೇಯಾಂಕದ ಕಚನೊವ್ 7-5, 4-6, 7-5, 6-7 (3/7), 6-4ರಿಂದ ಆಸ್ಟ್ರೇಲಿಯಾದ ಕಿರ್ಗಿಯೊಸ್ ಅವರನ್ನು ಪರಾಭವಗೊಳಿಸಿದರು. ಇದರೊಂದಿಗೆ ರಷ್ಯಾ ಆಟಗಾರ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಮೊದಲ ಬಾರಿ ನಾಲ್ಕರಘಟ್ಟ ತಲುಪಿದ ಶ್ರೇಯ ಗಳಿಸಿದರು.

ಈ ಸೋಲಿನೊಂದಿಗೆ ಕಿರ್ಗಿಯೊಸ್ ಅವರ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದ ಕನಸು ಛಿದ್ರಗೊಂಡಿತು. ವಿಂಬಲ್ಡನ್ ಟೂರ್ನಿಯಲ್ಲಿ ಕಿರ್ಗಿಯೊಸ್ ಅವರು ಸರ್ಬಿಯಾದ ನೊವಾಕ್ ಜೊಕೊವಿಚ್ ಎದುರು ಸೋತು ರನ್ನರ್‌ಅಪ್ ಆಗಿದ್ದರು.

ಕಚನೊವ್ ಈ ಪಂದ್ಯದಲ್ಲಿ 30 ಏಸ್ ಮತ್ತು 63 ವಿನ್ನರ್‌ಗಳನ್ನು ಸಿಡಿಸಿದರು. ಮೂರು ತಾಸು 39 ನಿಮಿಷಗಳ ಪಂದ್ಯದಲ್ಲಿ ಇಬ್ಬರೂ ಆಟಗಾರರು ಬೆವರು ಹರಿಸಿದರು. ಪಂದ್ಯ ಕೈಚೆಲ್ಲಿದ ನಿರಾಸೆಯಲ್ಲಿ ಕಿರ್ಗಿಯೊಸ್ ರ್‍ಯಾಕೆಟ್‌ಅನ್ನು ನೆಲಕ್ಕಪ್ಪಳಿಸಿ ಮುರಿದು ಹಾಕಿದರು.

16ರ ಘಟ್ಟದ ಪಂದ್ಯದಲ್ಲಿ ಕಿರ್ಗಿಯೊಸ್ ಅವರು ಅಗ್ರಕ್ರಮಾಂಕದ ಆಟಗಾರ, ರಷ್ಯಾದ ಡೇನಿಯಲ್ ಮೆಡ್ವೆಡೆವ್ ಸವಾಲು ಮೀರಿ ಪ್ರಶಸ್ತಿ ಜಯದ ಕನಸು ಕಂಡಿದ್ದರು.

ಚೆಂಡು ಹಿಂದಿರುಗಿಸಿದ ಫ್ರಾನ್ಸ್‌ನ ಕರೋಲಿನ್ ಗಾರ್ಸಿಯಾ– ಎಎಫ್‌ಪಿ ಚಿತ್ರ

ಇದಕ್ಕೂ ಮೊದಲು ನಡೆದ ಇನ್ನೊಂದು ಕ್ವಾರ್ಟರ್‌ಫೈನಲ್‌ನ‌ಲ್ಲಿ ನಾರ್ವೆಯ ಕಾಸ್ಪರ್ ರೂಡ್ 6-1, 6-4, 7-6 (7/4)ರಿಂದ ಇಟಲಿಯ ಮ್ಯಾಟಿಯೊ ಬೆರೆಟಿನಿ ಅವರನ್ನು ಸೋಲಿಸಿ ಎರಡನೇ ಬಾರಿ ಗ್ರ್ಯಾನ್‌ಸ್ಲಾಮ್ ಸೆಮಿಗೆ ತಲುಪಿದರು. ಈ ವರ್ಷದ ಫ್ರೆಂಚ್ ಓಪನ್ ಟೂರ್ನಿಯ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ರಫೆಲ್ ನಡಾಲ್ ಎದುರು ಸೋತಿದ್ದರು.

ಪಂದ್ಯ ಗೆದ್ದ ಕರೆನ್ ಕಚನೊವ್ ಸಂಭ್ರಮ– ಎಎಫ್‌ಪಿ ಚಿತ್ರ

ಗಾರ್ಸಿಯಾ, ಜಬೇರ್ ಮುನ್ನಡೆ: ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಟ್ಯೂನಿಷಿಯಾದ ಆನ್ಸ್ ಜಬೇರ್ ಸೆಮಿಫೈನಲ್ ತಲುಪುವ ಮೂಲಕ ಈ ಸಾಧನೆ ಮಾಡಿದ ಆಫ್ರಿಕಾದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಎಂಟರಘಟ್ಟದ ಪಂದ್ಯದಲ್ಲಿ ಜಬೇರ್ 6-4, 7-6 (7/4) ರಿಂದ ಆಸ್ಟ್ರೇಲಿಯಾದ ಆಯ್ಲಾ ಟೊಮ್ಲಾಜಾನೊವಿಚ್ ಎದುರು ಗೆದ್ದರು. ಮತ್ತೊಂದು ಪಂದ್ಯದಲ್ಲಿ ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್ ಸವಾಲು ಅಂತ್ಯವಾಯಿತು.

ಫ್ರಾನ್ಸ್‌ನ ಕರೋಲಿನ್ ಗಾರ್ಸಿಯಾ 6-3, 6-4ರಿಂದ ಗಫ್ ಅವರನ್ನು ಪರಾಭವಗೊಳಿಸಿದರು.

ಶ್ರೇಯಸ್ ಹರೀಶ್

ಮಿನಿ ಗ್ರ್ಯಾನ್ ಪ್ರಿ ವಿಶ್ವ ಸಿರೀಸ್‌ಗೆ ಶ್ರೇಯಸ್

ಬೆಂಗಳೂರು: ಕರ್ನಾಟಕದ ಶ್ರೇಯಸ್ ಹರೀಶ್ ಅವರು ಎಫ್‌ಐಎಮ್ ಮಿನಿ ಗ್ರ್ಯಾನ್ ಪ್ರಿ ವಿಶ್ವ ಸಿರೀಸ್ ಫೈನಲ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಬೆಂಗಳೂರಿನ ಶ್ರೇಯಸ್, ನ್ಯಾಷನಲ್ ಸಿರೀಸ್‌ನಲ್ಲಿ ಅಗ್ರಸ್ಥಾನ ಗಳಿಸುವ ಮೂಲಕ ನವೆಂಬರ್‌ನಲ್ಲಿ ಸ್ಪೇನ್‌ನ ವೆಲೆನ್ಸಿಯಾದಲ್ಲಿ ನಡೆಯುವ ಟೂರ್ನಿಗೆ ಆಯ್ಕೆಯಾದರು. ಐದು ವಾರಗಳ ಕಾಲ ನಡೆದ ಐದು ಮೋಟರ್ ರೇಸ್‌ಗಳ ಪೈಕಿ ನಾಲ್ಕರಲ್ಲಿ ಶ್ರೇಯಸ್ ಜಯ ಗಳಿಸಿದರು.

ರಾಷ್ಟ್ರೀಯ ಸಿರೀಸ್‌ನಲ್ಲಿ ಶ್ರೇಯಸ್ ಒಟ್ಟು 220 ಪಾಯಿಂಟ್ಸ್ ಗಳಿಸಿದರು. ಜಿನೇಂದ್ರ ಕಿರಣ್ ಸಂಗಾವೆ (213) ಮತ್ತು ನಂದನನ್ ಮಹೇಂದ್ರನ್ (153) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.